prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಹಾಯ ಕೇಂದ್ರ
ಮಹಿಳಾ ಸಿಬ್ಬಂದಿಯ ಸಮಸ್ಯೆ ಆಲಿಸಿ, ಪರಿಹಾರ ಒದಗಿಸಲು ಸಿಐಎಸ್‌ಎಫ್ ಕೇಂದ್ರ ಕಚೇರಿಯಲ್ಲಿ ವಿಶೇಷ ಸಹಾಯ ಕೇಂದ್ರ ಆರಂಭಿಸುವುದಾಗಿ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಐಎಸ್‌ಎಫ್) ಪ್ರಕಟಿಸಿದೆ

ಆಯುಷ್‌ಗೆ ಕಿರೀಟ
ಭಾರತದ ಆಯುಷ್ ಶೆಟ್ಟಿ ಸೋಮವಾರ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು

ಸೆನ್ಸೆಕ್ಸ್ 83,606 | ನಿಫ್ಟಿ 25,517 | $/₹ 85.76 | ಚಿನ್ನ (Std. 10g) ₹1,00,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,13,500 (ಬೆಂಗಳೂರು)

ಸಿ.ಎಂ ಬದಲು: ಹಲವು ಕವಲು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕಟು ಎಚ್ಚರಿಕೆ ಬಳಿಕ ತಣ್ಣಗಾಗಿದ್ದ ಮುಖ್ಯಮಂತ್ರಿ ಬದಲಾವಣೆ ವಿಷಯ ಮತ್ತೆ ಮುಂಚೂಣಿಗೆ ಬಂದಿದೆ. 'ಸೆಪ್ಟೆಂಬರ್ ಕ್ರಾಂತಿ'ಯ ಬಗ್ಗೆ ಸಚಿವ ಕೆ.ಎನ್. ರಾಜಣ್ಣ ಪ್ರಸ್ತಾಪಿಸಿದ್ದ ತರುವಾಯ, ನಾಯಕತ್ವ ಕುರಿತ ಚರ್ಚೆ ಕಾಂಗ್ರೆಸ್ ಪಾಳಯದಲ್ಲಿ ಬಿರುಸುಗೊಂಡಿದೆ. 'ಮುಖ್ಯಮಂತ್ರಿ ಬದಲಾವಣೆ ಸೂಚನೆ ಇಲ್ಲ' ಎಂದು ವಿಧಾನಪರಿಷತ್ತಿನ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದ್ದರು. ಆ ಬೆನ್ನಲ್ಲೇ, ಹಲವು ಸ್ವರ–ಅಪಸ್ವರಗಳು ಎದ್ದಿದ್ದವು. ಈ ಕುರಿತು ಮಾತನಾಡಿದ ಖರ್ಗೆಯವರು, 'ಹೈಕಮಾಂಡ್ ಕೈಯಲ್ಲಿ ಎಲ್ಲವೂ ಇದೆ' ಎಂದು ಭಿನ್ನಸ್ವರದಲ್ಲಿ ತಾಳ ಹಾಕಿದ್ದಾರೆ. ಮೈಸೂರಿನಲ್ಲಿದ್ದ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರ ಕೈಯೆತ್ತಿ ಹಿಡಿದು 'ನಾವಿಬ್ಬರೂ ಬಂಡೆಯಂತಿದ್ದೇವೆ' ಎಂದು 'ಒಗ್ಗಟ್ಟು' ತೋರಿದ್ದಾರೆ.

'ಹೈಕಮಾಂಡ್ ಕೈಯಲ್ಲಿ ಸಿಎಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿಯನ್ನು ಬದಲಿಸುವುದು ಹೈಕಮಾಂಡ್‌ ಕೈಯಲ್ಲಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಹೈಕಮಾಂಡ್ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂದು ಯಾರೂ ಹೇಳಲು ಆಗುವುದಿಲ್ಲ. ಕ್ರಮ ಕೈಗೊಳ್ಳುವ ಹಕ್ಕು ಹೈಕಮಾಂಡ್‌ಗೆ ಇದೆ. ಈ ವಿಚಾರದಲ್ಲಿ ಯಾರೂ ಅನಗತ್ಯ ಗೊಂದಲ ಉಂಟು ಮಾಡಬಾರದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ರಾಜ್ಯಕ್ಕೆ ಬಂದಿದ್ದಾರೆ. ಅವರು ಶಾಸಕರಿಂದ ಮಾಹಿತಿ ಪಡೆಯುತ್ತಾರೆ. ಅದನ್ನು ನೋಡಿಕೊಂಡು ಮುಂದೇನು ಮಾಡಬೇಕೆಂದು ನೋಡೋಣ' ಎಂದರು. ಸಚಿವರು, ಶಾಸಕರ ವಿಭಿನ್ನ ಹೇಳಿಕೆಗಳ ಕುರಿತು ಕೇಳಿದ ಪ್ರಶ್ನೆಗೆ, 'ಅವರೆಲ್ಲರ ಹೇಳಿಕೆಗಳಿಗೆ ನಾನು ಉತ್ತರ ಕೊಡುವುದಿಲ್ಲ. ನಾನು ಉತ್ತರ ಕೊಡುವುದು ಎಐಸಿಸಿ ಮಟ್ಟದ ಪ್ರಶ್ನೆಗೆ ಮಾತ್ರ. ಇಲ್ಲಿಯ ಪ್ರತಿಯೊಂದಕ್ಕೂ ಉತ್ತರ ಕೊಡಲು ಹೋದರೆ ಸಾಕಷ್ಟು ವಿಚಾರಗಳಿವೆ' ಎನ್ನುತ್ತಾ ಖರ್ಗೆ ಗರಂ ಆದರು.

ಸಿದ್ದರಾಮಯ್ಯ ಹಾಗೂ ಡಿ. ಕೆ. ಶಿವಕುಮಾರ್ ಒಗ್ಗಟ್ಟಿನ ಸಂಕೇತ

ಬಂಡೆ ರೀತಿ ಸರ್ಕಾರ ಸುಭದ್ರ: ಸಿ.ಎಂ

ಮೈಸೂರು/ಮಂಡ್ಯ: 'ನಮ್ಮ ಸರ್ಕಾರ ಐದು ವರ್ಷ ಬಂಡೆ ರೀತಿ ಭದ್ರವಾಗಿರುತ್ತದೆ. ನನ್ನ ಹಾಗೂ ಡಿ.ಕೆ. ಶಿವಕುಮಾರ್ ನಡುವೆ ಯಾರೇ ತಂದು ಹಾಕುವ ಪ್ರಯತ್ನ ಮಾಡಿದರೂ ಪ್ರಯೋಜನವಿಲ್ಲ. ನಾವಿಬ್ಬರೂ ಒಗ್ಗಟ್ಟಾಗಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸೋಮವಾರ ಪತ್ರಕರ್ತರ ಎದುರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಕೈಹಿಡಿದು ಮೇಲೆತ್ತಿ ಒಗ್ಗಟ್ಟು ಪ್ರದರ್ಶಿಸಿದ ಅವರು, 'ನಮ್ಮ ಬಗ್ಗೆ ಮಾತನಾಡುವ ಬಿ.ಶ್ರೀರಾಮುಲು ಎಷ್ಟು ಬಾರಿ ಚುನಾವಣೆ ಸೋತಿದ್ದಾರೆ ಎಂಬುದು ಗೊತ್ತಿದೆ. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ನಾನು ಈ ಬಾರಿಯ ದಸರಾ ಜಂಬೂಸವಾರಿ ಉದ್ಘಾಟಿಸುವುದು ಸತ್ಯ' ಎಂದರು.

ಕೃಷ್ಣರಾಜ ಸಾಗರ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, 'ನಮ್ಮ ಸರ್ಕಾರ ಬಿದ್ದು ಹೋಗುತ್ತದೆ ಅಂತ ಸೋತ ಗಿರಾಕಿಗಳು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ನನಗೂ, ಶಿವಕುಮಾರ್ ಅವರಿಗೂ ಸರಿ ಇಲ್ಲ ಎಂದು ಬುರುಡೆ ಬಿಡುತ್ತಿದ್ದಾರೆ. ನಾವಿಬ್ಬರೂ ಒಟ್ಟಾಗಿ, ಗಟ್ಟಿಯಾಗಿದ್ದೀವಿ. ನಮ್ಮ ಸರ್ಕಾರವು ಐದು ವರ್ಷ ಗ್ಯಾರಂಟಿ ಗಟ್ಟಿಯಾಗಿ ಇರುತ್ತದೆ. 2028 ರಲ್ಲೂ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆ' ಎಂದು ಘೋಷಿಸಿದರು. ▶10

ಖರ್ಗೆ 'ಆಕ್ಸಿಡೆಂಟಲ್ ಪ್ರೆಸಿಡೆಂಟ್': ಆರ್. ಅಶೋಕ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಆಕ್ಸಿಡೆಂಟಲ್ ಪ್ರೆಸಿಡೆಂಟ್' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೈಕಮಾಂಡ್ ಏನು ಯೋಚಿಸುತ್ತದೆ ಎಂದು ನನಗೆ ತಿಳಿದಿಲ್ಲ ಎಂದು ಸ್ವತಃ ಖರ್ಗೆ ಹೇಳಿದ್ದಾರೆ. ಇದರ ಅರ್ಥ ಕಾಂಗ್ರೆಸ್ ಪಕ್ಷವನ್ನು ಖರ್ಗೆ ಅವರು ಮುನ್ನಡೆಸುತ್ತಿಲ್ಲ. ಎಲ್ಲವೂ ಗಾಂಧಿ ಕುಟುಂಬದಿಂದಲೇ ನಿರ್ದೇಶಿಸಲ್ಪಟ್ಟಿದೆ. ಇವರೊಬ್ಬ 'ಆಕ್ಸಿಡೆಂಟಲ್ ಪ್ರೆಸಿಡೆಂಟ್' ಅಷ್ಟೇ' ಎಂದು ಅವರು 'ಎಕ್ಸ್' ಮೂಲಕ ಕುಟುಕಿದ್ದಾರೆ. 'ಕಾಂಗ್ರೆಸ್ ಪಕ್ಷ ಮತ್ತೊಬ್ಬ 'ಆಕ್ಸಿಡೆಂಟಲ್' ನಾಯಕನನ್ನು ನೀಡಿದೆ ಎಂದು ಅನಿಸುತ್ತಿದೆ. ಮೊದಲು 'ಆಕ್ಸಿಡೆಂಟಲ್ ಪ್ರೈಮ್‌ಮಿನಿಸ್ಟರ್' ಆಗಿ ಮನಮೋಹನ್‌ಸಿಂಗ್ ಅವರನ್ನು ನೀಡಿತ್ತು. ಸಿಂಗ್ ಪ್ರಧಾನಿ ಆಗಿದ್ದರೂ ಅವರಿಗೆ ಯಾವುದೇ ಅಧಿಕಾರ ಇರಲಿಲ್ಲ. ಈಗ ಖರ್ಗೆ ಅಧ್ಯಕ್ಷರಾಗಿದ್ದರೂ ಯಾವುದೇ ಅಧಿಕಾರ ಇಲ್ಲ' ಎಂದು ಅಶೋಕ ಹೇಳಿದ್ದಾರೆ. ▶10

> **ಕಾಂಗ್ರೆಸ್ ಹೈಕಮಾಂಡ್ ಭೂತವಿದ್ದಂತೆ. ಅದು ಯಾರಿಗೂ ಕಾಣಿಸುವುದಿಲ್ಲ, ಕೇಳಿಸುವುದಿಲ್ಲ. ಆದರೆ ಅನುಭವಕ್ಕೆ ಸಿಗುತ್ತದೆ. ಕಾಂಗ್ರೆಸ್ ಅಧ್ಯಕ್ಷರೇ ಹೈಕಮಾಂಡ್ ಎಂದು ಜನ ಭಾವಿಸಿದ್ದರು. ಆದರೆ ಅವರಲ್ಲ**
> **ತೇಜಸ್ವಿ ಸೂರ್ಯ,** ಸಂಸದ

ನಾಯಕತ್ವ ಬದಲಾವಣೆ ಕೇವಲ ಊಹಾಪೋಹ: ಸುರ್ಜೇವಾಲಾ

'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕೇವಲ ಊಹಾಪೋಹ. ಅದೆಲ್ಲ ಮಾಧ್ಯಮಗಳ ಕಲ್ಪನೆ ಮಾತ್ರ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಸ್ವಪಕ್ಷೀಯ ಶಾಸಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಅಹವಾಲು ಆಲಿಸಲು ರಾಜ್ಯಕ್ಕೆ ಸೋಮವಾರ ಬಂದಿರುವ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಗ್ಯಾರಂಟಿ ಯೋಜನೆಗಳ ಕುರಿತು ಶಾಸಕರಿಂದ ಮಾಹಿತಿ ಪಡೆಯುತ್ತೇನೆ' ಎಂದರು. ▶10

ಹಿನ್ನೀರಿನಲ್ಲೊಂದು ಸೇತುವೆ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಶರಾವತಿ ನದಿ ಹಿನ್ನೀರಿನುದ್ದಕ್ಕೂ ನಿರ್ಮಾಣವಾದ ಸೇತುವೆಯ ವಿಹಂಗಮ ನೋಟ. ಈ ಸೇತುವೆಯು ಕರೂರು ಹೋಬಳಿ ಮತ್ತು ಬಾರಂಗಿ ಹೋಬಳಿ ಮಧ್ಯೆ ಸಂಪರ್ಕ ಕೊಂಡಿಯಾಗಲಿದ್ದು, ಶೀಘ್ರ ಸಂಚಾರಕ್ಕೆ ಮುಕ್ತವಾಗಲಿದೆ

ಹಾಸನ: ಹೆಚ್ಚಿದ ಹೃದಯಾಘಾತ

ಸೋಮವಾರ 4, ಒಂದೂವರೆ ತಿಂಗಳಲ್ಲಿ 21 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವು ಪ್ರಕರಣಗಳು ಮುಂದುವರಿದಿವೆ. ಸೋಮವಾರ ಒಂದೇ ದಿನ ನಾಲ್ವರು ಮೃತಪಟ್ಟಿದ್ದಾರೆ. ದೈಹಿಕವಾಗಿ ಸದೃಢರಾಗಿರುವವರೂ ತೀವ್ರ ಹೃದಯಾಘಾತ, ಹೃದಯ ಸ್ತಂಭನದಿಂದ ಸಾವಿಗೀಡಾಗುತ್ತಿದ್ದು, ಜಿಲ್ಲೆಯಲ್ಲಿ ಆತಂಕದ ಅಲೆ ಎದ್ದಿದೆ.

ಸೋಮವಾರ ಒಂದೇ ದಿನ ಜಿಲ್ಲೆಯ ಬೇಲೂರಿನಲ್ಲಿ ಗೃಹಿಣಿ ಲೇಪಾಕ್ಷಿ (50), ಹೊಳೆನರಸೀಪುರದ ಪ್ರಾಧ್ಯಾಪಕ ಮುತ್ತಯ್ಯ (58), ನುಗ್ಗೇಹಳ್ಳಿ ನಾಡ ಕಚೇರಿಯ 'ಡಿ' ಗ್ರೂಪ್ ನೌಕರ ಕುಮಾರ್ (57) ಹಾಗೂ ನಗರದ ಆಟೊರಿಕ್ಷಾ ಚಾಲಕ ಸೂರ್ಯನಾರಾಯಣರಾವ್ (63) ಮೃತಪಟ್ಟಿದ್ದಾರೆ. ಮೇ 20ರಿಂದ ಜೂನ್ 30ರವರೆಗೆ 21 ಜನರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ▶7

ವರದಿ ಸಲ್ಲಿಸಲು ಸಚಿವರ ಸೂಚನೆ

ಮಂಗಳೂರು: 'ಹಾಸನ ಜಿಲ್ಲೆಯಲ್ಲೇ ಏಕೆ ಅಷ್ಟೊಂದು ಹೃದಯಾಘಾತಗಳು ಸಂಭವಿಸುತ್ತಿವೆ ಎಂಬ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಆರೋಗ್ಯ ಇಲಾಖೆಗೆ ಆದೇಶಿಸಿದ್ದೇನೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ವರದಿ ಸಲ್ಲಿಕೆಯಾದ ಬಳಿಕ ಸತ್ಯಾಸತ್ಯತೆ ಗೊತ್ತಾಗಲಿದೆ. ಈಗಿನ ಜೀವನಶೈಲಿ, ಆಹಾರ ಪದ್ಧತಿ, ಮೊಬೈಲ್ ಫೋನ್ ಅತಿಯಾದ ಬಳಕೆ ಮತ್ತು ಡಿಜಿಟಲ್ ವ್ಯಸನಗಳಿಂದಾಗಿಯೂ ಅನಾರೋಗ್ಯ ಸಮಸ್ಯೆ ಹೆಚ್ಚಾಗಿದೆ. ಅನೇಕರಿಗೆ ಚಿಕ್ಕ ವಯಸ್ಸಿನಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ' ಎಂದರು. ▶7

ವೈದ್ಯ ವಿದ್ಯಾರ್ಥಿ ಸಾವು

ಬಾಗಲಕೋಟೆ: ಇಲ್ಲಿನ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿ, ಇಂಟರ್ನ್‌ಶಿಪ್ ಮಾಡುತ್ತಿದ್ದ ವಿದ್ಯಾರ್ಥಿ ಲಕ್ಷ್ಮೀಪುತ್ರ ಕುಲಕರ್ಣಿ (24) ಸೋಮವಾರ ಬೆಂಗಳೂರಿನಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ▶7

ಸೀಟು ಕಾಯ್ದಿರಿಸಿದ ಪಟ್ಟಿ ಬೇಗನೇ ಸಿದ್ಧ

ನವದೆಹಲಿ (ಪಿಟಿಐ): ದೂರ ಪ್ರಯಾಣದ ರೈಲುಗಳ ಸೀಟು ಕಾಯ್ದಿರಿಸಿದ ವಿವರಗಳ ಪಟ್ಟಿಯನ್ನು ರೈಲು ಹೊರಡುವ ಎಂಟು ಗಂಟೆಗೂ ಮುನ್ನ ಸಿದ್ಧಪಡಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಈಗ ಇರುವ ವ್ಯವಸ್ಥೆಯ ಪ್ರಕಾರ ಪಟ್ಟಿಯನ್ನು ನಾಲ್ಕು ಗಂಟೆಗಳಿರುವಾಗ ಸಿದ್ಧಪಡಿಸಲಾಗುತ್ತದೆ.

ದೂರದ ಊರುಗಳಿಂದ ಪ್ರಯಾಣಿಸುವವರಿಗೆ ತಮ್ಮ ಪ್ರಯಾಣವನ್ನು ಇನ್ನಷ್ಟು ಉತ್ತಮವಾಗಿ ಯೋಜಿಸಲು ಅನುವು ಮಾಡಿಕೊಡಲು ಈ ತೀರ್ಮಾನ ತೆಗೆದು ಕೊಂಡಿದೆ. ▶10

ಕಾರ್ಖಾನೆಯಲ್ಲಿ ಸ್ಫೋಟ: 15 ಸಾವು

ಸಂಗಾರೆಡ್ಡಿ (ತೆಲಂಗಾಣ) (ಪಿಟಿಐ): ಇಲ್ಲಿನ ಔಷಧ ಕಾರ್ಖಾನೆಯಲ್ಲಿ ಸೋಮವಾರ ಸಂಭವಿಸಿದ ಸ್ಫೋಟದಲ್ಲಿ 15 ಕಾರ್ಮಿಕರು ಮೃತಪಟ್ಟಿದ್ದು, 34 ಮಂದಿ ಗಾಯಗೊಂಡಿದ್ದಾರೆ. ▶11

ದ್ವಿಭಾಷಾ ಸೂತ್ರಕ್ಕೆ ಬದ್ಧ; ಸಿ.ಎಂ

ಮೈಸೂರು: 'ದ್ವಿಭಾಷಾ ಸೂತ್ರ ಜಾರಿಗೆ ಕರ್ನಾಟಕ ಸರ್ಕಾರವು ಬದ್ಧವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಹಾರಾಷ್ಟ್ರ ಸರ್ಕಾರವು ದ್ವಿಭಾಷಾ ಸೂತ್ರ ಜಾರಿಗೆ ಮುಂದಾಗಿರುವ ಕುರಿತು ಸೋಮವಾರ ಅವರು ಇಲ್ಲಿ ಪ್ರತಿಕ್ರಿಯಿಸಿದ ಅವರು, 'ನಾವು ದ್ವಿಭಾಷಾ ಸೂತ್ರದ ಪರ ಇದ್ದೇವೆ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೆಐಎಡಿಬಿ ಸರ್ವೆ ಅಧಿಕಾರಿಗಳ ವಿಚಾರಣೆಗಾಗಿ ಅನುಮತಿ ಕೋರಿದ 'ಲೋಕಾ'

ಸರ್ಕಾರಕ್ಕೆ ₹150 ಕೋಟಿ ವಂಚನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೈಗಾರಿಕಾ ಪ್ರದೇಶಗಳ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ರಾಜ್ಯದ ಹಲವೆಡೆ ನಡೆಸಿದ ರೈತರ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭಾರಿ ವಂಚನೆ ಎಸಗಿರುವ ಮಾಹಿತಿಯನ್ನು ಲೋಕಾಯುಕ್ತ ಕಲೆ ಹಾಕಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಡೆದ ವಂಚನೆಗಳ ಕುರಿತು ಲೋಕಾಯುಕ್ತಕ್ಕೆ ಹಲವು ದೂರುಗಳು ಬಂದಿದ್ದವು. ಇದರ ಬೆನ್ನಲ್ಲೇ, ಮೊದಲ ಭಾಗವಾಗಿ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ಭಾವನಹಳ್ಳಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ 722 ಎಕರೆಗೆ ನೀಡಿದ ಪರಿಹಾರ ಮೊತ್ತದ ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗಿದೆ. ಕೆಐಎಡಿಬಿ, ಸರ್ವೆ ಇಲಾಖೆಯ ಅಧಿಕಾರಿಗಳು ಮಧ್ಯವರ್ತಿಗಳು ಹಾಗೂ ಕೆಲ ರೈತರ ಜತೆ ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ₹150 ಕೋಟಿ ನಷ್ಟ ಮಾಡಿದ್ದಾರೆ ಎಂದು ಲೋಕಾಯುಕ್ತ ತನಿಖಾ ತಂಡ ಪತ್ತೆಹಚ್ಚಿತ್ತು. ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿರುವ ಲೋಕಾಯುಕ್ತ, ಮೂವರು ವಿಶೇಷ ಭೂಸ್ವಾಧೀನಾಧಿಕಾರಿಗಳೂ ಸೇರಿ ಪ್ರಕರಣ ದಲ್ಲಿ ಭಾಗಿಯಾದ ಅಧಿಕಾರಿಗಳ ವಿಚಾರಣೆಗೆ ಅನುಮತಿ ನೀಡುವಂತೆ ಕೋರಿದೆ.

ಭೂಸ್ವಾಧೀನ

ಭಾವನಹಳ್ಳಿ ಬಳಿ ಕೈಗಾರಿಕಾ ವಸಾಹತು ಅಭಿವೃದ್ಧಿಗಾಗಿ, ಭೂಸ್ವಾಧೀನಪಡಿಸಿಕೊಳ್ಳಲು 2020ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅಂದು ಹೊರಡಿಸಿದ್ದ ಅಧಿಸೂಚನೆ, 2022ರಲ್ಲಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಮಾಹಿತಿಯಂತೆ ಪ್ರತಿ ಎಕರೆ ಖಾಲಿ ಜಮೀನಿಗೆ ₹1.15 ಕೋಟಿ ನಿಗದಿ ಮಾಡಲಾಗಿತ್ತು. ಸ್ವಾಧೀನಪಡಿಸಿಕೊಳ್ಳುವ ಜಮೀನಿನಲ್ಲಿ ಇರುವ ಪ್ರತಿ ಗಿಡ, ಮರಗಳಿಗೆ ಪ್ರತ್ಯೇಕ ದರ (ಮರಮಾಲ್ಕಿ ಪರಿಹಾರ) ನೀಡಲು ಸೂಚಿಸಲಾಗಿತ್ತು. ▶5

ಮುಖ್ಯಾಂಶಗಳು

- ಒಂದು ಎಕರೆಯಲ್ಲಿ 200 ಮಾವಿನ ಮರಗಳ ನಮೂದು
- ಒಂದು ಎಕರೆಗೆ ₹49 ಲಕ್ಷ ಮರಮಾಲ್ಕಿ ಪರಿಹಾರ
- ಒಂದು ಎಕರೆಯ ಹುಣಸೆ ಮರಗಳಿಗೆ ₹39.74 ಲಕ್ಷ

ಆರೋಪಿ ಸ್ಥಾನದಲ್ಲಿರುವ ಅಧಿಕಾರಿಗಳು

ಜಿ.ಎಚ್. ನಾಗಹನುಮಯ್ಯ	ವಿಶೇಷ ಭೂಸ್ವಾಧೀನಾಧಿಕಾರಿ
ಅಪೂರ್ವಾ ಬಿದರಿ	ವಿಶೇಷ ಭೂಸ್ವಾಧೀನಾಧಿಕಾರಿ
ಸಿ.ಎಲ್. ಶಿವಕುಮಾರ್	ವಿಶೇಷ ಭೂಸ್ವಾಧೀನಾಧಿಕಾರಿ
ಅಶ್ವಿನಿ	ಭೂದಾಖಲೆಗಳ ಸಹಾಯಕ ನಿರ್ದೇಶಕಿ
ಪುಟ್ಟರಾಜು	ಸರ್ವೆ ಪರಿವೀಕ್ಷಕ
ಟಿ.ಟಿ. ಅಶೋಕ	ಭೂಮಾಪಕ
ಜಯಶಂಕರ್	ಭೂಮಾಪಕ

> **ಕೆಐಎಡಿಬಿ ಅಧಿಕಾರಿಗಳ ವಿರುದ್ಧ ವಿಚಾರಣೆಗೆ ಲೋಕಾಯುಕ್ತರು ಅನುಮತಿ ಕೋರಿರುವ ಪತ್ರ ಸಿಕ್ಕಿಲ್ಲ. ಮಾಹಿತಿ ಪಡೆದು ನಿರ್ಧಾರ ಕೈಗೊಳ್ಳುವೆ**
> **ಎಂ.ಬಿ. ಪಾಟೀಲ,** ಕೈಗಾರಿಕಾ ಸಚಿವ

₹118.78 ಕೋಟಿ ಮೊತ್ತದ 2,000 ಮನೆ ನಿರ್ಮಾಣ ಯೋಜನೆ

ವಸತಿಯಲ್ಲಿ ಅಕ್ರಮ ಶಂಕೆ: ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಶಿಗ್ಗಾವಿ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಜಾರಿಗೊಳಿಸಿದ್ದ ವಸತಿ ಯೋಜನೆಯಲ್ಲಿ ಅಕ್ರಮ ನಡೆದಿರುವ ಆರೋಪ ಬಂದಿದ್ದು, ಈ ಬಗ್ಗೆ ಪರಿಶೀಲಿಸಿದ ಸವಣೂರು ಉಪವಿಭಾಗಾಧಿಕಾರಿಯವರು (ಎ.ಸಿ) ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದಾರೆ.

'ಮೂರು ಪಟ್ಟಣಗಳಲ್ಲಿ 2021ರಲ್ಲಿ ₹118.78 ಕೋಟಿ ವೆಚ್ಚದಲ್ಲಿ 2,000 ಮನೆಗಳನ್ನು ನಿರ್ಮಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು. ಈ ಪೈಕಿ ಕೆಲ ಮನೆಗಳು ಮಾತ್ರ ಪೂರ್ಣಗೊಂಡಿವೆ. ಆದರೆ, ಗುತ್ತಿಗೆದಾರರಿಗೆ ₹66.42 ಕೋಟಿ ಬಿಡುಗಡೆ ಮಾಡಲಾಗಿದೆ. ₹23.93 ಕೋಟಿ ಬಿಡುಗಡೆ ಬಾಕಿಯಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.



'350 ಚದರ ಅಡಿ ವಿಸ್ತೀರ್ಣದಲ್ಲಿ ಮಾತ್ರ ನಿಗದಿತ ಮೊತ್ತದಲ್ಲಿ ಮನೆ ನಿರ್ಮಿಸಬೇಕೆಂದು ಗುತ್ತಿಗೆದಾರರಿಗೆ ಷರತ್ತು ವಿಧಿಸಲಾಗಿತ್ತು. ಆದರೆ, ಹಲವು ಫಲಾನುಭವಿಗಳು 350 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದು ಗೊತ್ತಿದ್ದರೂ ಗುತ್ತಿಗೆದಾರರು, ಫಲಾನುಭವಿಗಳ ಜೊತೆ ನಿಯಮಬಾಹಿರವಾಗಿ ಒಪ್ಪಂದ ಮಾಡಿಕೊಂಡು ಹಣ ನೀಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಜೊತೆಗೆ, ಹಲವು ಫಲಾನುಭವಿಗಳಿಗೆ ಗುತ್ತಿಗೆದಾರರು ಹಣ ನೀಡಿಲ್ಲ' ಎಂಬ ಮಾಹಿತಿಯೂ ವರದಿಯಲ್ಲಿದೆ.

'ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಪ್ರಮಾಣದಲ್ಲಿ ಮುಗಿಯದಿದ್ದರೂ ಮುಗಿದಿರುವುದಾಗಿ ಹೇಳಿ ಗುತ್ತಿಗೆದಾರರು ಬಾಕಿ ಹಣ ಮಂಜೂರು ಮಾಡುವಂತೆ ಕೋರುತ್ತಿದ್ದಾರೆ. ಯೋಜನೆಯ ಸ್ಥಳ ಪರಿಶೀಲಿಸಿದಾಗ, ಗುತ್ತಿಗೆದಾರರ ವಿರುದ್ಧ ಫಲಾನುಭವಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮನೆ ಕಟ್ಟಿಕೊಳ್ಳಲು ಗುತ್ತಿಗೆದಾರರು ಸಮರ್ಪಕವಾಗಿ ಸ್ಪಂದಿಸಿಲ್ಲವೆಂದು ದೂರಿದ್ದಾರೆ. ಗುತ್ತಿಗೆದಾರರ ಬಗ್ಗೆ ದೂರುಗಳಿದ್ದರೂ ಹಂತಹಂತವಾಗಿ ಹಣ ಬಿಡುಗಡೆ ಆಗಿರುವುದು ಗೊತ್ತಾಗುತ್ತಿದೆ. ಜೊತೆಗೆ, ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿಯಲ್ಲಿಯೂ ಹಣ ಬಿಡುಗಡೆಯಾಗಿದ್ದು, ಇದರ ಹಂಚಿಕೆಯಲ್ಲೂ ಲೋಪವಾಗಿರುವುದು ಪರಿಶೀಲನೆಯಿಂದ ತಿಳಿದಿದೆ. ವಸತಿ ಯೋಜನೆಯ ಎಲ್ಲ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಫಲಾನುಭವಿಗಳಿಗೆ ತಿಳಿಸಲಾಗಿದೆ' ಎಂದು ಉಲ್ಲೇಖಿಸಲಾಗಿದೆ.

'ಬೆಂಗಳೂರು ಜಯನಗರದ ನಕ್ಷತ್ರ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನ ಸೆಲ್ವಿ ಷಣ್ಮುಗ, ಬೆಂಗಳೂರಿನ ಜಿ. ಚಂದ್ರೇಗೌಡ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲದ ಟಿ.ಎನ್. ಪರಮೇಶ (ಚಿತ್ರಾ ವೆಂಚರ್ಸ್ ಎಲ್‌ಎಲ್‌ಪಿ) ಅವರಿಗೆ ಗುತ್ತಿಗೆ ನೀಡಲಾಗಿತ್ತು. ಯೋಜನೆ ಜಾರಿ ಬಗ್ಗೆ ಉನ್ನತ ತನಿಖೆ ಅಗತ್ಯವಿರುವಂತೆ ಕಾಣುತ್ತಿದೆ' ಎಂದು ತಿಳಿಸಲಾಗಿದೆ.

ನಗರದಲ್ಲಿ ಏಪ್ರಿಲ್ 8ರಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆಯಲ್ಲಿ ನಡೆದಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕರು, 'ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಪರಸ್ಪರ ಶಾಮೀಲಾಗಿ ವಸತಿ ಯೋಜನೆಯಲ್ಲಿ ಅಕ್ರಮ ಎಸಗಿದ್ದಾರೆ. ಸೂಕ್ತ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದರು. ಸಚಿವರು ತನಿಖೆಗೆ ಆದೇಶಿಸಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ಜುಲೈ 3ರವರೆಗೆ ನಂದಿಬೆಟ್ಟ, ಸ್ಕಂದಗಿರಿ ಪ್ರವೇಶಕ್ಕೆ ನಿಷೇಧ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಐತಿಹಾಸಿಕ ನಂದಿಗಿರಿಧಾಮದಲ್ಲಿ ಜುಲೈ 2ರಂದು ಸಚಿವ ಸಂಪುಟ ಸಭೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ನಂದಿಗಿರಿಧಾಮ ಮತ್ತು ಪ್ರಸಿದ್ಧ ಚಾರಣತಾಣ ಸ್ಕಂದಗಿರಿಗೆ ಜುಲೈ 3ರ ಮಧ್ಯಾಹ್ನ 2ರವರೆಗೆ ಪ್ರವಾಸಿಗರು ಹಾಗೂ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ.

ಈ ಅವಧಿಯಲ್ಲಿ ಗಿರಿಧಾಮದಲ್ಲಿನ ವಸತಿ ನಿಲಯದ ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸುವಿಕೆಯನ್ನೂ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ಗಿರಿಧಾಮಕ್ಕೆ ಹೋಗಲು ಮತ್ತು ಬರಲು ಒಂದೇ ರಸ್ತೆ ಇರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಗಿರಿಧಾಮದಲ್ಲಿ ಕಡಿದಾದ ತಿರುವುಗಳಿವೆ. ವಾಹನಗಳು ಮತ್ತು ಪ್ರವಾಸಿಗರನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ. ಅಪಘಾತಗಳಾಗುವ ಸಾಧ್ಯತೆ ಹೆಚ್ಚಿರುತ್ತವೆ. ಮುನ್ನೆಚ್ಚರಿಕಾ ಕ್ರಮವಾಗಿ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಲೋಕಸೇವಾ ಆಯೋಗ

ಪರೀಕ್ಷೆಗಳ/ನೇಮಕಾತಿ ಪರೀಕ್ಷೆಗಳ (ಆರ್‌ಟಿ) ಕಾರ್ಯಕ್ರಮ–2026

ಕ್ರ.ಸಂ.	ಪರೀಕ್ಷೆ ಹೆಸರು	ಅಧಿಸೂಚನೆ ದಿನಾಂಕ	ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	ಪರೀಕ್ಷೆಯ ಆರಂಭ ದಿನಾಂಕ	ಪರೀಕ್ಷೆ ಅವಧಿ
1	ಯುಪಿಎಸ್‌ಸಿ ಆರ್‌ಟಿ/ಪರೀಕ್ಷೆಗೆ ಮೀಸಲು			10.01.2026 (ಶನಿವಾರ)	2 ದಿನಗಳು
2	ಯುಪಿಎಸ್‌ಸಿ ಪರೀಕ್ಷೆಗೆ ಮೀಸಲು			17.01.2026 (ಶನಿವಾರ)	2 ದಿನಗಳು
3	ಕಂಬೈನ್ಡ್ ಜಿಯೊ–ಸೈಂಟಿಸ್ಟ್ (ಪ್ರಿಲಿಮಿನರಿ) ಪರೀಕ್ಷೆ, 2026	03.09.2025	23.09.2025	08.02.2026 (ರವಿವಾರ)	1 ದಿನ
4	ಇಂಜಿನಿಯರಿಂಗ್ ಸರ್ವಿಸಸ್ (ಪ್ರಿಲಿಮಿನರಿ) ಪರೀಕ್ಷೆ, 2026	17.09.2025	07.10.2025	08.02.2026 (ರವಿವಾರ)	1 ದಿನ
5	ಸಿಬಿಐ (ಡಿಎಸ್‌ಪಿ) ಎಲ್‌ಡಿಸಿಇ	24.12.2025	13.01.2026	28.02.2026 (ಶನಿವಾರ)	2 ದಿನಗಳು
6	ಸಿಐಎಸ್‌ಎಫ್ ಎಸಿ (ಇಎಕ್ಸ್‌ಇ) ಎಲ್‌ಡಿಸಿಇ–2026	03.12.2025	23.12.2025	08.03.2026 (ರವಿವಾರ)	1 ದಿನ
7	ಎನ್.ಡಿ.ಎ. & ಎನ್.ಎ. ಪರೀಕ್ಷೆ (1), 2026	10.12.2025	30.12.2025	12.04.2026 (ರವಿವಾರ)	1 ದಿನ
8	ಸಿ.ಡಿ.ಎಸ್. ಪರೀಕ್ಷೆ (1), 2026				
9	ಸಿವಿಲ್ ಸರ್ವಿಸಸ್ (ಪ್ರಿಲಿಮಿನರಿ) ಪರೀಕ್ಷೆ, 2026	14.01.2026	03.02.2026	24.05.2026 (ರವಿವಾರ)	1 ದಿನ
10	ಸಿಎಸ್ (ಪಿ) ಪರೀಕ್ಷೆ 2026ರ ಮುಖಾಂತರ ಇಂಡಿಯನ್ ಫಾರೆಸ್ಟ್ ಸರ್ವೀಸ್ (ಪ್ರಿಲಿಮಿನರಿ) ಪರೀಕ್ಷೆ, 2026				
11	ಯುಪಿಎಸ್‌ಸಿ ಆರ್‌ಟಿ/ಪರೀಕ್ಷೆಗೆ ಮೀಸಲು			06.06.2026 (ಶನಿವಾರ)	2 ದಿನಗಳು
12	ಐ.ಇ.ಎಸ್/ಐ.ಎಸ್.ಎಸ್. ಪರೀಕ್ಷೆ, 2026	11.02.2026	03.03.2026	19.06.2026 (ಶುಕ್ರವಾರ)	3 ದಿನಗಳು
13	ಕಂಬೈನ್ಡ್ ಜಿಯೊ–ಸೈಂಟಿಸ್ಟ್ (ಮೇನ್) ಪರೀಕ್ಷೆ, 2026			20.06.2026 (ಶನಿವಾರ)	2 ದಿನಗಳು
14	ಇಂಜಿನಿಯರಿಂಗ್ ಸರ್ವಿಸಸ್ (ಮೇನ್) ಪರೀಕ್ಷೆ, 2026			21.06.2026 (ರವಿವಾರ)	1 ದಿನ
15	ಯುಪಿಎಸ್‌ಸಿ ಆರ್‌ಟಿ/ಪರೀಕ್ಷೆಗೆ ಮೀಸಲು			04.07.2026 (ಶನಿವಾರ)	2 ದಿನಗಳು
16	ಕೇಂದ್ರಿಯ ಸಶಸ್ತ್ರ ಪೊಲೀಸ್ ಪಡೆಗಳು (ಎಸಿ) ಪರೀಕ್ಷೆ, 2026	18.02.2026	10.03.2026	19.07.2026 (ರವಿವಾರ)	1 ದಿನ
17	ಕಂಬೈನ್ಡ್ ಮೆಡಿಕಲ್ ಸರ್ವಿಸಸ್ ಪರೀಕ್ಷೆ, 2026	11.03.2026	31.03.2026	02.08.2026 (ರವಿವಾರ)	1 ದಿನ
18	ಯುಪಿಎಸ್‌ಸಿ ಪರೀಕ್ಷೆಗೆ ಮೀಸಲು			08.08.2026 (ಶನಿವಾರ)	2 ದಿನಗಳು
19	ನಾಗರಿಕ ಸೇವೆಗಳು (ಮುಖ್ಯ) ಪರೀಕ್ಷೆ, 2026			21.08.2026 (ಶುಕ್ರವಾರ)	5 ದಿನಗಳು
20	ಎನ್.ಡಿ.ಎ. & ಎನ್.ಎ. ಪರೀಕ್ಷೆ (2), 2026	20.05.2026	09.06.2026	13.09.2026 (ರವಿವಾರ)	1 ದಿನ
21	ಸಿ.ಡಿ.ಎಸ್. ಪರೀಕ್ಷೆ (2), 2026				
22	ಯುಪಿಎಸ್‌ಸಿ/ಆರ್‌ಟಿ ಪರೀಕ್ಷೆಗೆ ಮೀಸಲು			26.09.2026 (ಶನಿವಾರ)	2 ದಿನಗಳು
23	ಯುಪಿಎಸ್‌ಸಿ/ಆರ್‌ಟಿ ಪರೀಕ್ಷೆಗೆ ಮೀಸಲು			10.10.2026 (ಶನಿವಾರ)	2 ದಿನಗಳು
24	ಯುಪಿಎಸ್‌ಸಿ/ಆರ್‌ಟಿ ಪರೀಕ್ಷೆಗೆ ಮೀಸಲು			31.10.2026 (ಶನಿವಾರ)	2 ದಿನಗಳು
25	ಇಂಡಿಯನ್ ಫಾರೆಸ್ಟ್ ಸರ್ವೀಸ್ (ಮೇನ್) ಪರೀಕ್ಷೆ, 2026			22.11.2026 (ರವಿವಾರ)	7 ದಿನಗಳು
26	ಎಸ್.ಒ./ಸ್ಟೆನೊ (ಜಿಡಿ–ಬಿ/ಜಿಡಿ–1) ಎಲ್‌ಡಿಸಿಇ	16.09.2026	06.10.2026	12.12.2026 (ಶನಿವಾರ)	2 ದಿನಗಳು
27	ಯುಪಿಎಸ್‌ಸಿ/ಆರ್‌ಟಿ ಪರೀಕ್ಷೆಗೆ ಮೀಸಲು			19.12.2026 (ಶನಿವಾರ)	2 ದಿನಗಳು

ಸೂಚನೆ: ಅನಿವಾರ್ಯ ಸಂದರ್ಭದಲ್ಲಿ, ಅಧಿಸೂಚನೆ ಮತ್ತು ಆರಂಭ ದಿನಾಂಕಗಳಲ್ಲಿ ಹಾಗೂ ಪರೀಕ್ಷೆಗಳ/ಆರ್‌ಟಿ'ಗಳ ಅವಧಿಯಲ್ಲಿ ಬದಲಾವಣೆ ಆಗಬಹುದಾಗಿರುತ್ತದೆ.

CBC - 55101/14/0002/2526

ರಾಜಕಾಲುವೆ ಮೇಲೆ ಕಟ್ಟಡಗಳು!

ಜಯನಗರ: ದೂರು ನೀಡಿದರೂ ಕ್ರಮ ಕೈಗೊಳ್ಳದ ಅಧಿಕಾರಿಗಳು–ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ 8ನೇ ಬ್ಲಾಕ್‌ನಲ್ಲಿ ಕಾನೂನು ಉಲ್ಲಂಘಿಸಿ ಹಾಗೂ ರಾಜಕಾಲುವೆಗಳ ಮೇಲೆ ಕಟ್ಟಡಗಳು ನಿರ್ಮಾಣವಾಗುತ್ತಿರುವ ಬಗ್ಗೆ ಆರು ತಿಂಗಳಿಂದ ದೂರು ನೀಡುತ್ತಿದ್ದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ.

'2024ರ ನವೆಂಬರ್ 13ರಿಂದ 2025ರ ಮಾರ್ಚ್ 25ರವರೆಗೆ ಬಿಬಿಎಂಪಿಯ ಮುಖ್ಯ ಆಯುಕ್ತರು, ದಕ್ಷಿಣ ವಲಯದ ಆಯುಕ್ತರು, ಜಂಟಿ ಆಯುಕ್ತರು, ವಾರ್ಡ್ 179ರ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಹಲವು ಬಾರಿ ದೂರು ನೀಡಿದ್ದೇನೆ. ಆದರೆ ಈವರೆಗೆ ಕ್ರಮ ಕೈಗೊಂಡಿಲ್ಲ. ಕಟ್ಟಡಗಳು ನಿರ್ಮಾಣವಾಗುತ್ತಲೇ ಇವೆ' ಎಂದು ಜೆ.ಪಿ. ನಗರದ ನಿವಾಸಿ ವಿ. ಶಶಿಕುಮಾರ್ ದೂರಿದರು.

'ಜಯನಗರ 8ನೇ ಬ್ಲಾಕ್‌ನ 45ನೇ ಅಡ್ಡರಸ್ತೆಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡು ಆರು ಅಂತಸ್ತಿನ ಕಟ್ಟಡವನ್ನು ಅಕ್ರಮವಾಗಿ ನಿರ್ಮಾಣ ಮಾಡಲಾಗುತ್ತಿದೆ. 41ನೇ ಅಡ್ಡರಸ್ತೆ ಹಾಗೂ 43ನೇ ಅಡ್ಡರಸ್ತೆಯಲ್ಲಿ ಯಾವುದೇ ರೀತಿಯ ಸೆಟ್‌ಬ್ಯಾಕ್ ಬಿಡದೆ ಕಟ್ಟಡ ನಿರ್ಮಾಣವಾಗುತ್ತಿದೆ.

ಜಯನಗರ 8ನೇ ಬ್ಲಾಕ್‌ನಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ

ವಾರ್ಡ್ ನಂ. 179ರಲ್ಲಿ ಸುಮಾರು 30 ಕಟ್ಟಡಗಳು ಅಕ್ರಮವಾಗಿ ನಿರ್ಮಾಣವಾಗುತ್ತಿವೆ. ಈ ಬಗ್ಗೆ ದೂರು ನೀಡಿದ್ದೇನೆ. ಆದರೆ ಯಾವ ಅಧಿಕಾರಿಯೂ ಕ್ರಮ ಕೈಗೊಂಡಿಲ್ಲ' ಎಂದು ಶಶಿಕುಮಾರ್ ದೂರಿದರು.

ನಗರ ಯೋಜನೆ ಅಧಿಕಾರಿ ನಿರ್ಲಕ್ಷ್ಯ: 'ಕಾನೂನು ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ' ಎಂಬ ದೂರನ್ನು ಪರಿಗಣಿಸಿರುವ, ಬೆಂಗಳೂರು ದಕ್ಷಿಣ ವಲಯದ ಶಾಖಾಂಬರಿ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ದಕ್ಷಿಣ ವಲಯದ ನಗರ ಯೋಜನೆ ಸಹಾಯಕ ನಿರ್ದೇಶಕರಿಗೆ (ಎಡಿಟಿಪಿ) 2024ರ ಡಿಸೆಂಬರ್ 10ರಂದು ಪತ್ರ ಬರೆದಿದ್ದಾರೆ. 16 ಕಟ್ಟಡಗಳ ಸಂಖ್ಯೆಯನ್ನು ನಮೂದಿಸಿ, ಅವುಗಳ ಮೇಲೆ ಕೈಗೊಂಡಿರುವ ಕ್ರಮ, ಮಂಜೂರಾತಿ ನಕ್ಷೆ, ಕಟ್ಟಡ ನಿರ್ಮಾಣ ಪ್ರಾರಂಭಿಸಲು ನೀಡಿರುವ ಪ್ರಮಾಣ ಪತ್ರಗಳನ್ನು (ಸಿಸಿ) ಸಲ್ಲಿಸುವಂತೆ ಸೂಚಿಸಿದ್ದಾರೆ.

'ಈ ಸೂಚನೆ ನೀಡಿ ಆರು ತಿಂಗಳಾದರೂ ಎಡಿಟಿಪಿ ಅವರು ಕ್ರಮ ಕೈಗೊಂಡಿಲ್ಲ. ಕಟ್ಟಡಗಳು ಅಕ್ರಮವಾಗಿ ನಿರ್ಮಾಣವಾಗುತ್ತಿವೆ' ಎಂದು ಶಶಿಕುಮಾರ್ ಆರೋಪಿಸಿದರು.

ಪ್ರತಿಕ್ರಿಯಿಸದ ಬಿಬಿಎಂಪಿ ಅಧಿಕಾರಿಗಳು

ಜಯನಗರ 8ನೇ ಬ್ಲಾಕ್‌ನಲ್ಲಿ 15ಕ್ಕೂ ಹೆಚ್ಚು ಕಟ್ಟಡಗಳು ಕಾನೂನು ಉಲ್ಲಂಘಿಸಿ ನಿರ್ಮಾಣವಾಗುತ್ತಿರುವ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ, ದಕ್ಷಿಣ ವಲಯದ ನಗರ ಯೋಜನೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಕರೆ ಹಾಗೂ ಸಂದೇಶಕ್ಕೆ ಅವರಿಬ್ಬರೂ ಪ್ರತಿಕ್ರಿಯಿಸಲಿಲ್ಲ.

ಎಐಇ ಪತ್ರದಲ್ಲಿರುವ ಕಟ್ಟಡಗಳು

- 37ನೇ ಎ ಅಡ್ಡರಸ್ತೆಯ ನಿವೇಶನ ಸಂಖ್ಯೆ 213
- 38ನೇ ಅಡ್ಡರಸ್ತೆಯ ನಂ. 27/ಬಿ, ನಂ. 23/ಸಿ
- 41ನೇ ಅಡ್ಡರಸ್ತೆಯ ನಂ.331, ನಂ.69
- 42ನೇ ಅಡ್ಡರಸ್ತೆಯ ನಂ.101, ನಂ 363, ನಂ.361
- 43ನೇ ಅಡ್ಡರಸ್ತೆಯ ನಂ.407, ನಂ. 422, ನಂ. 139
- 44ನೇ ಅಡ್ಡರಸ್ತೆಯ ನಂ.172, ನಂ.174, ನಂ. 186, ನಂ.477

ಗಣೇಶ್ ರಾವ್ ಕಾಸಿಯಾ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) 2025–26ನೇ ಸಾಲಿನ ಅಧ್ಯಕ್ಷರಾಗಿ ಬಿ.ಆರ್.ಗಣೇಶ್ ರಾವ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

'ಅನುಭವಿ ಉದ್ಯಮಿ ಆಗಿರುವ ಅವರು ಎರಡು ದಶಕಗಳಿಗೂ ಹೆಚ್ಚು ಅವಧಿಯಿಂದ ಪೀಣ್ಯ ಕೈಗಾರಿಕೆಗಳ ಸಂಘ (ಪಿಐಎ) ಮತ್ತು ಕಾಸಿಯಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ರಾವ್ ಅವರು ಕಾಸಿಯಾದಲ್ಲಿ ಖಜಾಂಚಿ, ಉಪ-ಸಮಿತಿ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಜವಾಬ್ದಾರಿ ನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಕಾಸಿಯಾದ ಹೊಸ ಪದಾಧಿಕಾರಿಗಳು: ನಿಂಗಣ್ಣ ಎಸ್. ಬಿರಾದರ್ (ಉಪಾಧ್ಯಕ್ಷರು), ಎಸ್.ಎಂ. ಹುಸೇನ್ (ಗೌರವ ಪ್ರಧಾನ ಕಾರ್ಯದರ್ಶಿ), ಆರ್. ಕೇಶವ ಮೂರ್ತಿ (ಜಂಟಿ ಕಾರ್ಯದರ್ಶಿ – ನಗರ), ದಿನೇಶ್ ಕುಮಾರ್ ವಿ. (ಜಂಟಿ ಕಾರ್ಯದರ್ಶಿ – ಗ್ರಾಮೀಣ), ಆರ್. ದುರ್ಗೆ (ಖಜಾಂಚಿ).

ವರ್ಷಾಂತ್ಯಕ್ಕೆ ರಾಜಕಾಲುವೆ ಕಾಮಗಾರಿ ಪೂರ್ಣಗೊಳಿಸಿ: ಮುಖ್ಯ ಆಯುಕ್ತ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಜೆ.ಪಿ ನಗರದ ಸಿಂಧೂರ ಕಲ್ಯಾಣ ಮಂಟಪದ ಸುತ್ತಮುತ್ತಲಿನ ಪ್ರದೇಶದಲ್ಲಿ ರಾಜಕಾಲುವೆ ಕಾಮಗಾರಿಯನ್ನು ವರ್ಷಾಂತ್ಯಕ್ಕೆ ಪೂರ್ಣಗೊಳಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ದಕ್ಷಿಣ ವಲಯ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಸಿಂಧೂರ ಕಲ್ಯಾಣ ಮಂಟಪದಿಂದ ಕೆ-210ಕ್ಕೆ ಸಂಪರ್ಕ ಕಲ್ಪಿಸಲು 1.3 ಕಿ.ಮೀ ಉದ್ದದ ಮಳೆ ನೀರು ಹರಿಯುವ ರಾಜಕಾಲುವೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಪ್ರವಾಹ ಆಗುವುದನ್ನು ತಪ್ಪಿಸಬೇಕು ಎಂದರು.

ಹೊರ ವರ್ತುಲ ರಸ್ತೆಯ ಚರಂಡಿಗಳಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಬೇಕು. ಚರಂಡಿಗಳಿಂದ ತೆಗೆದ ಹೂಳನ್ನು ಸ್ಥಳದಲ್ಲಿಯೇ ಬಿಡದೆ ಕೂಡಲೇ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಜಯನಗರದ 3ನೇ ಬ್ಲಾಕ್‌ನಲ್ಲಿ 5 ಟನ್ ಸಾಮರ್ಥ್ಯದ ಘನತ್ಯಾಜ್ಯ ಜೈವಿಕ ಅನಿಲ ಘಟಕವಿದೆ. ಇಂತಹ ಘಟಕಗಳನ್ನು ನಗರದ ಇತರೆ ಭಾಗಗಳಲ್ಲಿ ಸ್ಥಾಪಿಸಬೇಕು. ಕೆ.ಆರ್. ಮಾರುಕಟ್ಟೆಯಲ್ಲಿ ಸ್ಥಾಪಿಸಿದರೆ, ತ್ಯಾಜ್ಯ ನಿರ್ವಹಣಾ ಸಮಸ್ಯೆ ಬಗೆಹರಿಸಬಹುದು ಎಂದರು.

ವಿಲ್ಸನ್ ಗಾರ್ಡನ್ ಬಳಿಯಿರುವ ವಿದ್ಯುತ್ ಚಿತಾಗಾರಕ್ಕೆ ಅಂತ್ಯಕ್ರಿಯೆ ಮಾಡಲು ಬರುವವರಿಗಾಗಿ ಮೂಲಸೌಕರ್ಯಗಳ ವ್ಯವಸ್ಥೆ ಮಾಡಬೇಕು. ಅಲ್ಲದೇ ಹೆಚ್ಚುವರಿಯಾಗಿ ಎರಡು ಫರ್ನೆಸ್ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು.

1,259 ಅಂತಿಮ ಇ-ಖಾತೆ ವಿತರಣೆ

ಬಿಬಿಎಂಪಿ ಯಲಹಂಕ ವಲಯದ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದಲ್ಲಿ ನಡೆದ ಎರಡು ದಿನಗಳ 'ಬೃಹತ್ ಇ-ಖಾತಾ ಮೇಳ'ದಲ್ಲಿ 1,259 ಇ-ಖಾತಾಗಳನ್ನು ವಿತರಿಸಲಾಗಿದೆ.

ಒಟ್ಟು 4,300 ಜನರಿಗೆ ಟೋಕನ್ ನೀಡಲಾಗಿದೆ. 1,694 ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, 1,259 ಅರ್ಜಿಗಳನ್ನು ಅನುಮೋದಿಸಿ ಸ್ಥಳದಲ್ಲಿಯೇ ಅಂತಿಮ ಇ-ಖಾತಾ ನೀಡಲಾಗಿದೆ. ಬೇರೆ ವಲಯದಿಂದ ಬಂದಿರುವ 435 ಅರ್ಜಿಗಳನ್ನು ಆಯಾ ವಲಯಗಳಿಗೆ ವರ್ಗಾಯಿಸಲಾಗಿದೆ ಎಂದು ವಲಯದ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್ ತಿಳಿಸಿದರು.

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಅಪಾರ್ಟ್‌ಮೆಂಟ್‌ಗಳ ಜೊತೆ ಸಮನ್ವಯ ಸಾಧಿಸಿ, ಇದೇ ಮಾದರಿಯಲ್ಲಿ ಇ-ಖಾತಾ ಮೇಳಗಳನ್ನು ಆಯೋಜಿಸಲಾಗುತ್ತದೆ. ತ್ವರಿತಗತಿಯಲ್ಲಿ ಇ-ಖಾತಾ ವಿತರಿಸುವ ಕಾರ್ಯವನ್ನು ನಿರಂತರವಾಗಿ ಮಾಡಲಾಗುವುದು ಎಂದರು.

ಮುಖ್ಯಾಂಶಗಳು

- ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ
- ಹೊರ ವರ್ತುಲ ರಸ್ತೆಯ ಚರಂಡಿಗಳ ಹೂಳೆತ್ತಲು ಸೂಚನೆ

SOBHA

SOBHA LIMITED

CIN : L45201KA1995PLC018475

Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103

Ph: +91-80-49320000, Email: investors@sobha.com, Website: www.sobha.com

NOTICE TO THE MEMBERS OF THE COMPANY REGARDING 30TH ANNUAL GENERAL MEETING

Notice is hereby given that the 30th Annual General Meeting (AGM) of the members of the Company will be held on Thursday, the 24th day of July 2025 at 3.00 P.M. (IST) through Video Conferencing (VC) facility / Other Audio-Visual Means (OVAM), in compliance with all applicable provisions of the Companies Act, 2013 and Rules made thereunder and the Securities and Exchange Board of India (SEBI) (Listing Obligations and Disclosure Requirements) Regulations, 2015, read with General Circular No. 09/2024 dated September 19, 2024, 09/2023 dated September 25, 2023, 10/2022 dated December 28, 2022 and other relevant circular issued by the Ministry of Corporate Affairs (MCA), Circular No. SEBI/HO/CFD/CFD-PoD-2/P/CIR/2024/133 dated October 3, 2024, SEBI/HO/CFD/PoD-2/P/CIR/2023/167 dated October 07, 2023, SEBI/HO/CFD/PoD-2/P/CIR/2023/4 dated January 05, 2023, and other relevant circular issued by the Securities and Exchange Board of India (hereinafter collectively referred to as 'Circulars').

In compliance with the aforesaid MCA and SEBI Circulars, the requirements of sending physical copy of the Notice of AGM and Annual Report to the Members have been dispensed. Accordingly, the Notice of AGM along with the Annual Report 2024-25 will be sent only through electronic mode to those Members whose email addresses are registered with the Company/ Depositories. Keeping in view the above, the Members of the Company holding shares in physical form or who have not registered their email addresses are hereby requested to get their email addresses registered in the records of the Company for receipt of notice and to cast their vote through remote e-voting.

Members who have not registered their email addresses with the Company are requested to follow the below steps for registering their email addresses:

1. In case shares are held in physical mode, and who have not registered their bank details can get the same registered with MUFG Intime India Private Limited, by clicking the link: https://web.in.mpms.mufg.com/EmailReg/Email_Register.html at their web site www.in.mpms.mufg.com at the Investor Services tab by choosing the E-mail / Bank Registration heading and follow the registration process as guided therein. The members are requested to provide details such as Name, Folio Number, Certificate number, PAN, e-mail id along with the copy of the cheque leaf with the first named shareholders name imprinted at the face of the cheque leaf containing bank name and branch, type of account, bank account number, MICR details and IFSC code in PDF or JPEG format. In case of any query, a member may send an e-mail to RTA at rnt.helpdesk@in.mpms.mufg.com On submission of the shareholders details an OTP will be received by the shareholder which needs to be entered in the link for verification.
2. In case shares are held in dematerialized mode and who have not registered their e-mail addresses may temporarily get their e-mail addresses registered with MUFG Intime India Private Limited by clicking the link: https://web.in.mpms.mufg.com/EmailReg/Email_Register.html at their web site www.in.mpms.mufg.com at the Investor Services tab by choosing the E-mail Registration heading and follow the registration process as guided therein. The members are requested to provide details such as Name, DPID, Client ID/ PAN, mobile number and e-mail id. In case of any query, a member may send an e-mail to RTA at rnt.helpdesk@in.mpms.mufg.com On submission of the shareholders details, an OTP will be received by the shareholder which needs to be entered in the link for verification.

MANNER OF REGISTERING MANDATE FOR RECEIVING DIVIDEND:

Members are requested to register/update their complete bank details:

a. with their Depository Participant(s) with whom they maintain their Demat Accounts, if shares are held in dematerialized mode, submitting forms and documents as may be required by the Depository participant(s); and

b. with the Company/ MUFG Intime India Private Limited by e-mailing at investors@sobha.com or rnt.helpdesk@in.mpms.mufg.com, if shares are held in physical mode, by submitting: (i) Scanned copy of signed request letter along with Form ISR-1 which shall contain Member's name, folio number, complete address, bank details (Bank Account number, Bank and Brach Name and address, IFSC, MICR details); (ii) copy of cancelled cheque leaf bearing the name of Member; (iii) self-attested copy of the PAN card and (iv) self-attested copy of address proof.

The Company is providing its members the facility to exercise their votes electronically through the electronic voting (e-voting) facility provided by the MUFG Intime India Private Limited. The manner of voting remotely by members holding shares in dematerialized mode, physical mode and for members who have not registered their email addresses is provided in the instructions for e-voting section of the Notice of AGM. Copy of the AGM Notice will be made available at the Company's website www.sobha.com, websites of the Stock Exchanges i.e. BSE Limited and National Stock Exchange of India Limited at www.bseindia.com and www.nseindia.com respectively.

By order of the Board for SOBHA Limited
Sd/-
Bijan Kumar Dash
Company Secretary & Compliance Officer

Date: June 30, 2025
Place: Bangalore

ಭಾರತ ಸರ್ಕಾರ

ಸಾಲ ವಸೂಲಾತಿ ನ್ಯಾಯಾಧಿಕರಣ – I , ಬೆಂಗಳೂರು

ಜೀವನ್ ಮಂಗಲ್ ಕಟ್ಟಡ, 2ನೇ ಮಹಡಿ, ನಂ. 4,ರೆಸಿಡೆನ್ಸಿ ರಸ್ತೆ, ಬೆಂಗಳೂರು– 560 025.

ಡಿಆರ್‌ಸಿ ನಂ. 852/2019

ಫಾರಂ ನಂ. 14 (ರೆಗ್ಯುಲೇಷನ್ 33(2))

ಸಿಂಡಿಕೇಟ್ ಬ್ಯಾಂಕ್, ಯಲಹಂಕ ನ್ಯೂ ಟೌನ್ ಶಾಖೆ, ಬೆಂಗಳೂರು – 560 064 .
.... ಸರ್ಟಿಫಿಕೇಟ್ ಹೋಲ್ಡರ್

ವಿರುದ್ಧ

ಮೆ. ಆರ್ಣವ್ ಫ್ಯಾಷನ್ಸ್ ಮತ್ತು ಇತರರು .... ಸರ್ಟಿಫಿಕೇಟ್ ಡೆಟರ್ಸ್

ಡಿಮ್ಯಾಂಡ್ ನೋಟೀಸು

ಇವರಿಗೆ :

1. ಮೆ. ಆರ್ಣವ್ ಫ್ಯಾಷನ್ಸ್, ನಂ. 4/14, 1ನೇ ಮಹಡಿ, ಟ್ಯಾಂಕ್‌ಬಂಡ್ ರಸ್ತೆ, ಯಲಹಂಕ, ಹಳೆ ಟೌನ್, ಬೆಂಗಳೂರು – 560 064.
2. ಶ್ರೀ ಶ್ಯಾಮ್ ಸುಂದರ್, ಬಿನ್ ಶ್ರೀ ರಾಘವನ್, ನಂ. 4/14, 1ನೇ ಮಹಡಿ, ಟ್ಯಾಂಕ್‌ಬಂಡ್ ರಸ್ತೆ, ಯಲಹಂಕ, ಹಳೆ ಟೌನ್, ಬೆಂಗಳೂರು – 560 064.

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು **ಒ.ಎ. ನಂ. 1460/2018**ರಲ್ಲಿ ದಿನಾಂಕ 26.08.2019ರಂದು ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.32,61,020/-** (ರೂಪಾಯಿ ಮೂವತ್ತೆರಡು ಲಕ್ಷದ ಅರವತ್ತೊಂದು ಸಾವಿರದ ಇಪ್ಪತ್ತು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ಮೊತ್ತ , ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.

ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :

ಎ. ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಬಿ. ಈ ನೋಟೀಸನ್ನು ಜಾರಿ ಮಾಡಲು ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **12.09.2019** ರಂದು ಕೊಡಲ್ಪಟ್ಟಿದೆ.

ಸಹಿ/- (ದೀಪಾಇಂದುವಾಣಿ ಎಸ್.) ವಸೂಲಾತಿ ಅಧಿಕಾರಿ- 2
ಸಾಲ ವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

ಜಿಐಎಫ್‌ಗೆ ನಾಗೇಂದ್ರಸ್ವಾಮಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಕುಲ ಎಜುಕೇಷನ್ ಫೌಂಡೇಷನ್‌ನ (ಜಿ.ಐ.ಎಫ್–ಮೆಡಿಕಲ್) ಆರೋಗ್ಯ ಸೇವೆಗಳಿಗೆ ನೂತನ ಮುಖ್ಯ ಕಾರ್ಯ ನಿರ್ವಾಹಕರಾಗಿ ಡಾ. ಎಸ್. ಸಿ. ನಾಗೇಂದ್ರಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

ನಾಗೇಂದ್ರ ಸ್ವಾಮಿ

ರಾಮಯ್ಯ ಮೆಮೋರಿಯಲ್ ಹಾಸ್ಪಿಟಲ್ ಹಾಗೂ ಜಿ.ಐ.ಎಫ್‌ನ (ಮೆಡಿಕಲ್) ವ್ಯಾಪ್ತಿಯಲ್ಲಿ ಬರುವ ಇತರ ಅಂಗಸಂಸ್ಥೆಗಳ ಆರೋಗ್ಯ ಸೇವೆಗಳಿಗೆ ಮುಖ್ಯ ಕಾರ್ಯ ನಿರ್ವಾಹಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ರಾಮಯ್ಯ ಮೆಮೋರಿಯಲ್ ಹಾಸ್ಪಿಟಲ್ ಮತ್ತು ನ್ಯೂಯಾರ್ಕ್‌ನ ಮೌಂಟ್ ಸಿನಾಯಿ ಆಸ್ಪತ್ರೆ ನಡುವೆ ಸಮನ್ವಯ ನಡೆಸುವ ಜವಾಬ್ದಾರಿಯನ್ನು ಸಹ ನೀಡಲಾಗಿದೆ.

ಡಾ. ಸ್ವಾಮಿ ಅವರು ಭಾರತ, ಮಧ್ಯಪ್ರಾಚ್ಯ ಮತ್ತು ಪೂರ್ವ ಏಷ್ಯಾದಲ್ಲಿರುವ ಪ್ರಮುಖ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203

ದೂರವಾಣಿ : 080-29562046

ಸಂಖ್ಯೆ: DPA/TP/ಭೂಪ/173/2025–26 ದಿನಾಂಕ: 27.06.2025

ಪ್ರಕಟಣೆ

ಅರ್ಜಿದಾರರಾದ ಶ್ರೀ ಹೆಚ್.ಡಿ. ಪ್ರಕಾಶ್ ಬಿನ್ ಎಸ್.ಸಿ.ಹನುಮಂತಯ್ಯ ಇವರು ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ, ಕೋಷ್ಟಕದಲ್ಲಿ ವಿವರಿಸಿರುವಂತೆ 'Agriculture [Educational institutions (School/College)]' ಉದ್ದೇಶಕ್ಕೆ ಭೂಪರಿವರ್ತನೆಗೆ ಕೋರಿರುವ ಮೇರೆಗೆ ನಿಯಮಾವಳಿಗಳನ್ವಯ ಪರಿಶೀಲಿಸಿ ಅಭಿಪ್ರಾಯ ನೀಡಲು ಆನ್‌ಲೈನ್ ಮುಖಾಂತರ Master plan request ID ಸಂಖ್ಯೆ:772462, ದಿನಾಂಕ:31.05.2025ರಂತೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ಕೋರಿರುತ್ತಾರೆ. ಸದರಿ ಜಮೀನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 141 ಬಿಎಂಆರ್ 2015 ದಿನಾಂಕ: 08.12.2015 ರಂತೆ ವ್ಯವಸಾಯ ಭೂಉಪಯೋಗ ವಲಯದಲ್ಲಿದ್ದು, ವಲಯ ನಿಯಮಾವಳಿಗಳ ಅನುಸಾರ ವಿಶೇಷ ಸಂದರ್ಭದಲ್ಲಿ ವ್ಯವಸಾಯ ವಲಯದಲ್ಲಿ "Educational and health Institutions" ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಜಮೀನಿನ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು, ಹೋಬಳಿ, ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಸರ್ಕಾರದ ಅಧಿಸೂಚನೆಯಂತೆ ಪರಿಗಣಿಸಿದ ಭೂಉಪಯೋಗ	ಅನುಮತಿ ನೀಡಲು ಕೋರಿರುವ ಉದ್ದೇಶ
1.	ಶ್ರೀ ಹೆಚ್.ಡಿ. ಪ್ರಕಾಶ್ ಬಿನ್ ಎಸ್.ಸಿ.ಹನುಮಂತಯ್ಯ	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಸಿಂಪಡಿಪುರ ಗ್ರಾಮ	18/1	2–22	ವ್ಯವಸಾಯ	Educational institutions

ಸದರಿ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನದೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ

ಅಧಿಕ ದರ ವಸೂಲಿ: 114 ಆಟೊ ಜಪ್ತಿ

ಒಂದೇ ದಿನ 299 ಪ್ರಕರಣ ದಾಖಲಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆಟೊಗಳ ಪ್ರಯಾಣ ದರ ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುತ್ತಿರುವ ಆಟೊಗಳನ್ನು ಪತ್ತೆ ಹಚ್ಚುವ ಕಾರ್ಯಾಚರಣೆಯನ್ನು ಸೋಮವಾರ ಆರಂಭಿಸಿರುವ ಸಾರಿಗೆ ಕಚೇರಿ ಅಧಿಕಾರಿಗಳು, ಒಂದೇ ದಿನ 299 ಪ್ರಕರಣಗಳನ್ನು ದಾಖಲಿಸಿದ್ದಾರೆ. 114 ಆಟೊಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದಾಪುರ, ನೆಲಮಂಗಲ, ರಾಮನಗರ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು.

ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ರೊಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ‍್ಯಾಪಿಡೊ), ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ) ಮುಂತಾದ ಕಂಪನಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬೈಕ್ ಟ್ಯಾಕ್ಸಿಗಳನ್ನು ಹೈಕೋರ್ಟ್‌ನ ಆದೇಶದಂತೆ ಸಾರಿಗೆ ಇಲಾಖೆ ಸ್ಥಗಿತಗೊಳಿಸಿತ್ತು. ಈ ಪರಿಸ್ಥಿತಿಯಲ್ಲಿ ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುವ ಮೂಲಕ ಲಾಭ ಪಡೆಯಲು ಅಗ್ರಿಗೇಟರ್ ಸಂಸ್ಥೆಗಳು ಮತ್ತು ಇತರ ಆಟೊಗಳು ಮುಂದಾಗಿದ್ದವು. ಮೂರ್ನಾಲ್ಕು ಪಟ್ಟು ದರ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಅಂಥ ಆಟೊಗಳ ಮೇಲೆ ಕ್ರಮ ಕೈಗೊಳ್ಳುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಈ ಸೂಚನೆಯಂತೆ ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ನೇತೃತ್ವದಲ್ಲಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು.

‘ಸುಲಿಗೆ ಮಾಡುತ್ತಿರುವ ಅಗ್ರಿಗೇಟರ್‌ಗಳು’

ಡಿಜಿಟಲ್ ಏಕಸ್ವಾಮ್ಯ ಸಾಧಿಸಿರುವ ಅಗ್ರಿಗೇಟರ್ ಸಂಸ್ಥೆಗಳು ಪ್ರಯಾಣಿಕರನ್ನು ಲೂಟಿ ಮಾಡುತ್ತಿವೆ. ಅವುಗಳ ವಿರುದ್ಧ ಕ್ರಮಕೈಗೊಳ್ಳುವಲ್ಲಿ ಸಾರಿಗೆ ಇಲಾಖೆ ವಿಫಲವಾಗಿದೆ ಎಂದು ಸಂಸದ ಪಿ.ಸಿ. ಮೋಹನ್ ತಿಳಿಸಿದ್ದಾರೆ.

1.9 ಕಿ.ಮೀ.ಗೆ ರಾಜ್ಯ ಸರ್ಕಾರ ನಿಗದಿ ಮಾಡಿರುವ ದರ ₹30 ಮತ್ತು ಆ ನಂತರದ ಪ್ರತಿ ಕಿಲೋಮೀಟರ್‌ಗೆ ₹ 15. ಈ ಪ್ರಕಾರ 3.5 ಕಿ.ಮೀ.ಗೆ ₹54 ಆಗುತ್ತದೆ. ಆದರೆ ಖಾಸಗಿ ಅಗ್ರಿಗೇಟರ್‌ಗಳು ₹ 105 ವಿಧಿಸುತ್ತಿದ್ದಾರೆ ಎಂದು ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ಕರ್ನಾಟಕ ಹೈಕೋರ್ಟ್ 2024ರ ಮೇ ತಿಂಗಳಲ್ಲಿ ಆಟೊ ದರಗಳಿಗೆ ಮಿತಿ ವಿಧಿಸಿತ್ತು. ಅಗ್ರಿಗೇಟರ್‌ಗಳು ಒಂದು ವರ್ಷಕ್ಕೂ ಹೆಚ್ಚು ಕಾಲ ಕಾನೂನನ್ನು ಉಲ್ಲಂಘಿಸಿದ್ದಾರೆ. ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಬೇಕು. ಅಕ್ರಮ ಪರವಾನಗಿಗಳನ್ನು ರದ್ದುಗೊಳಿಸಬೇಕು. ಅಗ್ರಿಗೇಟರ್ ಪರವಾನಗಿಗಳನ್ನು ರದ್ದುಗೊಳಿಸಬೇಕು. ಪ್ರಯಾಣಿಕರನ್ನು ಶೋಷಣೆಯಿಂದ ರಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಂಕಿ ಅಂಶ

ಆರ್‌ಟಿಒ	ದಾಖಲಿಸಿದ ಪ್ರಕರಣಗಳು	ಮುಟ್ಟುಗೋಲು ಹಾಕಿಕೊಂಡ ವಾಹನಗಳು
ಬೆಂಗಳೂರು ಕೇಂದ್ರ	30	19
ಬೆಂಗಳೂರು ಪಶ್ಚಿಮ	36	13
ಬೆಂಗಳೂರು ಪೂರ್ವ	30	05
ಬೆಂಗಳೂರು ಉತ್ತರ	25	03
ಬೆಂಗಳೂರು ದಕ್ಷಿಣ	48	18
ಜ್ಞಾನಭಾರತಿ	18	16
ದೇವನಹಳ್ಳಿ	6	2
ಯಲಹಂಕ	11	5
ಎಲೆಕ್ಟ್ರಾನಿಕ್ ಸಿಟಿ	26	8
ಕೆ.ಆರ್.ಪುರ	19	5
ಚಂದಾಪುರ	11	04
ನೆಲಮಂಗಲ	30	12
ರಾಮನಗರ	9	4
ಒಟ್ಟು	299	114

ದ್ವಿಭಾಷಾ ನೀತಿ ಜಾರಿಗೊಳಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಲವು ವರ್ಷಗಳಿಂದ ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ದ್ವಿಭಾಷಾ ಸೂತ್ರವನ್ನು ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಜಾರಿಗೊಳಿಸುವಂತೆ ಒತ್ತಾಯಿಸಿ ಆಮ್‌ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಲು, ಕನ್ನಡ ಭಾಷೆಯ ಹಿರಿಮೆಯನ್ನು ಎತ್ತಿ ಹಿಡಿಯಲು, ದೇಶದಲ್ಲಿ ಸ್ಥಳೀಯ ಭಾಷೆಗಳ ಉಳಿವಿಗಾಗಿ ದ್ವಿಭಾಷಾ ಸೂತ್ರ ಜಾರಿಗೊಳಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ವಿದ್ಯಾರ್ಥಿಗಳ ಮೇಲಿನ ಅನಗತ್ಯ ಹೊರೆ ತಪ್ಪಿಸಲು, ಹಿಂದಿ ಭಾಷೆ ಹೇರಿಕೆಯಿಂದ ವಿದ್ಯಾರ್ಥಿಗಳು ಶಿಕ್ಷಣ ಮೊಟಕುಗೊಳಿಸುತ್ತಿರುವುದನ್ನು ತಡೆಯಲು ಹಾಗೂ ಎಲ್ಲ ಕನ್ನಡಪರ ಮನಸ್ಸುಗಳ ಹಲವು ದಶಕಗಳ ಬೇಡಿಕೆ ಈಡೇರಿಸಲು ಮುಂದಾಗಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಕೆಎಸ್‌ಸಿಎ ಅಗ್ನಿ ಸುರಕ್ಷತೆ ಪ್ರಶ್ನೆ: ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಚಾರಣೆ ಜುಲೈ 15ಕ್ಕೆ ಮುಂದೂಡಿಕೆ
- ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್
- ಮತ್ತೆ ಅವಘಡ ಸಂಭವಿಸಿದರೆ ಯಾರು ಹೊಣೆ: ಹೈಕೋರ್ಟ್

ಬೆಂಗಳೂರು: ‘ಎಂ.ಚಿನ್ನಸ್ವಾಮಿ ಕ್ರೀಡಾಂಗಣವು ಅಗ್ನಿ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡಿಲ್ಲ. ಆದರೂ, ವಿದ್ಯುತ್ ಸಂಪರ್ಕ ನೀಡಲಾಗಿದೆ’ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಈ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜು ಸಂಸ್ಥೆಯನ್ನು (ಬೆಸ್ಕಾಂ) ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ‘ಈ ತಪ್ಪಿಗೆ ಬೆಸ್ಕಾಂ ಅನ್ನೇ ಸಂಪೂರ್ಣವಾಗಿ ಹೊಣೆ ಮಾಡಲಾಗುವುದು’ ಎಂದು ಕಟುವಾಗಿ ಎಚ್ಚರಿಸಿದೆ.

ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಕ್ಕೆ ಸಂಬಂಧಿಸಿದಂತೆ ಬೆಸ್ಕಾಂ ಜಾರಿಗೊಳಿಸಿರುವ ನೋಟಿಸ್ ಪ್ರಶ್ನಿಸಿ, ‘ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್’ (ಕೆಎಸ್‌ಸಿಎ) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, ‘ಅಗ್ನಿ ಸುರಕ್ಷತೆಯ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡಿಲ್ಲ ಎಂದು ಗೊತ್ತಿದ್ದರೂ ವಿದ್ಯುತ್ ಸಂಪರ್ಕ ಕೊಟ್ಟಿದ್ದು ಹೇಗೆ? ಸರ್ಕಾರವನ್ನು ಕೇಳದೇ ನಿಮ್ಮಷ್ಟಕ್ಕೆ ನೀವೇ ವಿದ್ಯುತ್ ಸಂಪರ್ಕ ಕೊಟ್ಟುಬಿಟ್ಟರೆ ನ್ಯಾಯಾಲಯ ಸುಮ್ಮನಿರುವುದಿಲ್ಲ. ಈಗಾಗಲೇ ಆಗಿರುವ ಅನಾಹುತವೇ ಸಾಕಷ್ಟಿದೆ. ಮತ್ತೇನಾದರೂ ಅವಘಡ ಸಂಭವಿಸಿದರೆ ಅದಕ್ಕೆ ಯಾರು ಹೊಣೆ?’ ಎಂದು ಬೆಸ್ಕಾಂ ವಿರುದ್ಧ ಕಿಡಿ ಕಾರಿತು.

ಕೆಲಕಾಲ ವಿಚಾರಣೆ ನಡೆಸಿದ ನ್ಯಾಯಪೀಠ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಅಗ್ನಿ ಸುರಕ್ಷತೆ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಜುಲೈ 15ಕ್ಕೆ ಮುಂದೂಡಿತು.

‘ಸ್ಟೇಡಿಯಂಗೆ 2011ರ ಜುಲೈ 7ರಂದು ನೀಡಲಾದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು’ ಎಂದು ಅಗ್ನಿ ಸುರಕ್ಷತೆ ಮತ್ತು ತುರ್ತು ಸೇವೆಗಳ ಇಲಾಖೆ ಮಹಾ ನಿರ್ದೇಶಕರು 2025ರ ಜೂನ್ 10ರಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದರು. ಇದರನ್ವಯ ಜೂನ್ 12ರಂದು ಬೆಸ್ಕಾಂ, ಕೆಎಸ್‌ಸಿಎಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ನೋಟಿಸ್ ಜಾರಿಗೊಳಿಸಿತ್ತು.

ತಯಾರಿಕಾ ಸಾಮರ್ಥ್ಯ ಹೆಚ್ಚಿಸಲು ಕ್ರಮ: ಇಂಧನ ಸಚಿವ ಕೆ.ಜೆ.ಜಾರ್ಜ್

ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಂದಾಜು ₹14 ಕೋಟಿ ವೆಚ್ಚದಲ್ಲಿ ನಿರ್ಮಾಣ
- 2,500 ಪರಿವರ್ತಕಗಳ ತಯಾರಿಕೆ
- ಆರು ತಿಂಗಳೊಳಗೆ ಪೂರ್ಣಗೊಳಿಸುವ ಭರವಸೆ

ಬೆಂಗಳೂರು: ವಿದ್ಯುತ್ ಪರಿವರ್ತಕಗಳನ್ನು (ಟ್ರಾನ್ಸ್ ಫಾರ್ಮರ್) ತಯಾರಿಸುವ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ಕಾರ್ಖಾನೆ (ಕವಿಕಾ) ಆವರಣದಲ್ಲಿ ನಿರ್ಮಾಣವಾಗಲಿರುವ ವಿದ್ಯುತ್ ಪರಿವರ್ತಕಗಳ ದುರಸ್ತಿ ಕೇಂದ್ರಕ್ಕೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಮಾತನಾಡಿದ ಜಾರ್ಜ್, ‘ಆರು ತಿಂಗಳಲ್ಲಿ ಈ ಘಟಕದ ಕಾಮಗಾರಿ ಪೂರ್ಣಗೊಳಿಸಿ ವಿದ್ಯುತ್ ಪರಿವರ್ತಕಗಳ ದುರಸ್ತಿ ಕಾರ್ಯ ಆರಂಭಿಸಲಾಗುವುದು. ಇದು ಸರ್ಕಾರಿ ಕಾರ್ಖಾನೆ ಆಗಿರುವುದರಿಂದ ಎಲ್ಲ ಎಸ್ಕಾಂಗಳು ಮತ್ತು ಕೆಪಿಟಿಸಿಎಲ್ ವ್ಯಾಪ್ತಿಯ ಪರಿವರ್ತಕಗಳನ್ನು ಇಲ್ಲಿಯೇ ದುರಸ್ತಿ ಮಾಡಲಾಗುವುದು’ ಎಂದು ತಿಳಿಸಿದರು.

‘ಕವಿಕಾದಲ್ಲಿ ವಾರ್ಷಿಕ 2500 ವಿದ್ಯುತ್ ಪರಿವರ್ತಕಗಳನ್ನು ತಯಾರಿಸಬಹುದಾಗಿದೆ. ಆದರೆ, ಅಷ್ಟು ಪ್ರಮಾಣದಲ್ಲಿ ತಯಾರಿಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ತಯಾರಿಕೆ ಪ್ರಮಾಣ ಹೆಚ್ಚಿಸಲು ಎಸ್ಕಾಂ ಮತ್ತು ಬ್ಯಾಂಕ್‌ಗಳ ಮೂಲಕ ಅಗತ್ಯ ನೆರವು ನೀಡಲಾಗುವುದು’ ಎಂದು ತಿಳಿಸಿದರು.

‘ಕವಿಕಾಗೆ ₹50 ಕೋಟಿ ನೀಡುವಂತೆ ಎಸ್ಕಾಂಗಳಿಗೆ ಸೂಚಿಸಲಾಗಿದೆ. ಬೆಸ್ಕಾಂ ವತಿಯಿಂದ ಈಗಾಗಲೇ ₹12.50 ಕೋಟಿ ನೀಡಲಾಗಿದೆ. ಉಳಿದ ಮೊತ್ತವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಕವಿಕಾ ವ್ಯವಸ್ಥಾಪಕ ನಿರ್ದೇಶಕ ಲೋಖಂಡೆ ಸ್ನೇಹಲ್ ಸುಧಾಕರ್ ಮಾತನಾಡಿ, ‘ಕವಿಕಾದಲ್ಲೇ ವಿದ್ಯುತ್ ಪರಿವರ್ತಕಗಳ ದುರಸ್ತಿ ಕೇಂದ್ರ ಆರಂಭಿಸುವುದರಿಂದ ದುರಸ್ತಿ ಕೆಲಸ ತ್ವರಿತವಾಗಿ ಆಗಲಿದೆ. ಭವಿಷ್ಯದಲ್ಲಿ ಕೇಂದ್ರದಲ್ಲಿ ಪರಿವರ್ತಕಗಳ ತಯಾರಿಕೆಯನ್ನೂ ಮಾಡಲಾಗುವುದು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕವಿಕಾ ಅಧ್ಯಕ್ಷ ಎಚ್.ಸಿ.ಲಲಿತ್ ರಾಘವ್, ಕಾರ್ಯನಿರ್ವಾಹಕ ನಿರ್ದೇಶಕ ನಾಗರಾಜ್ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಪಾಲ್ಗೊಂಡಿದ್ದರು.

ಕವಿಕಾದಲ್ಲಿ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರ ನಿರ್ಮಾಣಕ್ಕೆ ಇಂಧನ ಸಚಿವ ಕೆ.ಜೆ. ಜಾರ್ಜ್ ಶಂಕುಸ್ಥಾಪನೆ ನೆರವೇರಿಸಿದರು

20 ಮೆಗಾವಾಟ್ ಸಾಮರ್ಥ್ಯ

ಸುಮಾರು ₹14 ಕೋಟಿ ವೆಚ್ಚದಲ್ಲಿ ವಿದ್ಯುತ್ ಪರಿವರ್ತಕಗಳ ದುರಸ್ತಿ ಘಟಕವನ್ನು ಆರಂಭಿಸಲಾಗುತ್ತಿದೆ. 20 ಮೆಗಾವಾಟ್ ಸಾಮರ್ಥ್ಯದವರೆಗಿನ ಪರಿವರ್ತಕಗಳ ದುರಸ್ತಿ ಮಾಡುವ ಸಾಮರ್ಥ್ಯವನ್ನು ಈ ಘಟಕ ಹೊಂದಲಿದೆ.

ಬೆಸ್ಕಾಂ: ಮಡಿವಾಳ ಉಪ ವಿಭಾಗದ ನೂತನ ಕಚೇರಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ವಿಭಾಗದ ಬೆಸ್ಕಾಂನ ಎಸ್-16 ಮಡಿವಾಳ ಉಪ ವಿಭಾಗ ಕಚೇರಿಯ ನೂತನ ಕಟ್ಟಡವನ್ನು ಇಂಧನ ಸಚಿವ ಕೆ.ಜೆ.ಜಾರ್ಜ್ ಸೋಮವಾರ ಉದ್ಘಾಟಿಸಿದರು.

ಬಿಟಿಎಂ ಬಡಾಣೆಯಲ್ಲಿ ₹3.17 ಕೋಟಿ ವೆಚ್ಚದಲ್ಲಿ ಉಪ ವಿಭಾಗ ಕಚೇರಿಯ ನೂತನ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. 7431.50 ಚದರ ಅಡಿ ಅಳತೆಯಲ್ಲಿ ನಿರ್ಮಿಸಿರುವ ಈ ಕಟ್ಟಡದಲ್ಲಿ ಮೂರು ಅಂತಸ್ತುಗಳಿವೆ.

ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಸಚಿವ ಕೆ.ಜೆ. ಜಾರ್ಜ್, ‘ಬಿಟಿಎಂ ಲೇಔಟ್ ಉಪ ವಿಭಾಗದಲ್ಲಿ 83,000ಕ್ಕೂ ಹೆಚ್ಚಿನ ಸಂಪರ್ಕಗಳಿವೆ.

ಸಾರ್ವಜನಿಕರಿಗೆ ನೂತನ ಉಪವಿಭಾಗ ಕೇಂದ್ರವು ಬೆಸ್ಕಾಂನ ಹತ್ತು ಹಲವು ಸೇವೆಗಳನ್ನು ತ್ವರಿತವಾಗಿ ಒದಗಿಸಲು ನೆರವಾಗಲಿದೆ‘ ಎಂದು ಹೇಳಿದರು.

‘ಬೆಸ್ಕಾಂ ವಿದ್ಯುತ್ ಪೂರೈಕೆ ಜತೆಗೆ ಸ್ವಂತ ಮೂಲಸೌಕರ್ಯ ಕಲ್ಪಿಸಿಕೊಳ್ಳುವುದಕ್ಕೂ ಒತ್ತು ನೀಡುತ್ತಿದೆ. ಇದರಿಂದ ಭವಿಷ್ಯದಲ್ಲಿ ಆರ್ಥಿಕವಾಗಿಯೂ ಹೊರೆ ತಗ್ಗಲಿದೆ. ಎಲ್ಲಾ ಮೂಲ ಸೌಕರ್ಯಗಳಿರುವುದರಿಂದ ಸಾರ್ವಜನಿಕರಿಗೆ ಇನ್ನಷ್ಟು ತ್ವರಿತವಾಗಿ ಸೇವೆ ಲಭ್ಯವಾಗಲಿದೆ’ ಎಂದು ತಿಳಿಸಿದರು.

ವಿಶೇಷ ರೈಲು ಅವಧಿ ವಿಸ್ತರಣೆ

ಬೆಂಗಳೂರು: ಯಶವಂತಪುರ ಮತ್ತು ವಿಜಯಪುರ ನಿಲ್ದಾಣಗಳ ನಡುವೆ ಸಂಚರಿಸುವ ವಿಶೇಷ ಎಕ್ಸ್ ಪ್ರೆಸ್ ರೈಲುಗಳ ಸಂಚಾರದ ಅವಧಿಯನ್ನು ವಿಸ್ತರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.ಜೂನ್ 30ರವರೆಗೆ ಹಿಂದೆ ಅವಕಾಶ ನೀಡಲಾಗಿತ್ತು. ಈ ಅವಧಿಯನ್ನು ಡಿಸೆಂಬರ್ 31ರವರೆಗೆ ವಿಸ್ತರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

‘ಅಡ್ವೊಕೇಟ್ಸ್ ಅಕಾಡೆಮಿಗೆ ಜಮೀನು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಅಡ್ವೊಕೇಟ್ಸ್ ಅಕಾಡೆಮಿಯ ಕಾರ್ಯ ಚಟುವಟಿಕೆಗಳಿಗೆ ಅನುವಾಗುವಂತೆ 10 ಎಕರೆ ಜಮೀನು ನೀಡಬೇಕೆಂಬ ಮನವಿಯನ್ನು ಸರ್ಕಾರಕ್ಕೆ ಮನದಟ್ಟು ಮಾಡಲು ಪ್ರಯತ್ನಿಸಲಾಗುವುದು’ ಎಂದು ಅಡ್ವೊಕೇಟ್ ಜನರಲ್ ವಕೀಲ ವೃಂದಕ್ಕೆ ಭರವಸೆ ನೀಡಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಮತ್ತು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಯೂ ಆದ ಎ.ಎಸ್.ಓಕಾ ಅವರಿಗೆ ‘ಬೆಂಗಳೂರು ವಕೀಲರ ಸಂಘ’ದ ವತಿಯಿಂದ ಸೋಮವಾರ ನೀಡಲಾದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ವಕೀಲರ ಅಕಾಡೆಮಿಗೆ ಸರ್ಕಾರವು ಜಮೀನು ಮಂಜೂರು ಮಾಡಬೇಕು ಎಂಬ ಬೇಡಿಕೆಯಿದೆ. ಅಕಾಡೆಮಿಯ ಪದಾಧಿಕಾರಿಗಳು ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಅಕಾಡೆಮಿಗೆ ಜಮೀನಿನ ಅಗತ್ಯತೆ ಕುರಿತು ರಾಜ್ಯ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಲಾಗುವುದು’ ಎಂದರು.

ಅಭಿನಂದನೆ ಸ್ವೀಕರಿಸಿ ಉಪನ್ಯಾಸ ನೀಡಿದ ಎ.ಎಸ್. ಓಕಾ ಅವರು, ‘ಸಾಮಾಜಿಕ ನ್ಯಾಯ ಮತ್ತು ಸಾರ್ವಜನಿಕ ಹಿತಾಸಕ್ತಿ ಹೊಂದಿದ ಪ್ರಕರಣಗಳಲ್ಲಿ ಆಸಕ್ತರಾಗಿ ವೃತ್ತಿ ಕೌಶಲ ಮೈಗೂಡಿಸಿಕೊಳ್ಳಬೇಕು. ಕೋರ್ಟ್ ಹಾಲ್‌ನಲ್ಲಿ ಕ್ರೋಧಭರಿತರಾಗಿ ಆಕ್ರಮಣಕಾರಿ ಶೈಲಿಯಲ್ಲಿ ವಾದ ಮಂಡಿಸುವುದು ಬಹಳ ಸುಲಭ. ಆದರೆ, ಶಾಂತಚಿತ್ತರಾಗಿ ಸಹನೆಯಿಂದ ವಾದಾಂಶ ಪ್ರತಿಪಾದಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದೇ ಆದರೆ, ಅಂತಹವರ ವ್ಯಕ್ತಿತ್ವ ಸಹಜವಾಗಿಯೇ ಎತ್ತರೆತ್ತರ ಬೆಳೆಯುತ್ತದೆ’ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ನ್ಯಾ.ಎ.ಎಸ್.ಓಕಾ ಅವರನ್ನು ಅಭಿನಂದಿಸಲಾಯಿತು. ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳಾದ ಕೆ.ಚಂದ್ರಕಾಂತ ಪಾಟೀಲ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಸಿ.ಎಸ್.ಗಿರೀಶ್ ಕುಮಾರ್, ಬೆಂಗಳೂರು ಅಡ್ವೊಕೇಟ್ಸ್ ಅಕಾಡೆಮಿ ಸಿಇಒ ಡಿ.ಎಲ್.ಜಗದೀಶ್, ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ಸಂಘದ ಖಜಾಂಚಿ ಶ್ವೇತಾ ರವಿಶಂಕರ್ ಇದ್ದರು

ನಂದಿಗಿರಿಧಾಮ ‘ರೋಪ್ ವೇ’ಗೆ ವಿರೋಧ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಗಿರಿಧಾಮದಲ್ಲಿ ರೋಪ್ ವೇ ನಿರ್ಮಾಣ ಸೇರಿದಂತೆ ವಾಣಿಜ್ಯ ಚಟುವಟಿಕೆಗಳು ಹೆಚ್ಚುತ್ತಿರುವುದಕ್ಕೆ ವಿಶ್ವ ಮಾನವ ಹಕ್ಕುಗಳ ಸೇವಾ ಪ್ರತಿಷ್ಠಾನದ ಸದಸ್ಯರು ಹಾಗೂ ಪರಿಸರವಾದಿಗಳು ತೀವ್ರ ಆಕ್ರೋಶ ವ್ಯಕ್ತಪಡಿದ್ದಾರೆ.

ಜುಲೈ 2ರಂದು ನಂದಿಗಿರಿಧಾಮದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಗಿರಿಧಾಮಕ್ಕೆ ಎದುರಾಗಿರುವ ಕುತ್ತುಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಸರ ತಜ್ಞ ಎ.ಎನ್. ಯಲ್ಲಪ್ಪ ರೆಡ್ಡಿ, ‘ಹಿಮಾಲಯ, ಸಹ್ಯಾದ್ರಿ ಪ್ರದೇಶಗಳನ್ನು ಬಿಟ್ಟರೆ ಮೂರನೇ ಧರ್ಮ ಭೂಮಿ ನಂದಿ ಬೆಟ್ಟ. ಇಲ್ಲಿ ಪ್ರವಾಸೋದ್ಯಮದ ಹೆಸರಿನಲ್ಲಿ ವಾಣಿಜ್ಯ ಚಟುವಟಿಕೆಗಳು ಹೆಚ್ಚುತ್ತಿವೆ. ಇದರಿಂದ ನಂದಿ ಬೆಟ್ಟಕ್ಕೆ ಕುತ್ತು ಬರಲಿದೆ’ ಎಂದು ಎಚ್ಚರಿಸಿದರು.

ಸಂಕ್ಷಿಪ್ತ ಸುದ್ದಿ

ಸೆಂಚುರಿ ಕ್ಲಬ್‌ಗೆ ನೂತನ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಬೆಂಗಳೂರಿನ ಸೆಂಚುರಿ ಕ್ಲಬ್‌ಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಸಿ.ಎನ್. ಗುರುಪ್ರಸನ್ನ, ಕಾರ್ಯದರ್ಶಿಯಾಗಿ ಬಿ.ಎ.ಅಭಿಷೇಕ್, ಖಜಾಂಚಿಯಾಗಿ ಎ.ಎಂ. ರಾಘವೇಂದ್ರನ್, ಉಪಾಧ್ಯಕ್ಷರಾಗಿ ಕೆ.ಆರ್. ಪರಂಜ್ಯೋತಿ, ಎಂ.ಆರ್. ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ. ಎಂ.ಎನ್.ಲಕ್ಷ್ಮಣ್, ಕೆ.ಶ್ರೀನಾಥ್, ಎಂ.ಆರ್. ನಂದೀಶ್, ಸಂಗೀತಾ ಶ್ರೀಕಿಶನ್, ಬಸವರಾಜು ವೈ.ಕೆ., ಕೆ.ಜೆ.ಪರಿತೋಷ್, ಲೀನಾ ಕಾಶಿನಾಥ್, ಕೆ.ಶಿವಕುಮಾರ್, ಆನಂದ್ ಗೋವಿಂದಸ್ವಾಮಿ ನಾಯ್ಡು ಅವರು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಕಸಾಪ ಗೌರವ ಕಾರ್ಯದರ್ಶಿ ಪಟೇಲ್ ಪಾಂಡು ನೇಮಕ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಬಿ.ಎಂ. ಪಟೇಲ್ ಪಾಂಡು ಅವರನ್ನು ನೇಮಕ ಮಾಡಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಆದೇಶ ಹೊರಡಿಸಿದ್ದಾರೆ.

ಪಟೇಲ್ ಪಾಂಡು ಅವರು ಪರಿಷತ್ತಿನ ಕೋಶಾಧ್ಯಕ್ಷರಾಗಿ ಈವರೆಗೆ ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು ಗೌರವ ಕಾರ್ಯದರ್ಶಿಯನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಕೋಶಾಧ್ಯಕ್ಷರಾಗಿ ಬೇರೆಯವರನ್ನು ನೇಮಕ ಮಾಡುವವರೆಗೆ ಕೋಶಾಧ್ಯಕ್ಷರ ಜವಾಬ್ದಾರಿಯನ್ನೂ ಹೆಚ್ಚುವರಿಯಾಗಿ ನಿರ್ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವರ್ಣಚಿತ್ರಗಳು, ಆರ್ಕೈವಲ್ ಛಾಯಾಚಿತ್ರಗಳು, ಕಿರುಚಿತ್ರಗಳ ಪ್ರದರ್ಶನ: ಆಯೋಜನೆ: ಮಾಯಾ ಫಿಲ್ಮ್ಸ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10ರಿಂದ

ಪತ್ರಿಕಾ ದಿನಾಚರಣೆ ‘ನಿಜ ಸುದ್ದಿಗಾಗಿ ಸಮರ’: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಪ್ರಧಾನ ಭಾಷಣ: ಪಿ. ಸಾಯಿನಾಥ್, ರಹಮತ್ ತರೀಕೆರೆ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಪಿ.ಸಿ. ಮೋಹನ್, ಕೆ.ವಿ. ಪ್ರಭಾಕರ್, ಪ್ರಾಸ್ತಾವಿಕ ನುಡಿ: ಆಯೇಶಾ ಖಾನಂ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಸುಲೋಚನಾ ಸಭಾಂಗಣ, ವಾರ್ತಾಸೌಧ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10.30

‘ಮೃಚ್ಛಕಟಿಕಂ’ ನಾಟಕ ಪ್ರದರ್ಶನ: ನಿರ್ದೇಶನ: ಜಿ. ವೇಣು, ಆಯೋಜನೆ: ಭೂಮಿಜಾ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

74ನೇ ಸಂಸ್ಥಾಪಕರ ದಿನಾಚರಣೆ-2025: ಅತಿಥಿಗಳು: ಎ. ಭಾನು, ಶ್ರೀಲತಾ ಶರತ್‌ಚಂದ್ರ, ಅಧ್ಯಕ್ಷತೆ: ಎಚ್. ಶರತ್‌ಚಂದ್ರ, ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡನಗರ, ಬೆಳಿಗ್ಗೆ 10.30

2024-25ನೇ ಸಾಲಿನಲ್ಲಿ ಅಧಿಕ ಅಂಕಗಳಿಸಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿವೇಕ ಆಧುನಿಕ ಶಾಲಾ ಕೊಠಡಿ ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ವಿನೋದ ನರಸಿಂಹ ಮೂರ್ತಿ, ಭಾಗ್ಯವತಿ ಮುನಿಯಪ್ಪ, ಕೆ.ವಿ. ಮಂಜುನಾಥ್, ಸಿದ್ದಲಿಂಗಸ್ವಾಮಿ, ಆಯೋಜನೆ: ಕನ್ನಲ್ಲಿ ಸಿದ್ದಬಸಮ್ಮ ಸಾವಂದಯ್ಯ ಹಾಗೂ ರುದ್ರಮ್ಮ ವಿರುಪಾಕ್ಷಯ್ಯ ಟ್ರಸ್ಟ್, ಸ್ಥಳ: ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆ, ಕನ್ನಲ್ಲಿ, ಬೆಳಿಗ್ಗೆ 10.30

ಚಕೋರ-ವಿಶೇಷ ಉಪನ್ಯಾಸ ಮಾಲಿಕೆ-1: ಉದ್ಘಾಟನೆ: ಕೆ.ಆರ್. ಜಲಜಾ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ‘ಸಂಶೋಧನೆ ಮತ್ತು ಸಾಹಿತ್ಯ’ ಉಪನ್ಯಾಸ: ಕೆ.ಸಿ. ಶಿವಾರೆಡ್ಡಿ, ಉಪಸ್ಥಿತಿ: ಬಿ.ಸಿ. ನಾಗೇಂದ್ರ ಕುಮಾರ್, ತಾಂಡವಗೌಡ ಟಿ.ಎನ್., ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 11.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in



ಪೊಲೀಸ್ ಗಸ್ತು: ಹೊಸ ವ್ಯವಸ್ಥೆಗೆ ಅಸ್ತು

ವಿನೂತನ ಯೋಜನೆ ಜಾರಿ • ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ವೇಗ • ಬೀಟ್ ವ್ಯವಸ್ಥೆಯಲ್ಲಿ ಬದಲಾವಣೆ • ಸುರಕ್ಷಿತ ವಾತಾವರಣ ನಿರ್ಮಾಣಕ್ಕೆ ಯತ್ನ

ನಗರದಲ್ಲಿ ಗಸ್ತು ನಡೆಸುತ್ತಿರುವ ಅಶ್ವದಳ

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಪಣ ತೊಟ್ಟಿರುವ ನಗರ ಪೊಲೀಸರು, ಕೆಲವು ವಿನೂತನ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

ಪೊಲೀಸ್ ಬೀಟ್ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿದ್ದಾರೆ. 'ಮರಳಿ ಠಾಣೆಗೆ', 'ಮನೆ ಮನೆಗೆ ಪೊಲೀಸರು' ಎಂಬ ನೂತನ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಆರೋಪಿಗಳ ಪತ್ತೆಗಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ವೇಗ ಸಿಕ್ಕಿದೆ.

ಉದ್ಯೋಗ, ಶಿಕ್ಷಣ, ವ್ಯಾಪಾರಕ್ಕೆಂದು ರಾಜ್ಯ ಹಾಗೂ ಹೊರ ರಾಜ್ಯದಿಂದ ನಗರಕ್ಕೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅವರೆಲ್ಲರಿಗೂ ಭದ್ರತೆ ಹಾಗೂ ಸುರಕ್ಷಿತ ವಾತಾವರಣ ನಿರ್ಮಿಸುತ್ತೇವೆ ಎಂದು ಪೊಲೀಸರು ಭರವಸೆ ತುಂಬುತ್ತಿದ್ದಾರೆ.

ಬೀಟ್ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿಲ್ಲ. ಇ-ಬೀಟ್ ವ್ಯವಸ್ಥೆಯಿದ್ದರೂ ಹೊಯ್ಸಳ ಸಿಬ್ಬಂದಿ ಬಡಾವಣೆಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ ಎಂದು ನಾಗರಿಕರು ದೂರಿದ್ದರು. ದೂರಿನ ಬೆನ್ನಲ್ಲೇ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಪೊಲೀಸ್ ಗಸ್ತು ವ್ಯವಸ್ಥೆಯಲ್ಲಿ ಬದಲಾವಣೆ ತಂದಿದ್ದಾರೆ.

ಪಿಎಸ್ಐ ನೇತೃತ್ವದಲ್ಲೇ ಕಾಲ್ನಡಿಗೆ: ನಗರದಾದ್ಯಂತ ಬೆಳಿಗ್ಗೆ ಮತ್ತು ಸಂಜೆ ಇ-ಬೀಟ್ ವ್ಯವಸ್ಥೆಗೆ ಸಿಬ್ಬಂದಿಯನ್ನು ನೇಮಿಸಲಾಗಿತ್ತು. ಅವರು ಹೊಯ್ಸಳ ವಾಹನ ಹಾಗೂ ಚೀತಾ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸಾರ್ವಜನಿಕರ ನಂಬಿಕೆ ಬಲಪಡಿಸಲು ಹಾಗೂ ಪೊಲೀಸ್ ಉಪಸ್ಥಿತಿ ಹೆಚ್ಚಿಸಲು ಬೀಟ್ ಸಿಬ್ಬಂದಿ, ಹೊಯ್ಸಳ ಸಿಬ್ಬಂದಿಯ ಜತೆಗೆ ಇನ್ಮುಂದೆ ಪಿಎಸ್ಐ ಶ್ರೇಣಿಯ ಅಧಿಕಾರಿಗಳೂ ಕಾಲ್ನಡಿಗೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ಬಡಾವಣೆಗಳ ವಿವಿಧ ರಸ್ತೆಗಳಲ್ಲಿ ವಾಹನ ರಸ್ತೆಗೆ ಇಳಿದು ಸುತ್ತಾಟ ನಡೆಸಲಿದ್ದಾರೆ. ಗಸ್ತು ವೇಳೆ ಶಂಕಿತರು ಕಂಡುಬಂದರೆ ವಶಕ್ಕೆ ಪಡೆದುಕೊಳ್ಳಲಿದ್ದಾರೆ. ನಾಗರಿಕರಲ್ಲಿ ಸ್ಥೈರ್ಯ ತುಂಬಲಿದ್ದಾರೆ.

ಒಂದು ವಾರದಿಂದ ಪಶ್ಚಿಮ, ಆಗ್ನೇಯ, ವೈಟ್‌ಫೀಲ್ಡ್, ಉತ್ತರ ಹಾಗೂ ದಕ್ಷಿಣ, ಈಶಾನ್ಯ ವಿಭಾಗದಲ್ಲಿ ಪಿಎಸ್ಐ ನೇತೃತ್ವದಲ್ಲಿ ಕಾಲ್ನಡಿಗೆ ಗಸ್ತು ಆರಂಭವಾಗಿದೆ. ಪಶ್ಚಿಮ ವಿಭಾಗದ ಬ್ಯಾಟರಾಯನಪುರ, ಕೆಂಗೇರಿ, ಚಂದ್ರಾ ಲೇಔಟ್, ಜ್ಞಾನಭಾರತಿ, ಆರ್‌ಆರ್ ನಗರ, ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾಲ್ನಡಿಗೆ ಗಸ್ತಿಗೆ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಹಿಳೆಯರು, ವೃದ್ಧರು ಹಾಗೂ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಹಿಂದಿನ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಬಿಬಿಎಂಪಿ ಹಾಗೂ ವಿವಿಧ ಕಂಪನಿಗಳ ಮುಖ್ಯಸ್ಥರಲ್ಲಿ ಮನವಿ ಮಾಡಿದ್ದರು. ಮನವಿ ಮೇರೆಗೆ ನಗರದಲ್ಲಿ ಸಿಸಿಟಿವಿಗಳ ಕ್ಯಾಮೆರಾ ಅಳವಡಿಕೆಗೆ ವೇಗ ದೊರೆತಿದೆ. 2024ರ ಜನವರಿ 1ರ ವೇಳೆಗೆ ನಗರದಲ್ಲಿ 2,32,711 ಸಿಸಿಟಿವಿ ಕ್ಯಾಮೆರಾಗಳು ಇದ್ದವು. ಈ ವರ್ಷದ ಜೂನ್ 20ರ ವೇಳೆಗೆ ಒಟ್ಟು 5,35,815 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಅಂದಾಜು 3 ಲಕ್ಷಕ್ಕೂ ಹೆಚ್ಚು ಕ್ಯಾಮೆರಾಗಳನ್ನು ಜಿಯೊ ಟ್ಯಾಗ್ ಮಾಡಲಾಗಿದೆ. ಈ ಕ್ಯಾಮೆರಾಗಳನ್ನು ಬಳಸಿಕೊಂಡು ನಗರದಲ್ಲಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ವಹಿಸಲಾಗಿದೆ ಎನ್ನುತ್ತಾರೆ ಪೊಲೀಸ್ ಅಧಿಕಾರಿಗಳು.

ಜನವಸತಿ ಪ್ರದೇಶಗಳು, ವ್ಯಾಪಾರಿ ಕೇಂದ್ರಗಳು, ಮುಖ್ಯರಸ್ತೆಗಳು, ಸಿಗ್ನಲ್‌ಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಬ್ಯಾಂಕ್‌ಗಳು ಸೇರಿ ಇತರೆ ಮಹತ್ವದ ಸ್ಥಳಗಳಲ್ಲಿ ಮತ್ತಷ್ಟು ಕ್ಯಾಮೆರಾ ಅಳವಡಿಸುವಂತೆ ಕೋರಲಾಗಿದೆ. ಇನ್ನಷ್ಟು ಕ್ಯಾಮೆರಾಗಳು ಅಳವಡಿಕೆಯಾದರೆ ಅಪರಾಧ ಪ್ರಕರಣಗಳ ತನಿಖೆ ಹಾಗೂ ಕಾರ್ಯಾಚರಣೆಗೆ ನೆರವಾಗಲಿದೆ. ಆಗ ನಗರದ ಬಹುತೇಕ ಭಾಗವು ಕ್ಯಾಮೆರಾಗಳ ಕಣ್ಗಾವಲಿಗೆ ಬರಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಲ್ಲದೇ ಹೆಚ್ಚು ಅಪರಾಧ ಚಟುವಟಿಕೆಗಳು ನಡೆಯುವ ಸ್ಥಳಗಳನ್ನು ಕೃತಕ ಬುದ್ಧಿಮತ್ತೆ (ಎ.ಐ) ಮೂಲಕ ಪತ್ತೆಹಚ್ಚಿ ಆ ಭಾಗದಲ್ಲಿ ಹೆಚ್ಚಿನ ನಿಗಾ ಹಾಗೂ ಹೊಯ್ಸಳ ಗಸ್ತು ವಾಹನ ಹೆಚ್ಚಿಸುವ ಕಾರ್ಯವನ್ನು ಪಶ್ಚಿಮ ವಿಭಾಗದಲ್ಲಿ ಜಾರಿಗೆ ತರಲಾಗಿತ್ತು. ಅದು ಯಶಸ್ವಿಯಾದ ಬೆನ್ನಲ್ಲೇ ನಗರದ ಇತರೆ ಭಾಗಗಳಿಗೂ ವಿಸ್ತರಿಸಲಾಗಿದೆ.

ಗಸ್ತು ವೇಳೆ ಬಡಾವಣೆಯೊಂದರಲ್ಲಿ ಪರಿಶೀಲನೆ ನಡೆಸಿದ ಪೊಲೀಸರು

ಅಪರಾಧ ಪ್ರಕರಣ: ಇಳಿಕೆಯತ್ತ ಚಿತ್ತ

ಕಳೆದ ವರ್ಷ ನಗರದಲ್ಲಿ ಮನೆ ಕೆಲಸದವರಿಂದಲೇ ಕಳ್ಳತನ (ಶೇ 20ರಷ್ಟು ಏರಿಕೆ), ಜಾನುವಾರು ಕಳ್ಳತನ (ಶೇ 54) ಏರಿಕೆ ಆಗಿದ್ದವು. ಇತರೆ ಕೆಲವು ಪ್ರಕರಣಗಳೂ ಏರಿಕೆಯ ಹಾದಿಯಲ್ಲಿದ್ದವು. ಅಪಘಾತಗಳೂ ಹೆಚ್ಚಿನ ಸಂಖ್ಯೆಯಲ್ಲಿ ಸಂಭವಿಸಿದ್ದವು. ಕಳ್ಳತನ ಹಾಗೂ ಅಪಘಾತಗಳನ್ನು ಕಡಿಮೆ ಮಾಡುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅಪರಾಧ ಪ್ರಕರಣ ತಡೆಗಟ್ಟಲು ಸಹಾಯ

ಬೆಂಗಳೂರಿನಲ್ಲೂ 'ಮನೆ ಮನೆ ಯೋಜನೆ'ಯನ್ನು ಜಾರಿಗೆ ತರಲಾಗಿದೆ. ನಗರದ ಮನೆಗಳಿಗೆ ಪೊಲೀಸರು ಭೇಟಿ ನೀಡುವುದರಿಂದ, ಆಯಾ ಪೊಲೀಸ್ ಠಾಣಾ ವ್ಯಾಪ್ತಿಯ ಸಮಸ್ಯೆಗಳು ಅರಿವಿಗೆ ಬರಲಿದೆ. ಅದರಿಂದ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಹಾಯವಾಗಲಿದೆ

ಜಿ.ಪರಮೇಶ್ವರ, ಗೃಹ ಸಚಿವ

ಗಸ್ತು ಹೆಚ್ಚಿಸುವಂತೆ ಸೂಚನೆ

ಯಾವ ಪ್ರದೇಶದಲ್ಲಿ, ಯಾವ ಅವಧಿಯಲ್ಲಿ ಹೆಚ್ಚಿನ ಅಪರಾಧ ಕೃತ್ಯಗಳು ಜರುಗುತ್ತಿವೆ ಎಂಬುದರ ಬಗ್ಗೆ ಸಿಬ್ಬಂದಿ ಸ್ಪಷ್ಟ ಮಾಹಿತಿ ಪಡೆದುಕೊಂಡು ಅಂತಹ ಪ್ರದೇಶದಲ್ಲಿ ಗಸ್ತು ಹೆಚ್ಚಿಸುವಂತೆ ಸೂಚಿಸಲಾಗಿದೆ

ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಅಶ್ವದಳದ ಗಸ್ತು ವಿಸ್ತರಣೆ

ವಾರಾಂತ್ಯದ ವೇಳೆ, ವಿಧಾನಸೌಧ ಹಾಗೂ ಕಬ್ಬನ್ ಪಾರ್ಕ್ ಸುತ್ತಮುತ್ತ, ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಅನಿಲ್ ಕುಂಬ್ಳೆ ವೃತ್ತ, ಬ್ರಿಗೇಡ್ ರಸ್ತೆಯಲ್ಲಿ ಹೆಚ್ಚಿನ ದಟ್ಟಣೆ ಇರುತ್ತದೆ. ಕಳೆದ ವರ್ಷದಿಂದ ಅಶ್ವದಳದ ಗಸ್ತು ಆರಂಭವಾಗಿತ್ತು. ಕೆಲವು ತಿಂಗಳ ಹಿಂದೆ ಲಾಲ್‌ಬಾಗ್‌ವರೆಗೂ ಅಶ್ವದಳದ ಗಸ್ತು ವಿಸ್ತರಣೆ ಮಾಡಲಾಗಿತ್ತು. ಇದನ್ನು ಇನ್ನೂ ಕೆಲವು ಸ್ಥಳಗಳಿಗೆ ವಿಸ್ತರಣೆ ಮಾಡಲು ನಗರ ಪೊಲೀಸರು ಆಲೋಚಿಸಿದ್ದಾರೆ.

'ಅಶ್ವದಳದಲ್ಲಿ ಗಸ್ತು ನಡೆಸುವುದರಿಂದ ಎತ್ತರದ ಸ್ಥಳದಿಂದ ವೀಕ್ಷಣೆ ಸಾಧ್ಯವಾಗಲಿದೆ. ದಟ್ಟಣೆ ಅವಧಿಯಲ್ಲಿ ಮಹಿಳೆಯರು ಹಾಗೂ ಮಕ್ಕಳಿಗೆ ಕಿರುಕುಳ ನೀಡುತ್ತಿರುವುದು ಕಂಡುಬಂದರೆ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಶಂಕಿತ ವ್ಯಕ್ತಿಗಳ ಓಡಾಟ ನಡೆಸುತ್ತಿರುವುದು ಕಂಡುಬಂದರೂ ವಶಕ್ಕೆ ಪಡೆದು ಆಯಾ ಠಾಣೆಯ ಪೊಲೀಸರಿಗೆ ಒಪ್ಪಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಏನೆಲ್ಲ ಕ್ರಮ

- ಪೊಲೀಸ್ ಠಾಣೆಗಳ ಕೆಲಸ ಕಾರ್ಯಗಳನ್ನು ಸುಧಾರಿಸಲು 'ಮರಳಿ ಠಾಣೆ'ಗೆ ಯೋಜನೆ
- ಸಂಕಷ್ಟಕ್ಕೆ ಒಳಗಾದ ನಾಗರಿಕರಿಗೆ ತ್ವರಿತವಾಗಿ ಸ್ಪಂದಿಸಲು ಹೊಯ್ಸಳ ಪೊಲೀಸರ ತ್ವರಿತ ಸ್ಪಂದನೆ
- ಬೆಂಗಳೂರು ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಿಂದ 'ಸೇಫ್ ಕನೆಕ್ಟ್' ಕಾರ್ಯಕ್ರಮ
- ಸೈಬರ್ ಅಪರಾಧ ಕಡಿಮೆ ಮಾಡಲು ಹಾಗೂ ಜಾಗೃತಿ ಮೂಡಿಸಲು ಸಾಮಾಜಿಕ ಜಾಲತಾಣಗಳು, ಎಫ್‌ಎಂ ಹಾಗೂ ಆಕಾಶವಾಣಿಯ ಮೂಲಕ ಸೈಬರ್ ಅಪರಾಧಗಳ ಬಗ್ಗೆ ಅರಿವು (ಸೈಬರ್ ಟಿಪ್ ಎ ಡೇ) ಮೂಡಿಸಲಾಗುತ್ತಿದೆ

ಬ್ಯಾಂಕ್ ವ್ಯವಸ್ಥಾಪಕನ ಪತ್ನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ನಿವಾಸಿ ವಿಶಾಲಾಕ್ಷಿ ಹಿರೇಮಠ(32) ಅವರು ತಮ್ಮ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೋಮವಾರ ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ದಾವಣಗೆರೆ ಜಿಲ್ಲೆಯ ಹರಿಹರ ಮೂಲದ ವಿಶಾಲಾಕ್ಷಿ ಅವರು 12 ವರ್ಷಗಳ ಹಿಂದೆ ಶಂಭುಲಿಂಗಯ್ಯ ಅವರನ್ನು ಮದುವೆ ಆಗಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಶಂಭುಲಿಂಗಯ್ಯ ಅವರು ಬ್ಯಾಂಕ್‌ವೊಂದರಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಶಾಲಾಕ್ಷಿ ಅವರ ಪೋಷಕರಿಗೆ ಮಾಹಿತಿ ನೀಡಲಾಗಿದೆ. ಆತ್ಮಹತ್ಯೆಗೆ ಕೌಟುಂಬಿಕ ಕಾರಣ ಎಂದು ಹೇಳಲಾಗಿದೆ. ಪೋಷಕರು ಬಂದು ದೂರು ನೀಡಿದ ಬಳಿಕ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಕಸದ ಲಾರಿಯಲ್ಲಿ ಶವವಿಟ್ಟಿದ್ದ ಆರೋಪಿ ಸೆರೆ

ಸಹ ಜೀವನ ನಡೆಸುತ್ತಿದ್ದ ಇಬ್ಬರ ಮಧ್ಯೆ ಗಲಾಟೆ, ಮಹಿಳೆಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯನ್ನು ಕೊಲೆ ಮಾಡಿ ಮೃತದೇಹವನ್ನು ಮೂಟೆಯಲ್ಲಿ ಕಟ್ಟಿ ಬಿಬಿಎಂಪಿ ಕಸದ ಲಾರಿಯಲ್ಲಿಟ್ಟು ಪರಾರಿಯಾಗಿದ್ದ ಆರೋಪಿಯನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ಶಂಶುದ್ದೀನ್‌ನನ್ನು (33) ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿ ಬೈಕ್‌ನಲ್ಲಿ ಬಂದು ಮೃತದೇಹವನ್ನು ಲಾರಿಯಲ್ಲಿ ಎಸೆದು ಪರಾರಿ ಆಗುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಭಾನುವಾರ ತಡರಾತ್ರಿಯೇ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಅಸ್ಸಾಂ ಮೂಲದ ಶಂಶುದ್ದೀನ್ ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಹೌಸ್ ಕೀಪಿಂಗ್ ಕಂಪನಿಯಲ್ಲಿ ಸೆಕ್ಯುರಿಟಿಯಾಗಿ ಕೆಲಸ ಮಾಡುತ್ತಿದ್ದ. ಆತನಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಹೆಂಡತಿ ಹಾಗೂ ಮಕ್ಕಳು ಅಸ್ಸಾಂನಲ್ಲೇ ಇದ್ದು, ಶಂಶುದ್ದೀನ್ ಮಾತ್ರ ನಗರಕ್ಕೆ ಬಂದು ಕೆಲಸ ಮಾಡುತ್ತಿದ್ದ. ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಆಶಾ ಅವರ ಪರಿಚಯವಾಗಿತ್ತು. ಆಶಾ ಅವರ ಪತಿ ಮೃತಪಟ್ಟಿದ್ದರು. ಆಶಾಗೆ ಇಬ್ಬರು ಮಕ್ಕಳು ಸಹ ಇದ್ದರು. ಶಂಶುದ್ದೀನ್ ಹಾಗೂ ಆಶಾ ಅವರ ಮಧ್ಯೆ ಸಲುಗೆ ಬೆಳೆದು ಇಬ್ಬರೂ ಪ್ರೀತಿಸುತ್ತಿದ್ದರು. ಹುಳಿಮಾವಿನಲ್ಲಿ ಬಾಡಿಗೆ ಮನೆ ಪಡೆದು ಒಂದೂವರೆ ವರ್ಷದಿಂದ ಸಹ ಜೀವನ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಶಂಶುದ್ದೀನ್

ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ: ಆರಂಭಿಕ ದಿನಗಳಲ್ಲಿ ಇಬ್ಬರೂ ಚೆನ್ನಾಗಿಯೇ ಜೀವನ ನಡೆಸುತ್ತಿದ್ದರು. ದಿನ ಕಳೆದಂತೆ ಗಲಾಟೆ ಆರಂಭವಾಗಿತ್ತು. ಆಶಾ ಪದೇ ಪದೇ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಆರೋಪಿ ಸಂಶಯಗೊಂಡು ಆಶಾ ಅವರನ್ನು ಪ್ರಶ್ನಿಸಿದ್ದ. ಮೊಬೈಲ್‌ನಲ್ಲಿ ಮಾತನಾಡದಂತೆ ತಾಕೀತು ಮಾಡಿದ್ದ. ಇಬ್ಬರೂ ಮದ್ಯ ಸೇವಿಸಿ ಬಂದು ಗಲಾಟೆ ಮಾಡುತ್ತಿದ್ದರು. ಶನಿವಾರ ರಾತ್ರಿ ಗಲಾಟೆ ವಿಕೋಪಕ್ಕೆ ತಿರುಗಿ ಆಶಾ ಅವರನ್ನು ಆರೋಪಿ ಕೊಲೆ ಮಾಡಿದ್ದಾನೆ. ಮೃತದೇಹವನ್ನು ಬೈಕ್‌ನಲ್ಲಿ ಇಟ್ಟುಕೊಂಡು ಬಂದಿದ್ದ ಆರೋಪಿ ಅದನ್ನು ಚನ್ನಮ್ಮನಕೆರೆ ಠಾಣಾ ವ್ಯಾಪ್ತಿಯ ಸ್ಕೇಟಿಂಗ್ ಮೈದಾನದ ಬಳಿ ನಿಂತಿದ್ದ ಕಸ ಸಾಗಿಸುವ ಲಾರಿಯಲ್ಲಿ ಎಸೆದು ಪರಾರಿಯಾಗಿದ್ದ ಎಂದು ಮೂಲಗಳು ತಿಳಿಸಿವೆ.

ಶನಿವಾರ ರಾತ್ರಿ ಸ್ಥಳೀಯ ವ್ಯಕ್ತಿಯೊಬ್ಬರು ಕಸ ಹಾಕಲು ಬಂದಿದ್ದಾಗ ಕಸದ ಲಾರಿಯಲ್ಲಿ ಯುವತಿಯ ತಲೆ ಕೂದಲು ಕಾಣಿಸಿತ್ತು. ಅವರು ತಕ್ಷಣವೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಧಾವಿಸಿದ್ದ ಪೊಲೀಸರು ಶವವೊಂದು ಮೂಟೆಕಟ್ಟಿ ಎಸೆದ ಸ್ಥಿತಿಯಲ್ಲಿ ಇರುವುದು ಪತ್ತೆಯಾಗಿತ್ತು. ನಂತರ ಪ್ರಕರಣ ದಾಖಲಿಸಿಕೊಂಡಿದ್ದ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು, ಆರೋಪಿಗೆ ಶೋಧ ನಡೆಸಿದ್ದರು. ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಕಾರ್ಯಾಚರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಗಿದೆ.

'ಪ್ರಕರಣ ದಾಖಲಿಸಿಕೊಂಡ ಕೆಲವೇ ತಾಸಿನಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಶನಿವಾರ ರಾತ್ರಿ ಇಬ್ಬರ ಮಧ್ಯೆ ಜಗಳ ನಡೆದಿದ್ದು, ಪರಸ್ಪರ ಹಲ್ಲೆ ಮಾಡಿಕೊಂಡಿದ್ದರು. ಆ ವೇಳೆ ಆರೋಪಿಯು, ಮಹಿಳೆಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಕೊಲೆ ಬಳಿಕ ಆರೋಪಿಯು ಮೃತದೇಹವನ್ನು ಖಾಲಿ ಚೀಲದಲ್ಲಿ ತುಂಬಿಕೊಂಡು ಬಂದು ಕಸದ ಲಾರಿಯಲ್ಲಿ ಎಸೆದು ಪರಾರಿಯಾಗಿದ್ದ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ ಜಗಲಾಸರ್ ತಿಳಿಸಿದರು.

ನಕಲಿ ಚಿನ್ನದ ನಾಣ್ಯ ನೀಡಿ ವಂಚನೆ

ಬೆಂಗಳೂರು: ಮಹಿಳೆಯೊಬ್ಬರಿಗೆ ನಕಲಿ ಚಿನ್ನದ ನಾಣ್ಯಗಳನ್ನು ನೀಡಿ ವಂಚಿಸಿದ್ದು, ಈ ಸಂಬಂಧ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶಂಕರಪುರ ರಸ್ತೆಯ ನಿವಾಸಿ ಬಿ.ಎಸ್.ಮಂಜುಳಾ ಅವರು ನೀಡಿದ ದೂರು ಆಧರಿಸಿ ಅಪರಿಚಿತ ಮಹಿಳೆಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಯ ಪತ್ತೆಗಾಗಿ ಕೃತ್ಯ ನಡೆದ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

10 ನಕಲಿ ಚಿನ್ನದ ನಾಣ್ಯಗಳನ್ನು ನೀಡಿ 39 ಗ್ರಾಂ ಚಿನ್ನದ ಸರವನ್ನು ಆರೋಪಿ ಕಸಿದುಕೊಂಡು ಪರಾರಿ ಆಗಿದ್ದಾಳೆ ಎಂದು ದೂರು ನೀಡಲಾಗಿದೆ.

'ದೂರುದಾರೆ ಬಿ.ಎಸ್.ಮಂಜುಳಾ ಅವರು ಶಂಕರಪುರದಲ್ಲಿ ಆರೋಗ್ಯ ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಡಿವಿಜಿ ರಸ್ತೆಯಿಂದ ಗಾಂಧಿ ಬಜಾರ್ ಕಡೆಗೆ ತೆರಳುವಾಗ 55 ರಿಂದ 60 ವರ್ಷ ಅಂದಾಜಿನ ಮಹಿಳೆ ಎದುರಾಗಿದ್ದಳು. ಮಂಜುಳಾ ಅವರ ಬಳಿ ಬಂದು, ಒಂದು ಚಿನ್ನದ ನಾಣ್ಯವನ್ನು ನೀಡಿದ್ದಳು. 'ಇದು ಲಕ್ಷ್ಮಿ ನಾಣ್ಯ. ನಾಣ್ಯದಿಂದ ಆಭರಣ ಮಾಡಿಸಬೇಕಿದೆ. ಎಷ್ಟು ಗ್ರಾಂ ಇದೆ' ಎಂದು ಪರಿಶೀಲಿಸಿಕೊಂಡು ಬರುವಂತೆ ತಿಳಿಸಿದ್ದಳು. ಆರೋಪಿಯ ಮಾತು ನಂಬಿದ್ದ ದೂರುದಾರೆ, ಚಿನ್ನಾಭರಣ ಅಂಗಡಿಗೆ ತೆರಳಿ ಪರಿಶೀಲಿಸಿದ್ದರು. ನಾಣ್ಯವನ್ನು ಪರಿಶೀಲಿಸಿದ್ದ ಸಿಬ್ಬಂದಿ, 'ನಾಣ್ಯವು ಚಿನ್ನದ್ದೇ ಇರಬಹುದು. ನಮ್ಮ ಬಳಿ ಚಿನ್ನಾಭರಣ ಪರಿಶೀಲಿಸುವ ಯಂತ್ರವಿಲ್ಲ. ಆದ್ದರಿಂದ, ನಿಖರವಾಗಿ ಹೇಳಲು ಸಾಧ್ಯವಿಲ್ಲ' ಎಂಬುದಾಗಿ ಹೇಳಿದ್ದರು. ಈ ವಿಷಯನ್ನು ನಾಣ್ಯ ನೀಡಿದ್ದ ಆರೋಪಿಗೆ ದೂರುದಾರೆ ತಿಳಿಸಿದ್ದರು. ನಂತರ, 10 ನಾಣ್ಯಗಳನ್ನು ಆರೋಪಿ ತೋರಿಸಿ, ಇದು ಚಿನ್ನದ್ದು ಎಂದು ಹೇಳಿದ್ದಳು. ಅವುಗಳನ್ನು ನೀಡಿ 39 ಗ್ರಾಂ ಚಿನ್ನದ ಸರವನ್ನು ಪಡೆದುಕೊಂಡು ಪರಾಗಿ ಆಗಿದ್ದಳು. ಚಿನ್ನದ ಅಂಗಡಿಗೆ ತೆರಳಿ ಪರಿಶೀಲಿಸಿದಾಗ ನಕಲಿ ಚಿನ್ನದ ನಾಣ್ಯಗಳು ಎಂಬುದು ಗೊತ್ತಾಯಿತು' ಎಂದು ಮೂಲಗಳು ತಿಳಿಸಿವೆ.

140 ಶಾಸಕರಿರುವ ಸರ್ಕಾರ ಬೀಳುತ್ತಾ ?

ಮಾಗಡಿ: 140 ಶಾಸಕರು ಇರುವ ಕಾಂಗ್ರೆಸ್ ಸರ್ಕಾರ ಪತನವಾಗಲು ಸಾಧ್ಯವೇ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಪ್ರಶ್ನಿಸಿದ್ದಾರೆ.

ತಾಲ್ಲೂಕಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರ್ಕಾರ ಆಗ ಬೀಳುತ್ತೆ, ಈಗ ಬೀಳುತ್ತೆ ಎಂದು ಬಿಜೆಪಿಯುವರು ಕನಸು ಕಾಣುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಸರ್ಕಾರದ ಆಡಳಿತ ವೈಖರಿ ನೋಡಿ ಬಿಜೆಪಿಗರಿಗೆ ಭ್ರಮನಿರಸನ ಆಗಿದೆ. ಹಾಗಾಗಿ ಬುರುಡೆ ಬಿಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಬೆಂಗಳೂರು: ಬ್ಯಾಟರಾಯನಪುರ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಾಯಂಡಹಳ್ಳಿಯ ಹೊರವರ್ತುಲ ರಸ್ತೆಯ(ನೈಸ್ ರಸ್ತೆ) ವೀರಭದ್ರನಗರ ಜಂಕ್ಷನ್ ಬಳಿ ಸ್ಕೂಟರ್ ಹಾಗೂ ಲಾರಿ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಮಹಿಳೆ ಮೃತಪಟ್ಟಿದ್ದಾರೆ. ರೇಣುಕಾ (52) ಮೃತ ಮಹಿಳೆ.

ಬಸವೇಶ್ವರನಗರದ ಪಟ್ಟೇಗಾರಪಾಳ್ಯದ ಬಿಡಿಎ ಲೇಔಟ್‌ನ ಮೂರನೇ ಹಂತದಲ್ಲಿ ರೇಣುಕಾ ಅವರು ನೆಲಸಿದ್ದರು. ರೇಣುಕಾ ಅವರು ಪುತ್ರಿ ಕುಸುಮಾ (32) ಹಾಗೂ ಮೊಮ್ಮಗ ಮೋಕ್ಷಿತ್ (9) ಜೊತೆಗೆ ಸ್ಕೂಟರ್‌ನಲ್ಲಿ ಬಂಡೆ ಮಹಾಕಾಳಿ ದೇವಸ್ಥಾನಕ್ಕೆ ತೆರಳುತ್ತಿದ್ದರು. ಪುತ್ರಿ ಸ್ಕೂಟರ್ ಚಲಾಯಿಸುತ್ತಿದ್ದರು. ಮುಂದೆ ಚಲಿಸುತ್ತಿದ್ದ ಸ್ಕೂಟರ್‌ಗೆ ಹಿಂಬದಿಯಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ರೇಣುಕಾ ಅವರು ಕೆಳಕ್ಕೆ ಬಿದ್ದು ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ದಾರಿಯಲ್ಲಿ ಮೃತಪಟ್ಟರು ಎಂದು ಸಂಚಾರ ಪೊಲೀಸರು ಹೇಳಿದರು. ಕುಸುಮಾ ಹಾಗೂ ಮೋಕ್ಷಿತ್ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಪಘಾತಕ್ಕೆ ಕಾರಣವಾದ ಲಾರಿ ಚಾಲಕ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಬುಕ್ಕಯಸಸಮುದ್ರಂ ನಿವಾಸಿ ಗೋವರ್ಧನ್ ರೆಡ್ಡಿಯನ್ನು ಬ್ಯಾಟರಾಯನಪುರ ಸಂಚಾರ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಬೈಕ್ ಸವಾರ ಸಾವು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸರಕು ಸಾಗಣೆ ವಾಹನ ಹಾಗೂ ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ನೀರಿನ ಕ್ಯಾನ್‌ಗಳನ್ನು ಪೂರೈಸುವ ಕೆಲಸ ಮಾಡುತ್ತಿದ್ದ ವಿಘ್ನೇಶ್ (32) ಅವರು ಮೃತಪಟ್ಟಿದ್ದಾರೆ.

ಸೋಮವಾರ ನಸುಕಿನ ವೇಳೆ ವಿಘ್ನೇಶ್ ಅವರು ಬೈಕ್‌ನಲ್ಲಿ ಹೊಸೂರಿನಿಂದ ಕೋನಪ್ಪನ ಅಗ್ರಹಾರದ ಕಡೆಗೆ ಸರ್ವೀಸ್ ರಸ್ತೆಯಲ್ಲಿ ತೆರಳುತ್ತಿದ್ದರು. ಆಗ ವಿರುದ್ಧ ದಿಕ್ಕಿನಿಂದ ವೇಗವಾಗಿ ಬಂದ ಸರಕು ಸಾಗಣೆ ವಾಹನವು ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ವಿಘ್ನೇಶ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ದಾರಿಯಲ್ಲಿ ಮೃತಪಟ್ಟರು ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಯ ಪೊಲೀಸರು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಉಪ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ
ಕಬ್ಬನ್ ಪಾರ್ಕ್, ಕೆ.ಆರ್.ವೃತ್ತ, ಬೆಂಗಳೂರು-560 001.
ದೂರವಾಣಿ : 080-22350078 ಇ-ಮೇಲ್: urbanadf@gmail.com

ಸಂ.: ಮೀಇ/ಪಿ.ಎಂ.ಎಂ.ಎಸ್.ವೈ/01/2025-26 ದಿನಾಂಕ: 26.06.2025

ಪತ್ರಿಕಾ ಪ್ರಕಟಣೆ

ವಿಷಯ: ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಯೋಜನೆಗಳ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆ 2020-21 ರಿಂದ 2023-24ನೇ ಸಾಲಿನವರೆಗೆ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಉಳಿಕೆಯಾದ ಘಟಕಗಳಿಗೆ ಹಾಗೂ 2024-25ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ 2025-26 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಒಳನಾಡು ಮೀನುಗಾರಿಕೆಗೆ ಸಂಬಂಧಿಸಿದ ಯೋಜನೆಗಳಾದ ಮೀನುಕೃಷಿ ಕೊಳಗಳ ನಿರ್ಮಾಣ, ಮಧ್ಯಮ ಗಾತ್ರದ ಆರ್.ಎ.ಎಸ್/ಬಯೋಫ್ಲಾಕ್ ಘಟಕ, 0.1 ಹೆಕ್ಟೇರ್ ಬಯೋಫ್ಲಾಕ್ ಘಟಕ, ಶೈತ್ಯಾಗಾರ/ಮಂಜುಗಡ್ಡೆ ಸ್ಥಾವರ ನಿರ್ಮಾಣ, ಜೀವಂತ ಮೀನು ಮಾರಾಟ ಕೇಂದ್ರ, ಮೀನು ಮೌಲ್ಯ ಉದ್ಯಮ, ಮತ್ಸ್ಯ ಸೇವಾ ಕೇಂದ್ರ ಸ್ಥಾಪನೆ, ಮೀನು/ಅಕ್ವೇರಿಯಂ ಕಿಯೋಸ್ಕ್‌ಗಳ ಸ್ಥಾಪನೆ ಮತ್ತು ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ ಸಹಾಯಧನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪನಿರ್ದೇಶಕರು, ಬೆಂಗಳೂರು ನಗರ ಜಿಲ್ಲಾ ಕಛೇರಿ ಹಾಗೂ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಲು ಈ ಮೂಲಕ ತಿಳಿಯಪಡಿಸಿದೆ ಸದರಿ ಯೋಜನೆಯ ಪ್ರಯೋಜನ ಪಡೆಯಲು **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11-07-2026.**

ಮುಂದುವರೆದು 2025-26ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಕೇಂದ್ರವಲಯ/ ರಾಜ್ಯವಲಯ/ ಜಿಲ್ಲಾವಲಯದ ವಿವಿಧ ಯೋಜನೆಗಳಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಖರೀದಿ, ಮೀನುಮರಿ ಖರೀದಿಗೆ ಹಾಗು ಇತರೆ ಯೋಜನೆಗಳಿಗೆ ಸಹಾಯಧನ ಪಡೆಯಲು ಆಸಕ್ತ ಒಳನಾಡು ಮೀನುಗಾರರು/ ಮೀನುಕೃಷಿಕರು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಿ, ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ : 1) ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ - 9972189781 2) ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬೆಂಗಳೂರು ದಕ್ಷಿಣ /ಪೂರ್ವ ತಾಲ್ಲೂಕು - 9980873350 3) ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ/ಯಲಹಂಕ ತಾಲ್ಲೂಕು - 9590135993 4) ಮೀನುಗಾರಿಕೆ ಸಹಾಯಕ ನಿರ್ದೇಶಕರು, ಆನೇಕಲ್ ತಾಲ್ಲೂಕು - 9980873350.

ಸಹಿ/-
ಮೀನುಗಾರಿಕೆ ಉಪ ನಿರ್ದೇಶಕರು
ಬೆಂಗಳೂರು ನಗರ ಜಿಲ್ಲೆ

DIPR/CP/1543/SA/2025-26

ದಲಿತರ ಜಮೀನು ವಶ: ಬಿಜೆಪಿ

'ಭೂಮಿ ಕಿತ್ತುಕೊಳ್ಳುವ ಕಾರ್ಯಾಚರಣೆಯನ್ನು ತಕ್ಷಣ ನಿಲ್ಲಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ಬಿದರಹಳ್ಳಿ ಹೋಬಳಿಯ ದಿನ್ನೂರು ಗ್ರಾಮದಲ್ಲಿ ದಲಿತರು ವ್ಯವಸಾಯ ಮಾಡುತ್ತಿರುವ ಜಮೀನನ್ನು ಅರಣ್ಯ ಇಲಾಖೆ ವಶಕ್ಕೆ ಪಡೆಯಲು ಮುಂದಾಗಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದ್ದಾರೆ.



ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಚಿವ ಈಶ್ವರಖಂಡ್ರೆ ನೇತೃತ್ವದಲ್ಲಿ ದಲಿತರ ಕತ್ತು ಹಿಸುಕುವ ಕೆಲಸ ನಡೆದಿದೆ ಎಂದು ಆರೋಪಿಸಿದರು.

'ದಲಿತರ ವ್ಯವಸಾಯ ಭೂಮಿಯನ್ನು ಕಿತ್ತುಕೊಳ್ಳುವ ಕಾರ್ಯಾಚರಣೆಯನ್ನು ತಕ್ಷಣವೇ ನಿಲ್ಲಿಸಬೇಕು. ಅರಣ್ಯ ಇಲಾಖೆ ತಾನು ಮಾಡಬೇಕಾದ ಕೆಲಸವನ್ನು ಬಿಟ್ಟು ಬೆಲೆಬಾಳುವ ಜಮೀನು ಕಬಳಿಸಲು ಮುಂದಾಗಿದೆ. ಈ ವಿಚಾರವಾಗಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಹಲವು ಬಾರಿ ಪ್ರಯತ್ನಿಸಿದರೂ ಭೇಟಿಗೆ ಅವಕಾಶ ಸಿಕ್ಕಿಲ್ಲ. ಆದ್ದರಿಂದ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಿದ್ದೇವೆ' ಎಂದು ತಿಳಿಸಿದರು.

'ದಿನ್ನೂರಿನಲ್ಲಿ 711 ಎಕರೆ ಜಾಗ ಇತ್ತು. ಇದರಲ್ಲಿ ರೈಲ್ವೆ ಇಲಾಖೆಗೆ 278 ಎಕರೆ, ದೇವಸ್ಥಾನಕ್ಕೆ ಸುಮಾರು 3 ಎಕರೆ, ರಸ್ತೆಗೆ 13 ಎಕರೆ, ಇಂದಿರಾ ಕ್ಯಾಂಟೀನ್‌ಗೆ 13 ಗುಂಟೆ, ದಿನ್ನೂರು ಕಾಲೋನಿಯಲ್ಲಿ ಮನೆ ಕಟ್ಟಲು 20 ಎಕರೆ ಜಮೀನು ನೀಡಲಾಗಿದೆ. ಸ್ಮಶಾನಕ್ಕೆ ಎರಡೂವರೆ ಎಕರೆ, ಬಡಾವಣೆ ನಿರ್ಮಾಣಕ್ಕೆ 32 ಎಕರೆ, ಪೊಲೀಸ್ ಠಾಣೆಗೆ 4.5 ಎಕರೆ ನೀಡಲಾಗಿದೆ. ಸುಮಾರು 125 ಎಕರೆಯಲ್ಲಿ ಕೃಷಿ ಕಾರ್ಯ ನಡೆದಿದೆ' ಎಂದು ಅವರು ತಿಳಿಸಿದರು.

'ಸ್ಥಳೀಯ ರೈತರಿಗೆ 1950 ರಲ್ಲೇ ಸರ್ಕಾರ ಭೂಮಿ ಮಂಜೂರು ಮಾಡಿತ್ತು. ಆಗಿನಿಂದಲೂ ರೈತರು ಅಲ್ಲಿ ವ್ಯವಸಾಯ ಮಾಡುತ್ತಾ ಬಂದಿದ್ದರು. ಈಗ ಪೊಲೀಸರ ಮೂಲಕ ದಲಿತರ ಜಮೀನು ವಶಕ್ಕೆ ತೆಗೆದುಕೊಳ್ಳುವ ಕೆಲಸ ನಡೆದಿದೆ. ಜಾಗ ತೆರವು ಮಾಡುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತಡೆಯಾಜ್ಞೆ ಇದೆ. ಈ ವಿಷಯವನ್ನು ಪೊಲೀಸರಿಗೆ ತಿಳಿಸಿದರೂ, ತೆರವು ಕೆಲಸ ಮಾಡಬೇಕು ಎಂದು ಸರ್ಕಾರ ನಮಗೆ ಸೂಚನೆ ನೀಡಿದೆ. ನಾವು ನಮ್ಮ ಕೆಲಸ ಮಾಡಿಯೇ ತೀರುತ್ತೇವೆ ಎಂದಿದ್ದಾರೆ. ಇದು ಹಾಸ್ಯಾಸ್ಪದ' ಎಂದು ಛಲವಾದಿ ಹೇಳಿದರು.

ಕೇಂದ್ರ, ಸುಪ್ರೀಂಕೋರ್ಟ್ ಅನುಮತಿ ಕಡ್ಡಾಯ

'ಅರಣ್ಯ ಭೂಮಿಯನ್ನು ಹಂಚಿಕೆ ಅಥವಾ ಮಂಜೂರು ಮಾಡಲು ಸಾಧ್ಯವಿಲ್ಲ. ಅರಣ್ಯೇತರ ಉದ್ದೇಶಕ್ಕೆ ಅರಣ್ಯ ಭೂಮಿ ಬಳಸಲು ಕೇಂದ್ರ ಸರ್ಕಾರ ಮತ್ತು ಸುಪ್ರೀಂಕೋರ್ಟ್ ಅನುಮತಿ ಕಡ್ಡಾಯ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿಯ ಕಾಡುಗೋಡಿ ಪ್ಲಾಂಟೇಷನ್ ಸರ್ವೆ ನಂ 1 ರಲ್ಲಿ 711 ಎಕರೆಯನ್ನು ನೆಡುತೋಪಿಗಾಗಿ 1896 ರಲ್ಲಿ ನೀಡಲಾಗಿದೆ. 1901 ರಲ್ಲಿ ಅರಣ್ಯ ನಿಯಮಗಳ ಅನ್ವಯ ರಾಜ್ಯ ಅರಣ್ಯ ಎಂದು ಅಧಿಸೂಚನೆ ಹೊರಡಿಸಲಾಗಿತ್ತು. ಹೀಗಾಗಿ ಇದು ಅಧಿಸೂಚಿತ ಮೀಸಲು ಅರಣ್ಯವಾಗಿದೆ ಎಂದು ಅವರು ಹೇಳಿದರು. ಯಾವುದೇ ಅರಣ್ಯ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಪೂರ್ವಾನುಮತಿ ಇಲ್ಲದೆ ಮಂಜೂರು ಮಾಡಬಾರದು ಎಂದು ಕೇಂದ್ರ ಸರ್ಕಾರವೇ ಜಾರಿ ಮಾಡಿರುವ ಕಾಯ್ದೆ ಹೇಳುತ್ತದೆ. ಸುಪ್ರೀಂಕೋರ್ಟ್ ಕೂಡ ಕಾಲಕಾಲಕ್ಕೆ ಈ ಸಂಬಂಧ ಸ್ಪಷ್ಟ ತೀರ್ಪು ಮತ್ತು ಆದೇಶಗಳನ್ನು ನೀಡಿದೆ ಎಂದು ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

AVAILABLE COLLATERALS/ Takeovers/ Properties/ Financial Arrangements (For only big projects). 'LAND PARCEL' & Company- 9342247637.

Finance

LOANS AVAILABLE @5% YEARLY INTEREST BUSINESS PROJECT TAKEOVER PERSONAL MORTGAGE BUILDERS HOMELOAN 8787091647 AGENTS WELCOME

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

REAL ESTATE SELLING

Flat

Basavanagudi

BASAVAGUDI RENT AVAILABLE IMMEDIATE OCCPN 3 BHK FLAT FURNISHED 55000/- PER MONTH: 080- 26603673/ 7353330197

FUTURE FOCUS

Astrology

INDIAN FAMOUS ASTROLOGER:we solved your problems like:Job,Health, Property,Family, Husband & wife, Love,Business, Finance and other problems solved through phone. Pandith:-Suresh Bhatt. 9900305071

PERSONAL

Change of Name

I, PRERNA HRISHIKESH SULE residing at TF-01, Plot-59, 4th Main Road, AGS Layout, Mathikere, Bangalore-560054 have changed my name to PRERNA PRABHAKAR AROTE vide affidavit dated 30/06/2025 sworn before notary Ambika.S, Bangalore

CHANGE OF NAME
I, **Mangalamma D,** R/at House No. 28, Flat No. 207, Nandi Anugraha, 7th Cross, 35th Main, Samyuktha Layout, J P Nagar 6th Phase, Bengaluru- 560078 have changed my name to **MANGALA G** vide affidavit dt: 23-06-2025 before Notary Jayalingayya Mudenoormath, Bengaluru. Henceforth I shall be called as **MANGALA G** only

I, SYED MUKKARAM ABBAS S/O YOUSUF ALI (Late) residing at Alipur Gauribidanur taluk Chikkaballapur district karnataka have changed my name to MUKKARAM ABBAS vide affidavit dated 30.06.2025 before notary N.S. ASHOK KUMAR GAURIBIDANUR

WE, HRISHIKESH MARUTI SULAY & PRERNA PRABHAKAR AROTE residing at TF-01, Plot-59, 4th Main Road, AGS Layout, Mathikere, Bangalore-560054 has changed our minor daughter's name from ADVAITA to ADVAITA HRISHIKESH SULAY vide affidavit dated 30/06/2025 sworn before notary Ambika.S, Bangalore

Announcements

ANNOUNCEMENT
I, **Manoj Kumar Nigam,** R/at Flat No. 204, Sai Srinivasa Shine, 9th Cross, Ananth Nagar Phase-2, Electronic City, Bengaluru-560100, declare that **Manoj Nigam & Manoj Kumar Nigam** both the names are of one & the same person only which is me & henceforth I shall be known as **MANOJ KUMAR NIGAM** vide affidavit dated 30-06-2025, before notary A.S. Narayana Reddy,Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9845114560 | +91 9886213331 | +91 9731810277

‘ಸರಳ ಕಾವೇರಿ’ಗೆ ನೀರಸ ಪ್ರತಿಕ್ರಿಯೆ

ಸ್ವಾಧೀನಾನುಭವ ಪತ್ರ (ಒಸಿ) ಸಮಸ್ಯೆ ಬಗೆಹರಿದರೆ ಹೊಸ ಸಂಪರ್ಕ ಪಡೆಯುವವರ ಸಂಖ್ಯೆ ಹೆಚ್ಚುವ ವಿಶ್ವಾಸ

• ಗಾಣಧಾಳು ಶ್ರೀಕಂಠ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಾಧೀನಾನುಭವ ಪತ್ರ (ಒಸಿ) ಕಡ್ಡಾಯಗೊಳಿಸಿರುವ ಕಾರಣ, ಕಂತುಗಳ ಮೂಲಕ ಠೇವಣಿ ಪಾವತಿಸಿ ಕಾವೇರಿ ನೀರಿನ ಸಂಪರ್ಕ ಪಡೆಯಲು ಜಲಮಂಡಳಿ ಆರಂಭಿಸಿರುವ ‘ಸರಳ ಕಾವೇರಿ’ ಯೋಜನೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಾವೇರಿ 5ನೇ ಹಂತದ ಯೋಜನೆ ಯಡಿ ನಗರಕ್ಕೆ ಹೆಚ್ಚುವರಿಯಾಗಿ 775 ದಶಲಕ್ಷ ಲೀಟರ್ ನೀರನ್ನು ತರಲಾಗಿದ್ದು, 110 ಹಳ್ಳಿಗಳು ಸೇರಿದಂತೆ ಇತರೆ ಪ್ರದೇಶಗಳಿಗೆ ಪೂರೈಸಲಾಗುತ್ತಿದೆ. ಈ ಯೋಜನೆಯಡಿ 4 ಲಕ್ಷ ನೀರಿನ ಸಂಪರ್ಕ ನೀಡುವ ಗುರಿ ಹೊಂದಲಾಗಿದೆ. ಈ ಗುರಿ ತಲುಪಲು ಜಲಮಂಡಳಿ ಮೇ 9 ರಂದು ‘ಸರಳ ಕಾವೇರಿ’ ಯೋಜನೆ ಜಾರಿಗೊಳಿಸಿತು.

ಈ ಯೋಜನೆ ಆರಂಭವಾಗಿ ಸುಮಾರು ಒಂದೂ ಮುಕ್ಕಾಲು ತಿಂಗಳಾಯಿತು. ಯೋಜನೆ ಆರಂಭಕ್ಕೆ ಕೆಲ ದಿನಗಳ ಹಿಂದೆಯಷ್ಟೇ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಸರ್ಕಾರ ‘ಒಸಿ’ ಸಲ್ಲಿಕೆಯನ್ನು ಕಡ್ಡಾಯಗೊಳಿಸಿತ್ತು. ಹೀಗಾಗಿ ಆರಂಭದಿಂದಲೇ ಯೋಜನೆ ಕುಂಟುತ್ತಾ ಸಾಗಿತ್ತು. ಸಣ್ಣ ನಿವೇಶನದಲ್ಲಿ ಮನೆ ಕಟ್ಟಿದವರಿಗೆ ಈಗ ‘ಒಸಿ’ಯಿಂದ ವಿನಾಯಿತಿ ನೀಡಿದ್ದು ಅಂತಹವರು ಈ ಯೋಜನೆಯಡಿ ಅರ್ಜಿ ಸಲ್ಲಿಸುತ್ತಿದ್ದಾರೆ.

‘ಒಂದೂವರೆ ತಿಂಗಳಲ್ಲಿ ಸರಳ ಕಾವೇರಿ ಯೋಜನೆಯಡಿ ಕಾವೇರಿ ನೀರಿನ ಸಂಪರ್ಕ ಪಡೆಯಲು 1700 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 659 ಅರ್ಜಿಗಳಿಗೆ ಮಂಜೂರಾತಿ ನೀಡಿದೆ. 211 ಮಂದಿ ಹಣ ಪಾವತಿಸಿ, ನೀರಿನ ಸಂಪರ್ಕ ಪಡೆದಿದ್ದಾರೆ’ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

‘ಒಸಿ ಕಡ್ಡಾಯಗೊಳಿಸಿದ ನಂತರ, ಹೊಸದಾಗಿ ನೀರಿನ ಸಂಪರ್ಕ ಪಡೆಯುವವರ ಸಂಖ್ಯೆಯಲ್ಲೇ ಕಡಿಮೆಯಾಗಿದೆ. ಇನ್ನು ಸರಳ ಕಾವೇರಿ ಯೋಜನೆಯಡಿ ಅರ್ಜಿ ಸಲ್ಲಿಸಿದ್ದರೂ, ‘ಒಸಿ’ ಸಲ್ಲಿಸದ ಕಾರಣ, ಅವರಿಗೂ ಮಂಜೂರಾತಿ ನೀಡಿಲ್ಲ. 600 ಚದರ ಅಡಿಗಿಂತ ಕಡಿಮೆ ಇರುವ ಸಣ್ಣ ನಿವೇಶನದವರು ಅರ್ಜಿ ಸಲ್ಲಿಸಿ, ಅನುಕೂಲ ಪಡೆಯುತ್ತಿದ್ದಾರೆ. ಜೊತೆಗೆ ‘ಒಸಿ’ ಹೊಂದಿರುವ ಕೆಲವು ಕಟ್ಟಡಗಳು, ಅಪಾರ್ಟ್‌ಮೆಂಟ್‌ನವರು ಸಮಾನ ಕಂತುಗಳಲ್ಲಿ ಹಣ ಪಾವತಿಸುವ ಸೌಲಭ್ಯ ಪಡೆಯುತ್ತಿದ್ದಾರೆ’ ಎಂದು ಹೇಳಿದರು.

‘ಸರಳ ಕಾವೇರಿ ಯೋಜನೆ ಸೌಲಭ್ಯ ಪಡೆಯಲು ಜನರಿಗೆ ಆಸಕ್ತಿ ಇದ್ದರೂ, ‘ಒಸಿ’ ಸಮಸ್ಯೆಯಿಂದ ಅರ್ಜಿ ಸಲ್ಲಿಸುತ್ತಿಲ್ಲ. ಈ ಸಮಸ್ಯೆ ಬಗೆಹರಿದರೆ, ಇನ್ನೂ ಅಧಿಕ ಸಂಖ್ಯೆಯಲ್ಲಿ ಈ ಯೋಜನೆ ಬಳಸಿಕೊಂಡು, ನೀರಿನ ಸಂಪರ್ಕ ಪಡೆಯುತ್ತಾರೆ’ ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ ಪ್ರಸಾತ್ ಮನೋಹರ್ ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಸಣ್ಣ ನಿವೇಶನದವರಿಂದ ಹೆಚ್ಚಿನ ಅರ್ಜಿ ಸಲ್ಲಿಕೆ
- 659 ಅರ್ಜಿಗಳಿಗೆ ಮಂಜೂರಾತಿ
- ನೀರಿನ ಸಂಪರ್ಕ ಪಡೆದ 211 ಮಂದಿ

ಎರಡು ತಿಂಗಳು ವಿಸ್ತರಣೆ

ನೀರಿನ ಸಂಪರ್ಕ ಪಡೆಯಲು ನಿಗದಿಪಡಿಸಿರುವ ಒಟ್ಟು ಶುಲ್ಕವನ್ನು ಒಂದೇ ಬಾರಿಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಲು ಸಾಧ್ಯವಾಗದವರಿಗೆ ‘ಸರಳ ಕಾವೇರಿ’ ಯೋಜನೆಯಡಿ ನೀರಿನ ಸಂಪರ್ಕ ಪಡೆಯಲು ಎರಡು ತಿಂಗಳು ಕಾಲಾವಕಾಶ ನೀಡಲಾಗಿತ್ತು. ಈಗ ವಿಧಿಸಿರುವ ಗಡುವು ಜೂನ್ 30ಕ್ಕೆ ಮುಕ್ತಾಯಗೊಂಡಿದೆ. ಆದರೆ, ‘ಒಸಿ’ ಸಮಸ್ಯೆಯಿಂದಾಗಿ ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ಈ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಾಗದ ಕಾರಣ, ಈ ಅವಧಿಯನ್ನು ಇನ್ನೂ ಎರಡು ತಿಂಗಳು ವಿಸ್ತರಿಸಲು ಜಲಮಂಡಳಿ ನಿರ್ಧರಿಸಿದೆ’ ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಠೇವಣಿ ಪಾವತಿ ಹೇಗೆ?

- ಜಲಮಂಡಳಿ ನೀಡುವ ಬೇಡಿಕೆ ನೋಟಿಸ್‌ನ ಶೇ 20ರಷ್ಟು ಶುಲ್ಕ ಪಾವತಿಸಬೇಕು
- ಉಳಿದ ಶೇ 80ರಷ್ಟು ಶುಲ್ಕವನ್ನು 12 ತಿಂಗಳು ಸಮಾನ ಕಂತುಗಳ ಮೂಲಕ ಪಾವತಿಸಬಹುದು.
- ಈ ಅವಕಾಶವನ್ನು ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಿತ ಕಟ್ಟಡಗಳಿಗೆ ನೀಡಿಲ್ಲ.

ಅರ್ಜಿ, ಸಂಪರ್ಕ ವಿವರ

1,700	ಸ್ವೀಕೃತ ಅರ್ಜಿಗಳು
659	ಮಂಜೂರಾದ ಅರ್ಜಿಗಳು
211	ಹಣ ಪಾವತಿಸಿರುವವರು
ಅಪಾರ್ಟ್‌ಮೆಂಟ್‌ಗಳಿಗೆ ಸಂಪರ್ಕ	
125	ಅರ್ಜಿ ಸಲ್ಲಿಸಿರುವವರು
36	ಮಂಜೂರಾಗಿರುವುದು
26	ಹಣ ಪಾವತಿಸಿರುವವರು

ಶುಲ್ಕ ಎಷ್ಟು?

- ಅಪಾರ್ಟ್‌ಮೆಂಟ್ ಸೇರಿದಂತೆ ವಸತಿ ಕಟ್ಟಡಗಳಿಗೆ– ₹400 (ಪ್ರತಿ ಚ.ಅಡಿಗೆ)
- ವಸತಿಯೇತರ, ವಾಣಿಜ್ಯ ಕಟ್ಟಡಗಳು- ₹600 (ಪ್ರತಿ ಚ.ಅಡಿಗೆ)

ಐಎಎಸ್, ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿ ಜಗದೀಶ ಕೆ.ಜಿ. ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ. ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಬಸವರಾಜೇಂದ್ರ ಎಚ್. ಅವರನ್ನು ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ.

ಪ್ರಕಾಶ್ ಜಿ.ಟಿ. ನಿಟ್ಟಾಲಿ ಅವರನ್ನು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯಮಾಪನ ಮಂಡಳಿಯ ಅಧ್ಯಕ್ಷರಾಗಿ ವರ್ಗಾವಣೆ ಮಾಡಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆ (ಮಧ್ಯಾಹ್ನದ ಬಿಸಿಯೂಟ) ನಿರ್ದೇಶಕರ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ: ಸ್ಮಿತಾ ಬಿಜ್ಜೂರ್ ಅವರಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ (ಪ್ರಚಾರ ಮತ್ತು ಐಸಿಟಿ) ಬಡ್ತಿ ನೀಡಲಾಗಿದೆ.

ಪಿ.ಸಿ. ರೇ ಅವರನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ (ವನ್ಯಜೀವಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ) ವರ್ಗಾವಣೆ ಮಾಡಲಾಗಿದೆ.

ಮನೋಜ್ ಕುಮಾರ್ ಅವರನ್ನು ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಜತೆಗೆ ಎಂಎಸ್‌ಐಎಲ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಉಪೇಂದ್ರ ಪ್ರತಾಪ್ ಸಿಂಗ್ ಅವರನ್ನು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರಾಗಿ ವರ್ಗಾವಣೆ ಮಾಡಿದೆ.

ಸಚಿವ ತಿಮ್ಮಾಪುರ ವಜಾಗೊಳಿಸಿ, ತನಿಖೆ ನಡೆಸಲು ಕೆಆರ್‌ಎಸ್ ಒತ್ತಾಯ

‘ಲೋಕಾ’ ಭ್ರಷ್ಟಾಚಾರ: ಸಿಬಿಐಗೆ ವಹಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ಪೊಲೀಸರ ಭ್ರಷ್ಟಾಚಾರ ಪ್ರಕರಣವನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಮೇಲುಸ್ತುವಾರಿಯಲ್ಲಿ ಸಿಬಿಐ ತನಿಖೆಗೆ ವಹಿಸಬೇಕು ಮತ್ತು ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರ ತಡೆಯುವಲ್ಲಿ ವಿಫಲರಾಗಿರುವ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

‘ಆಡಳಿತದಲ್ಲಿನ ಅಕ್ರಮ, ಅವ್ಯವಹಾರ, ಕರ್ತವ್ಯಲೋಪ ಮತ್ತು ಭ್ರಷ್ಟಾಚಾರವನ್ನು ನಿಯಂತ್ರಿಸಬೇಕಾದ ಲೋಕಾಯುಕ್ತ ಸಂಸ್ಥೆಯೇ ಅಕ್ರಮಗಳಲ್ಲಿ ಸಿಲುಕುತ್ತಿದೆ. ಸಂಸ್ಥೆಯಲ್ಲಿ ದಾಖಲಾಗುವ ಬಹುತೇಕ ಪ್ರಕರಣಗಳು ತಾರ್ಕಿಕ ಅಂತ್ಯ ಕಾಣದೆ ಮುಕ್ತಾಯವಾಗುತ್ತಿವೆ. ಭ್ರಷ್ಟಾಚಾರದ ಪ್ರಕರಣಗಳು ಕೂಡ ವಿಲೇವಾರಿಯಾಗದೆ ದೂಳು ಹಿಡಿಯುತ್ತಿವೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಲೋಕಾಯುಕ್ತ ಸಂಸ್ಥೆಯಲ್ಲಿನ ಅಕ್ರಮಗಳನ್ನು ನಿಯಂತ್ರಿಸುವಲ್ಲಿ ವಿಫಲರಾಗಿರುವ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರ ರಾಜೀನಾಮೆ ಪಡೆಯಬೇಕು ಅಥವಾ ಅವರನ್ನು ವಜಾ ಮಾಡಲು ಕ್ರಮ ವಹಿಸಬೇಕು’ ಎಂದು ಸರ್ಕಾರವನ್ನು ಒತ್ತಾಯಿಸಿದರು.

‘ಲೋಕಾಯುಕ್ತ ಪೊಲೀಸರಿಗೆ ಅಬಕಾರಿ ಅಧಿಕಾರಿಗಳು ಪ್ರತಿ ತಿಂಗಳು ಲಂಚ ನೀಡುತ್ತಿರುವುದು ಮತ್ತು ಆರೋಪಿಗಳೊಂದಿಗೆ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರಗೆ ಸಂಪರ್ಕವಿರುವುದು ಗೊತ್ತಾಗಿದೆ. ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು. ಲೋಕಾಯುಕ್ತ ಸಂಸ್ಥೆ ಬಲಪಡಿಸಲು ಮತ್ತು ಅದರ ಘನತೆ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ‘ಲೋಕಾಯುಕ್ತ ಸಂಸ್ಥೆಯ ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದ್ದರೂ ವಿರೋಧ ಪಕ್ಷಗಳು ತುಟಿ ಬಿಚ್ಚುತ್ತಿಲ್ಲ. ಕಾಂಗ್ರೆಸ್ ಜೊತೆಗೆ ಎರಡೂ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿವೆ. ಪಕ್ಷದ ವತಿಯಿಂದ ಈವರೆಗೂ ರಾಜ್ಯದಾದ್ಯಂತ ನೂರಾರು ಅಕ್ರಮಗಳ ಬಗ್ಗೆ ಪ್ರಕರಣ ದಾಖಲಿಸಿದ್ದೇವೆ’ ಎಂದರು.

ಇದೇ ವೇಳೆ ವಿಧಾನಸೌಧ ಚಲೋ ಹೊರಟ ಪಕ್ಷದ ಕಾರ್ಯಕರ್ತರನ್ನು ಪೊಲೀಸರು, ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು. ಆಗ ಕಾರ್ಯಕರ್ತರು ಪೊಲೀಸರ ಕಾಲಿಗೆ ಬಿದ್ದು, ಮನವಿ ಸಲ್ಲಿಸಲು ಅವಕಾಶ ನೀಡುವಂತೆ ಕೋರಿದ ಪ್ರಸಂಗವೂ ನಡೆಯಿತು.

ಪ್ರತಿಭಟನೆಯಲ್ಲಿ ಪಕ್ಷದ ಉಪಾಧ್ಯಕ್ಷರಾದ ಎಸ್. ಮಂಜುನಾಥ್, ರಘು ಜಾಣಗೆರೆ, ಜ್ಞಾನ ಸಿಂಧು ಸ್ವಾಮಿ, ಸೋಮಸುಂದರ್, ಸಂಘಟನಾ ಕಾರ್ಯದರ್ಶಿ ಎಲ್. ಜೀವನ್, ರಘುನಂದನ, ವಿ.ಬಿ.ಕೃಷ್ಣ, ಯುವ ಘಟಕದ ಅಧ್ಯಕ್ಷ ಜನನಿ ವತ್ಸಲ, ಮಹಿಳಾ ಘಟಕದ ಅಧ್ಯಕ್ಷೆ ಆಶಾ ವೀರೇಶ್, ಎಸ್‌ಸಿ, ಎಸ್‌ಟಿ ಘಟಕದ ಅಧ್ಯಕ್ಷ ಪ. ಯ. ಗಣೇಶ್, ರೈತ ಘಟಕದ ಅಧ್ಯಕ್ಷ ಜೋಗನಹಳ್ಳಿ ಗುರುಮೂರ್ತಿ ಭಾಗವಹಿಸಿದ್ದರು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ದೇವನಹಳ್ಳಿಯ ಹೋಟೆಲ್ ಸಮೀಪ ಕಾರಿನಲ್ಲಿ ಹಣ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಕಚೇರಿಯ ಗ್ರೇಡ್–2 ತಹಶೀಲ್ದಾರ್ ಡಿ.ಎ.ದಿವಾಕರ್

ಲೋಕಾ ಬಲೆಗೆ ಬಿದ್ದ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಕೋರ್ಟ್ ನೋಂದಣಿಯಂತೆ ಜಮೀನು ಖಾತೆ ಮಾಡಲು ₹1.50 ಲಕ್ಷ ಲಂಚ ಪಡೆಯುತ್ತಿದ್ದ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಕಚೇರಿಯ ಗ್ರೇಡ್–2 ತಹಶೀಲ್ದಾರ್ ಡಿ.ಎ. ದಿವಾಕರ್ ಸೋಮವಾರ ಸಂಜೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಾರೆ.

ನೆಲಮಂಗಲ ತಾಲ್ಲೂಕಿನ ಗಿರಿಯನಪಾಳ್ಯದ 8.20 ಎಕರೆ ಜಮೀನನ್ನು ಕೋರ್ಟ್ ನೋಂದಣಿಯಂತೆ ಖಾತೆ ಮಾಡಲು ವಕೀಲರಾದ ಎಲ್. ದೊರೆಸ್ವಾಮಿ ಬಳಿ ₹2 ಲಕ್ಷಕ್ಕೆ ದಿವಾಕರ್ ಬೇಡಿಕೆ ಇಟ್ಟಿದ್ದರು.

‘₹1.50 ಲಕ್ಷಕ್ಕೆ ವ್ಯವಹಾರ ಕುದುರಿತ್ತು. ದೇವನಹಳ್ಳಿ ಸಮೀಪದ ಹೋಟೆಲ್ ಬಳಿ ಕಾರಿನಲ್ಲಿ ದೂರುದಾರರಿಂದ ಹಣ ಪಡೆಯುವಾಗ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ರಮೇಶ್ ನೇತೃತ್ವದ ತಂಡ ದಿವಾಕರ್ ಅವರನ್ನು ಬಂಧಿಸಿದೆ’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಗ್ರಂಥಾಲಯ ಶುಚಿ ಕಾರ್ಮಿಕರ ಒತ್ತಾಯ

‘ಕನಿಷ್ಠ ವೇತನ ₹25 ಸಾವಿರ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ₹25 ಸಾವಿರ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಜನರಲ್ ಲೇಬರ್ ಯೂನಿಯನ್ ನೇತೃತ್ವದಲ್ಲಿ ಗ್ರಂಥಾಲಯ ಶುಚಿ ಕಾರ್ಮಿಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕನಿಷ್ಠ ವೇತನ, ಆರ್ಥಿಕ ಭದ್ರತೆ, ನಿವೃತ್ತ ಕಾರ್ಮಿಕರಿಗೆ ಪಿಂಚಣಿ, ಬೋನಸ್ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಲ್ಲ. ಗ್ರಂಥಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಶುಚಿ ಕಾರ್ಮಿಕರನ್ನು ಕಾರ್ಮಿಕರೆಂದು ಪರಿಗಣಿಸಿ, ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಮಾಸಿಕ ₹14,500 ವೇತನದಲ್ಲಿ ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ, ಮಕ್ಕಳ ಶಿಕ್ಷಣ, ನಿತ್ಯದ ಖರ್ಚು ನಿಭಾಯಿಸಲು ಕಷ್ಟ. ಶುಚಿ ಕಾರ್ಮಿಕರು ಬಹುತೇಕರು ಮಹಿಳೆಯರಾಗಿದ್ದು, ಕಾನೂನಾತ್ಮಕವಾಗಿ ವೇತನ ಸಹಿತ ಹೆರಿಗೆ ರಜೆ ನೀಡಬೇಕು. ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಿಆರ್‌ಐಗಳಲ್ಲಿ ಉದ್ಯೋಗ ಅಡಿ ಪೌರಕಾರ್ಮಿಕರಿಗೆ ನೀಡುತ್ತಿರುವ ಕನಿಷ್ಠ ವೇತನವನ್ನು ನಮಗೂ ನೀಡಬೇಕು. ಗುರುತಿನ ಚೀಟಿ, ಇಎಸ್‌ಐ, ಪಿಎಫ್ ಹಾಗೂ ಇತರೆ ಸೌಲಭ್ಯ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಕೆಲಸದ ಅವಧಿಯಲ್ಲಿ ಮೃತಪಟ್ಟಲ್ಲಿ ಪರಿಹಾರ ಧನ ಹಾಗೂ ಅವಲಂಬಿತರಿಗೆ ಅನುಕಂಪ ನೇಮಕಾತಿ ನೀಡಬೇಕು. ನಿವೃತ್ತರಿಗೆ ಪಿಂಚಣಿ ಅಥವಾ ಪರಿಹಾರ ಧನ ನೀಡಬೇಕು ಎಂದು ಕೋರಿದರು.

ಪ್ರತಿಭಟನೆಯಲ್ಲಿ ಎಐಸಿಟಿಯು ಜಿಲ್ಲಾ ಅಧ್ಯಕ್ಷೆ ನಿರ್ಮಲಾ, ಜಿಲ್ಲಾ ಕಾರ್ಯದರ್ಶಿ ಅಶೋಕ್ ಪಾಲ್ಗೊಂಡಿದ್ದರು.

ಕರ್ನಾಟಕ ಜನರಲ್ ಲೇಬರ್ ಯೂನಿಯನ್ ನೇತೃತ್ವದಲ್ಲಿ ಗ್ರಂಥಾಲಯ ಶುಚಿ ಕಾರ್ಮಿಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಲಂಚ: ಬಿಬಿಎಂಪಿ ಎಇಇ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಅಧಿಕಾರಿ, ಒಬ್ಬ ಗುತ್ತಿಗೆದಾರ ಬಂಧನ
- ರಸ್ತೆ ಅಗೆಯಲು ಅನುಮತಿ ನೀಡುವುದಕ್ಕಾಗಿ ಒತ್ತಾಯಿಸಿದ್ದ ಬಿಬಿಎಂಪಿ ಎಇಇ

ಬೆಂಗಳೂರು: ರಸ್ತೆ ಅಗೆಯಲು ಅನುಮತಿ ನೀಡುವುದಕ್ಕಾಗಿ ₹50,000 ಲಂಚ ಪಡೆಯುತ್ತಿದ್ದ ಬಿಬಿಎಂಪಿ ಎಇಇ ನೀಲಕಂಠಯ್ಯ, ಗುತ್ತಿಗೆದಾರ ರಕ್ಷಿತ್ ಯಾದವ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

‘ನಗರದ ಬೇಗೂರು ನಿವಾಸಿ ಗಣೇಶ್ ಅವರು ತಮ್ಮ ಮನೆಗೆ ವಿದ್ಯುತ್ ಸಂಪರ್ಕಕ್ಕಾಗಿ ನೆಲದಾಳದ ಕೇಬಲ್ ಅಳವಡಿಸಲು, ರಸ್ತೆ ಅಗೆಯಲು ಅನುಮತಿ ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಬೇಗೂರು ಉಪ ವಿಭಾಗದ ಎಇಇ ನೀಲಕಂಠಯ್ಯ ಅವರು ಗುತ್ತಿಗೆ ದಾರ ರಕ್ಷಿತ್ ಯಾದವ್‌ಗೆ ₹50,000 ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ಗಣೇಶ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಗಣೇಶ್ ಅವರು ಬಿಬಿಎಂಪಿ ಕಚೇರಿಗೆ ತೆರಳಿ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಆರೋಪಿಗಳಿಬ್ಬರನ್ನೂ ಬಂಧಿಸಲಾಯಿತು’ ಎಂದು ತಿಳಿಸಿದೆ.

ಘನತ್ಯಾಜ್ಯ ನಿರ್ವಹಣಾ ನಿಗಮದ ಇಇ ಬಂಧನ: ಗುತ್ತಿಗೆದಾರರ ಬಿಲ್ ಪಾಸು ಮಾಡಲು ₹45,000 ಲಂಚ ಪಡೆಯುತ್ತಿದ್ದ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮದ (ಬಿಎಸ್‌ಡಬ್ಲ್ಯುಎಂಎಲ್) ಕಾರ್ಯನಿರ್ವಾಹಕ ಎಂಜಿನಿಯರ್ (ಇಇ) ಸಣ್ಣ ಪರಶುರಾಮ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

‘ಕಾಮಗಾರಿ ಒಂದರ ₹52 ಲಕ್ಷದ ಬಿಲ್ ಸಂಬಂಧ ಬಿಬಿಎಂಪಿಯ ನೇರ ಪಾವತಿ ವ್ಯವಸ್ಥೆಯ ಮೇಲ್ವಿಚಾರಕ ಲಕ್ಷ್ಮೀನಾರಾಯಣ ಜಿ. ಅವರು ಬಿಎಸ್‌ಡಬ್ಲ್ಯುಎಂಎಲ್‌ಗೆ ಕಡತ ಸಲ್ಲಿಸಿದ್ದರು. ಬಿಲ್ ಅನ್ನು ಪಾಸು ಮಾಡಲು ನಿಗಮದ ಮಲ್ಲೇಶ್ವರ ವಿಭಾಗದ ಇಇ ಸಣ್ಣ ಪರಶುರಾಮ್ ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ಲೋಕಾಯುಕ್ತ ಪೊಲೀಸರ ಪ್ರಕಟಣೆ ತಿಳಿಸಿದೆ.

‘ಈ ಸಂಬಂಧ ಲಕ್ಷ್ಮೀನಾರಾಯಣ ಅವರು ದೂರು ನೀಡಿದ್ದರು. ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ದೂರುದಾರರು ನಿಗಮದ ಕಚೇರಿಗೆ ತೆರಳಿ ಆರೋಪಿಗೆ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ, ಪರಶುರಾಮ್ ಅವರನ್ನು ಬಂಧಿಸಲಾಯಿತು’ ಎಂದು ಮಾಹಿತಿ ನೀಡಿದೆ.

‘ಎರಡೂ ಕಾರ್ಯಾಚರಣೆಗಳನ್ನು ಲೋಕಾಯುಕ್ತ ಎಸ್‌ಪಿ ಕೋನ ವಂಶಿಕೃಷ್ಣ ಅವರ ನೇತೃತ್ವದಲ್ಲಿ ನಡೆಸಲಾಗಿದೆ. ಎರಡೂ ಪ್ರಕರಣಗಳಲ್ಲಿ ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್‌ಗೆ ಮನವಿ ಸಲ್ಲಿಕೆ

ಅನುಮತಿ ಇಲ್ಲದೆ ಧರಣಿ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಂದು ತಿಂಗಳಲ್ಲಿ ನಾಲ್ಕು ಬಾರಿ ಪ್ರತಿಭಟನೆ
- ಪ್ರತಿಭಟನಕಾರರ ವಿರುದ್ಧ ಎಫ್‌ಐಆರ್ ದಾಖಲಿಸಿಲ್ಲ

ಬೆಂಗಳೂರು: ಅನುಮತಿ ಪಡೆಯದೆ ಬಿಜೆಪಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಕ್ರಮಕ್ಕೆ ಆಗ್ರಹಿಸಿ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ನಾರಾಯಣ ಸ್ವಾಮಿ, ‘ಜೂನ್ 28ರಂದು ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿ ಹೊರಬರುತ್ತಿರುವಾಗ ಕಾಂಗ್ರೆಸ್‌ನ ಸುಮಾರು 13 ಕಾರ್ಯಕರ್ತರು ಬಂದು ಕಚೇರಿ ಎದುರು ಪ್ರತಿಭಟನೆ ಮಾಡಿದ್ದಾರೆ. ನಮ್ಮಲ್ಲೂ 200–300 ಕಾರ್ಯಕರ್ತರು ಅಲ್ಲೇ ನಿಂತಿದ್ದರು. ಮನಸ್ಸು ಮಾಡಿದ್ದರೆ ಅಲ್ಲೇ ಅವರನ್ನು ತಡೆಯಬಹುದಿತ್ತು’ ಎಂದು ಎಚ್ಚರಿಸಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರ ಹಕ್ಕು ಗೌರವಿಸುತ್ತೇವೆ. ಆದರೆ, ಅನುಮತಿ ಇಲ್ಲದೆ, ಪೊಲೀಸರಿಗೆ ಗೊತ್ತೇ ಇಲ್ಲದಂತೆ ಪ್ರತಿಭಟಿಸಿದರೆ ಅದು ಗೂಂಡಾವರ್ತನೆ ಆಗಲಿದೆ. ಬಂಧಿಸಿ ಕರೆದೊಯ್ದ 15 ನಿಮಿಷಕ್ಕೇ ಮತ್ತೆ ಕೆಲವರು ಸ್ಥಳಕ್ಕೆ ಬಂದು ಪ್ರತಿಭಟನೆ ನಡೆಸಿದ್ದಾರೆ. ಯಾವುದೇ ಅನುಮತಿ ಪಡೆಯದೇ ಒಂದು ತಿಂಗಳಲ್ಲಿ ನಾಲ್ಕು ಬಾರಿ ಪ್ರತಿಭಟನೆ ನಡೆಸಿದ್ದಾರೆ. ಆದರೆ ಅವರ ಮೇಲೆ ಯಾವುದೇ ಎಫ್‌ಐಆರ್ ದಾಖಲಿಸಿಲ್ಲ’ ಎಂದು ದೂರಿದರು.

‘ನಾವು ಪೋಸ್ಟರ್ ಅಂಟಿಸಿದ್ದಕ್ಕೆ ಕೇಸ್ ಹಾಕಿದ್ದಾರೆ. ಈಗ ಕೋರ್ಟಿಗೆ ಅಲೆದಾಡುತ್ತಿದ್ದೇವೆ. ಕಾಂಗ್ರೆಸ್ಸಿನವರು ಅಧಿಕಾರದಲ್ಲಿ ಇದ್ದಾರೆ ಎಂಬ ಒಂದೇ ಕಾರಣಕ್ಕೆ ಎಫ್‌ಐಆರ್ ಮಾಡಿಲ್ಲ. ಈ ವಿಷಯವನ್ನು ನಗರ ಪೊಲೀಸ್ ಕಮಿಷನರ್ ಗಮನಕ್ಕೆ ತರಲಾಗಿದೆ. ಇದನ್ನು ತೀಕ್ಷ್ಣವಾಗಿ ಪರಿಗಣಿಸುವುದಾಗಿ ಹೇಳಿದ್ದಾರೆ. ಮುಂದುವರಿದರೆ ಬಿಜೆಪಿ ಸುಮ್ಮನೇ ಇರುವುದಿಲ್ಲ’ ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮಾತನಾಡಿ, ‘ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಮೊಳೆ ಹೊಡೆದಂತೆ ಶಾಶ್ವತವಾಗಿ ಇರುತ್ತದೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಇದ್ದರೆ ಅದು ತಪ್ಪು’ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಶಾಸಕ ಸಿಮೆಂಟ್ ಮಂಜು, ಮಾಜಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಶಾಸಕರಾದ ವೈ.ಸಂಪಂಗಿ, ವೈ. ರಾಮಕ್ಕ ಮತ್ತು ಎಸ್. ಬಾಲರಾಜು, ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಅಧ್ಯಕ್ಷ ಸಪ್ತಗಿರಿ ಗೌಡ, ಬಿಜೆಪಿ ಮುಖಂಡ ಗೌತಮ್ ಜೈನ್, ರಾಜ್ಯ ವಕ್ತಾರ ಪ್ರಕಾಶ್ ಶೇಷರಾಘವಾಚಾರ್ ಮನವಿ ಸಲ್ಲಿಸುವ ವೇಳೆ ಹಾಜರಿದ್ದರು.

ಬಿಜೆಪಿ ನಿಯೋಗವು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಮನವಿ ಸಲ್ಲಿಸಿತು

ರಾಘವೇಂದ್ರಗೆ ಕಾಳಿಂಗ ನಾವಡ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಕದಂಬ ಆರ್ಟ್ ಸೆಂಟರ್ ಸಂಸ್ಥೆಯು ಕಾಳಿಂಗ ನಾವಡರ ನೆನಪಿನಲ್ಲಿ ನೀಡುವ ‘ಕಲಾ ಕದಂಬ ಕಾಳಿಂಗ ನಾವಡ’ ಪ್ರಶಸ್ತಿಗೆ ಯಕ್ಷಗಾನ ಭಾಗವತ ರಾಘವೇಂದ್ರ ಮಯ್ಯ ಅವರನ್ನು ಆಯ್ಕೆ ಮಾಡಿದೆ.

ರಾಘವೇಂದ್ರ ಮಯ್ಯ

ಸತತ 42 ವರ್ಷಗಳಿಂದ ಯಕ್ಷಗಾನದ ಭಾಗವತರಾಗಿ ಕಲಾ ಸೇವೆ ಮಾಡುತ್ತಿರುವ ರಾಘವೇಂದ್ರ ಮಯ್ಯರಿಗೆ ಅಕ್ಟೋಬರ್ 12ರಂದು ಬನಶಂಕರಿ 3ನೇ ವಿಭಾಗದಲ್ಲಿನ ಚನ್ನಮ್ಮನ ಕೆರೆ ಅಚ್ಚುಕಟ್ಟುನಲ್ಲಿರುವ ಪರಂಪರ ಆಡಿಟೋರಿಯಂನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕಲಾಕದಂಬ ಆರ್ಟ್ ಸೆಂಟರ್ ನಿರ್ದೇಶಕ ರಾಧಾಕೃಷ್ಣ ಉರಾಳ ತಿಳಿಸಿದ್ದಾರೆ.

ಕಳೆದ 16 ವರ್ಷಗಳಿಂದ ಯಕ್ಷಗಾನ ಕ್ಷೇತ್ರದ ಪ್ರತಿಭಾನ್ವಿತರೊಬ್ಬರನ್ನು ಆಯ್ಕೆ ಮಾಡಿ ಕಾಳಿಂಗ ನಾವಡ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹25,000 ನಗದು, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆಯನ್ನು ಒಳಗೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

ಮೂವರು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಮೈಸೂರು: ಪತ್ನಿ ನಾಪತ್ತೆಯಾದ ಕುರಿತು ದೂರು ನೀಡಿದ ಪತಿ ಸುರೇಶ್ ವಿರುದ್ಧವೇ, ಪತ್ನಿಯ ಕೊಲೆ ಆರೋಪ ಹೊರಿಸಿ, ಸುಳ್ಳು ಪ್ರಕರಣ ದಾಖಲಿಸಿದ್ದ ಮೂವರು ಪೊಲೀಸ್ ಅಧಿಕಾರಿಗಳನ್ನು ಇಲಾಖೆಯು ಅಮಾನತು ಮಾಡಿದೆ.

ಕೊಡಗು ಜಿಲ್ಲೆಯ ಕುಶಾಲನಗರದ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್, ಮೈಸೂರಿನ ಇಲವಾಲ ಠಾಣೆ ಸಬ್ ಇನ್‌ಸ್ಪೆಕ್ಟರ್ ಮಹೇಶ್‌ಕುಮಾರ್, ಜಯಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಎತ್ತಿನಮನಿ ಅವರನ್ನು ಅಮಾನತುಗೊಳಿಸಿ ದಕ್ಷಿಣ ವಲಯದ ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ ಆದೇಶ ಹೊರಡಿಸಿದ್ದಾರೆ.

ಈ ಪ್ರಕರಣವನ್ನು ಬೆಂಗಳೂರಿನಲ್ಲಿ ನಡೆದ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನದಲ್ಲಿ ಪ್ರಸ್ತಾಪಿಸಿದ್ದ ಸಿ.ಎಂ ಸಿದ್ದರಾಮಯ್ಯ, ಸುರೇಶ್ ಅವರು 2 ವರ್ಷ ಜೈಲುವಾಸ ಅನುಭವಿಸುವಂತೆ ಮಾಡಿದ್ದ ಅಧಿಕಾರಿಗಳ ಅಮಾನತಿಗೆ ಸೂಚಿಸಿದ್ದರು.

India Exim Bank ಎಕ್ಸ್‌ಪೋರ್ಟ್-ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ
ಸೆಂಟರ್ ಒನ್ ಬಿಲ್ಡಿಂಗ್, ಫ್ಲೋರ್ ನಂ. 21,
ವರ್ಲ್ಡ್ ಟ್ರೇಡ್ ಸೆಂಟರ್ ಕಾಂಪ್ಲೆಕ್ಸ್, ಕಫ್ ಪರೇಡ್, ಮುಂಬೈ–400005

ಚರ ಹಾಗೂ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜಿಗಾಗಿ ಸಾರ್ವಜನಿಕ ನೋಟೀಸು
(ಸರ್ಫೇಸಿ ಆ್ಯಕ್ಟ್ 2002ರ ಅಡಿಯಲ್ಲಿ)

ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್, 2002ರ ರೂಲ್ 6 (2) ಹಾಗೂ ರೂಲ್ 8(6) ಆರ್/ಡಬ್ಲ್ಯೂ ರೂಲ್ 9 (1)ರ ನಿಬಂಧನೆಯೊಂದಿಗೆ ಓದಲಾದ ಸೆಕ್ಯೂರಿಟೈಸೇಶನ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆ್ಯಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿಗಳ (ಇಮ್ಮೂವೆಬಲ್ ಅಸೆಟ್) ಮಾರಾಟಕ್ಕಾಗಿ ಇ–ಆಕ್ಷನ್ ಸೇಲ್ ನೋಟೀಸು.

ಸೆಕ್ಯೂರ್ಡ್ ಕ್ರೆಡಿಟರ್‌ನ ಅಧಿಕೃತ ಅಧಿಕಾರಿ (ಕೆಳಗಿನ ಅನುಸೂಚಿಯಲ್ಲಿ ಉಲ್ಲೇಖಿಸಿದಂತೆ) ಸೆಕ್ಷನ್ 13(4)ರ ಅಡಿಯಲ್ಲಿ ಭೌತಿಕ ಸ್ವಾಧೀನವನ್ನು ತೆಗೆದುಕೊಂಡಿರುವ ಎಕ್ಸ್‌ಪೋರ್ಟ್ –ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ ಕ್ಕೆ (ಸೆಕ್ಯೂರ್ಡ್ ಕ್ರೆಡಿಟರ್) ಅಡಮಾನ ಇಡಲಾದ/ಚಾರ್ಜ್ ಮಾಡಲಾದ ಕೆಳಗೆ ವಿವರಿಸಿರುವ ಚರ ಹಾಗೂ ಸ್ಥಿರ ಆಸ್ತಿಯನ್ನು ಡಿಸೆಂಬರ್ 20,2023ರಂದಿನಂತೆ ಇರುವ ₹**11,68,68,816.80 (ಹನ್ನೊಂದು ಕೋಟಿ ಆರವತ್ತೆಂಟು ಲಕ್ಷ ಅರವತ್ತೆಂಟು ಸಾವಿರ ದ ಎಂಟುನೂರ ಹದಿನಾರು ರೂಪಾಯಿಗಳು ಹಾಗೂ ಎಂಬತ್ತು ಪೈಸೆಗಳು ಮಾತ್ರ)** ಮತ್ತು ಡಿಸೆಂಬರ್ 21,2023ರಿಂದ ಅನ್ವಯವಾಗುವ ಹೆಚ್ಚಿನ ಬಡ್ಡಿ ಹಾಗೂ ನಿಗದಿತ ಹಾನಿಯ ಪರಿಹಾರ (ಲಿಕ್ವಿಡೇಟೆಡ್ ಡ್ಯಾಮೇಜ್‌ಗಳು) ಮತ್ತು ಸಾಲಗಾರರಾದ ಮೆಸರ್ಸ್ ಶಾನ್ ಸೋಲಾರ್ ಪ್ರೈವೇಟ್ ಲಿಮಿಟೆಡ್‌ನಿಂದ ಎಕ್ಸಿಮ್ ಬ್ಯಾಂಕ್‌ಗೆ ಬರಬೇಕಾದ ವೆಚ್ಚಗಳ ವಸೂಲಿಗಾಗಿ, ಅಗಸ್ಟ್ 05, 2025ರಂದು ‘‘ಎಲ್ಲಿದೆಯೋ ಅಲ್ಲಿ’’ ‘‘ಇದ್ದಂತೆ’’ ‘‘ಅಲ್ಲಿರುವ ಹಾಗೆ’’ ಹಾಗೂ ‘‘ಯಾವುದೇ ಅವಲಂಬನೆ ಇಲ್ಲ’’ ಎಂಬ ಆಧಾರದ ಮೇಲೆ ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಹಾಗೂ ವಿಶೇಷವಾಗಿ ಸಾಲಗಾರರಾದ ಮೆಸರ್ಸ್ ಶಾನ್ ಸೋಲಾರ್ ಪ್ರೈವೇಟ್ ಲಿಮಿಟೆಡ್‌ಗೆ ಈ ಮೂಲಕ ನೋಟೀಸು ನೀಡಲಾಗಿದೆ. ಕನಿಷ್ಠ ಬೆಲೆಯು ₹11,25,00,000 (ಹನ್ನೊಂದು ಕೋಟಿ ಇಪ್ಪತ್ತೈದು ಲಕ್ಷ ಮಾತ್ರ) ಆಗಿರುತ್ತದೆ ಹಾಗೂ ಮುಂಗಡ ಹಣ ಠೇವಣಿ (ಅರ್ನೆಸ್ಟ್ ಮನಿ ಡಿಪಾಸಿಟ್) ₹1,12,50,000 (ಒಂದು ಕೋಟಿ ಹನ್ನೆರಡು ಲಕ್ಷ ಮತ್ತು ಐವತ್ತು ಸಾವಿರ ಮಾತ್ರ)

ಅಧಿಕೃತ ಅಧಿಕಾರಿಯ ಹೆಸರು	ಸಂಪರ್ಕ ವಿವರಗಳು
ಶ್ರೀ ಬಿ. ಕಾರ್ತಿಕೇಯನ್	+9122 22172649; ಇಮೇಲ್: karthikeyan@eximbankindia.in

ಅನುಸೂಚಿ

I. **ಸಾಲಗಾರರ ವಿವರಗಳು:** ಮೆಸರ್ಸ್ ಶಾನ್ ಸೋಲಾರ್ ಪ್ರೈವೇಟ್ ಲಿಮಿಟೆಡ್, ಇದರ ಪ್ರಸ್ತುತ ನೋಂದಾಯಿತ ಕಚೇರಿಯು , #2005, ಆನಂದ ಭವನ,೨ನೇ ಫ್ಲೋರ್, 100 ಫೀಟ್ ರೋಡ್,ಇಂದಿರಾ ನಗರ, ಎಚ್‌ಎಎಲ್ 2ನೇ ಸ್ಟೇಜ್, ಬೆಂಗಳೂರು–560 038ರಲ್ಲಿ ಇದೆ.

II. **ಲೀಸ್‌ಹೋಲ್ಡ್ ಪ್ರಾಪರ್ಟಿ, ಕನಿಷ್ಠ ಬೆಲೆ ಹಾಗೂ ಮುಂಗಡ ಹಣ ಠೇವಣಿಯ ವಿವರಣೆ : ಸಾಲಗಾರರಿಗೆ ಸೇರಿದ ಪ್ರಾಪರ್ಟಿ.**

ಪ್ರಾಪರ್ಟಿಯ ವಿವರಣೆ	ಕನಿಷ್ಠ ಬೆಲೆ (₹)	ಇಎಮ್‌ಡಿ (₹)
ಆಂಧ್ರಪ್ರದೇಶದ , ಚಿತ್ತೂರು ಜಿಲ್ಲೆಯ, ಶ್ರೀ ಸಿಟಿ ಸೆಜ್‌ನ , ಸತ್ಯವೇದು ಮಂಡಿಯ ಚೆರವಿ ಗ್ರಾಮದಲ್ಲಿ ಸುಮಾರು 2 ಎಕರೆಗಳ ವಿಸ್ತೀರ್ಣದ ಭೂಮಿಯಲ್ಲಿ ನಿರ್ಮಿಸಲಾದ ಕಾರ್ಖಾನೆ ಭೂಮಿ ಹಾಗೂ ನಿರ್ಮಿಸಲಾದ ಕಟ್ಟಗಳ ಎಲ್ಲಾ ಭಾಗಗಳ ಗುತ್ತಿಗೆಯ ಹಕ್ಕುಗಳು (ಪ್ಲ್ಯಾಂಟ್,ಮಶಿನರಿ, ಫರ್ನಿಚರ್ ಹಾಗೂ ಫಿಕ್ಸ್‌ಚರ್‌ಗಳು ಹಾಗೂ ಅದರಲ್ಲಿ ಇರುವ ಇತರ ಚರ ಸ್ವತ್ತುಗಳನ್ನು ಒಳಗೊಂಡು), ಕೆಳಗೆ ಪಟ್ಟಿಮಾಡಲಾಗಿರುವ ಸರ್ವೆ ನಂಬರ್‌ಗಳನ್ನು ಹೊಂದಿವೆ :–	11,25,00,000 (ಹನ್ನೊಂದು ಕೋಟಿ ಇಪ್ಪತ್ತೈದು ಲಕ್ಷ ಮಾತ್ರ)	1,12,50,000 (ಒಂದು ಕೋಟಿ ಹನ್ನೆರಡು ಲಕ್ಷ ಹಾಗೂ ಐವತ್ತು ಸಾವಿರ ರೂಪಾಯಿಗಳು ಮಾತ್ರ)

ಕ್ರ. ಸಂ.	ಗ್ರಾಮ	ಸರ್ವೆ ನಂ.	ಪೂರ್ಣ ಪ್ರಮಾಣದ	ಹಂಚಿಕೆ ಮಾಡಲಾದ ಪ್ರಮಾಣ	ವರ್ಗೀಕರಣ
01.	ಚೆರವಿ	91	0.93	0.10	ತೇವ
02.	ಚೆರವಿ	92/1	0.10	0.10	ತೇವ
03.	ಚೆರವಿ	92/2	0.05	0.05	ತೇವ
04.	ಚೆರವಿ	92/3	0.06	0.06	ತೇವ
05.	ಚೆರವಿ	92/4	0.14	0.14	ತೇವ
06.	ಚೆರವಿ	92/5	0.18	0.08	ತೇವ
07.	ಚೆರವಿ	93/2	1.19	0.08	ತೇವ
08.	ಚೆರವಿ	93/3	0.06	0.06	ತೇವ
09.	ಚೆರವಿ	93/4	0.22	0.04	ತೇವ
10.	ಚೆರವಿ	560/2	0.23	0.03	ತೇವ
11.	ಚೆರವಿ	560/3	0.23	0.23	ತೇವ
12.	ಚೆರವಿ	560/6	0.10	0.03	ತೇವ
13.	ಚೆರವಿ	560/7	0.08	0.08	ತೇವ
14.	ಚೆರವಿ	560/8	0.06	0.06	ತೇವ
15.	ಚೆರವಿ	560/9	0.02	0.02	ತೇವ
16.	ಚೆರವಿ	561/1	0.06	0.06	ತೇವ
17.	ಚೆರವಿ	561/2	0.07	0.07	ತೇವ
18.	ಚೆರವಿ	561/3	0.19	0.19	ತೇವ
19.	ಚೆರವಿ	561/4	0.05	0.05	ತೇವ
20.	ಚೆರವಿ	561/5	0.08	0.08	ತೇವ
21.	ಚೆರವಿ	561/6	0.06	0.06	ತೇವ
22.	ಚೆರವಿ	561/7	0.05	0.05	ತೇವ
23.	ಚೆರವಿ	575	0.50	0.22	ತೇವ
24.	ಚೆರವಿ	576/6	0.13	0.03	ತೇವ
25.	ಚೆರವಿ	576/9	0.08	0.03	ತೇವ

ಹಾಗೂ ಸುತ್ತುವರಿದ ಭೂಮಿ:
ಉತ್ತರಕ್ಕೆ : ಶ್ರೀ /ಸ್ರಿ ಸಿಟಿ ಭೂಮಿ;
ಪಶ್ಚಿಮಕ್ಕೆ: ಶ್ರೀ ಸಿಟಿ ಭೂಮಿ;
ದಕ್ಷಿಣಕ್ಕೆ: ಶ್ರೀ ಸಿಟಿ ಭೂಮಿ; ಹಾಗೂ
ಪಶ್ಚಿಮಕ್ಕೆ: ಶ್ರೀ ಸಿಟಿ ಭೂಮಿ.
ಶೀ ಬಾಲಾಜಿ ನೋಂದಣಿ ಜಿಲ್ಲೆ ಹಾಗೂ ಸತ್ಯವೇದು ಉಪ–ನೋಂದಣಿ ಜಿಲ್ಲೆಯ ವ್ಯಾಪ್ತಿಯಲ್ಲಿದೆ.

III. **ಬಾಕಿ ಇರುವ ಬಾಕಿಗಳು:** 20.12. 2023ರಂದಿನಂತೆ ₹11,68,68,816.80 (ಹನ್ನೊಂದು ಕೋಟಿ ಆರವತ್ತೆಂಟು ಲಕ್ಷ ಅರವತ್ತೆಂಟು ಸಾವಿರ ದ ಎಂಟುನೂರ ಹದಿನಾರು ರೂಪಾಯಿಗಳು ಹಾಗೂ ಎಂಬತ್ತು ಪೈಸೆಗಳು ಮಾತ್ರ) ಮತ್ತು ಡಿಸೆಂಬರ್ 21,2023ರಿಂದ ಅನ್ವಯವಾಗುವ ಹೆಚ್ಚಿನ ಬಡ್ಡಿ ಹಾಗೂ ನಿಗದಿತ ಹಾನಿಯ ಪರಿಹಾರ (ಲಿಕ್ವಿಡೇಟೆಡ್ ಡ್ಯಾಮೇಜ್‌ಗಳು), ಮತ್ತು ಖರ್ಚುವೆಚ್ಚಗಳು.

ಇ-ಹರಾಜಿನ ವಿವರಗಳು

I. **ಇ–ಹರಾಜಿನ ವೆಬ್‌ಸೈಟ್:** https://eximbank.auctiontiger.net
II. **ಹರಾಜಿನ ದಿನಾಂಕ:** ಅಗಸ್ಟ್ 5, 2025
III. **ಹರಾಜಿನ ಸಮಯ:** ಮಧ್ಯಾಹ್ನ 1.00 ರಿಂದ ಸಂಜೆ 4.00 ಗಂಟಯವರೆಗೆ ತಲಾ 8 ನಿಮಿಷಗಳ ಅನಿಯಮಿತ ವಿಸ್ತರಣೆಗಳೊಂದಿಗೆ
IV. **ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಮ್‌ಡಿ):** ₹1,12,50,000/- (ಒಂದು ಕೋಟಿ ಹನ್ನೆರಡು ಲಕ್ಷ ಹಾಗೂ ಐವತ್ತು ಸಾವಿರ ರೂಪಾಯಿಗಳು ಮಾತ್ರ)
V. **ಇಎಮ್‌ಡಿಯ ಠೇವಣಿಯ ವಿಧಾನ:**
ಎ) ‘‘ಎಕ್ಸ್‌ಪೋರ್ಟ್–ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ’’ A/c ನಂ HO00INR11011004, IFS ಕೋಡ್ EIBI0HO0001 ಹೆಸರಿನಲ್ಲಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ವರ್ಗಾವಣೆ ;ಅಥವಾ
ಬಿ) ‘‘ ಎಕ್ಸ್‌ಪೋರ್ಟ್–ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ’’ ದ ಹೆಸರಿನಲ್ಲಿ ಡಿಮಾಂಡ್ ಡ್ರಾಫ್ಟ್/ಪೇ ಆರ್ಡರ್ ಮೂಲಕ ,) ಎಕ್ಸ್‌ಪೋರ್ಟ್–ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ, 21ನೇ ಫ್ಲೋರ್, ಸೆಂಟರ್ –1 ಬಿಲ್ಡಿಂಗ್,ವರ್ಲ್ಡ್ ಟ್ರೇಡ್ ಸೆಂಟರ್ ಕಾಂಪ್ಲೆಕ್ಸ್, ಕಫ್ ಪರೇಡ್, ಮುಂಬೈ–400005 ರಲ್ಲಿ ಮುಂಬೈಯಲ್ಲಿ ಪಾವತಿಸಬಹುದು.
VI. **ಇಎಮ್‌ಡಿಯೊಂದಿಗೆ (ಬಡ್ಡಿಯನ್ನು ನೀಡದ) ಬಿಡ್‌ಗಾಗಿ ಆನ್‌ಲೈನ್ ಅರ್ಜಿಯ ಸಲ್ಲಿಕೆ :** ಜುಲೈ 02,2025 ಬೆಳಿಗ್ಗೆ 10 ರಿಂದ
VII. **ಇಎಮ್‌ಡಿಯೊಂದಿಗೆ ಬಿಡ್‌ಗಾಗಿ ಆನ್‌ಲೈನ್ ಅರ್ಜಿಯ ಸಲ್ಲಿಕೆಗಾಗಿ ಕೊನೆಯ ದಿನಾಂಕ:** ಜುಲೈ 31, 2025ರಂದು ಸಂಜೆ 6:00ರವರೆಗೆ.
VIII. **ಪ್ರಾಪರ್ಟಿಯ ಹಾಗೂ ಪ್ರಾಪರ್ಟಿಗೆ ಸಂಬಂಧಿಸಿದ ಡಾಕ್ಯುಮೆಂಟ್‌ಗಳ ಪರಿಶೀಲನೆಗಾಗಿ ದಿನಾಂಕ ಹಾಗೂ ಸಮಯ:** ಮುಂಚಿತ ಅಪಾಯಿಂಟ್‌ಮೆಂಟ್‌ನೊಂದಿಗೆ ಮಾತ್ರ , ಜುಲೈ 15, 2025 ರಿಂದ ಜುಲೈ 31, 2025ರವರೆಗೆ, ಮಧ್ಯಾಹ್ನ 1:00 ರಿಂದ ಸಂಜೆ 5:00ಗಂಟೆಯವರೆಗೆ.
IX. ಬಿಡ್ ಅಪವರ್ತ್ಯ: ₹2,50,000/- (ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)

ನಿಯಮಗಳು ಹಾಗೂ ನಿಬಂಧನೆಗಳು

1. ಸೆಕ್ಯೂರ್ಡ್ ಅಸೆಟ್‌ಗಳ ಮಾರಾಟವು ‘‘ ಎಲ್ಲಿದೆಯೋ ಅಲ್ಲಿ’’ ‘‘ ಇದ್ದಂತೆ’’ ‘‘ ಅಲ್ಲಿರುವ ಹಾಗೆ’’ ಹಾಗೂ ‘‘ ಯಾವುದೇ ಅವಲಂಬನೆ ಇಲ್ಲ’’ ಎಂಬ ಆಧಾರದ ಮೇಲೆ ಇರುತ್ತದೆ.
2. ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್ ಅನ್ನು ಸಲ್ಲಿಸುವ ಮೊದಲು ಹರಾಜಾದ ಪ್ರಾಪರ್ಟಿಯ ಶೀರ್ಷಿಕೆ, ಸ್ವರೂಪ,ವಿವರಣೆ,ಸ್ಥಿತಿ,ಹೊರೆ, ಹೊಣೆಗಾರಿಕೆ,ಶುಲ್ಕ,ಶಾಸನಬದ್ಧ ಬಾಕಿಗಳು ಮುಂತಾದವುಗಳ ಬಗ್ಗೆ ಹಾಗೂ ಪರಿಣಾಮ ಬೀರುವ ಕ್ಲೇಮ್‌ಗಳು/ಹಕ್ಕುಗಳು /ಬಾಕಿಗಳ ಬಗ್ಗೆ ಸಂಬಂಧಪಟ್ಟ ಎಸ್‌ಆರ್‌ಒ ಗಳೊಂದಿಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಇ–ಹರಾಜಿನ ಜಾಹೀರಾತು ಬ್ಯಾಂಕ್‌ನಿಂದ ಅಥವಾ ಬ್ಯಾಂಕ್ ಪರವಾಗಿ ಯಾವುದೇ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ ಹಾಗೂ ರೂಪಿಸುತ್ತದೆ ಎಂದು ಭಾವಿಸಲಾಗುವುದಿಲ್ಲ. ಪ್ರಾಪರ್ಟಿಯ ಭೌತಿಕ ತಪಾಸಣೆಯ ಬಗ್ಗೆ ಹೆಚ್ಚಿನ ವಿವರಗಳಿಗಾಗಿ, ಆಸಕ್ತ ಬಿಡ್ಡರ್‌ಗಳು ಶ್ರೀ. ತಿಲಕ್ ಕುಮಾರ್ ರಂಗನಾಥಪ್ಪ ಅವರನ್ನು ಫೋನ್ ನಂ +91 7506684572ರಲ್ಲಿ ಕಚೇರಿಯ ಸಮಯದಲ್ಲಿ ಬೆಳಿಗ್ಗೆ 10;00 ರಿಂದ ಸಂಜೆ 6:00 ಗಂಟೆಯವರೆಗೆ ಸಂಪರ್ಕಿಸಬಹುದು.
3. ಇ–ಹರಾಜು ಮಾರಾಟವನ್ನು ಬ್ಯಾಂಕ್‌ನ ಅನುಮೋದಿತ ಸೇವಾ ಒದಗಣೆದಾರರಾದ ಅಹಮದಾಬಾದ್‌ನ ಆಕ್ಷನ್ ಟೈಗರ್, ಅದರ ವೆಬ್‌ಸೈಟ್ website https://eximbank.auctiontiger.netನಲ್ಲಿ ‘‘ ಆನ್‌ಲೈನ್ ಇ– ಆಕ್ಷನ್ ’’ ಬಿಡ್ಡಿಂಗ್ ಮೂಲಕ ಮಾತ್ರ ನಡೆಸಲಾಗುತ್ತದೆ ಹಾಗೂ ನಿರೀಕ್ಷಿತ ಬಿಡ್‌ದಾರರು ಆಕ್ಷನ್ ಟೈಗರ್ ಮೊಬೈಲ್ ಅಪ್ಲಿಕೇಶನ್ (ಆ್ಯಂಡ್ರಾಯ್ಡ್) ಮೂಲಕ ಮಾರಾಟದ ವಿವರಗಳು ಹಾಗೂ ಬಿಡ್ಡಿಂಗ್ ಅನ್ನು ಸಹ ವೀಕ್ಷಿಸಬಹುದು. ಇ–ಆಕ್ಷನ್ ಬಿಡ್ ಫಾರ್ಮ್‌ಗಳು,ಘೋಷಣೆಗಳು, ಆನ್‌ಲೈನ್ ಮಾರಾಟದ ಸಾಮಾನ್ಯ ನಿಯಮಗಳು ಹಾಗೂ ನಿಬಂಧನೆಗಳನ್ನು ಒಳಗೊಂಡಿರುವ ಇ–ಆಕ್ಷನ್ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಯವಿಟ್ಟು ಓದಿರಿ, **(ಟೆಂಡರ್ ಡಾಕ್ಯೂಮೆಂಟ್)**ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ : www.eximbankindia.in.
4. ಮಾರಾಟವು ಇ–ಆಕ್ಷನ್ ನೋಟೀಸಿನಲ್ಲಿ ಸೇರಿಸಲಾದ ನಿಯಮಗಳು ಹಾಗೂ ನಿಬಂಧನೆಗಳು ಹಾಗೂ ಟೆಂಡರ್ ಡಾಕ್ಯೂಮೆಂಟ್ ಹಾಗೂ ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್, 2002ರೊಂದಿಗೆ ಓದಲಾದ ಸರ್ಫಾಸಿ ಆ್ಯಕ್ಟ್‌ಗೆ ಕಟ್ಟುನಿಟ್ಟಾಗಿ ಒಳಪಟಿರುತ್ತದೆ.
5. ಎಕ್ಸಿಮ್ ಬ್ಯಾಂಕ್ ತನ್ನ ಸ್ವಾತಂತ್ರ್ಯದಲ್ಲಿ ಯಾವುದೇ ಸಮಯದಲ್ಲಿ ಯಾವುದೇ ಕಾರಣವನ್ನು ನೀಡದೆ ಇ–ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸಬಹುದು.

ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್, 2002 ರ ರೂಲ್ 6(2),8(6) ಮತ್ತು 9(1)ರ ಅಡಿಯಲ್ಲಿ ಶಾಸನಬದ್ಧ 30 ದಿನಗಳ ಮಾರಾಟದ ನೋಟೀಸು .

ಸಾಲಗಾರರಿಗೆ ಇ–ಹರಾಜಿನ ದಿನಾಂಕದ ಮೊದಲು ನವೀಕೃತ (ಅಪ್–ಟು–ಡೇಟ್) ಬಡ್ಡಿ ಹಾಗೂ ಪೂರಕ ವೆಚ್ಚಗಳೊಂದಿಗೆ ಮೇಲೆ ನಮೂದಿಸಿದ ಮೊತ್ತವನ್ನು ಪಾವತಿಸಲು ಈಮೂಲಕ ಸೂಚಿಸಲಾಗಿದೆ, ವಿಫಲರಾದಲ್ಲಿ ಪ್ರಾಪರ್ಟಿಯನ್ನು ಹರಾಜು ಮಾಡಲಾಗುತ್ತದೆ/ಮಾರಾಟ ಮಾಡಲಾಗುತ್ತದೆ ಹಾಗೂ ಬಾಕಿಗಳು , ಯಾವುದಾದರೂ ಇದ್ದರೆ, ಬಡ್ಡಿ ಹಾಗೂ ವೆಚ್ಚದೊಂದಿಗೆ ವಸೂಲಿ ಮಾಡಲಾಗುತ್ತದೆ.

ಸ್ಥಳ: ಮುಂಬೈ
ದಿನಾಂಕ: ಜುಲೈ 01, 2025 **(ಅಧಿಕೃತ ಅಧಿಕಾರಿ)**

ಮಳೆಗಾಲದಲ್ಲಿ ವೈರಾಣುಗಳು ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಅವು ಶ್ವಾಸಕೋಶದ ಸಮಸ್ಯೆಗಳಿಗೆ ಕಾರಣವಾಗಬಹುದು. ಕುದಿಸಿ, ಆರಿಸಿದ ನೀರನ್ನು ಕುಡಿಯಿರಿ.

ಯಾವುದೇ ಸೋಂಕಿನಿಂದಲೂ ಕಿವಿಯ ಪೊರೆಗೆ ತೊಂದರೆ ಉಂಟಾಗಬಹುದು. ಆಗ ಕಿವಿ ಸೋರುವುದು, ಉರಿ, ನೋವು ಮುಂತಾದ ಅನೇಕ ಲಕ್ಷಣಗಳು ಕಾಣಿಸಿಕೊಳ್ಳಬಹುದು.

ಕಿವಿಗಳ ರಕ್ಷಣೆ ಒಂದು ಕಿವಿಮಾತು

• ಡಾ. ವಿಜಯಲಕ್ಷ್ಮಿ ಪಿ.

ನಮ್ಮ ಜ್ಞಾನೇಂದ್ರಿಯಗಳಲ್ಲಿ ಕಿವಿಯೂ ಒಂದು. ನಮ್ಮ ಸುತ್ತಮುತ್ತಲಿನ ಶಬ್ದದ ತಿಳಿವಳಿಕೆ ಬರುವುದು ಕಿವಿಯ ಮೂಲಕವೇ. ಪ್ರಮುಖವಾದ ವಾತ ಸ್ಥಾನಗಳಲ್ಲಿ ಇದೂ ಒಂದು. ಇದು ಶ್ರವಣಕ್ಕೂ, ಶರೀರದ ಸಮತೋಲನಕ್ಕೂ ಕಾರಣವಾಗುವ ಪ್ರಮುಖವಾದ ಅಂಗ.

ಕಿವಿಯನ್ನು ಹೊರಗಿವಿ (ಕರ್ಣ), ಒಳಗಿವಿ ಮತ್ತು ಇವೆರಡರ ಮಧ್ಯದ ನಡುಗಿವಿ ಎಂದು ವಿಭಾಗಿಸಬಹುದು. ತಲೆಯ ಪಕ್ಕದಲ್ಲಿ ಅಂಟಿಕೊಂಡಂತೆ ಕಾಣುವ ಕಿವಿಯ ಹಾಲೆ ಮತ್ತು ಒಳಗೆ ಹೋಗುವ ಶ್ರವಣನಾಳ ಎರಡೂ ಸೇರಿ ಹೊರಗಿವಿ ಎನ್ನಿಸಿಕೊಳ್ಳುತ್ತವೆ. ನಡುಗಿವಿಯನ್ನು ಒಂದು ಎಲುಬಿನ ಕೊಠಡಿ ಎಂದು ಹೇಳಬಹುದು. ಒಂದು ಕಡೆ ಕರ್ಣಪೊರೆ ಇದೆ. ಈ ಪೊರೆಯ ಒಳಭಾಗಕ್ಕೆ ನಡುಗಿವಿಯಲ್ಲಿ ಮೂರು ಪುಟಾಣಿ ಮೂಳೆಗಳು ಮಣಿಗಳಂತೆ ಕೂಡಿಕೊಂಡಿವೆ. ಧ್ವನಿತರಂಗಗಳು ಕರ್ಣಪೊರೆಗೆ ಅಪ್ಪಳಿಸಿದಾಗ ಇದು ಕಂಪಿಸಿ, ಆ ತರಂಗಗಳನ್ನು ಈ ಮೂರು ಪುಟಾಣಿ ಮೂಳೆಗಳ ಮೂಲಕ ದ್ರವ ತುಂಬಿರುವ ಒಳಗಿವಿಗೆ ಹಾಯಿಸುತ್ತದೆ. ಧ್ವನಿತರಂಗಗಳು ಒಳಗಿವಿಯ ದ್ರವದಲ್ಲಿ ಅಲೆಗಳನ್ನು ಉಂಟುಮಾಡಿ ಶ್ರವಣನರದ ಮೂಲಕ ಧ್ವನಿಯನ್ನು ಮಿದುಳಿಗೆ ಕೊಂಡೊಯ್ದು ಮುಟ್ಟಿಸುತ್ತದೆ. ಒಳಗಿವಿ ಮಿದುಳಿಗೆ ಸಂಪರ್ಕಿಸುವ ಭಾಗ. ಇವುಗಳಲ್ಲಿ ಯಾವುದೇ ಭಾಗಕ್ಕೆ ತೊಂದರೆಯಾದರೂ ಕಿವಿಯ ರೋಗಗಳು ಕಾಣಿಸಿಕೊಳ್ಳುತ್ತವೆ.

ಕಿವಿಯಲ್ಲಿ ರೋಗಗಳು ಉತ್ಪತ್ತಿಯಾಗಲು ಅನೇಕ ಕಾರಣಗಳಿರುತ್ತವೆ. ಕೆಲವು ಶಾರೀರಿಕ ಕಾರಣಗಳಾದರೆ ಕೆಲವು ಬಾಹ್ಯಕಾರಣಗಳು. ಪ್ರಪ್ರಥಮವಾಗಿ ಕಿವಿಯ ಶಬ್ದಗ್ರಹಣ ಸಾಮರ್ಥ್ಯವನ್ನು ವ್ಯತ್ಯಾಸಗೊಳಿಸುವುದು ಶಬ್ದದ ದುರುಪಯೋಗ, ಶಬ್ದಮಾಲಿನ್ಯ. ಶಬ್ದವನ್ನು ಕೇಳುವ ವಿಧಾನಗಳಲ್ಲಿ ಆಗುವ ವ್ಯತ್ಯಾಸ. ಸಾಮಾನ್ಯವಾಗಿ 60-70 ಡೆಸಿಬಲ್ ಪ್ರಮಾಣದ ಶಬ್ದವು ಕಿವಿಗೆ ತೊಂದರೆಯನ್ನು ಉಂಟುಮಾಡುವುದಿಲ್ಲ. 85 ಡೆಸಿಬಲ್‌ಗಳಿಗಿಂತ ಹೆಚ್ಚಿನ ಪ್ರಮಾಣದ ಶಬ್ದವನ್ನು ನಿರಂತರವಾಗಿ ಕೇಳುವುದು ಕಿವಿಯ ನೋವಿಗೆ ಕಾರಣವಾಗುವುದಲ್ಲದೆ, ಕಿವಿಯ ಶಬ್ದಗ್ರಹಣ ಸಾಮರ್ಥ್ಯವನ್ನೂ ನಿಧಾನವಾಗಿ ಕಡಿಮೆಮಾಡುತ್ತದೆ. ನಿರಂತರವಾಗಿ ಅತಿಕಡಿಮೆ ಡೆಸಿಬಲ್‌ನ ಶಬ್ದವನ್ನು ಕೇಳುವುದೂ ಕಿವುಡುತನಕ್ಕೆ, ಮಂಕುತನಕ್ಕೆ, ವಿವೇಚನಾರಾಹಿತ್ಯಕ್ಕೆ ಕಾರಣವಾಗಬಹುದು. ಇನ್ನು ಹೆಡ್ ಫೋನ್‌ಗಳ ನಿರಂತರ ಉಪಯೋಗವೂ ಕಿವಿಯ ಸಮಸ್ಯೆಗಳಿಗೆ ಕಾರಣವಾಗಬಹುದು. ಇವನ್ನು ಆಯುರ್ವೇದವು ಶಬ್ದದ ಅತಿಯೋಗ, ಹೀನಯೋಗ, ಮಿಥ್ಯಾಯೋಗವೆಂದು ಪರಿಗಣಿಸುತ್ತದೆ.

ಕಿವಿಯಲ್ಲಿ ಶಂಖನಾದದಂತೆ, ಗುಂಯ್ ಶಬ್ದ, ಸಮುದ್ರ ಭೋರ್ಗರೆದಂತೆ ಶಬ್ದ - ಇಂಥ ಶಬ್ದಗಳು ಸದಾಕಾಲ ರಿಂಗಣಿಸುವುದು ಒಂದು ರೋಗವೇ. ಇದಕ್ಕೆ ಕಾರಣ ಕೇವಲ ಶಬ್ದೇಂದ್ರಿಯದ ವಿಕೃತಿಯೇ ಅಗಿರಬೇಕಿಲ್ಲ. ಅಜೀರ್ಣ ಮುಂತಾದ ದೀರ್ಘಕಾಲೀನ ಸಮಸ್ಯೆಗಳಿಂದಲೂ, ರಕ್ತಹೀನತೆ ಮುಂತಾದ ಕಾರಣಗಳಿಂದಲೂ ಆಗಿರಬಹುದು. ಕಾರಣವನ್ನು ಅರಿತು ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯುವುದು ಅತ್ಯವಶ್ಯಕ.

ಶಬ್ದಗ್ರಹಣಕ್ಕೆ ಸಂಬಂಧಿಸಿದಂತೆ ಅಲ್ಲದೆ ನಮ್ಮ ದೇಹದಲ್ಲಾಗುವ ಆಂತರಿಕ ವಿಕೃತಿಗಳಿಂದಲೂ ಕಿವಿಯ ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೀತಿಯ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಹೊರಕಿವಿಯ ಕಿವಿಯ ಚರ್ಮಕ್ಕೆ ಸಂಬಂಧಿಸಿ, ಅಥವಾ ಕಿವಿಯ ಹಾಲೆಯ ಒಳಗಿರುವ ಮೃದ್ವಸ್ಥಿಯಲ್ಲಿ ಕಾಣುವ ವಿಕೃತಿಯಿಂದಲೂ ತೊಂದರೆಗಳು ಉತ್ಪನ್ನವಾಗಿರಬಹುದು. ಇವು ಕಿವಿಯ ಚರ್ಮದ ಸೋಂಕು, ಅಥವಾ ಅಭಿಘಾತದಿಂದ, ಭಾರವಾದ ಕಿವಿಯ ಆಭರಣಗಳನ್ನು ಧರಿಸುವುದರಿಂದ, ಕೆಲವು ಕೃತಕ ಆಭರಣಗಳ ಅಲರ್ಜಿಗಳಿಂದ, ಅನೇಕ ತೊಂದರೆಗಳು ಕಾಣಿಸಿಕೊಳ್ಳಬಹುದು. ಇವು ಶ್ರವಣನಾಳಕ್ಕೂ ಹರಡಬಹುದು. ಆದ್ದರಿಂದ ಕಿವಿಯ ಹಾಲೆಯ ಶುಭ್ರತೆ, ಅದರಲ್ಲೂ ಕಿವಿಯ ಹಿಂಭಾಗವನ್ನು ಶುಭ್ರವಾಗಿಟ್ಟುಕೊಳ್ಳಬೇಕು. ಹೀಗೆ ಸೋಂಕು ಒಳಗಿವಿಯವರೆಗೂ ಹರಡುವುದು ಕಿವುಡುತನಕ್ಕೂ ಕಾರಣವಾಗಬಹುದು. ಆದ್ದರಿಂದ ಆಯುರ್ವೇದವು ಕಿವಿಗೆ ನಿತ್ಯಾಭ್ಯಂಗ ಮಾಡಬೇಕೆಂದು ತಿಳಿಸುತ್ತದೆ.

ಶ್ರವಣನಾಳದಲ್ಲಿ ಗುಗ್ಗೆ ಕಟ್ಟುವುದು, ಗುಗ್ಗೆಯನ್ನು ಶುಭ್ರಗೊಳಿಸದೇ ಇರುವುದರಿಂದ ಗುಗ್ಗೆಯೂ ಸೋಂಕಿಗೆ ಕಾರಣವಾಗಬಹುದು. ಅಥವಾ ಗುಗ್ಗೆಯ ಒಣಗುವಿಕೆಯೂ ಕಿವಿನೋವು, ಉರಿ, ನವೆಗಳನ್ನು ಉತ್ಪತ್ತಿ ಮಾಡಬಹುದು. ಇದು ಕಿವಿಯ ಒಳಭಾಗದ ಕಿವಿಯ ಪೊರೆಗೂ ತೊಂದರೆಯನ್ನು ಉಂಟುಮಾಡಬಹುದು. ಗುಗ್ಗೆಕಡ್ಡಿ, ಹೇರ್ಪಿನ್, ಸೇಫ್ಟಿಪಿನ್, ಬೆಂಕಿಕಡ್ಡಿಯಂಥವನ್ನು ಕಿವಿಯ ಒಳಗೆ ಹಾಕುವುದರಿಂದ ಪೊರೆಗೆ ಅಪಾಯ ಸಂಭವಿಸಬಹುದು. ಮಕ್ಕಳು ಆಡುವಾಗ ಕಡ್ಡಿ ತೂರಿಸಿ ಪೊರೆಗೆ ಚುಚ್ಚಿಕೊಳ್ಳಬಹುದು. ಬಲವಾಗಿ ಪೆಟ್ಟು ಬಿದ್ದಾಗ ಶ್ರವಣನಾಳದಲ್ಲಿರುವ ಗಾಳಿ ಪೊರೆಗೆ ಅಪ್ಪಳಿಸಿ ಅಘಾತವಾಗಬಹುದು. ಭಾರೀ ಸದ್ದಿನ ಧ್ವನಿತರಂಗಳಿಂದಲೂ ಪೊರೆ ಒಡೆಯುವುದು ಸಾಧ್ಯ. ಶ್ರವಣನಾಳದಲ್ಲಿರುವ ಗಾಳಿಯು ಅಕಸ್ಮಾತ್ತಾಗಿ ಹೊರಗೆ ಸೆಳೆದಾಗಲೂ ಇದೇ ರೀತಿಯ ಅಪಾಯ ಸಂಭವಿಸಬಹುದು. ನಡುಗಿವಿಯ ಚಾವಣಿಯಲ್ಲಿ ಹಾಯುವ 'ಪೀಟ್ರಸ್' ಎಲುಬಿನ ಭಾಗ ಏಟಿನಿಂದ ಒಡೆದರೆ ಪೊರೆಯ ಮೇಲ್ಭಾಗ ಹರಿಯಬಹುದು.

ಯಾವುದೇ ಸೋಂಕಿನಿಂದಲೂ ಕಿವಿಯ ಪೊರೆಗೆ ತೊಂದರೆ ಉಂಟಾಗಬಹುದು. ಆಗ ಕಿವಿ ಸೋರುವುದು, ಉರಿ, ನೋವು ಮುಂತಾದ ಅನೇಕ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಹೀಗೆ ಯಾವುದೇ ಕಾರಣದಿಂದಾಗಲೀ ಪೊರೆ ಒಡೆದರೆ ತತ್‌ಕ್ಷಣ ಕಿವಿಗೆ ಹತ್ತಿಯನ್ನು ತುರುಕಿ, ವ್ಯಕ್ತಿ ವಿಶ್ರಾಂತಿಯನ್ನು ಪಡೆಯಬೇಕು. ಪಿಚಕಾರಿಯಂಥವನ್ನು ಕಿವಿಯ ಒಳಗೆ ಹಾಕುವಂಥವನ್ನು ಮಾಡಬಾರದು. ಆದಷ್ಟು ಬೇಗ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆಯನ್ನು ಪಡೆಯಬೇಕು.

ಇನ್ನು ಕಿವಿ, ಮೂಗು, ಕಣ್ಣು, ಗಂಟಲಿಗೆ ಸಂಪರ್ಕ ಕಲ್ಪಿಸುವ ನಾಳವೆಂದರೆ 'ಈಸ್ಟೇಷಿಯನ್ ನಾಳ'. ಇದರ ಮೂಲಕ ಶಿರಸ್ಸಿನ ಇತರೆ ಭಾಗಗಳಲ್ಲಿ ಉತ್ಪನ್ನವಾಗುವ ತೊಂದರೆಗಳೂ ಕಿವಿಯ ರೋಗಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಶಿರೋಭಾಗದ ಸಮಸ್ಯೆಗಳನ್ನು ಸೂಕ್ತವಾಗಿ ಗಮನಿಸಿ ಚಿಕಿತ್ಸೆಯನ್ನು ಪಡೆಯಬೇಕು.

ತಲೆ ತಿರುಗುವಿಕೆ; ಇದು ಸಾಮಾನ್ಯವಾಗಿ ಆಹಾರದ ಕೊರತೆ ಇದ್ದಲ್ಲಿ, ರಕ್ತ ಕಡಿಮೆ ಇದ್ದಲ್ಲಿ, ತಲೆಯಲ್ಲಿ ರಕ್ತದ ಒತ್ತಡ ಹೆಚ್ಚಿದಾಗ ಕಂಡುಬರುತ್ತದೆ. ಆದರೆ ಇದಕ್ಕೆ ಮತ್ತೊಂದು ಮುಖ್ಯ ಕಾರಣ ಕಿವಿಯಲ್ಲಿರುವ ಅತಿ ಚಿಕ್ಕದಾದ ಮೂರು ಮೂಳೆಗಳಲ್ಲಿ ಆಗುವ ಸಮತೋಲನದ ವ್ಯತ್ಯಾಸ.

ಹೀಗೆ ಶರೀರದಲ್ಲಾಗುವ ಬದಲಾವಣೆಗಳು ಕಿವಿಯ ಆರೋಗ್ಯದ ಮೇಲೂ, ಕಿವಿಯ ಆರೋಗ್ಯವೂ ಶಿರಸ್ಸಿನ ಆರೋಗ್ಯದ ಮೇಲೂ ಪರಸ್ಪರ ಅವಲಂಬಿತವಾಗಿರುತ್ತವೆ. ಆದ್ದರಿಂದ ಅತಿಮುಖ್ಯವಾದ ಅಂಗವಾದ ಕಿವಿಯ ರಕ್ಷಣೆ ಅತ್ಯವಶ್ಯಕ. ಇದಕ್ಕಾಗಿ ಅಯುರ್ವೇದವು ನಿತ್ಯವೂ ಕಿವಿಗೆ ಎಣ್ಣೆ ಹಚ್ಚುವುದನ್ನು ಅತ್ಯವಶ್ಯಕ ಎಂಬ ಕಿವಿಮಾತನ್ನು ಹೇಳುತ್ತದೆ.

ಮನವೇ ಬಲ ಮನೆಯೇ ಬೆಂಬಲ

ಮನ ಮತ್ತು ಮನೆ ಪರಸ್ಪರ ಅವಲಂಬಿತ, ಪೋಷಕ. ದೃಢ ಮನಸ್ಸು ಮನೆಯನ್ನು ಸುಭದ್ರಗೊಳಿಸುತ್ತದೆ; ಸುಭದ್ರ ಮನೆ ದೃಢ ಮನಸ್ಸನ್ನು ರೂಪಿಸುತ್ತದೆ.

• ರಘು ವಿ.

'ಅಂತಃಶಕ್ತಿಯೆ ಸರ್ವಶಕ್ತಿ,' ಎಂದಿದ್ದಾರೆ, ಚಿಂತಕರು. ಮಾನವಜೀವನದ ಪಯಣದಲ್ಲಿ ಎದುರಾಗುವ ಬಿರುಗಾಳಿಗಳು, ಕುಸಿತಗಳು, ಸವಾಲುಗಳನ್ನು ಎದುರಿಸಲು ನಮ್ಮೊಳಗಿರುವ ಅದ್ಭುತ ಶಕ್ತಿಯೇ 'ಮನ'ವಾದರೆ, ಆ ಶಕ್ತಿಗೆ ರಕ್ಷಣೆ, ನೆಚ್ಚಳಿಕೆ, ಚೈತನ್ಯವನ್ನು ನೀಡುವ ಸುರಕ್ಷಿತ ಬಂದರು 'ಮನೆ'.

ಸಾವಿರಾರು ವರ್ಷಗಳ ಸಾಮಾಜಿಕ-ಸಾಂಸ್ಕೃತಿಕ ವಿಕಾಸದ ನಡುವೆಯೂ ಮಾನವನ ಬೆನ್ನೆಲುಬಾಗಿ ನಿಂತಿರುವ ಎರಡು ಸ್ತಂಭಗಳಿವೆ: 'ಮನಸ್ಸು' (ಅಂತರಂಗದ ಬಲ) ಮತ್ತು 'ಮನೆ' (ಬಾಹ್ಯ ಬೆಂಬಲದ ಕೋಟೆ). ಇವೆರಡರ ಸಮನ್ವಯವೇ ಸುಖ-ಶಾಂತಿ-ಯಶಸ್ಸಿನ ರಹಸ್ಯ. ಮನ ಮತ್ತು ಮನೆ ಎರಡೂ ಒಂದಕ್ಕೊಂದು ಪೂರಕ.

ಮನವೇ ಮೂಲಭೂತ ಶಕ್ತಿ

ನಮ್ಮ ವಿಜಯ-ಪರಾಜಯಗಳು ಅಂತಿಮವಾಗಿ ನಮ್ಮ ಮನಸ್ಸಿನ ಸ್ಥಿತಿಯನ್ನೇ ಅವಲಂಬಿಸಿವೆ. ಉಪನಿಷತ್ತುಗಳು ಇದನ್ನು ಅತ್ಯಂತ ಸುಂದರವಾಗಿ ಹೇಳಿವೆ: 'ಯೇನಾಕೇನ ಪ್ರತಿಭಾತಿ ತಜ್ಜ ಜೀವಃ' (ಯಾವುದರಿಂದ ಈ ಜಗತ್ತೆಲ್ಲಾ ಪ್ರಕಾಶಿಸುತ್ತದೆಯೋ, ಅದೇ ಜೀವ) ಎಂಬ ಶ್ವೇತಾಶ್ವತರೋಪನಿಷತ್ತಿನ ಮಾತನ್ನು ಗಮನಿಸಿ. ಪ್ರಪಂಚವನ್ನು ಅರ್ಥೈಸುವ, ಅನುಭವಿಸುವ, ಸವೆಯುವ ಶಕ್ತಿ ನಮ್ಮ ಮನಸ್ಸಿನಲ್ಲಿಯೇ ನೆಲೆಸಿದೆ. ಶ್ರೀಮದ್ಭಗವದ್ಗೀತೆ ಸ್ಥಿತಪ್ರಜ್ಞನ ವಿವರಣೆಯಲ್ಲಿ ಮನಸ್ಸನ್ನು ಜಯಿಸುವುದರ ಮಹತ್ವವನ್ನು ಘೋಷಿಸುತ್ತದೆ. ಮನಸ್ಸು ದೃಢವಾಗಿದ್ದರೆ, ಅದರಲ್ಲಿ ನಂಬಿಕೆ ಮೂಡಿದ್ದರೆ, ದಾರಿ ಕಠಿಣವಾದರೂ ಅದನ್ನು ದಾಟಲು ಶಕ್ತಿ ಸಿಗುತ್ತದೆ. ನಮ್ಮ ಆಂತರಿಕ ಶ್ರದ್ಧೆ ಮತ್ತು ದೃಢ ನಿಶ್ಚಯವೇ ನಮ್ಮ ನಿಜವಾದ ಬಲ.

ಮನೆಯೇ ನೆಲೆಯೂ ಆಶ್ರಯವೂ

ಆದರೆ, ಈ ಆಂತರಿಕ ಬಲವನ್ನು ಕಾಪಾಡಿಕೊಳ್ಳಲು, ಅದು ಅಂಕುರಿಸಲು, ಬೆಳೆಯಲು, ಬಿರುಗಾಳಿಗಳಲ್ಲಿ ನಿಲ್ಲಲು ಒಂದು ಸುರಕ್ಷಿತ, ಪ್ರೀತಿಯಿಂದ ತುಂಬಿದ ಆಶ್ರಯದ ಅಗತ್ಯವಿದೆ. ಅದೇ ಮನೆ. ಗಿಬ್ರಾನ್ ಹೇಳುತ್ತಾನೆ, 'ಮನೆ ಎಂಬುದು ನಿಮ್ಮ ವಿಸ್ತೃತ ದೇಹ. ಇದು ಹಗಲಿನಲ್ಲಿ ಬೆಳೆದು ಇರುಳಿನ ನೀರವದಲ್ಲಿ ಮಲಗಿರುತ್ತದೆ'. ಅವನು ಮನೆಯ ರೂಪಕವನ್ನು ಮುದುವರೆಸಿ ಮನೆಗೂ ಕನಸಿದೆ, ಆ ಕನಸಿನ ಕಾರಣದಿಂದಲೇ ಅದರಿಂದ ಹೊರನಡೆದು ಜಗತ್ತನ್ನು ಅರಸುತ್ತೇವೆ ಎಂದಿದ್ದಾನೆ. ಮನೆ ಎಂದರೆ ಕೇವಲ ಗೋಡೆಗಳು ಮತ್ತು ಚಾವಣಿಯಲ್ಲ; ಅದು ಪ್ರೀತಿ, ತ್ಯಾಗ, ಸ್ವೀಕಾರ, ಬೆಂಬಲ ಮತ್ತು ಸಂಪ್ರದಾಯಗಳಿಂದ ನೇಯ್ದ ಭಾವನಾತ್ಮಕ ಬಾಂಧವ್ಯದ ನೆಲೆ. ಅಲ್ಲಿ ನಾವು ನಮ್ಮ ನಿಜಸ್ವರೂಪವನ್ನು ಬಹಿರಂಗಪಡಿಸಬಹುದು, ದುಃಖವನ್ನು ಹಂಚಿಕೊಳ್ಳಬಹುದು, ಸಂತೋಷವನ್ನು ವರ್ಧಿಸಿಕೊಳ್ಳಬಹುದು. ಸಂಸ್ಕೃತಿಯ ಹರವು, ಪೂರ್ವಜರ ಬುದ್ಧಿವಾದ, ಕುಟುಂಬದ ಬೆಂಬಲ – ಇವೆಲ್ಲವೂ ಮನೆಗೆ ಕೊಡುಗೆ.

ಪರಸ್ಪರ ಪೋಷಿತ

ಮನ ಮತ್ತು ಮನೆ ಪರಸ್ಪರ ಅವಲಂಬಿತ, ಪೋಷಕ. ದೃಢ ಮನಸ್ಸು ಮನೆಯನ್ನು ಸುಭದ್ರಗೊಳಿಸುತ್ತದೆ; ಸುಭದ್ರ ಮನೆ ದೃಢ ಮನಸ್ಸನ್ನು ರೂಪಿಸುತ್ತದೆ. ಒಂದು ಕುಸಿದರೆ ಇನ್ನೊಂದು ಸಹ ಕುಸಿಯುವ ಅಪಾಯ. ಒಂದು ಶ್ರೀಮಂತವಾದರೆ ಇನ್ನೊಂದು ಅದರಿಂದ ಪ್ರಭಾವಿತವಾಗುತ್ತದೆ. ಸಾಂಪ್ರದಾಯಿಕವಾಗಿ, ನಮ್ಮ ಮನೆಗಳು ಧಾರ್ಮಿಕ ಆಚರಣೆಗಳು, ಹಬ್ಬಗಳು, ಕಥಾವಾಚನಗಳ ಮೂಲಕ ಮಕ್ಕಳ ಮನಸ್ಸಿನಲ್ಲಿ ನೈತಿಕತೆ, ಶಿಸ್ತು ಮತ್ತು ಸಮುದಾಯ ಭಾವನೆಯ ಬೀಜಗಳನ್ನು ನೆಡುತ್ತಿದ್ದವು; ಆಂತರಿಕ ಬಲದ ಅಡಿಪಾಯವನ್ನು ರಚಿಸುತ್ತಿದ್ದವು. ಇಂದು, ಈ ಸಂಪರ್ಕಗಳು ಮೊಟಕಾಗುತ್ತಿರುವುದು ವಿಷಾದನೀಯ. ಕವಿ ಗೋಪಾಲಕೃಷ್ಣ ಅಡಿಗರು ತಮ್ಮ 'ಮನೆ' ಪದ್ಯದಲ್ಲಿ ಹೇಳುವಂತೆ: 'ಮನುಷ್ಯನಿಗೆ ಮನೆಯೊಂದು ಬೇಕು; ಬೇರೊಂದು ಮನೆಯೊಳಗೆ ಜೀವನ ಸಾಗಿಸುವುದು ಹೇಗೆ?' ಒಂದು ಸುಭದ್ರ ಮನೆ, ಸದಸ್ಯರು ಪರಸ್ಪರ ಕೇಳಿಕೊಳ್ಳುವ, ಗೌರವಿಸುವ, ಬೆಂಬಲಿಸುವ ಮನೆ, ವ್ಯಕ್ತಿಯ ಮನಸ್ಸಿಗೆ ಅಗಾಧ ಧೈರ್ಯವನ್ನು ನೀಡುತ್ತದೆ. ಅದೇ ರೀತಿ, ಪ್ರತಿ ಕುಟುಂಬದ ಸದಸ್ಯನ ವೈಯಕ್ತಿಕ ದೃಢತೆ, ಆಶಾವಾದ ಮತ್ತು ಜವಾಬ್ದಾರಿಯ ಭಾವನೆಯೇ ಕುಟುಂಬದ ಶಕ್ತಿಯ ಆಧಾರ.

ಸವಾಲುಗಳು–ಪರಿಹಾರಗಳು

ಆಧುನಿಕ ಜಗತ್ತಿನ ವೇಗ, ವೈಯಕ್ತಿಕತೆ, ಒಂಟಿತನ, ಆರ್ಥಿಕ ಒತ್ತಡಗಳು – ಇವೆಲ್ಲವೂ ಮನಸ್ಸಿನ ಶಾಂತಿಗೂ ಮನೆಯ ಸುಭದ್ರತೆಗೂ ಸವಾಲು ಹಾಕುತ್ತಿವೆ. ನಮ್ಮ ಆಂತರಿಕ ಶಾಂತಿ ಮತ್ತು ಮನೆಯ ಸಾಮರಸ್ಯವನ್ನು ಕಾಪಾಡಿಕೊಳ್ಳುವುದೇ ಮಹಾ ಸಾಧನೆ. ಮನೆ ಈ ಭಾವನೆಗಳಿಗೆ ಪೋಷಕ ವಾತಾವರಣವನ್ನು ಒದಗಿಸುತ್ತದೆ. 'ಮನವೇ ಬಲ, ಮನೆಯೇ ಬೆಂಬಲ' ಎಂಬುದು ಜೀವನದ ಸಾರವತ್ತಾದ ಸತ್ಯ. ನಮ್ಮೊಳಗಿನ ಅಚಲವಾದ, ದಿವ್ಯವಾದ ಶಕ್ತಿಯಾದ ಮನವನ್ನು ನಾವು ಅರಿತುಕೊಂಡು, ಅದನ್ನು ಬೆಳೆಸಿಕೊಳ್ಳಬೇಕು. ಅದೇ ಸಮಯದಲ್ಲಿ, ನಮ್ಮ ಮನೆಗಳನ್ನು ಪ್ರೀತಿ, ಗೌರವ, ಪರಸ್ಪರ ಬೆಂಬಲ, ಮತ್ತು ಸುರಕ್ಷತೆಯಿಂದ ತುಂಬಿಸಿ, ಅವುಗಳನ್ನು ನಿಜವಾದ 'ಮಂದಿರ'ಗಳಾಗಿ ಮಾರ್ಪಡಿಸಿಕೊಳ್ಳಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

5. ಉದ್ದವು ಅಗಲಕ್ಕಿಂತ 4m ಹೆಚ್ಚಾಗಿರುವ ಆಯತಾಕಾರದ ಒಂದು ಹೂದೋಟದ ಸುತ್ತಳತೆಯ ಅರ್ಧವು 36m. ಹೂದೋಟದ ಅಳತೆಗಳನ್ನು ಕಂಡುಹಿಡಿಯಿರಿ

ಪರಿಹಾರ:– (......ಹಿಂದಿನ ಸಂಚಿಕೆಯಿಂದ)

$y + x = 36,\ y = 36 - x$

x	0	36	16
y	36	0	20

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳರೇಖೆಗಳು (20, 16) ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತದೆ ಎಂದು ನಕ್ಷೆಯಲ್ಲಿ ಗಮನಿಸಬಹುದು
ಆದ್ದರಿಂದ $x = 20$, ಮತ್ತು $y = 16$
ಆದ್ದರಿಂದ ಆಯತಾಕರದ ಹೂದೋಟದ ಉದ್ದ ಮತ್ತು ಅಗಲ ಕ್ರಮವಾಗಿ 20m ಮತ್ತು 16m ಆಗಿವೆ

6) ರೇಖಾತ್ಮಕ ಸಮೀಕರಣ $2x + 3y - 8 = 0$ ಯನ್ನು ನೀಡಲಾಗಿದೆ. ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳನ್ನು ಬರೆಯಿರಿ, ಹೇಗೆಂದರೆ ಉಂಟಾದಂತಹ ಜೋಡಿಗಳ ರೇಖಾಗಣಿತೀಯ ಪ್ರತಿನಿಧಿಸುವಿಕೆಯು ಈ ಕೆಳಗಿನಂತಿರಬೇಕು.

(i) ಛೇದಿಸುವ ರೇಖೆಗಳು (ii) ಸಮಾಂತರ ರೇಖೆಗಳು
(iii) ಐಕ್ಯಗೊಳ್ಳುವ ರೇಖೆಗಳು

ಪರಿಹಾರ:– (1) ದತ್ತ ರೇಖಾತ್ಮಕ ಸಮೀಕರಣ $2x + 3y - 8 = 0$
$a_1x + b_1y + C_1 = 0$ ಮತ್ತು $a_2x + b_2y + C_2 = 0$ ರೇಖೆಗಳು ಛೇಧಿಸಬೇಕಾದರೆ ಅವುಗಳು $(a_1/a_2) \neq (b_1/b_2)$ ಎಂಬ ನಿಯಮವನ್ನು ಸರಿದೂಗಿಸಬೇಕು.
ಆದ್ದರಿಂದ ಮತ್ತೊಂದು ರೇಖಾತ್ಮಕ ಸಮೀಕರಣ $3x + 7y - 15 = 0$, ಆಗಿರಬಹುದು ಏಕೆಂದರೆ $(a_1/a_2) = 2/3$ ಮತ್ತು $(b_1/b_2) = 3/7$ $(C_1/C_2) = -8/-15 = 8/15$
(ii) ದತ್ತ ರೇಖಾತ್ಮಕ ಸಮೀಕರಣ $2x + 3y - 8 = 0$
$a_1x + b_1y + C_1 = 0$ ಮತ್ತು $a_2x + b_2y + C_2 = 0$ ರೇಖೆಗಳು ಸಮಾಂತರವಾಗಿ ಬೇಕಾದರೆ ಅವುಗಳು $(a_1/a_2) = (b_1/b_2) \neq (C_1/C_2)$ ಎಂಬ ನಿಯಮವನ್ನು ಸರಿದೂಗಿಸಬೇಕು.
ಆದ್ದರಿಂದ ಮತ್ತೊಂದು ರೇಖಾತ್ಮಕ ಸಮೀಕರಣ $4x + 6y - 9 = 0$, ಆಗಿರಬಹುದು ಏಕೆಂದರೆ $(a_1/a_2) = 2/4 = ½$, $(b_1/b_2) = 3/6 = 1/2$ $(C_1/C_2) = -8/9$
(iii) ದತ್ತ ರೇಖಾತ್ಮಕ ಸಮೀಕರಣ $2x + 3y - 8 = 0$
$a_1x + b_1y + C_1 = 0$ ಮತ್ತು $a_2x + b_2y + C_2 = 0$ ರೇಖೆಗಳು ಐಕ್ಯಗೊಳ್ಳಬೇಕಾದರೆ ಅವುಗಳು $(a_1/a_2) = (b_1/b_2) = (C_1/C_2)$ ಎಂಬ ನಿಯಮವನ್ನು ಸರಿದೂಗಿಸಬೇಕು.
ಆದ್ದರಿಂದ ಮತ್ತೊಂದು ರೇಖಾತ್ಮಕ ಸಮೀಕರಣ $6x + 9y - 24 = 0$, ಆಗಿರಬಹುದು ಏಕೆಂದರೆ $(a_1/a_2) = 2/6 = 1/2$, $(b_1/b_2) = 3/9 = 1/3$ $(C_1/C_2) = -8/-24 = 1/3$

7) $x - y + 1 = 0$ ಮತ್ತು $3x + 2y - 12 = 0$ ಸಮೀಕರಣಗಳ ನಕ್ಷೆಗಳನ್ನು ಎಳೆಯಿರಿ. ಈ ರೇಖೆಗಳು ಮತ್ತು x - ಅಕ್ಷದಿಂದ ಉಂಟಾಗುವ ತ್ರಿಭುಜದ ಶೃಂಗಬಿಂದುಗಳ ನಿರ್ದೇಶಾಂಕಗಳನ್ನು ನಿರ್ಧರಿಸಿರಿ ಹಾಗೂ ತ್ರಿಕೋನೀಯ ವಲಯವನ್ನು ಛಾಯೆಗೊಳಿಸಿರಿ.

ಪರಿಹಾರ:– $x - y + 1 = 0$ ಮತ್ತು $3x + 2y - 12 = 0$.

$x - y + 1 = 0$ ಅಥವಾ $x = -1 + y$

x	0	1	2
y	1	2	3

$3x + 2y - 12 = 0$ ಅಥವಾ $x = (12 - 2y)/3$

x	4	2	0
y	0	3	6

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ದತ್ತ ಎರಡು ಸರಳ ರೇಖೆಗಳು ಮತ್ತು x ಅಕ್ಷದಿಂದ ತ್ರಿಭುಜ ರೂಪಗೊಂಡಿದೆ ತ್ರಿಭುಜದ ಶೃಂಗಬಿಂದುಗಳ ನಿದೇಶಾಂಕಗಳು (2, 3), (−1, 0), ಮತ್ತು (4, 0). ಆಗಿವೆ

ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸುವ ಬೀಜಗಣಿತೀಯ ವಿಧಾನಗಳು

ಕೆಳಗಿನ ಸಮೀಕರಣಗಳ ಜೋಡಿಯನ್ನು ಆದೇಶ ವಿಧಾನದ ಮೂಲಕ ಬಿಡಿಸಿರಿ.

$$7x - 15y = 2 \ldots\ldots (1)$$
$$x + 2y = 3 \ldots\ldots (2)$$

ಪರಿಹಾರ: ಹಂತ 1: ನಾವು ಎರಡು ಸಮೀಕರಣಗಳಲ್ಲಿ ಯಾವುದಾದರೂ ಒಂದನ್ನು ತೆಗೆದುಕೊಳ್ಳುತ್ತೇವೆ ಮತ್ತು ಒಂದು ಚರಾಕ್ಷರವನ್ನು ಮತ್ತೊಂದು ಚರಾಕ್ಷರದಲ್ಲಿ ವ್ಯಕ್ತಪಡಿಸುತ್ತೇವೆ. ನಾವೀಗ ಸಮೀಕರಣ (2)ನ್ನು ಪರಿಗಣಿಸೋಣ.

$$x + 2y = 3$$

ಇದನ್ನು ಹೀಗೆ ಬರೆಯುತ್ತೇವೆ. $x = 3 - 2y \ldots\ldots (3)$

ಹಂತ 2: x ನ ಬೆಲೆಯನ್ನು ಸಮೀಕರಣ (1)ರಲ್ಲಿ ಆದೇಶಿಸಿದಾಗ,

$$7(3 - 2y) - 15y = 2$$

ಅಂದರೆ $21 - 14y - 15y = 2$
ಅಂದರೆ, $-29y = -19$
ಆದ್ದರಿಂದ, $y = 19/29$ (ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

II PUC : PHYSICS
Chapter – 1
ELECTRIC CHARGES AND FIELDS

Problem:-
An infinite line charge produces a field of 9×10 N C^{-1} at a distance of 4 cm. Calculate the linear charge density.

Soln:- $E = \dfrac{\lambda}{2\pi \epsilon_0 r} = \dfrac{2\lambda}{4\pi \epsilon_0 r}$

$\therefore \lambda = \dfrac{4\pi \epsilon_0 r E}{2}$

$= \dfrac{1}{9 \times 10^9} \times \dfrac{4 \times 10^{-2} \times 9 \times 10^4}{2}$

$= 2 \times 10^{-7}$ Cm^{-1}.

Electric Field intensity due to uniformly charged infinite plane sheet (flat sheet of charge)

Consider a thin infinite plane sheet having uniform surface charge density (i.e. charged per unit area) σ.

To calculate the electric field intensity $\vec{E}$ at a point P distant r from the sheet, draw a Gaussian surface in the form of a ***closed cylinder (pill box)*** of length r on each side of sheet with end caps of area S.



Electric field $\vec{E}$ is perpendicular to the sheet and hence it is normal to the end caps I and II also.
Charge enclosed by the Gaussian surface,

$$q = \sigma S$$

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\sigma S}{\epsilon_0} \ldots\ldots\ldots (i)$$

Gaussian surface is divided into *3 parts* I, II & III. i.e., end caps and the curved surface of the cylinder is as shown in the figure above.
∴ eqn.(i) becomes,

$$\oint_I \vec{E}.d\vec{S} + \oint_{II} \vec{E}.d\vec{S} + \oint_{III} \vec{E}.d\vec{S} = \frac{\sigma S}{\epsilon_0} \ldots\ldots (ii)$$

Angle between $\vec{E}$ and $\vec{S}$ is 90^0 for the curved surface III.

In this case $\oint_{III} \vec{E}.d\vec{S} = E\,ds\cos 90^0 = 0.$

Hence eqn.(ii) becomes

$$\oint_I \vec{E}.d\vec{S} + \oint_{II} \vec{E}.d\vec{S} = \frac{\sigma S}{\epsilon_0}$$

Since angle between $\vec{E}$ & $d\vec{S}$ for surfaces I & II is zero, so,

$$\oint_I E\,ds\cos 0^0 + \oint_{II} E\,ds\cos 0^0 = \frac{\sigma S}{\epsilon_0} \text{ (or)}$$

$$\oint_I E\ ds + \oint_{II} E\ ds = \frac{\sigma S}{\epsilon_0}$$

Since electric field intensity E is constant at every point of the Gaussian surface so

$$\therefore E_I ds + E\oint_{II} ds = \frac{\sigma S}{\epsilon_0} \text{ (or) } ES + ES = \frac{\sigma S}{\epsilon_0}$$

$$\text{(or) } 2ES = \frac{\sigma S}{\epsilon_0}$$

$$\text{(or) } E = \frac{\sigma}{2\epsilon_0} \ldots\ldots\ldots (7)$$

In vector form, $\vec{E} = \dfrac{\sigma}{2\epsilon_0} n$, where n is a unit vector prependicular to plane of the sheet pointing away from it.

The electric field is directed away from the sheet if it is positively charged and it is directed towards the sheet if it is negatively charged.

Special Case:
If the plane sheet has a ***finite thickness,*** then charges on both sides of the sheet are to be considered.
Thus, eqn (i) is rewritten as

$$\oint \vec{E}.d\vec{S} = \frac{2\sigma S}{\epsilon_0} \text{ (or) } 2ES = \frac{2\sigma S}{\epsilon_0} \text{ i.e., } E = \frac{\sigma}{\epsilon_0}$$

Note: Electric field intensity due to an infinite sheet of charge is independent of the distance of the point of observation. It depends upon surface charge density and acts perpendicular to the sheet i.e. $E \propto \sigma$.

Problem:-
1. Find the surface charge density of a plane sheet of finite thickness having an electric field of 300 Vm^{-1} acting downwards near the surface of the sheet.
Soln:- Here, $E = 300$ Vm^{-1}

$$E = \frac{\sigma}{\epsilon_0} \Rightarrow \sigma = \epsilon_0 E$$

$$\therefore \sigma = 8.54 \times 10^{-12} \times 300$$

$$= 2.7 \times 10^{-9} \text{ cm}^2$$

Electric Field Intensity due to two infinite plane parallel sheets of charge



Consider two infinite plane parallel sheets A and B with uniform surface charge densities σ_1 and σ_2 respectively.

Let $\sigma_1 > \sigma_2 > 0$.

Electric field pointing from left to right (+ ve x direction) is taken as positive, while the electric field pointing from right to left (-ve x direction) is taken as negative.

There are three regions I, II and III, where electric field intensity is to be calculated.

We know that electric field intensity due to infinite sheet of charge at a point away from the sheet is given by *(Contd.........)*

ಚಟಿಕೆ ಸುದ್ದಿ

ಹುಲಿಗಳ ಸಾವು: ಆರೋಪಿಗಳು ವಶಕ್ಕೆ

ಚಾಮರಾಜನಗರ: ಹುಲಿಗಳಿಗೆ ವಿಷವಿಕ್ಕಿ ಕೊಂದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗಳನ್ನು ಸೋಮವಾರ ಹನೂರು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಪ್ರಕರಣದಲ್ಲಿ ತನಿಖೆಯ ಅಗತ್ಯವಿದ್ದು ವಶಕ್ಕೆ ನೀಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಾಧೀಶೆ ಕಾವ್ಯಶ್ರೀ ಜುಲೈ 3ರವರೆಗೆ ಆರೋಪಿಗಳನ್ನು ವಶಕ್ಕೆ ನೀಡಿ ಆದೇಶಿಸಿದರು.

ಪಿಯು ಪರೀಕ್ಷೆ–3: ಶೇ 22.78 ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ-3ರ ಫಲಿತಾಂಶ ಪ್ರಕಟವಾಗಿದ್ದು, ಶೇ 22.78 ಫಲಿತಾಂಶ ದೊರೆತಿದೆ.

ದ್ವಿತೀಯ ಪಿಯು ಪರೀಕ್ಷೆ-1 ಮತ್ತು ಪರೀಕ್ಷೆ-2ರಲ್ಲಿ ಅನುತ್ತೀರ್ಣರಾದ 71,716 ವಿದ್ಯಾರ್ಥಿಗಳು ಪರೀಕ್ಷೆ-3ಕ್ಕೆ ಹಾಜರಾಗಿ ದ್ದರು. 16,136 ಮಂದಿ ತೇರ್ಗಡೆಯಾಗಿದ್ದಾರೆ. ಫಲಿತಾಂಶ ಸುಧಾರಣೆಗಾಗಿ ಪರೀಕ್ಷೆ ಬರೆದ 17,398 ವಿದ್ಯಾರ್ಥಿಗಳಲ್ಲಿ 11,937 ವಿದ್ಯಾರ್ಥಿಗಳು ಅಂಕಗಳನ್ನು ಹೆಚ್ಚಿಸಿಕೊಂಡಿದ್ದಾರೆ. ಮೂರೂ ಪರೀಕ್ಷೆಗಳಿಂದ 5,66,636 ಮಂದಿ ಉತ್ತೀರ್ಣರಾಗಿದ್ದು, ತೇರ್ಗಡೆಯ ಪ್ರಮಾಣ ಶೇ 79.81ಕ್ಕೆ ಏರಿಕೆಯಾಗಿದೆ.

ವಿದ್ಯಾರ್ಥಿಗಳು ಮತ್ತು ಪೋಷಕರು ಫಲಿತಾಂಶವನ್ನು ಜುಲೈ 1ರ ಮಧ್ಯಾಹ್ನ 1 ಗಂಟೆಯ ನಂತರ https://karresults.nic.in ಜಾಲತಾಣದಲ್ಲಿ ಪಡೆಯಬಹುದು. ಮೂರನೇ ಪರೀಕ್ಷೆ ತೇರ್ಗಡೆಯಾದವರಿಗೂ ಈ ಬಾರಿ ಸಿಇಟಿ ಮೂಲಕ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಸಿಗಲಿದೆ.

ಆಂಧ್ರದಲ್ಲಿ ಅಪಘಾತ: ನಾಲ್ವರ ಸಾವು

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ಆಂಧ್ರಪ್ರದೇಶದ ಮದನಪಲ್ಲಿ ತಾಲ್ಲೂಕಿನ ಚನ್ನಮಾರಿಮಿಟ್ಟೆಯಲ್ಲಿ ಸೋಮವಾರ ಬೆಳಗಿನ ಜಾವ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬಾಗೇಪಲ್ಲಿಯ ನಾಲ್ವರು ಮೃತಪಟ್ಟಿದ್ದಾರೆ. ಒಂಬತ್ತು ಮಂದಿ ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ತಿರುಪತಿಯಿಂದ ಬಾಗೇಪಲ್ಲಿಗೆ ವಾಪಸ್ ಬರುತ್ತಿದ್ದ ಟೆಂಪೊಕ್ಕೆ ಲಾರಿ ಡಿಕ್ಕಿ ಹೊಡೆಯಿತು. ಬಾಗೇಪಲ್ಲಿಯ ಮೇಘರ್ಷ (17), ಹೊಸಹುಡ್ಯ ಗ್ರಾಮದ ಚರಣ್ (17), ಶ್ರಾವಣಿ (28) ಹಾಗೂ ಕುಂಬಾರಪೇಟೆಯ ಟಿ.ಟಿ ಚಾಲಕ ಮಂಜುನಾಥ್ ಮೃತಪಟ್ಟಿದ್ದಾರೆ.

ಅರಣ್ಯಾಧಿಕಾರಿಗಳಿಗೆ ಕಡ್ಡಾಯ ರಜೆ

ಮಲೆಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳ ಸಾವು ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳ ಸಾವು ಪ್ರಕರಣದಲ್ಲಿ ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಮೂವರು ಅರಣ್ಯಾಧಿಕಾರಿಗಳನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿ ಅರಣ್ಯ ಇಲಾಖೆಯು ಆದೇಶ ಹೊರಡಿಸಿದೆ.

ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಚಕ್ರಪಾಣಿ ವೈ, ಹನೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗಜಾನನ ಹೆಗಡೆ ಮತ್ತು ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ ಮಾದೇಶ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ.

‘ಈ ಐದು ಹುಲಿಗಳು ರಸ್ತೆಯಿಂದ ಕೇವಲ 100 ಮೀಟರ್ ದೂರದಲ್ಲಿ ಸತ್ತುಬಿದ್ದಿದ್ದರೂ ಎರಡು ದಿನಗಳವರೆಗೆ ಇಲಾಖೆಯ ಸಿಬ್ಬಂದಿ ಗಮನಕ್ಕೆ ಬಂದಿಲ್ಲದಿರುವುದು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿನ ಲೋಪವನ್ನು ತೋರಿಸುತ್ತದೆ. ಹುಲಿಗಳ ಕಳೇಬರ ಬಿದ್ದಿದ್ದ ಸ್ಥಳದಿಂದ 800 ಮೀಟರ್ ದೂರದಲ್ಲಿ ಬೇಟೆ ನಿಗ್ರಹ ಶಿಬಿರವಿದ್ದರೂ ಹತ್ಯೆ ತಡೆಗಟ್ಟಲಾಗಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಅರಣ್ಯ ಸಚಿವರು ಸೂಚಿಸಿದ್ದಾರೆ’ ಎಂದು ಕಡ್ಡಾಯ ರಜೆ ಆದೇಶ ಪತ್ರದಲ್ಲಿ ಅರಣ್ಯ ಪಡೆ ಮುಖ್ಯಸ್ಥರು ಉಲ್ಲೇಖಿಸಿದ್ದಾರೆ.

‘ಹೊರಗುತ್ತಿಗೆ ಸಿಬ್ಬಂದಿಗೆ ಮೂರು ತಿಂಗಳಿಂದ ವೇತನ ಭತ್ಯೆ ನೀಡಿಲ್ಲ ಎಂಬ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದರೂ ಸಂಬಂಧಿತ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ. ಪರಿಣಾಮವಾಗಿ ಅರಣ್ಯ ಗಸ್ತು ಕಾರ್ಯಕ್ಕೆ ಅಡಚಣೆಯಾಗಿದೆ. ಇದಕ್ಕೆಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ವಲಯ ಅರಣ್ಯಾಧಿಕಾರಿ, ಗಸ್ತು ಸಿಬ್ಬಂದಿ ಕರ್ತವ್ಯಲೋಪ ಕಾರಣ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ’ ಎಂದು ವಿವರಿಸಿದ್ದಾರೆ. ‘ಈ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲು ಅಧಿಕಾರಿಗಳನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ’ ಎಂದು ಆದೇಶಿಸಿದ್ದಾರೆ.

ಬದಲಿ ವ್ಯವಸ್ಥೆ:

ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ) ಸಂತೋಷ್ ಕುಮಾರ್ ಜಿ. (ಐಎಎಸ್) ಅವರಿಗೆ ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಮನೋಹರ್ ಅಹಿರೆ (ಐಎಎಸ್ ಪ್ರೊಬೇಷನರಿ) ಅವರಿಗೆ ಹನೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ (ತರಬೇತಿ) ಉಮಾಪತಿ ಕೆ. ಅವರಿಗೆ ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದ್ದು, ಅವರ ವಿರುದ್ಧ ಕಾನೂನು ರೀತ್ಯ ಕ್ರಮ ಆಗುತ್ತಿದೆ. ಯಾವುದೇ ಅಧಿಕಾರಿಯ ನಿರ್ಲಕ್ಷ್ಯ ಕಂಡುಬಂದಲ್ಲಿ, ಶಿಸ್ತುಕ್ರಮ ಜರುಗಿಸಲಾಗುವುದು. ಈಶ್ವರ ಬಿ.ಖಂಡ್ರೆ, ಅರಣ್ಯ ಸಚಿವ

ಸಾಗರದ ಗೌತಮಪುರದಲ್ಲಿ ಅಮಾನವೀಯ ಕೃತ್ಯ

ಕಸ ಹಾಕಿದ್ದನ್ನು ಪ್ರಶ್ನಿಸಿದ ವೃದ್ಧೆಗೆ ಹಲ್ಲೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ನಮ್ಮ ಮನೆ ಎದುರು ಕಸ ಚೆಲ್ಲಿದ್ದು ಏಕೆ’ ಎಂದು ಪ್ರಶ್ನಿಸಿದ ವೃದ್ಧೆಯೊಬ್ಬರನ್ನು ಪಕ್ಕದ ಮನೆಯವರೇ ಕಂಬಕ್ಕೆ ಕಟ್ಟಿ ಥಳಿಸಿರುವುದು ತಡವಾಗಿ ಗೊತ್ತಾಗಿದೆ.

ಜಿಲ್ಲೆಯ ಸಾಗರ ತಾಲ್ಲೂಕಿನ ಗೌತಮಪುರದಲ್ಲಿ ಜೂನ್ 24ರಂದು ಈ ಘಟನೆ ನಡೆದಿದೆ. ಹುಚ್ಚಮ್ಮ (76) ಕಸ ಹಾಕಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆಗೊಳಗಾದ ವೃದ್ಧೆ.

ಕಸ ತಂದು ಮನೆ ಎದುರು ಬಿಸಾಕಿದ್ದನ್ನು ಪ್ರಶ್ನಿಸಿದ್ದರಿಂದ ಕುಪಿತಗೊಂಡ ನೆರೆಮನೆಯ ಪ್ರೇಮಾ ಸಂಬಂಧಿಗಳಾದ ಮಂಜುನಾಥ್ ಹಾಗೂ ದರ್ಶನ್ ಜೊತೆ ಸೇರಿ ಸೇರಿ ಹುಚ್ಚಮ್ಮ ಅವರನ್ನು ಹಗ್ಗದಿಂದ ಕಂಬಕ್ಕೆ ಕಟ್ಟಿ ಹಾಕಿ ಕೈಗೆ, ಮುಖಕ್ಕೆ ಹೊಡೆದಿದ್ದಾರೆ.

ಸ್ಥಳೀಯರು ಬಂದು ಹುಚ್ಚಮ್ಮ ಅವರನ್ನು ಬಿಡಿಸಿದ್ದಾರೆ. ಜೂನ್ 25ರಂದು ಆನಂದಪುರ ಪೊಲೀಸ್ ಠಾಣೆಯಲ್ಲಿ ಹುಚ್ಚಮ್ಮ ಅವರ ಪುತ್ರ ಕಣ್ಣಪ್ಪ ದೂರು ದಾಖಲಿಸಿದ್ದಾರೆ.

ಸಾಗರ ತಾಲ್ಲೂಕಿನ ಗೌತಮಪುರದಲ್ಲಿ ವೃದ್ಧೆಯನ್ನು ಕಂಬಕ್ಕೆ ಕಟ್ಟಿ ಥಳಿಸಲಾಗಿದೆ

ಹಲ್ಲೆ ನಡೆಸಿದ ಆರೋಪದ ಮೇಲೆ ಆನಂದಪುರ ಠಾಣೆ ಪೊಲೀಸರು ಪ್ರೇಮಾ, ಮಂಜುನಾಥ್ ಹಾಗೂ ದರ್ಶನ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ವೃದ್ಧೆಯನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ವೃದ್ಧೆಯ ಮೇಲೆ ಹಲ್ಲೆ ನಡೆಸಿದ ಪ್ರೇಮಾ ಅವರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಪ್ರಕರಣದಲ್ಲಿ ಇನ್ನಿಬ್ಬರ ಪಾತ್ರದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಎಸ್ಪಿ ಜಿ.ಕೆ. ಮಿಥುನ್‌ಕುಮಾರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಭೂಸ್ವಾಧೀನ: ಸರ್ಕಾರಕ್ಕೆ ₹150 ಕೋಟಿ ವಂಚನೆ

ಒಂದನೇ ಪುಟದಿಂದ...

ತೋಟಗಾರಿಕಾ ಇಲಾಖೆ ಅಧಿಕಾರಿಗಳು ಸರ್ವೆ ಇಲಾಖೆ ಜತೆಗೆ ಜಂಟಿ ಸರ್ವೆ ನಡೆಸಿ, ಪ್ರತಿ ಮಾವಿನ ಮರಕ್ಕೆ ₹24,555 ಹಾಗೂ ಹುಣಸೆ ಮರಕ್ಕೆ ₹26,500 ನಿಗದಿಪಡಿಸಿ, ಸ್ವಾಧೀನವಾಗಲಿರುವ ಪ್ರದೇಶದ ತೋಟಗಾರಿಕಾ ಸಸಿ, ಮರಗಳಿಗೆ ತಗುಲುವ ಒಟ್ಟು ವೆಚ್ಚದ ಅಂದಾಜು ಪಟ್ಟಿಯನ್ನು ಕೆಐಎಡಿಬಿಗೆ ಸಲ್ಲಿಸಿತ್ತು.

‘ನಿಯಮದಂತೆ ಜಮೀನಿನ ಮೌಲ್ಯ ಹೊರತುಪಡಿಸಿ ಪ್ರತಿ ಜಮೀನಿನಲ್ಲಿ ಇರುವ ಗಿಡ, ಮರಗಳಿಗೆ ಪರಿಹಾರ ನೀಡುವಾಗ ಆ ಭಾಗದ ವಿಶೇಷ ಭೂಸ್ವಾಧೀನಾಧಿಕಾರಿ ಸ್ಥಳ ಪರಿಶೀಲನೆ ನಡೆಸಬೇಕು.

ಅಧಿಸೂಚನೆ ಹೊರಡಿಸುವ ವೇಳೆ ತೋಟಗಾರಿಕಾ ಇಲಾಖೆ ನಡೆಸಿದ ಜಂಟಿ ಸರ್ವೆಯಲ್ಲಿ ಸರ್ವೆ ನಂಬರ್‌ವಾರು ನಮೂದಿಸಿದ ಗಿಡ, ಮರಗಳನ್ನು ವಾಸ್ತವದಲ್ಲಿನ ಸ್ಥಿತಿ ಗತಿಯ ಜತೆ ತಾಳೆ ಹಾಕಬೇಕು. ನಂತರ ಪರಿಹಾರದ ಮೊತ್ತವನ್ನು ಆಯಾ ರೈತರಿಗೆ ಬಿಡುಗಡೆ ಮಾಡಬೇಕು. ಆದರೆ, ಕೆಐಎಡಿಬಿ ಹಾಗೂ ಸರ್ವೆ ಇಲಾಖೆಯ ಅಧಿಕಾರಿಗಳು ಮಧ್ಯವರ್ತಿಗಳು, ಕೆಲ ರೈತರ ಜತೆ ಶಾಮೀಲಾಗಿ ದುಪ್ಪಟ್ಟು ಪರಿಹಾರ ನೀಡಿದ್ದಾರೆ’ ಎಂದು ಲೋಕಾಯುಕ್ತ ರಾಜ್ಯ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಉಲ್ಲೇಖಿಸಿದೆ.

ವಂಚನೆಗೆ ಹಲವು ವಿಧಾನ

ಕೆಐಎಡಿಬಿ ಅಧಿಕಾರಿಗಳು, ಮಧ್ಯವರ್ತಿಗಳು, ಕೆಲ ರೈತರು ಶಾಮೀಲಾಗಿ ಹಲವು ವಿಧದಲ್ಲಿ ವಂಚನೆ ಎಸಗಿದ್ದಾರೆ.

ಮರ–ಗಿಡಗಳು ಇಲ್ಲದ ಖಾಲಿ ಜಮೀನಿನ ಮಾಲೀಕರಿಗೂ ಮರಮಾಲ್ಕಿ ಪರಿಹಾರ ನೀಡಿದ್ದಾರೆ. ಒಂದು ಎಕರೆಯಲ್ಲಿ ಇರಬಹುದಾದ ಗರಿಷ್ಠ ಮಾವು, ಹುಣಸೆ ಮರಗಳ ಮಾರ್ಗಸೂಚಿ (40ರಿಂದ 100 ಮರಗಳು) ಉಲ್ಲಂಘಿಸಿ ದುಪ್ಪಟ್ಟು ಗಿಡ, ಮರಗಳಿಗೆ ಪರಿಹಾರದ ಮೊತ್ತ ಜಮೆ ಮಾಡಿದ್ದಾರೆ.

ಆದರೆ, ಅಧಿಸೂಚನೆಗೂ ಮೊದಲೇ ತೋಟಗಾರಿಕಾ ಬೆಳೆ ಇರುವುದನ್ನು ದೃಢೀಕರಿಸಿದ್ದರೂ ತೋಟಗಾರಿಕಾ ಇಲಾಖೆ ನೀಡಿದ ಸರ್ವೆ ವರದಿಯಲ್ಲಿ ಮರ–ಗಿಡಗಳನ್ನು ನಮೂದಿಸಿದ್ದರೂ ಬಹುತೇಕ ರೈತರಿಗೆ ಕೆಐಎಡಿಬಿ ಮರಮಾಲ್ಕಿ ಪರಿಹಾರ ವಿತರಿಸಿಲ್ಲ ಎನ್ನುವ ಅಂಶಗಳನ್ನು ರೈತರು, ಸರ್ವೆ ನಂಬರ್, ಪಹಣಿಗಳ ಸಹಿತ ಪಟ್ಟಿ ಮಾಡಲಾಗಿದೆ.

ವಂಚನೆ ಪತ್ತೆ ಹೇಗೆ?

ರಾಜ್ಯದ ಯಾವುದೇ ಭಾಗದಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನದ ಅಧಿಸೂಚನೆ ಹೊರಡಿಸುವ ಮೊದಲು ಆ ಭಾಗದಲ್ಲಿ ಸರ್ವೆ ನಡೆಸಲಾಗುತ್ತದೆ. ಆಗ ಅಲ್ಲಿನ ಜಮೀನುಗಳ ವಿವರ, ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಮಾಹಿತಿ ಸಂಗ್ರಹಿಸಲಾಗುತ್ತದೆ. ಸ್ಯಾಟಲೈಟ್ ಮ್ಯಾಪ್, ಆಯಾ ವರ್ಷ ಗ್ರಾಮ ಲೆಕ್ಕಿಗರು ಸಲ್ಲಿಸಿದ ಬೆಳೆ ಸಮೀಕ್ಷಾ ವರದಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳ ವರದಿ, ಆಯಾ ವರ್ಷದ ಪಹಣಿಗಳನ್ನು ಸಂಗ್ರಹಿಸಲಾಗುತ್ತದೆ. ಪ್ರಾಥಮಿಕ ಜಂಟಿ ಸರ್ವೆಯ ನಂತರ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗುತ್ತದೆ.

ಒಮ್ಮೆ ಅಧಿಸೂಚನೆಯಾದರೆ ನಂತರ ಜಮೀನುಗಳಲ್ಲಿ ನೆಡುವ ಗಿಡ, ಮರಗಳಿಗೆ ಪರಿಹಾರ ಸಿಗುವುದಿಲ್ಲ. ಭಾವನಹಳ್ಳಿ ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಪಡೆಯಲು ಸಂಚು ರೂಪಿಸಿದ ಮಧ್ಯವರ್ತಿಗಳು, ಅಧಿಸೂಚನೆಯ ನಂತರ ಆಂಧ್ರಪ್ರದೇಶದ ರಾಜಮಂಡ್ರಿಯಿಂದ ಸಾವಿರಾರು ಸಂಖ್ಯೆಯಲ್ಲಿ ಮಾವು, ಹುಣಸೆ ಮತ್ತಿತರ ತೋಟಗಾರಿಕಾ ಸಸಿಗಳನ್ನು ತರಿಸಿ, ನೆಟ್ಟಿದ್ದಾರೆ. ಪರಿಹಾರ ವಿತರಣೆಗೂ ಮೊದಲು ನಡೆಸುವ ಸಮೀಕ್ಷೆಯಲ್ಲಿ ಅಧಿಕಾರಿಗಳ ಜತೆ ಶಾಮೀಲಾಗಿ ನಿಗದಿಗಿಂತ ₹150 ಕೋಟಿಗೂ ಅಧಿಕ ಮೊತ್ತ ಪಡೆದಿದ್ದಾರೆ.

ಅಧಿಸೂಚನೆಯ ಪೂರ್ವದ ಭೂ, ಬೆಳೆ ದಾಖಲೆಗಳಿಂದ ಈ ಅಂಶಗಳು ಸಾಬೀತಾಗಿವೆ ಎಂದು ಲೋಕಾಯುಕ್ತ ಮಾಹಿತಿ ನೀಡಿದೆ.

ತಂದೆ ಕಳೆದುಕೊಂಡ ಪುತ್ರನ ಗೋಳು: ಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರ ನಿರ್ಲಕ್ಷ್ಯದಿಂದ ತಂದೆ ಉಸಿರು ಚೆಲ್ಲಿದ್ದಾರೆ ಎಂಬ ಪುತ್ರನ ಪ್ರಲಾಪ ಮತ್ತು ನ್ಯಾಯಬದ್ಧ ಗೋಳನ್ನು ಆಲಿಸದೇ ಹೋದರೆ ಗತಿಯೇನು’ ಎಂದು ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ‘ಮಗ ನೀಡಿರುವ ದೂರಿನ ಬಗ್ಗೆ ನ್ಯಾಯಯುತ ತನಿಖೆಯ ಅಗತ್ಯವಿದೆ’ ಎಂದು ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

‘ನನ್ನ ತಂದೆ ಚಿಕಿತ್ಸೆ ಸಮಯದಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದಾರೆ. ಈ ಕುರಿತಾದ ದೂರಿನ ತನಿಖೆಗೆ ನಿರ್ದೇಶಿಸಬೇಕು’ ಎಂದು ಕೋರಿ ನಾಗರಬಾವಿಯ ವಿಕಾಸ್ ಎಂ.ದೇವ್ (31) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಎಂ.ಮಹದೇವ (65) ಅವರು ಕಳೆದ ವರ್ಷ ನಗರದ ಎರಡು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ನಂತರ ವೈದ್ಯಕೀಯ ನಿರ್ಲಕ್ಷ್ಯದಿಂದ ಸಾವಿಗೀಡಾಗಿದ್ದಾರೆ ಎಂಬ ದೂರಿನ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿ’ ಎಂದು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್‌ಗೆ ನ್ಯಾಯಪೀಠ ನಿರ್ದೇಶನ ನೀಡಿದೆ.

₹4.8 ಕೋಟಿ ಜಪ್ತಿ:ಸುಧಾಕರ್ ವಿರುದ್ಧದ ಪ್ರಕರಣಕ್ಕೆ ತಡೆ

ಲೋಕಸಭೆ ಚುನಾವಣೆ ವೇಳೆ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾದಾವರ ಗ್ರಾಮದಲ್ಲಿನ ಗೋವಿಂದಪ್ಪ ಅವರ ಮನೆಯಲ್ಲಿ ಚುನಾವಣಾ ಅಧಿಕಾರಿಗಳು ಜಪ್ತಿ ಮಾಡಿದೆ.ಐ ₹4.8 ಕೋಟಿ ಮೊತ್ತದ ಪ್ರಕರಣದಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ ಡಾ.ಕೆ.ಸುಧಾಕರ್ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅಪರಾಧ ಪರಿಗಣಿಸಿ ವಿಚಾರಣೆಗೆ ಮುಂದಾಗಿರುವ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನಮ್ಮ ವಿರುದ್ಧ ಹೊಸದಾಗಿ ಸಂಜ್ಞೇಯ ಅಪರಾಧ ಪರಿಗಣಿಸಿರುವುದನ್ನು ರದ್ದುಪಡಿಸಬೇಕು’ ಎಂದು ಕೋರಿ ಡಾ.ಕೆ.ಸುಧಾಕರ್ ಮತ್ತು ಗೋವಿಂದಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ನೆಲಮಂಗಲ ಉಪ ವಿಭಾಗದ ಮಾದನಾಯಕನಹಳ್ಳಿ ಪೊಲೀಸ್ ಮತ್ತು ದೂರುದಾರ ದಶರಥ ಕುಂಬಾರ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಸುಧಾಕರ್ ಪರ ಹೈಕೋರ್ಟ್ ವಕೀಲೆ ಸಂಜೀವಿನಿ ನಾವದಗಿ ವಕಾಲತ್ತು ವಹಿಸಿದ್ದಾರೆ.

ಕ್ರೀಡಾ ತರಬೇತುದಾರರ ವರ್ಗ: ತಡೆ

ಹೈಕೋರ್ಟ್ ಸುದ್ದಿ

ಗುತ್ತಿಗೆ ಒಪ್ಪಂದದಡಿ ತಿಂಗಳ ಸಂಚಿತ ವೇತನದ ಆಧಾರದಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾಲಿಬಾಲ್ ಹಾಗೂ ಬ್ಯಾಸ್ಕೆಟ್‌ಬಾಲ್ ತರಬೇತುದಾರರ ವರ್ಗಾವಣೆ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ‘ಕರ್ನಾಟಕ ಕ್ರೀಡಾ ಪ್ರಾಧಿಕಾರ ತರಬೇತುದಾರರ ಕ್ಷೇಮಾಭಿವೃದ್ಧಿ ಸಂಘ’ ಹಾಗೂ ರಾಜ್ಯದ ವಿವಿಧೆಡೆಯ ತರಬೇತುದಾರರು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರರು 28 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಆದಾಗ್ಯೂ, 2017ರಲ್ಲಿ ಅರ್ಜಿದಾರರೂ ಸೇರಿದಂತೆ 54 ಮಂದಿ ತರಬೇತುದಾರರನ್ನು ಸಾರ್ವತ್ರಿಕ ವರ್ಗಾವಣೆ ಮಾಡಲಾಗಿತ್ತು. ಇದಕ್ಕೆ ಹೈಕೋರ್ಟ್ ತಡೆ ನೀಡಿದೆ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹೈಕೋರ್ಟ್ ತಡೆ ನೀಡಿದ್ದರೂ ಪುನಃ ವರ್ಗಾವಣೆ ಮಾಡಿದ್ದು ಯಾವ ಆಧಾರದಲ್ಲಿ’ ಎಂದು ಸರ್ಕಾರಿ ವಕೀಲರನ್ನು ಸರ್ಕಾರದ ಪರ ವಕೀಲರನ್ನು ಪ್ರಶ್ನಿಸಿತಲ್ಲದೇ, ಕ್ರೀಡಾ ಇಲಾಖೆ, ಕ್ರೀಡಾ ಪ್ರಾಧಿಕಾರದ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.



DOWNLOAD NOW

₹30 ಕ್ಯಾಶ್‌ಬ್ಯಾಕ್ ತಕ್ಷಣವೇ ಪಡೆಯಿರಿ
₹199 ಮತ್ತು ಮೇಲ್ಪಟ್ಟ ಪ್ರಿಪೇಡ್ ಮೊಬೈಲ್ ರೀಚಾರ್ಜ್ ನೊಂದಿಗೆ*.
ಆಫರ್ June 11 - July 5, 2025 ವರೆಗೆ ಇರುತ್ತದೆ.

ಭಾರತದ ತನ್ನದೇ ಆದ — — ಪೇಮೆಂಟ್ಸ್ ಆಪ್

*ಇತರ ಷರತ್ತು ಮತ್ತು ನಿಯಮಗಳು ಅನ್ವಯ. ಹೆಚ್ಚಿನ ಮಾಹಿತಿಗಾಗಿ https:https://www.bhimupi.org.in/offersಗೆ ಭೇಟಿ ನೀಡಿರಿ.

ಕೈಗೆ ಸಿಗದ ಸಚಿವರು; ಸಿಟ್ಟಿಗೆದ್ದ ಶಾಸಕರು

ಸುರ್ಜೇವಾಲಾ ಮುಂದೆ ಶಾಸಕರ ಆಕ್ರೋಶದ ನುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಕಾರ್ಯವೈಖರಿ ವಿರುದ್ಧ ಅಸಮಾಧಾನ, ತಮ್ಮ ಮಾತು, ಪತ್ರಕ್ಕೆ ಕೆಲವು ಸಚಿವರು ಕಿಮ್ಮತ್ತು ನೀಡು-ವುದಿಲ್ಲವೆಂಬ ಆಕ್ರೋಶ–ಅಹವಾಲನ್ನು ಕಾಂಗ್ರೆಸ್ ಶಾಸಕರು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಎದುರು ಹೊರಹಾಕಿದ್ದಾರೆ. ಕೆಲವರು ಸಮಸ್ಯೆಗಳನ್ನು ಹೇಳಿಕೊಂಡಿದ್ದು, ತಮಗೆ ಸ್ಪಂದಿಸದ ಸಚಿವರ ನಡೆಗೆ ಕಿಡಿಕಾರಿದ್ದಾರೆ.

ರಣದೀಪ್‌ಸಿಂಗ್ ಸುರ್ಜೇವಾಲಾ

ಆಳಂದ ಶಾಸಕ ಬಿ.ಆರ್. ಪಾಟೀಲ, ಕಾಗವಾಡ ಶಾಸಕ ರಾಜು ಕಾಗೆ ಅವರು ಇತ್ತೀಚೆಗೆ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರು. ಅದರ ಬೆನ್ನಲ್ಲೆ, ಶಾಸಕರ ಅಹವಾಲು ಆಲಿಸಲು ಹೈಕಮಾಂಡ್ ನಿರ್ದೇಶನದಂತೆ ಸುರ್ಜೇವಾಲಾ ಅವರು ರಾಜ್ಯಕ್ಕೆ ಸೋಮವಾರ ದೌಡಾಯಿಸಿದ್ದಾರೆ. ಅವರು ಜುಲೈ 2ರವರೆಗೆ ರಾಜ್ಯದಲ್ಲಿ ಠಿಕಾಣಿ ಹೂಡಿ ಶಾಸಕರ ಮನದಾಳ ಅರಿಯಲಿದ್ದಾರೆ. ಬಿ.ಆರ್. ಪಾಟೀಲ ಸೇರಿ ಏಳು ಶಾಸಕರ ಜೊತೆ ಸೋಮವಾರ ಅವರು ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರು.

‘ಸಚಿವರು ಕೈಗೆ ಸಿಗುವುದಿಲ್ಲ. ಸಿಕ್ಕಿದವರೂ ಮುಖ ಕೊಟ್ಟು ಮಾತನಾಡದೆ ನಿರ್ಲಕ್ಷಿಸುತ್ತಾರೆ. ನಮ್ಮ ಪತ್ರಗಳಿಗೆ ಕಿಮ್ಮತ್ತೇ ಇಲ್ಲ. ಇಲಾಖೆಗಳ ಅಧಿಕಾರಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿರುವ ಕೆಲವರು ವಹಿಸಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದಿಲ್ಲ. ಮುಖ್ಯಮಂತ್ರಿ ಒಬ್ಬರೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿಭಾಯಿ-ಸುವುದನ್ನು ಬಿಟ್ಟು ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದಾರೆ’ ಎಂದು ಕೆಲವು ಶಾಸಕರು ಸುರ್ಜೇವಾಲಾ ಬಳಿ ಆಕ್ರೋಶ ಹೊರಹಾಕಿದ್ದಾರೆಂದು ಗೊತ್ತಾಗಿದೆ.

‘ವಸತಿ ಇಲಾಖೆಯಲ್ಲಿ ಲಂಚ ಪಡೆ-ಯಲಾಗುತ್ತಿದೆ’ ಎಂದು ಆರೋಪಿಸಿದ್ದ ಬಿ.ಆರ್. ಪಾಟೀಲ ಅವರು ಕೆಲವು ದಾಖಲೆಗಳ ಜೊತೆಗೆ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದರು. ವಸತಿ ಹಂಚಿಕೆಯ ಸಂದರ್ಭದಲ್ಲಿ ಲಂಚದ ಬೇಡಿಕೆ ಯಾವ ರೀತಿಯಲ್ಲಿದೆ, ಹಿರಿಯ ಶಾಸಕನಾದರೂ ಯಾವ ರೀತಿ ಅನ್ಯಾ-ಯವಾಗುತ್ತಿದೆ ಎಂಬುದು ಸೇರಿದಂತೆ ತಮಗಾಗಿರುವ ಅನುಭವಗಳನ್ನು ಪಾಟೀಲರು ಸುರ್ಜೇವಾಲಾ ಬಳಿ ಬಿಚ್ಚಿ-ಟ್ಟಿದ್ದಾರೆ. ಅನುದಾನ ಬಿಡುಗಡೆ ವಿಳಂಬದ ಬಗ್ಗೆ ಆಕ್ರೋಶ ಹೊರಹಾಕಿದ್ದ ರಾಜು ಕಾಗೆ ಕೂಡಾ ಸುರ್ಜೇವಾಲಾ ಅವರನ್ನು ಸೋಮವಾರ ಭೇಟಿ ಮಾಡಬೇಕಿತ್ತು. ಆದರೆ, ಮಂಗಳವಾರ ಭೇಟಿ ಮಾಡುವುದಾಗಿ ಸಮಯಾವಕಾಶ ಪಡೆದಿದ್ದಾರೆ.

ಶಾಸಕರ ಭೇಟಿಯ ಕುರಿತಂತೆ ಮಾತನಾಡಿದ ಸುರ್ಜೇವಾಲಾ, ‘ಪಕ್ಷದ ಶಾಸಕರ ಭೇಟಿ ನಿರಂತರ ಪ್ರಕ್ರಿಯೆ. ಒಂದು ತಿಂಗಳು ಅಥವಾ ಒಂದೂವರೆ ತಿಂಗಳು ನಡೆಯಬಹುದು. ಈ ಸಮಯದಲ್ಲಿ ಪಕ್ಷದ ಶಾಸಕರು, ಸಂಸದರು, ಪರಾಜಿತ ಅಭ್ಯರ್ಥಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಮುಖ್ಯಸ್ಥರನ್ನೂ ಭೇಟಿ ಮಾಡುತ್ತೇನೆ. ಬಳಿಕ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಜೊತೆಗೂ ಅಭಿವೃದ್ಧಿ ವಿಚಾರವಾಗಿ ಚರ್ಚಿಸುತ್ತೇನೆ’ ಎಂದರು.

ಮುಖ್ಯಾಂಶಗಳು

- ಹೈಕಮಾಂಡ್ ನಿರ್ದೇಶನದಂತೆ ರಾಜ್ಯಕ್ಕೆ ಬಂದ ಸುರ್ಜೇವಾಲಾ
- ಏಳು ಶಾಸಕರ ಜೊತೆ ಪ್ರತ್ಯೇಕವಾಗಿ ಸಭೆ
- ಸಚಿವರ ಕುರಿತು ಶಾಸಕರಿಂದ ದೂರುಗಳ ಸುರಿಮಳೆ

ಸುರ್ಜೇವಾಲಾ ಅವರು ನನ್ನನ್ನು ಸಭೆಗೆ ಕರೆಯದ ಕಾರಣ ನಾನು ಬೆಂಗಳೂರಿಗೆ ಹೋಗಿ, ಭೇಟಿಯಾಗುವುದಿಲ್ಲ. ಅಗತ್ಯ ಬಿದ್ದರೆ ನೋಡೋಣ
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ರಣದೀಪ್‌ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಬೆಳಿಗ್ಗೆ 11ಕ್ಕೆ ಬೆಂಗಳೂರಿನಲ್ಲಿ ಭೇಟಿಯಾಗಿ, ನನ್ನ ಸಮಸ್ಯೆ ಹೇಳಿಕೊಳ್ಳುವೆ
ಭರಮಗೌಡ (ರಾಜು) ಕಾಗೆ, ಕಾಂಗ್ರೆಸ್ ಶಾಸಕ

‘ತೀರ್ಮಾನ ಸುರ್ಜೇವಾಲಾಗೆ ಬಿಟ್ಟಿದ್ದು’

ಬಿ.ಆರ್. ಪಾಟೀಲ

‘ನಾನು ಏನು ಹೇಳಬೇಕಿತ್ತೊ ಅದನ್ನು ಸುರ್ಜೇವಾಲಾ ಅವರಿಗೆ ಹೇಳಿದ್ದೇನೆ. ಮುಂದಿನ ತೀರ್ಮಾನ ಅವರಿಗೆ ಬಿಟ್ಟಿದ್ದು’ ಎಂದು ಬಿ.ಆರ್. ಪಾಟೀಲ ಪ್ರತಿಕ್ರಿ-ಯಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸುರ್ಜೇವಾಲಾ ಅವರ ಜೊತೆ ಚರ್ಚೆ ಮಾಡಿದ್ದೇನೆ. ನಾನು ಹೇಳಬೇಕಾದದ್ದನ್ನು ಹೇಳಿದ್ದೇನೆ. ಅವರು ಎಲ್ಲ ವಿಚಾರಗಳನ್ನು ಟಿಪ್ಪಣಿ ಮಾಡಿಕೊಂಡಿದ್ದಾರೆ’ ಎಂದರು.

ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಜನರ ಕಷ್ಟ ಕೇಳಲು ರಾಜ್ಯಕ್ಕೆ ಬಂದಿಲ್ಲ. ಕಪ್ಪ ಕೇಳಲು ಬಂದಿದ್ದಾರೆ
ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

‘ನಾನು ನಿನಗೆ ನೀ ನನಗೆ ಎಂಬಂತೆ ಸಚಿವರು’

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಬಳಿಕ ಪ್ರತಿಕ್ರಿಯಿ-ಸಿದ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ, ‘ಸಚಿವರ ಕಾರ್ಯವೈಖರಿ ಬಗ್ಗೆ ಹೇಳಿದ್ದೇನೆ. ಕೆಲವು ಸಚಿವರು ‘ನಾ ನಿನಗೆ, ನೀ ನನಗೆ’ ಎಂಬಂತೆ ವರ್ತಿಸುತ್ತಿದ್ದಾರೆ. ಅದರಿಂದಲೇ ಸಮಸ್ಯೆಯಾಗಿದೆ’ ಎಂದರು.

‘ಕೋಲಾರ ಹಾಲು ಒಕ್ಕೂಟ ಚುನಾವಣೆ ಬಗ್ಗೆಯೂ ಸುರ್ಜೇವಾಲಾ ಅವರ ಗಮನಕ್ಕೆ ತಂದಿದ್ದೇನೆ. ಹಾಲು ಒಕ್ಕೂಟ ಚುನಾವಣೆ ಪಕ್ಷದ ಚುನಾವಣೆ ಅಲ್ಲ. ಹೀಗಾಗಿ, ನಮ್ಮ ಸಮುದಾಯದ ಕಾರ್ಯಕರ್ತರಿಗೆ ನಾನು ಬೆಂಬಲ ನೀಡಿದ್ದೇನೆ. ಮಾಲೂರು ಶಾಸಕ ನಂಜೇಗೌಡ ಏನು ಹುಲಿಯೇ? ಸಿಂಹವೇ? ಅವರ ಬಳಿ ಕ್ರಷರ್ ಇದೆ ಎಂದು ಹೆದರಬೇಕೇ? ಡೇರಿಯಲ್ಲಿ ನಾನೇನು ಹಗರಣ ಮಾಡಿದ್ದೇನೆಯೇ? ನಂಜೇಗೌಡ ಅವರು ಜೆಡಿಎಸ್ ಬಿಟ್ಟು ಕಾಂಗ್ರೆಸ್‌ಗೆ ಬಂದವರು. ನಾನು ಹುಟ್ಟಾ ಕಾಂಗ್ರೆಸ್ಸಿಗ’ ಎಂದು ನಾರಾಯಣಸ್ವಾಮಿ ಕೆಂಡಾಮಂಡಲವಾದರು.

ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್, ‘ಪಕ್ಷದ ವೇದಿಕೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಿತು. ಸುರ್ಜೇವಾಲಾ ಅವರ ಮುಂದೆ ನಮ್ಮ ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ’ ಎಂದರು.

‘ಯಾವ ವಿಚಾರವನ್ನು ಎಲ್ಲೆಲ್ಲಿ ಮಾತನಾಡಬೇಕು ಅಲ್ಲೇ ಮಾತನಾಡಬೇಕು. ಏನೇ ಭಿನ್ನಾಭಿಪ್ರಾಯಗಳಿ-ದ್ದರೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮುಂದೆ ಮಾಡಬೇಕು. ಮಾತನಾಡಲು ಕೆಲವು ಇತಿಮಿತಿಗಳಿವೆ. ಅದನ್ನು ನೋಡಿಕೊಂಡೇ ಮಾತನಾಡಬೇಕು. ಶಾಸಕರಿಗೆ ಸಮಸ್ಯೆಗಳಿಲ್ಲವೆಂದು ಹೇಳುವುದಿಲ್ಲ. ಅದನ್ನು ಸರಿಪಡಿಸಬೇಕು’ ಎಂದರು.

ಹೆಸರಿಗಷ್ಟೇ ಖರ್ಗೆಗೆ ಅಧಿಕಾರ; ಜೋಶಿ

ಹುಬ್ಬಳ್ಳಿ: ‘ಕಾಂಗ್ರೆಸ್ ಪಕ್ಷವು ಹೆಸರಿಗಷ್ಟೇ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಧಿಕಾರ ನೀಡಿದ್ದು, ಅವರನ್ನು ಕೈಗೊಂಬೆ ಆಗಿಸಿಕೊಂಡಿದೆ. ಮಾಜಿ ಪ್ರಧಾನಿ ದಿ.ಮನಮೋಹನ್ ಸಿಂಗ್ ಅವರ ಸ್ಥಿತಿ ಈಗ ಖರ್ಗೆ ಅವರಿಗೆ ಬಂದಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಪ್ರಲ್ಹಾದ ಜೋಶಿ

‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಹೈಕಮಾಂಡ್ ಕೈಯಲ್ಲಿದೆ. ನಮಗೆ ಗೊತ್ತಾಗಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಇದು ಕಾಂಗ್ರೆಸ್ ಪಕ್ಷ ಅವರನ್ನು ಹೇಗೆ ನಡೆಸಿಕೊಳ್ಳುತ್ತಿದೆ ಎಂಬುದಕ್ಕೆ ನಿದರ್ಶನ. ಕಾಂಗ್ರೆಸ್‌ನಲ್ಲಿ ಹಿರಿಯ ರಾಜ-ಕಾರಣಿಗಳಿಗೆ ಬೆಲೆಯಿಲ್ಲ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಆ ಪಕ್ಷದ ಶಾಸಕರೇ ತೆರೆದಿಟ್ಟಿದ್ದಾರೆ. ಶಾಸಕರು ಆಡಳಿತದ ವಿರುದ್ಧ ಸಿಡಿದೇಳುತ್ತಿದ್ದಾರೆ. ಹೀಗಾಗಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಶಾಸಕರ ಅಸಮಾಧಾನಕ್ಕೆ ತೇಪೆ ಹಚ್ಚಲು ಬಂದಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ಹು-ಧಾ ಮಹಾನಗರ ಪಾಲಿಕೆ ಜ್ಯೋತಿ ಪಾಟೀಲ ಮೇಯರ್

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸಭಾಭವನ-ದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ 24ನೇ ಅವಧಿಯ ನೂತನ ಮೇಯರ್ ಆಗಿ ಬಿಜೆಪಿಯ ಜ್ಯೋತಿ ಪಾಟೀಲ ಮತ್ತು ಉಪ ಮೇಯರ್ ಆಗಿ ಸಂತೋಷ ಚವ್ಹಾಣ ಆಯ್ಕೆಯಾದರು. ಇಬ್ಬರೂ ತಲಾ 47 ಮತಗಳನ್ನು ಪಡೆದರು.

ಕಾಂಗ್ರೆಸ್‌ನಿಂದ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಸುವರ್ಣಾ ಕಲ್ಲಕುಂಟ್ಲ ಮತ್ತು ಉಪಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಂಭುಗೌಡ ಸಾಲಮನಿ ತಲಾ 37 ಮತಗಳನ್ನು ಪಡೆದರು. ಎಐಎಂಐಎಂನಿಂದ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ವಹಿದಾಖಾನಂ ಕಿತ್ತೂರ ಅವರು ತಮ್ಮ ಪಕ್ಷದ ಸದಸ್ಯರ 3 ಮತಗಳನ್ನಷ್ಟೇ ಪಡೆದರು. ಮೇಯರ್ ಸ್ಥಾನವು ಸಾಮಾನ್ಯ ಮಹಿಳೆ ಮತ್ತು ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗ ‘ಬ’ಗೆ ಮೀಸಲಾಗಿತ್ತು.

ಕೆಂಜಾರು: ಖಾಸಗಿ ಪ್ರಾಥಮಿಕ ಶಾಲೆಯ ಚಾವಣಿ ಕುಸಿತ

ಮಂಗಳೂರು: ತಾಲ್ಲೂಕಿನ ಕೆಂಜಾರು ಗ್ರಾಮದ ಪೇಜಾವರ ಶ್ರೀ-ಮುಖ್ಯಪ್ರಾಣ ಪೂರ್ವ ಪ್ರಾಥಮಿಕ ಶಾಲೆ (ಖಾಸಗಿ)ಯ ಚಾವಣಿಯು ತರಗತಿಯಲ್ಲಿ ಮಕ್ಕಳಿದ್ದಾಗಲೇ ಸೋಮವಾರ ದಿಢೀರ್ ಕುಸಿದಿದೆ. ಹೆಂಚು ಜಾರುತ್ತಿರುವುದನ್ನು ಗಮನಿಸಿ ವಿದ್ಯಾರ್ಥಿಗಳು ತರಗತಿ ಕೊಠಡಿಯ ಹೊರಗೆ ಓಡಿ ಅಪಾಯದಿಂದ ಪಾರಾಗಿದ್ದಾರೆ. ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾನೆ.

ಯುಕೆಜಿಯ ಶೋನಿತ್ ಗಾಯಗೊಂಡ ವಿದ್ಯಾರ್ಥಿ. ಆತನ ಮೂಗಿಗೆ ತರಚುಗಾಯವಾಗಿದ್ದು, ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

‘ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳು ನಡೆಯುತ್ತಿದ್ದವು. ಒಟ್ಟು 22 ವಿದ್ಯಾರ್ಥಿಗಳು ದಾಖಲಾಗಿದ್ದರು. ಸೋಮವಾರ ತರಗತಿ ನಡೆಯುತ್ತಿರುವಾಗ ಏಕಾಏಕಿ ಜೋರಾಗಿ ಗಾಳಿ ಬೀಸಿದ್ದರಿಂದ ಚಾವಣಿ ಕುಸಿದಿದೆ’ ಎಂದು ಮಂಗಳೂರು ಉತ್ತರ ಕ್ಷೇತ್ರ ಶಿಕ್ಷಣಾಧಿಕಾರಿ ಜೇಮ್ಸ್ ಕುಟಿನ್ಹೊ ‘ಪ್ರಜಾವಾಣಿ’ಗೆ ತಿಳಿಸಿದರು.

ಕೆಐಒಸಿಎಲ್ ಖಾಸಗೀಕರಣ?

ಅದಿರು ಕಂಪನಿ–ಎನ್‌ಎಂಡಿಸಿ ವಿಲೀನಕ್ಕೆ ಒಪ್ಪದ ಹಣಕಾಸು ಸಚಿವಾಲಯ

• ಮಂಜುನಾಥ ಹೆಬ್ಬಾರ್

ನವದೆಹಲಿ: ಅದಿರಿನ ಕೊರತೆಯಿಂದ ಬಳಲಿ ನಷ್ಟದ ಸುಳಿಗೆ ಸಿಕ್ಕಿ ನಲುಗುತ್ತಿರುವ ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ಹಾಗೂ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್‌ಎಂಡಿಸಿ) ವಿಲೀನಕ್ಕೆ ಕೇಂದ್ರ ಹಣಕಾಸು ಸಚಿವಾಲಯ ಸಮ್ಮತಿ ಸೂಚಿಸಿಲ್ಲ. ಕೆಐಒಸಿಎಲ್ ಖಾಸಗೀಕರಣ ಮಾಡಲು ಕೇಂದ್ರ ಸರ್ಕಾರ ಉತ್ಸುಕತೆ ತೋರಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಬ್ಲಾಕಿನ ದೇವದಾರಿಯಲ್ಲಿ 401.57 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಕೆಐಒಸಿಎಲ್ ಅರಣ್ಯ ತೀರುವಳಿ ಪಡೆದಿದೆ. ಇಲ್ಲಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗೆ ಸಂಬಂಧಿಸಿದ ಕೆಐಒಸಿಎಲ್ ಕಡತಕ್ಕೆ ಕೇಂದ್ರ ಉಕ್ಕು ಸಚಿವ ಎಚ್.ಡಿ.ಕು-ಮಾರಸ್ವಾಮಿ ಅವರು 2024ರ ಜೂನ್ 12ರಂದು ಸಹಿ ಹಾಕಿದ್ದರು. 2024–2025ನೇ ಸಾಲಿನಲ್ಲಿ ದೇವದಾರಿಯಲ್ಲಿ 3 ಲಕ್ಷ ಟನ್‌ಗಳಷ್ಟು ಅದಿರು ಹೊರತೆಗೆಯುವ ಯೋಜನೆಯನ್ನು ಕೆಐಒಸಿಎಲ್ ಹೊಂದಿತ್ತು. ಆದರೆ, ಅರಣ್ಯ ಇಲಾಖೆಯು ‘ಅರಣ್ಯ ತೀರುವಳಿ ಗುತ್ತಿಗೆ ಪತ್ರ’ವೂ ಸೇರಿದಂತೆ ಜಮೀನು ಹಸ್ತಾಂತರಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. ಈ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘರ್ಷ ಏರ್ಪಟ್ಟಿತ್ತು.

ಸುಪ್ರೀಂ ಕೋರ್ಟ್ ಆದೇಶದ ಕಾರಣದಿಂದ ಕಂಪನಿಯು 2006ರಲ್ಲಿ ಕುದುರೆಮು-ಖದಲ್ಲಿ ಗಣಿಗಾರಿಕೆ ಸ್ಥಗಿತಗೊಳಿಸಿತ್ತು.

ಕೆಐಒಸಿಎಲ್

ಪೆಲ್ಲೆಟ್‌ಗಳನ್ನು (ಸಣ್ಣ ಗುಂಡುಗಳು) ಉತ್ಪಾದಿಸುತ್ತಿರುವ ಮಂಗಳೂರಿನ ಕೆಐಒಸಿಎಲ್ ಘಟಕದಲ್ಲಿ 433 ಕಾಯಂ ಸಿಬ್ಬಂದಿ, 52 ಗುತ್ತಿಗೆ ಎಂಜಿನಿಯರ್‌ಗಳು, 400 ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ತನ್ನ ಮಂಗಳೂರಿನ-ಲ್ಲಿರುವ ಸ್ಥಾವರಕ್ಕಾಗಿ ಛತ್ತೀಸಗಢದ ಸ್ಥಾವರಗಳ ಅದಿರನ್ನು ಅವಲಂಬಿಸಿದೆ. ನಷ್ಟದ ಕಾರಣ 300 ಗುತ್ತಿಗೆ ನೌಕರರನ್ನು ವಜಾ ಮಾಡಲು ಅದಿರು ಕಂಪನಿ ಮುಂದಾಗಿತ್ತು.

ಈ ನಡುವೆ, ನವದೆಹಲಿ ಹಾಗೂ ಚನ್ನರಾಯಪಟ್ಟಣದಲ್ಲಿ ಮಾತನಾಡಿದ್ದ ಕುಮಾರಸ್ವಾಮಿ, ‘ಎರಡು ಸಂಸ್ಥೆಗಳ ವಿಲೀನಕ್ಕೆ ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸಿದೆ’ ಎಂದು ಹೇಳಿಕೆ ನೀಡಿದ್ದರು. ಆ ಬಳಿಕ, ವಿಲೀನದ ಸಾಧಕ–ಬಾಧಕಗಳ ಬಗ್ಗೆ ಇಲಾಖೆಯ ಉನ್ನತ ಅಧಿಕಾರಿಗಳ ಜತೆಗೆ ಸುದೀರ್ಘ ಚರ್ಚೆ ನಡೆಸಿದ್ದರು. ಈ ಪ್ರಸ್ತಾವಕ್ಕೆ ಎನ್‌ಡಿಎಂಸಿ ಸಕಾರಾತ್ಮಕವಾಗಿ ಸ್ಪಂದಿಸಿತ್ತು. ಉಭಯ ಸಂಸ್ಥೆಗಳ ವಿಲೀನದ ಪ್ರಸ್ತಾವವನ್ನು ಹಣಕಾಸು ಸಚಿವಾಲಯದ ಅಧೀನದ ಸಾರ್ವಜನಿಕ ಉದ್ಯಮ ಇಲಾಖೆಗೆ ಉಕ್ಕು ಸಚಿವಾಲಯವು ಡಿಸೆಂಬರ್‌ನಲ್ಲಿ ಸಲ್ಲಿಸಿತ್ತು.

ಬಜೆಟ್ ಅಧಿವೇಶನದಲ್ಲಿ ಸಂಸದ ಬ್ರಿಜೇಶ್ ಚೌಟ ಪ್ರಶ್ನೆಗೆ ಉತ್ತರಿಸಿದ್ದ ಉಕ್ಕು ಖಾತೆ ರಾಜ್ಯ ಸಚಿವ ಶ್ರೀನಿವಾಸ ವರ್ಮ, ‘ಎರಡು ಸಂಸ್ಥೆಗಳ ವಿಲೀನದ ಬಗ್ಗೆ ಸರ್ಕಾರ ಈವರೆಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ’ ಎಂದು ಸ್ಪಷ್ಟಪಡಿಸಿದ್ದರು.

‘ವಿಲೀನಕ್ಕೆ ಹಣಕಾಸು ಸಚಿವಾಲಯದಿಂದ ಸಮ್ಮತಿ ಸಿಕ್ಕಿಲ್ಲ. ವಿಲೀನದ ಬದಲು ಕೆಐಒಸಿಎಲ್ ಖಾಸಗೀಕರಣ ಮಾಡುವುದು ಸೂಕ್ತ. ಈ ಮೂಲಕ ಸಂಸ್ಥೆಯನ್ನು ಲಾಭದ ಹಳಿಗೆ ತರಬಹುದು ಎಂಬುದು ಹಣಕಾಸು ಸಚಿವಾಲಯದ ಅಭಿಮತ’ ಎಂದು ಉಕ್ಕು ಸಚಿವಾಲಯದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ರಾಜ್ಯವೇ ಅಡ್ಡಿ’

ಕೆಐಒಸಿಎಲ್ ಕಾರ್ಯಾಚರಣೆಗೆ ಸಣ್ಣ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಕಾಂಗ್ರೆಸ್ ಸರ್ಕಾರ ಅಡ್ಡಿಪಡಿ-ಸುತ್ತಿದೆ. ಇದರಿಂದ ಸಂಸ್ಥೆ ಪ್ರತಿ ತಿಂಗಳು ಭಾರಿ ನಷ್ಟ ಅನುಭವಿ-ಸುತ್ತಿದೆ. ನನ್ನ ಮೇಲಿನ ವೈಯಕ್ತಿಕ ದ್ವೇಷದಿಂದ ರಾಜ್ಯ ಸರ್ಕಾರ ತೋರುತ್ತಿರುವ ಅಸಹಕಾರದಿಂದ ಸಂಸ್ಥೆಯ ಪುನರುಜ್ಜೀವನಕ್ಕೆ ಭಾರಿ ಹಿನ್ನಡೆಯಾಗಿದೆ.
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಉಕ್ಕು ಸಚಿವ

‘ಜೂನ್‌ನಲ್ಲೇ ಡ್ಯಾಂ ಭರ್ತಿ; ಇತಿಹಾಸ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಕೆಆರ್‌ಎಸ್ (ಮಂಡ್ಯ): ‘ಕೃಷ್ಣರಾಜ-ಸಾಗರ ಅಣೆಕಟ್ಟೆ ನಿರ್ಮಾಣವಾದ 93 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜೂನ್‌ನಲ್ಲೇ ಭರ್ತಿಯಾಗಿದ್ದು, ಈ ಸುಸಂದರ್ಭದಲ್ಲೇ ಬಾಗಿನ ಸಲ್ಲಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು ಹಾಗೂ ಶಾಸಕರೊಂದಿಗೆ ಸೋಮವಾರ ಬಾಗಿನ ಅರ್ಪಿಸಿ ನಂತರ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಈ ‘ವಿಶೇಷ ಬಾಗಿನ’ದ ಬಗ್ಗೆ ಎಲ್ಲ ಜನರಿಗೂ ತಿಳಿಯಬೇಕೆಂದರೆ ಕೂಡಲೇ ‘ಶಿಲಾನ್ಯಾಸ’ ಮಾಡಿಸಿ ಸ್ಮಾರಕ ನಿರ್ಮಿಸಿ’ ಎಂದು ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರಿಗೆ ಸೂಚಿಸಿದರು.

‘93 ವರ್ಷಗಳಲ್ಲಿ 76 ಬಾರಿ ಅಣೆಕಟ್ಟೆ ಭರ್ತಿಯಾಗಿದೆ. 17 ಬಾರಿ ಭರ್ತಿಯಾಗಿಲ್ಲ. 2023-24ರಲ್ಲಿ ಬರಗಾಲ ಇತ್ತು. ಹೀಗಾಗಿ ಆ ವರ್ಷ ತುಂಬಿರಲಿಲ್ಲ. ಈ ಕಾರಣಕ್ಕೇ, ‘ಸಿದ್ದರಾಮಯ್ಯ ಅವರ ಕಾಲ್ಗುಣ ಚೆನ್ನಾಗಿಲ್ಲ, ಕಾಂಗ್ರೆಸ್ ಸರ್ಕಾರ ಬಂದ್ರೆ ಬರ ಬರುತ್ತದೆ’ ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು. ಮಳೆ ಬರುವುದು, ಬಿಡುವುದು ಪ್ರಕೃತಿಯ ನಿಯಮ. ಪ್ರಕೃತಿ ವಿರುದ್ಧ ನಡೆಯಲು ಯಾರಿಗೂ ಸಾಧ್ಯವಿಲ್ಲ. ಇದನ್ನು ಅರ್ಥ ಮಾಡಿಕೊಳ್ಳದ ವಿರೋಧ ಪಕ್ಷದವರು ಮೂರ್ಖರು, ಮೂಢಾತ್ಮರು. ಹೀಗಾಗಿಯೇ ನಾವು ಮೂಢನಂಬಿಕೆ ವಿರುದ್ಧ ಕಾಯ್ದೆ ಜಾರಿಗೊಳಿಸಿದ್ದೇವೆ’ ಎಂದು ಹೇಳಿದರು.

‘ಎರಡು ವರ್ಷಗಳಿಂದ ರಾಜ್ಯದಲ್ಲಿ ಮಳೆ–ಬೆಳೆ ಚೆನ್ನಾಗಿ ಆಗುತ್ತಿದೆ. ಈ ಬಾರಿ ರಾಜ್ಯದ ಎಲ್ಲ ಜಲಾಶಯಗಳು ತುಂಬಿರುವುದರಿಂದ ನಾಲೆಗಳ ಮೂಲಕ ನೀರು ಹರಿಸಿ, ಎಲ್ಲ ಕೃಷಿ ಜಮೀನುಗಳಿಗೆ ಸಮರ್ಪಕವಾಗಿ ನೀರು ಕೊಡಲು ಕೂಡಲೇ ಕ್ರಮ ವಹಿಸುತ್ತೇವೆ’ ಎಂದು ಭರವಸೆ ನೀಡಿದರು.

ನೀರಾವರಿಗೆ ₹25 ಸಾವಿರ ಕೋಟಿ: ‘ಕಾವೇರಿ ನೀರಾವರಿ ನಿಗಮಕ್ಕೆ ₹3ಸಾವಿರ ಕೋಟಿ ಅನುದಾನ ನೀಡಿದ್ದೇನೆ. ನೀರಾವರಿ ಪ್ರದೇಶದ ಶಾಸಕರಿಗೆ ₹50ರಿಂದ ₹100 ಕೋಟಿ ಅನುದಾನ ಕೊಡಲು ಡಿಸಿಎಂಗೆ ಸೂಚಿಸಿದ್ದೇನೆ. ಈಗಾಗಲೇ ಅವರು ಕೊಡುತ್ತಿದ್ದಾರೆ. ನೀರಾವರಿಯೊಂದಕ್ಕೇ ₹25ಸಾವಿರ ಕೋಟಿ ಕೊಟ್ಟಿದ್ದೇವೆ. ನಮ್ಮನ್ನು ಟೀಕಿಸುತ್ತಿರುವ ವಿರೋಧ ಪಕ್ಷದವರು ಅಧಿಕಾರದಲ್ಲಿದ್ದಾಗ ಇಷ್ಟೊಂದು ಅನುದಾನ ಕೊಟ್ಟಿದ್ರಾ?’ ಎಂದು ಈ ವೇಳೆ ತರಾಟೆಗೆ ತೆಗೆದುಕೊಂಡರು.

ರಾಜ್ಯದ ಅಣೆಕಟ್ಟುಗಳ ಗೇಟುಗಳನ್ನು ದುರಸ್ತಿಗೊಳಿಸಲು ಈಗಾಗಲೇ ತಾಂತ್ರಿಕ ಸಮಿತಿ ರಚಿಸಿದ್ದೇವೆ. ಆ ಸಮಿತಿಯಿಂದ ವರದಿ ತೆಗೆದುಕೊಂಡು ಹಂತ–ಹಂತವಾಗಿ ದುರಸ್ತಿ ಮಾಡಿಸುತ್ತೇವೆ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

4ನೇ ಬಾರಿಗೆ ಬಾಗಿನ

2013, 2014, 2024ರಲ್ಲಿ ಕೃಷ್ಣರಾಜಸಾಗರ ಜಲಾಶಯಕ್ಕೆ ಬಾಗಿನ ಅರ್ಪಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ಸಲ್ಲಿಸಿದ ಬಾಗಿನ ನಾಲ್ಕನೆಯದ್ದು.

ಇದುವರೆಗೆ ಬಿ.ಎಸ್. ಯಡಿಯೂರಪ್ಪ 5 ಬಾರಿ, ಎಚ್.ಡಿ. ಕುಮಾರಸ್ವಾಮಿ ಮತ್ತು ಎಸ್. ಬಂಗಾರಪ್ಪ ತಲಾ 3 ಬಾರಿ ಬಾಗಿನ ಸಲ್ಲಿಸಿದ್ದು, ಅತಿ ಹೆಚ್ಚು ಬಾರಿ ಬಾಗಿನ ಸಲ್ಲಿಸಿದ ಮುಖ್ಯಮಂತ್ರಿಗಳು ಎನಿಸಿದ್ದಾರೆ.

ಮಂಡ್ಯ ಜಿಲ್ಲೆ ಕೆಆರ್‌ಎಸ್‌ಗೆ ಸೋಮವಾರ ಬಾಗಿನ ಸಲ್ಲಿಸಲು ಆಗಮಿಸಿದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗಣ್ಯರಿಗೆ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು – ಪ್ರಜಾವಾಣಿ ಚಿತ್ರ

‘ದೇವರಿಗೆ ಪ್ರಾರ್ಥನೆ ಸಲ್ಲಿಸಲು ಅನುಮತಿ ಬೇಕೆ?’

ಕೆಆರ್‌ಎಸ್ (ಮಂಡ್ಯ ಜಿಲ್ಲೆ): ‘ಕಾವೇರಿ ಆರತಿ’ಯ ನೀಲನಕ್ಷೆಯನ್ನು ಒಳಗೊಂಡ 2 ನಿಮಿಷದ ವಿಡಿಯೊ ಪ್ರಸಾರ ಮಾಡಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಷ್ಟೇ ವಿರೋಧವಿದ್ದರೂ ನಾವು ‘ಕಾವೇರಿ ಆರತಿ’ ಕಾರ್ಯಕ್ರಮ ಮಾಡಿಯೇ ತೀರುತ್ತೇವೆ ಎಂಬ ಸ್ಪಷ್ಟ ಸಂದೇಶವನ್ನು ರೈತ ಸಂಘದ ಹೋರಾಟಗಾರರಿಗೆ ರವಾನಿಸಿದರು.

ಇಲ್ಲಿ ಸೋಮವಾರ ನಡೆದ ಕೆಆರ್‌ಎಸ್‌ಗೆ ಬಾಗಿನ ಸಲ್ಲಿಕೆ ಕಾರ್ಯಕ್ರಮದಲ್ಲಿ, ‘ಅಣೆಕಟ್ಟಿನಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಕಾವೇರಿ ಆರತಿ ಜಾಗ ನಿಗದಿಪಡಿಸಿದ್ದೇವೆ. ದೇವರಿಗೆ ಪ್ರಾರ್ಥನೆ ಸಲ್ಲಿಸಲು ಅರ್ಜಿ ಹಾಕಬೇಕೆ? ಯಾರದ್ದಾದರೂ ಅನುಮತಿ ಬೇಕೆ? ಬೆಂಗಳೂರಿನಲ್ಲಿ ಜಲಮಂಡಳಿಯಿಂದ ನಡೆಸಿದ ಕಾವೇರಿ ಆರತಿಗೆ 25ಸಾವಿರ ಜನ ಸೇರಿದ್ದರು. ಇಲ್ಲಿ ಕಾವೇರಿ ಆರತಿ ನಡೆಸಿದರೆ ಮಂಡ್ಯ, ಮೈಸೂರು ಭಾಗದ 1,500 ಜನರಿಗೆ ಉದ್ಯೋಗ ದೊರೆಯುತ್ತದೆ. ಬೃಂದಾವನ ಉದ್ಯಾನ ಅಭಿವೃದ್ಧಿಪಡಿಸಿ-ದರೆ 3ಸಾವಿರ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ’ ಎಂದು ಸಮರ್ಥಿಸಿಕೊಂಡರು.

‘ಬೃಂದಾವನವನ್ನು ಅತ್ಯಂತ ಆಕರ್ಷಣೀಯಗೊಳಿಸು-ವುದು ನಮ್ಮ ಉದ್ದೇಶ. ಮೈಸೂರು ದಸರಾ ರೀತಿ ಅತ್ಯುತ್ತಮ ದೀಪಾಲಂಕಾರ, ಅತ್ಯುತ್ತಮ ಕಾರಂಜಿ ಮಾಡಲಾಗುವುದು. ವಿದೇಶಗಳಿಂದ ಆಲಂಕಾರಿಕ ಸಸ್ಯಗಳನ್ನು ತರಿಸಲಾಗಿದೆ. ಇದನ್ನು ಅತ್ಯುತ್ತಮ ಪ್ರವಾಸಿ ಕೇಂದ್ರ ಮಾಡಬೇಕೆಂದು ಮುಖ್ಯಮಂತ್ರಿಯೂ ಸಂಕಲ್ಪ ತೊಟ್ಟಿದ್ದಾರೆ. ಇದಕ್ಕೆ ಖಾಸಗಿಯವರು ಬಂಡವಾಳ ಹೂಡುವಂತೆ ಆಹ್ವಾನಿಸಿದ್ದೇವೆ’ ಎಂದರು.

ತಮಿಳುನಾಡಿಗೆ 22 ಟಿಎಂಸಿ ನೀರು

‘2018ರ ನ್ಯಾಯಮಂಡಳಿಯ ಆದೇಶದ ಪ್ರಕಾರ ತಮಿಳುನಾಡಿಗೆ ಪ್ರತಿ ವರ್ಷ 177.25 ಟಿಎಂಸಿ ಅಡಿ ನೀರನ್ನು ಕೊಡಬೇಕು. ನಾವು ಕಳೆದ ವರ್ಷ 305 ಟಿಎಂಸಿ ಅಡಿ ನೀರು ಹರಿಸಿದ್ದೇವೆ. ಈ ತಿಂಗಳಲ್ಲಿ 9 ಟಿಎಂಸಿ ನೀರು ಹರಿಸಬೇಕಿತ್ತು. ಈಗಾಗಲೇ 22 ಟಿಎಂಸಿ ಹೋಗಿದೆ. ಬಹುತೇಕ ವರ್ಷಗಳಲ್ಲಿ ಹಂಚಿಕೆಗಿಂತ ಹೆಚ್ಚು ನೀರು ಹರಿಸಿದ್ದೇವೆ. ಹೆಚ್ಚುವರಿಯಾಗಿ ಸಿಗುವ ನೀರನ್ನು ಬಳಸಿಕೊಳ್ಳಲೆಂದು ಮೇಕೆದಾಟು ಜಲಾಶಯ ನಿರ್ಮಾಣ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲ’ ಎಂದು ಸಿ.ಎಂ ಸಿದ್ದರಾಮಯ್ಯ ಹೇಳಿದರು.

‘ವೈದ್ಯರ ದಿನ’ ಪ್ರಶಸ್ತಿ ಪ್ರದಾನ ಇಂದು

ಬೆಂಗಳೂರು: ‘ಭಾರತೀಯ ವೈದ್ಯಕೀಯ ಸಂಘದ (ಐಎಂಎ) ರಾಜ್ಯ ಘಟಕ ನೀಡುವ ಪ್ರಸಕ್ತ ಸಾಲಿನ ‘ವೈದ್ಯರ ದಿನ’ ಪ್ರಶಸ್ತಿಗೆ ಹೊನ್ನಾವರದ ಡಾ. ಅನುಪಮಾ ಎಚ್.ಎಸ್. ಸೇರಿದಂತೆ 14 ವೈದ್ಯರು ಆಯ್ಕೆಯಾಗಿದ್ದಾರೆ’ ಎಂದು ಐಎಂಎ ರಾಜ್ಯ ಘಟಕದ ಅಧ್ಯಕ್ಷ ಡಾ. ವೀರಭದ್ರಪ್ಪ ವಿ. ಚಿನಿವಾಲರ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಅವರು, ‘ಡಾ. ಬಸವರಾಜ್ ವಿ. ಕಂಬಲ್ಯಾಳ್ (ರೋಣ), ಡಾ. ಚನ್ನಬಸಪ್ಪ ಬವಲಿಂಗಪ್ಪ ನಾವಡಗಿ (ಸವದತ್ತಿ), ಡಾ. ಗೋಪಾಲಕೃಷ್ಣ ಗುಪ್ತ (ಮಂಡ್ಯ), ಡಾ.ಎಚ್.ಆರ್. ಮಹೇಶ್ವರಪ್ಪ (ಬೆಂಗಳೂರು), ಡಾ.ಕೆ. ಎಂ. ನಾಯಕ್ (ರಾಯಚೂರು), ಡಾ.ಕೆ. ರಾಮಚಂದ್ರ ಕಾಮತ್ (ಮಂಗಳೂರು), ಡಾ.ಎಚ್. ನಾಗರಾಜ್ (ಶಿವಮೊಗ್ಗ), ಡಾ.ಎಚ್.ಎಲ್. ಪ್ರೇಮಲತಾ (ಹಾಸನ), ಡಾ. ರಾಜೇಂದ್ರ ಕುಮಾರ್ (ಕೆಜಿಎಫ್), ಡಾ.ಜೆ. ಶರಣಪ್ಪ (ಬೆಂಗಳೂರು), ಡಾ. ವನಮಾಲಾ ವಿ. ಹೆಸರೂರು (ಲಿಂಗಸುಗೂರು), ಡಾ. ವೀಣಾ ಭಟ್ (ಭದ್ರಾವತಿ), ಡಾ.ವೈ. ಪರ್ವತ ರೆಡ್ಡಿ (ಬಳ್ಳಾರಿ) ಆಯ್ಕೆಯಾಗಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಜುಲೈ 1ರಂದು ಆಯೋಜಿಸಿರುವ ವೈದ್ಯರ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಅಶೋಕ್ ಬಿ. ಹಿಂಚಿಗೇರಿ, ನೇತ್ರ ತಜ್ಞ ಡಾ.ಎನ್. ಟಿ. ಶ್ರೀನಿವಾಸ್ ಭಾಗವಹಿಸಲಿದ್ದಾರೆ’ ಎಂದರು.

ಎಚ್.ಕೆ.ಪಾಟೀಲ್‌ಗೆ ಗಡಿ, ನದಿ ವಿವಾದ ಉಸ್ತುವಾರಿ

ಬೆಂಗಳೂರು: ಕರ್ನಾಟಕ ಗಡಿ ಮತ್ತು ನದಿಗಳ ವಿವಾದಗಳ ವಿಷಯಗಳ ಬಗ್ಗೆ ನಿರಂತರವಾಗಿ ನಿಗಾ ವಹಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಉಸ್ತುವಾರಿಯನ್ನಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರನ್ನು ನೇಮಿಸಲಾಗಿದೆ.

ಈ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕವಾಗಿ ಮತ್ತು ರಾಜಕೀಯ ನೆಲೆಗಟ್ಟಿನಲ್ಲಿ ಪರಿಶೀಲಿಸಿ, ಸಮಯೋಚಿತ ಅವಶ್ಯಕ ಕ್ರಮ ತೆಗೆದುಕೊಳ್ಳಲು ಸಚಿ-ವರೊಬ್ಬರಿಗೆ ಜವಾಬ್ದಾರಿ ವಹಿಸಲು ಸರ್ಕಾರ ನಿರ್ಧರಿಸಿತ್ತು. ಹೀಗಾಗಿ, ಪಾಟೀಲ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.

ಬಜರಂಗದಳದ ಕಾರ್ಯಕರ್ತರ ಮೇಲೆ ಹಲ್ಲೆ

ಸಿಂಧನೂರು (ರಾಯಚೂರು ಜಿಲ್ಲೆ): ನಗರದ ಕುಷ್ಟಗಿ ರಸ್ತೆ ಬಳಿಯ ಜಾನುವಾರು ಸಂತೆಗೆ ಬರುವ ಜಾನು-ವಾರುಗಳನ್ನು ಕಸಾಯಿಖಾನೆಗೆ ತೆಗೆದುಕೊಂಡು ಹೋಗಲಾಗುತ್ತಿದೆ ಎಂದು ಆರೋಪಿಸಿ ಜಾನುವಾರು ರಕ್ಷಣೆಗೆ ಮುಂದಾದ ಬಜರಂಗದಳದ ಕಾರ್ಯಕರ್ತರ ಮೇಲೆ ವ್ಯಾಪಾರಿಗಳು ಹಲ್ಲೆ ನಡೆಸಿದ್ದು, ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾನುವಾರ ಸಂತೆ ನಡೆಯುವ ಸ್ಥಳಕ್ಕೆ ಸೋಮವಾರ ತೆರಳಿದ ಬಜರಂಗದಳದ ತಾಲ್ಲೂಕು ಸಂಚಾಲಕ ಮನೋಹರ, ನಗರ ಸಂಚಾಲಕ ಶಿವಕುಮಾರ, ಕಾರ್ಯಕರ್ತರಾದ ಅನಿಲಕುಮಾರ, ದೇವರಾಜ ಸೇರಿ 8 ಜನರು ಜಾನುವಾರು ಕಸಾಯಿಖಾನೆಗೆ ತೆಗೆದುಕೊಂಡು ಹೋಗಲು ಬಿಡುವುದಿಲ್ಲ ಎಂದು ವ್ಯಾಪಾರಿಗಳಿಗೆ ಅಡ್ಡಿಪಡಿಸಿದ್ದಾರೆ.

ಆಗ ವ್ಯಾಪಾರಿಗಳು ಮತ್ತು ಕಾರ್ಯಕರ್ತರ ನಡುವೆ ವಾಗ್ವಾದ ನಡೆದಿದೆ. ವ್ಯಾಪಾರಿಗಳು ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಡಿವೈಎಸ್‌ಪಿ ಬಿ.ಎಸ್. ತಳವಾರ, ಪೊಲೀಸ್ ಇನ್‌ಸ್ಪೆಕ್ಟರ್ ದುರುಗಪ್ಪ ಡೊಳ್ಳಿನ್ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–1/ಟೆಂಡರ್–5/2025–26 ದಿನಾಂಕ: 27.06.2025
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ತುಮಕೂರು ಜಿಲ್ಲೆಯಲ್ಲಿ ಹೊಸ ಅಂಗನವಾಡಿ ಶಾಲೆ ನಿರ್ಮಾಣ ಹಾಗೂ ಅಂಗನವಾಡಿಗಳ ದುರಸ್ಥಿ ಕಾಮಗಾರಿ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣ ಕಾಮಗಾರಿ ಮತ್ತು ಮೊರಾರ್ಜಿ ದೇಸಾಯಿ ವಸತಿಶಾಲೆ ನಿರ್ಮಾಣ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 664, 646, 647, 654, 651, 648, 650, 625, 619 & 630)** ಇ–ಪೋರ್ಟಲ್ ಮುಖಾಂತರ ದಿನಾಂಕ: **27.06.2025ರಂದು** ಟೆಂಡರ್ ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 28.07.2025ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು–1
ಕ.ವ.ಶಿ.ಸಂ.ಸಂಘ
DIPR/CP/YC/1530/2025-26

ಸಂಕ್ಷಿಪ್ತ ಸುದ್ದಿ

ದನದ ರುಂಡ ಪತ್ತೆ ಪ್ರಕರಣ: ಆರು ಬಂಧನ

ಉಡುಪಿ: ಬ್ರಹ್ಮಾವರ ತಾಲ್ಲೂಕಿನ ಕುಂಜಾಲು ಜಂಕ್ಷನ್ ಬಳಿ ದನದ ತಲೆ ಮತ್ತು ಚರ್ಮದ ಭಾಗಗಳು ಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಆರು ಮಂದಿ ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಕುಂಜಾಲುವಿನ ರಾಮ (49), ಪ್ರಸಾದ್(21), ಸಂದೇಶ(35) ರಾಜೇಶ್ (28) ಮಟಪಾಡಿಯ ನವೀನ್(35), ಅಡ್ಜಿಲದ ಕೇಶವ ನಾಯ್ಕ್ (50) ಬಂಧಿತರು. ಇನ್ನೊಬ್ಬ ಅರೋಪಿ ತಲೆಮರೆಸಿಕೊಂಡಿದ್ದಾನೆ. ಮಾಂಸ ಸಾಗಿಸಲು ಬಳಸಿದ್ದ ಆ್ಯಕ್ಟಿವಾ ಸ್ಕೂಟರ್ ಮತ್ತು ಸ್ವಿಫ್ಟ್ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೇಶವ ನಾಯ್ಕ್ ಅವರಿಗೆ ದನವನ್ನು ಸಾಕಲು ಸಾಧ್ಯವಾಗದ ಕಾರಣ ಆರೋಪಿಗಳಿಗೆ ನೀಡಿದ್ದರು. ಅವರು ಮಾಂಸಕ್ಕಾಗಿ ಅದನ್ನು ಕೊಂದು ಅದರ ದೇಹದ ಭಾಗಗಳನ್ನು ಸ್ಕೂಟರ್‌ನಲ್ಲಿ ಸಾಗಿಸುವಾಗ ರುಂಡ ರಸ್ತೆಗೆ ಬಿದ್ದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ತಿಳಿಸಿದ್ದಾರೆ.

ಹಸುವಿನ ಕೆಚ್ಚಲಿಗೆ ಗಾಯ: ಬಂಧನ

ಶಿವಮೊಗ್ಗ: ಹೊಸನಗರ ತಾಲ್ಲೂಕಿನ ಮೇಲಿನ ಸಂಪಳ್ಳಿಯ ವಿಜಾಪುರದಲ್ಲಿ ಕತ್ತಿಯಿಂದ ಹೊಡೆದು ಹಸುವಿನ ಕೆಚ್ಚಲಿಗೆ ಗಾಯ ಮಾಡಿದ ಆರೋಪದ ಮೇಲೆ ರಾಮಚಂದ್ರ ನಾಯ್ಕ ಎಂಬವರನ್ನು ಸೋಮವಾರ ಬಂಧಿಸಲಾಗಿದೆ.

ಸ್ಥಳೀಯರಾದ ನವೀನ್ ಶೆಟ್ಟಿ ಎಂಬವರ ಹಸುವಿನ ಕೆಚ್ಚಲು ಗಾಯಗೊಂಡು ರಕ್ತ ಸೋರುತ್ತಿದ್ದ ಸ್ಥಿತಿಯಲ್ಲಿ ಭಾನುವಾರ ಪತ್ತೆಯಾಗಿತ್ತು. ಈ ಬಗ್ಗೆ ಹೊಸನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ನವೀನ್ ಶೆಟ್ಟಿ ಅವರ ದನಗಳು ಪದೇಪದೇ ತೋಟಕ್ಕೆ ಮೇಯಲು ಬಂದು ತೊಂದರೆ ಕೊಡುತ್ತಿದ್ದವು ಎಂಬ ಕಾರಣಕ್ಕೆ ರಾಮಚಂದ್ರ ನಾಯ್ಕ ಸಿಟ್ಟಿನಿಂದ ಕತ್ತಿ ಹಾಗೂ ಕೋಲಿನಿಂದ ಹೊಡೆದು ಹಸುವನ್ನು ಗಾಯಗೊಳಿ-ಸಿರುವುದು ವಿಚಾರಣೆ ವೇಳೆ ತಿಳಿದು ಬಂದಿದೆ. ರಾಮಚಂದ್ರ ನಾಯ್ಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹೊಸನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮರಕ್ಕೆ ಕಟ್ಟಿ ಥಳಿತ ನಾಲ್ವರ ಬಂಧನ

ಬೆಳಗಾವಿ: ‘ಹುಕ್ಕೇರಿ ತಾಲ್ಲೂಕಿನ ಇಂಗಳಿಯಲ್ಲಿ ಶನಿವಾರ ಶ್ರೀರಾಮ ಸೇನೆ ಸಂಘಟನೆಯ ಐವರು ಕಾರ್ಯಕರ್ತ-ರನ್ನು ಮರಕ್ಕೆ ಕಟ್ಟಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿ, ನಾಲ್ವರು ಆರೋಪಿಗಳನ್ನು ಬಂಧಿಸಿದ್ದೇವೆ. ಅವರಲ್ಲಿ ಒಬ್ಬ ಹಿಂದೂ ಮತ್ತು ಮೂವರು ಮುಸ್ಲಿಮರು ಇದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಹೇಳಿದರು.

‘ಗೋವುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂದು ಕಾರ್ಯಕರ್ತರು ತಕರಾರು ಮಾಡಿದ್ದರು. ನಾವು ಹೈನುಗಾರಿಕೆಗಾಗಿ ಜಾತ್ರೆಯಲ್ಲಿ ಗೋವುಗಳನ್ನು ಖರೀದಿಸಿದ ದಾಖಲೆ-ಪತ್ರಗಳನ್ನು ತೋರಿಸಿದೆವು. ಆದರೂ ಮನೆಗೆ ಬಂದು, ಮಹಿಳೆಯರಷ್ಟೇ ಇದ್ದಾಗ ದಾಂಧಲೆ ಮಾಡಿದ್ದಾರೆಂದು ಗೋವುಗಳ ಮಾಲೀಕ ಬಾಬುಸಾಬ್ ಮುಲ್ತಾನಿ ಪ್ರತಿದೂರು ನೀಡಿದ್ದಾರೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಅಕ್ರಮ ಗೋ ಸಾಗಣೆಯಾಗಿದ್ದರೆ, ಪೊಲೀಸರಿಗೆ ದೂರು ಕೊಡಬೇಕಿತ್ತು. ಮನೆಗೆ ನುಗ್ಗಿದ್ದು ಅಕ್ಷರಶಃ ಅಪರಾಧ. ಇದಕ್ಕೆ ಕೋಪಗೊಂಡ ಗ್ರಾಮಸ್ಥರೇ, ಕಾರ್ಯಕರ್ತರನ್ನು ಕಟ್ಟಿ ಹೊಡೆದಿದ್ದಾರೆ. ಇದು ಯಾವುದೇ ಕೋಮುಗಳ ಮಧ್ಯೆ ನಡೆದ ಜಗಳವಲ್ಲ’ ಎಂದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	28,938	28,938
ಹಾರಂಗಿ	2,859	2,851.16	3,375	2,500
ಕಬಿನಿ	2,284.00	2,277.21	19,654	30,000
ಹೇಮಾವತಿ	2,922	2,917.03	16,851	12,538
ಲಿಂಗನಮಕ್ಕಿ	1,819	1,785.01	17,882	7,439
ಸೂಪಾ (ಮೀ)	564	536.98	14,149.92	1,101.36
ಮಾಣಿ	595	583.22	2,814	-
ತುಂಗಭದ್ರಾ	1,633	1,623.53	50,605	204
ಮಲಪ್ರಭಾ	2,079.5	2,061.50	6,010	194
ಘಟಪ್ರಭಾ	2175	2,145.50	12,842	1,549
ಭದ್ರಾ *	186	162.9	11,749	3,393
ಆಲಮಟ್ಟಿ (ಮೀ)	519.6	517.03	94,512	70,000
ನಾರಾಯಣಪುರ (ಮೀ)	492.25	490.69	90,000	84,445

* ನೆಲಮಟ್ಟದಿಂದ

ಹಾಸನ: ಹೆಚ್ಚಿದ ಹೃದಯಾಘಾತ

ಒಂದನೇ ಪುಟದಿಂದ...

ಈ ಪೈಕಿ ನಾಲ್ವರು ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. 25 ವರ್ಷದೊಳಗಿನ ಮೂವರು ಯುವತಿಯರು ಹಾಗೂ ಇಬ್ಬರು ಯುವಕರು, 30 ವರ್ಷ ಮೇಲಿನ 16 ಜನರು ಮೃತಪಟ್ಟಿದ್ದಾರೆ.

ಸಂಸದ ಶ್ರೇಯಸ್ ಪಟೇಲ್ ಅವರು ಜಿಲ್ಲೆಯ ಆರೋಗ್ಯಾಧಿಕಾರಿಗಳು, ಹಿಮ್ಸ್ ತಜ್ಞರ ಜೊತೆಗೆ ಸಭೆ ನಡೆಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ತುರ್ತು ಚಿಕಿತ್ಸೆಯ ತರಬೇತಿ ನೀಡುವುದು, ಶಾಲಾ ಮಕ್ಕಳು, ಸ್ಕೌಟ್ಸ್, ಗೈಡ್ಸ್ ಸ್ವಯಂ ಸೇವಕರ ಮೂಲಕ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

'ಆರೋಗ್ಯ ಕೇಂದ್ರಗಳಿಗೆ ಆಧುನಿಕ ಯಂತ್ರಗಳನ್ನು ಒದಗಿಸುವ ಮೂಲಕ ಇಸಿಜಿ, ಎಕೊ, ಟಿಎಂಟಿ ತಪಾಸಣೆ, ಯುವಜನರ ರಕ್ತದಲ್ಲಿನ ಕೊಬ್ಬಿನ ಅಂಶವನ್ನು ಪತ್ತೆ ಮಾಡಬೇಕು' ಎಂದು ಹೊಳೆನರಸೀಪುರದ ಜಯಪ್ರಕಾಶ್, ಗೋಕುಲ್ ಒತ್ತಾಯಿಸಿದರು.

'ಹೃದಯಾಘಾತ ಪ್ರಕರಣಗಳ ಬಗ್ಗೆ ಪರಿಶೀಲಿಸಿ ವರದಿ ನೀಡಲು ಡಾ.ಚೇತನ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ' ಎಂದು ಡಿಎಚ್‌ಒ ಡಾ.ಅನಿಲ್ ಎಚ್. ತಿಳಿಸಿದರು.

'ಕೋವಿಡ್-19 ಲಸಿಕೆಯ ಅಡ್ಡಪರಿಣಾಮ ಎಂಬ ಆತಂಕ ಬೇಡ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಬದಲಾಗುತ್ತಿರುವ ಜೀವನಶೈಲಿ, ವ್ಯಾಯಾಮದ ಕೊರತೆ, ಆರೋಗ್ಯ ತಪಾಸಣೆ ಇಲ್ಲದಿರುವುದು ಹೃದಯಾಘಾತಕ್ಕೆ ಪ್ರಮುಖ ಕಾರಣ' ಎಂದರು.

ವರದಿ ಸಲ್ಲಿಸಲು ಸಚಿವರ ಸೂಚನೆ

ಒಂದನೇ ಪುಟದಿಂದ...

'ಕೋವಿಡ್ ಬಳಿಕ ಹೃದಯಾಘಾತ ಪ್ರಮಾಣ ಹೆಚ್ಚಳ ಆಗುತ್ತಿರುವ ಬಗ್ಗೆ ಪರಿಶೀಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ. ಇದು ಕೇವಲ ಕರ್ನಾಟಕದ ಸಮಸ್ಯೆ ಅಲ್ಲ, ಜಾಗತಿಕ ಮಟ್ಟದಲ್ಲಿ ಈ ಬಗ್ಗೆ ಅಧ್ಯಯನ ನಡೆಯಬೇಕಾದ ಅಗತ್ಯ ಇದೆ' ಎಂದು ಅವರು ಅಭಿಪ್ರಾಯಪಟ್ಟರು.

ವೈದ್ಯ ವಿದ್ಯಾರ್ಥಿ ಸಾವು

ಒಂದನೇ ಪುಟದಿಂದ...

'ಎರಡು ದಿನಗಳ ಹಿಂದೆ ರಜೆ ಮೇಲೆ ಸಂಬಂಧಿಕರ ಜೊತೆ ಬೆಂಗಳೂರಿಗೆ ಹೋಗಿದ್ದ ಅವರು, ಅಲ್ಲಿಂದ ತಮಿಳುನಾಡಿಗೆ ಹೋಗಿದ್ದರು. ವಾಪಸ್ ಬರುವಾಗ, ಆರೋಗ್ಯದಲ್ಲಿ ಏರುಪೇರಾಗಿ ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಿ ಅವರು ಹೃದಯಾಘಾತದಿಂದ ಮೃತಪಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಕುಮಸಗಿ ಗ್ರಾಮದ ಲಕ್ಷ್ಮೀಪುತ್ರ ಅವರು 2019-20ನೇ ಸಾಲಿನಲ್ಲಿ ಎಂಬಿಬಿಎಸ್ ಪ್ರವೇಶ ಪಡೆದಿದ್ದರು. ಜುಲೈ 10ಕ್ಕೆ ಇಂಟರ್ನ್‌ಶಿಪ್ ಪೂರ್ಣವಾಗುತ್ತಿತ್ತು.

ಸುಜಾತಾ ಮುಂದುವರಿಕೆ

ಬೆಂಗಳೂರು: ಸೇವೆಯಿಂದ ನಿವೃತ್ತಿ ಹೊಂದಿದ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶನಾಲಯದ ನಿರ್ದೇಶಕಿ ಡಾ.ಬಿ.ಎಲ್.ಸುಜಾತಾ ರಾಥೋಡ್ ಅವರನ್ನು ಅದೇ ಹುದ್ದೆಯಲ್ಲಿ ಮುಂದಿನ ಆರು ತಿಂಗಳಿಗೆ ಗುತ್ತಿಗೆ ಆಧಾರದ ಮೇಲೆ ಮುಂದುವರಿಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–26/474/2025–26 ದಿನಾಂಕ: 30.06.2025

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಇಪಿಸಿ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಇಪಿಸಿ ಗುತ್ತಿಗೆಯಡಿಯಲ್ಲಿ ಮಹಿಳಾ ಉದ್ಯೋಗಿಗಳ ವಸತಿ ನಿಲಯ ಕಟ್ಟಡಗಳ ವಿನ್ಯಾಸ ಹಾಗೂ ನಿರ್ಮಾಣ ಮತ್ತು 1 ವರ್ಷದ ಅವಧಿಗೆ ನಿರ್ವಹಣೆ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04.08.2025 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/1546/NR/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)-1/2/2025-26/2801-35 ದಿನಾಂಕ: 30.06.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2396** ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕು **ಘೋನಸಗಿಯಲ್ಲಿ** 2X20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ವಿಜಯಪುರ ಜಿಲ್ಲೆಯ ಪ್ರಸ್ತಾವಿತ 110ಕೆವಿ ಕನಮಾಡಿ-ತಕ್ಕಲಕ್ಕಿ ಎಸ್.ಸಿ (SC) ಮಾರ್ಗದಿಂದ **3.425 ಕಿ.ಮೀ** ಗಳ ಉದ್ದಕ್ಕೆ ಲಿಂಕ್ಸ್ (Lynx) ವಾಹಕದಿಂದ 110 ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2391** ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕು **ಮುದೇನೂರಿನಲ್ಲಿ 2X20 ಎಂ.ವಿ.ಎ, 110/11 ಕೆವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಪ್ರಸ್ತಾವಿತ 110ಕೆ.ವಿ ಸಾಲಾಪುರ ಉಪಕೇಂದ್ರದಿಂದ ಪ್ರಸ್ತಾವಿತ 110/11 ಕೆ.ವಿ ಮುದೇನೂರು ಉಪಕೇಂದ್ರದವರೆಗೆ ಪ್ಯಾಂಥರ್ (Panther) ವಾಹಕದಿಂದ **8.189 ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಡಿ.ಸಿ (DC) ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಪ್ರಸ್ತಾವಿತ 110ಕೆ.ವಿ ಸಾಲಾಪುರ ಉಪಕೇಂದ್ರದಲ್ಲಿ 2 ಸಂಖ್ಯೆಗಳ 110ಕೆ.ವಿ ಟರ್ಮಿನಲ್ ಬೇ ಗಳನ್ನು ನಿರ್ಮಿಸಿವುದು.
3.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2388** ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು **ತೇಗೂರಿನಲ್ಲಿ 2X20 ಎಂ.ವಿ.ಎ, 110/11ಕೆವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ನರೇಂದ್ರ-ಶಡ್ಬಾಲ್-ಕಿತ್ತೂರು ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆ.ವಿ ತೇಗೂರು ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **6.296 ಕಿ.ಮೀಗಳ** ಉದ್ದಕ್ಕೆ 110 ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
4.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2370** ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು **ಅರಳಿಕಟ್ಟಿ ಕ್ರಾಸ್ (ಹಿರೇಹೊನ್ನಳ್ಳಿ)** ಯಲ್ಲಿ **2X20ಎಂ.ವಿ.ಎ,** 110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ಕಾಡನಕೊಪ್ಪ-ಕವಲ್ವಾಡ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆ.ವಿ ಅರಳಿಕಟ್ಟಿ ಕ್ರಾಸ್ (ಹಿರೇಹೊನ್ನಳ್ಳಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **3.643ಕಿ.ಮೀಗಳ** ಉದ್ದಕ್ಕೆ 110 ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
5.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2394** ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು **ಕುಪ್ಪಗಡ್ಡೆಯಲ್ಲಿ 2X20 ಎಂ.ವಿ.ಎ,** 110/11 ಕೆವಿ ಉಪ-ಕೇಂದ್ರವನ್ನು ನಿರ್ಮಿಸುವುದು ಮತ್ತು ಹಾಲಿಯಿರುವ 110/11 ಕೆವಿ ತೊಗರ್ಸಿ ಉಪಕೇಂದ್ರದಿಂದ ಪ್ರಸ್ತಾವಿತ 110 ಕೆ.ವಿ ಕುಪ್ಪಗಡ್ಡೆ ಉಪಕೇಂದ್ರದವರೆಗೆ ಪ್ಯಾಂಥರ್ ವಾಹಕ ಕೂಡಿದ **11.68 ಕಿ.ಮೀಗಳ** ಉದ್ದಕ್ಕೆ 110ಕೆವಿ ಡಿಸಿ ಪ್ರಸರಣ ಮಾರ್ಗವನ್ನು ಹಾಗೂ ಹಾಲಿಯಿರುವ 110 ಕೆವಿ ತೊಗರ್ಸಿ ಉಪಕೇಂದ್ರದಲ್ಲಿ 2 ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.
6.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2395** ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು **ಚೌಳಹಿರಿಯೂರಿನಲ್ಲಿ 2X20ಎಂ.ವಿ.ಎ,** 110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಮತ್ತು ಹಾಲಿಯಿರುವ 110 ಕೆವಿ ಯಗಟಿ ಉಪಕೇಂದ್ರದಿಂದ ಪ್ರಸ್ತಾವಿತ 110 ಕೆವಿ ಚೌಳಹಿರಿಯೂರು ಉಪಕೇಂದ್ರದ ವರೆಗೆ ಪ್ಯಾಂಥರ್ ವಾಹಕದ **8.76 ಕಿ.ಮೀಗಳ** ಉದ್ದಕ್ಕೆ 110 ಕೆವಿ ಡಿಸಿ ಪ್ರಸರಣ ಮಾರ್ಗವನ್ನು ಹಾಗೂ ಹಾಲಿಯಿರುವ 110 ಕೆವಿ ಯಗಟಿ ಉಪಕೇಂದ್ರದಲ್ಲಿ 2 ಸಂಖ್ಯೆಯ 110 ಕೆವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.
7.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2387** ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು **ತೂಬಿನಕೆರೆ ಕೈಗಾರಿಕಾ ಪ್ರದೇಶದಲ್ಲಿ 2X20** ಎಂ.ವಿ.ಎ, 66/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66 ಕೆವಿ ತೂಬಿನಕೆರೆ-ಮಂಡ್ಯ ಎಂಸಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11 ಕೆವಿ ತೂಬಿನಕೆರೆ ಕೈಗಾರಿಕಾ ಪ್ರದೇಶ ಉಪಕೇಂದ್ರದವರೆಗೆ ಕೊಯೋಟ್ ಕಂಡಕ್ಟರ್‌ನಿಂದ **0.215 ಕಿ.ಮೀ** ಉದ್ದಕ್ಕೆ 66ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
8.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2397** ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕು **ತೆಲಸಂಗದಲ್ಲಿ 2X20 ಎಂ.ವಿ.ಎ, 110/11ಕೆವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ಕಾಕಮರಿ ಉಪಕೇಂದ್ರದಿಂದ ಪ್ರಸ್ತಾವಿತ 110/11 ಕೆ.ವಿ ತೆಲಸಂಗ ಉಪಕೇಂದ್ರದವರೆಗೆ ಪ್ಯಾಂಥರ್ (Panther) ವಾಹಕದಿಂದ **7.903 ಕಿ.ಮೀಗಳ** ಉದ್ದಕ್ಕೆ 110ಕೆ.ವಿ ಡಿ.ಸಿ (DC) ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಉದ್ದೇಶಿತ 110/11 ಕೆ.ವಿ ಕಾಕಮರಿ ಉಪಕೇಂದ್ರದಲ್ಲಿ ಸಂಖ್ಯೆಗಳ 110 ಕೆ.ವಿ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು.
9.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2389** ಕಲಬುರ್ಗಿ ಜಿಲ್ಲೆ, ಚಿಂಚೋಳಿ ತಾಲ್ಲೂಕು **ಕೊಲ್ಲೂರು ಗ್ರಾಮದಲ್ಲಿ 2X20ಎಂವಿಎ,** 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಹಾಲಿಯಿರುವ 110ಕೆವಿ ಚಿಂಚೋಳಿ-ಮನ್-ಎ-ಖೇಲಿ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆವಿ ಕೊಲ್ಲೂರು ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **9.723ಕಿಮೀಗಳ** ಉದ್ದಕ್ಕೆ 110 ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
10.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2392** ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು **ಬಳುವನೇರವಿನಲ್ಲಿ 2X20 ಎಂ.ವಿ.ಎ,** 110/11ಕೆವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ತಿಪಟೂರು-ಹಾಲ್ಕುರಿಕೆ ಪ್ರಸರಣ ಮಾರ್ಗದಿಂದ ಡಿ.ಸಿ (DC) ಗೋಪುರಗಳ ಮೇಲೆ ಲಿಲೋ (LILO) ವಾಹಕದಿಂದ **4.402 ಕಿ.ಮೀಗಳ** ಉದ್ದಕ್ಕೆ 110 ಕೆ.ವಿ ಲಿಲೋ (LILO) ಪ್ರಸರಣ ಮಾರ್ಗದ ನಿರ್ಮಾಣ ಮತ್ತು ಹಾಲಿಯಿರುವ ಡಿ.ಸಿ (DC) ಗೋಪುರಗಳ ಮೇಲೆ 110 ಕೆ.ವಿ ಹಾಲ್ಕುರಿಕೆ ಟ್ಯಾಪ್ ಪಾಯಿಂಟ್‌ನಿಂದ 110/11ಕೆ.ವಿ ಹಾಲ್ಕುರಿಕೆ ಉಪಕೇಂದ್ರದವರೆಗೆ **12.095 ಕಿ.ಮೀಗಳ** ಉದ್ದಕ್ಕೆ 2ನೇ ಸರ್ಕ್ಯೂಟ್ ಪ್ರಸರಣ ಮಾರ್ಗದ ನಿರ್ಮಾಣ ಮತ್ತು 110/11 ಕೆ.ವಿ ಹಾಲ್ಕುರಿಕೆ ಉಪಕೇಂದ್ರದಲ್ಲಿ 1 ಸಂಖ್ಯೆ 110 ಕೆ.ವಿ ಟರ್ಮಿನಲ್ ಬೇ ನಿರ್ಮಿಸುವುದು.
11.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2390** ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕು **ಅಮ್ದಿಹಾಳದಲ್ಲಿ 2X20 ಎಂ.ವಿ.ಎ,** 110/11 ಕೆವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110 ಕೆ.ವಿ ಮುದಗಲ್-ಬಯ್ಯಾಪುರ ಮಾರ್ಗದಿಂದ ಪ್ರಸ್ತಾವಿತ 110ಕೆ.ವಿ ಅಮ್ದಿಹಾಳ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **6.64ಕಿ.ಮೀಗಳ** ಉದ್ದಕ್ಕೆ 110 ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
12.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2398** ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು **ಹೊನ್ನೇಬಾಗಿ (ವಡ್ನಾಳ್) ಯಲ್ಲಿ 2X20ಎಂವಿಎ,** 66/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಹಾಲಿಯಿರುವ 66 ಕೆವಿ ಬೆಂಕಿಕೆರೆ-ಗೊಪ್ಪೇನಹಳ್ಳಿ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66 ಕೆವಿ ಹೊನ್ನೇಬಾಗಿ (ವಡ್ನಾಳ್) ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **0.757ಕಿಮೀಗಳ** ಉದ್ದಕ್ಕೆ 66 ಕೆವಿ ಲಿಲೋ (Lynx) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
13.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2393** ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು ಇಂಡಸ್ಟ್ರಿಯಲ್ ಎಸ್ಟೇಟ್, **ಗೋಕುಲ್ ರಸ್ತೆ,** ಹುಬ್ಬಳ್ಳಿಯಲ್ಲಿ 2X5 ಎಂವಿಎ, 33/11 ಕೆವಿ ಉಪಕೇಂದ್ರವನ್ನು **2X20 ಎಂವಿಎ,** 110/11 ಕೆವಿ ಹಾಗೂ **1X20ಎಂವಿಎ,** 110/33 ಕೆವಿ ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110 ಕೆವಿ ಆನಂದ ನಗರ-ಅಕ್ಷಯ ಕಾಲೋನಿ ಎಸ್ ಸಿ (SC) ಭೂಗತ (UG) ಕೇಬಲ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/33/11 ಕೆವಿ ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ್ ರಸ್ತೆ, ಹುಬ್ಬಳ್ಳಿ ಉಪಕೇಂದ್ರದವರೆಗೆ 110 ಕೆವಿ, 630 ಚಮಿಮೀ. ಭೂಗತ (UG) ಕೇಬಲ್ ಬಳಸಿಕೊಂಡು **0.98ಕಿಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ 07.07.2025 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿ ಕ್ರ.ಸಂ (1) ರಿಂದ (7) ರ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 23.07.2025 ರಂದು ಅಪರಾಹ್ನ 15:00 ಗಂಟೆ,** ಕ್ರ.ಸಂ (8) ರಿಂದ (10) ರ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 25.07.2025 ರಂದು ಅಪರಾಹ್ನ 15:00 ಗಂಟೆ** ಹಾಗೂ ಕ್ರ.ಸಂ (11) ರಿಂದ (13) ರ ಕಾಮಗಾರಿಗೆ ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 28.07.2025 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/–, ಮುಖ್ಯ ಇಂಜಿನಿಯರ್ (ವಿದ್ಯುತ್)
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560 009.

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ

ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ದೂರವಾಣಿ : +91–80–22864626, ಇ–ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0313 ದಿನಾಂಕ: 26.06.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಬೆಳಗಾವಿ ನಗರಕ್ಕೆ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್ವರ್ಕ್ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 479.83 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 09.07.2025 ಸಮಯ ಸಂಜೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 28.07.2025 ಸಮಯ ಸಂಜೆ 17.00 ಗಂಟೆಗಳು.** ಇತರೆ ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು

ವಾಸಾಸಂಇ/ವಾ.ಪ್ರ./1540/2025–26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಶಸ್ತ್ರಚಿಕಿತ್ಸಕರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ–576201
ದೂರವಾಣಿ ಸಂಖ್ಯೆ: (08254) 230333/234808 ಇ–ಮೇಲ್: ghkundapura@gmail.com

ಸಂಖ್ಯೆ: ಸಾಆಕು/8/:2025–26 ದಿನಾಂಕ: 26.06.2025

ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ: ಸಾ.ಆ.ಕು/08/: 2025–26 ಪಥ್ಯಾಹಾರ ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳು ಸರಬರಾಜು ದಿ: 26.06.2025, ಟೆಂಡರ್ ವಿವರ: 2025–26 ನೇ ಸಾಲಿಗೆ ಪಥ್ಯಾಹಾರ ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳು ಸರಬರಾಜು. ಟೆಂಡರ್ ಅಂದಾಜು ಮೊತ್ತ: ಗ್ರೂಪ್ ಎ: ರೂ. 33,00,000/–, ಗ್ರೂಪ್ ಬಿ: ರೂ. 200,000/–, ಇ.ಎಂ.ಡಿ ಮೊತ್ತ: ರೂ. 87,500/–, ಟೆಂಡರ್ ಆರಂಭ ದಿನಾಂಕ: 30.06.2025, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 29.07.2025 ಸಮಯ ಅಪರಾಹ್ನ 4.30 ಗಂಟೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 30.07.2025 ಪೂರ್ವಾಹ್ನ 11.00 ಗಂಟೆಗೆ, ಟೆಂಡರ್ ತೆರೆಯಲು ಸ್ಥಳ: ಶಸ್ತ್ರಚಿಕಿತ್ಸಕರು, ಉಪವಿಭಾಗೀಯ, ಸಾರ್ವಜನಿಕ ಆಸ್ಪತ್ರೆ, ಕುಂದಾಪುರ

ಸಹಿ/– ಆಡಳಿತ ವೈದ್ಯಾಧಿಕಾರಿ,
ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ,
ಕುಂದಾಪುರ–576201, ಉಡುಪಿ ಜಿಲ್ಲೆ

ವಾಸಾಇ/ಸನಿಇ/ಕೆಎಸ್‌ಎಂಸಿಎ/203/25–26 ದಿ: 30.06.2025

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಚೇರಿ (ತ್ಯಾನೀನಿ–ಪೂರ್ವ) 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
(ತ್ಯಾನೀನಿ–ಎಸ್‌ಟಿಪಿ) ಸಿ.ವಿ.	ಬೆಂಜಮಂ/ಕಾನಿಅ (ತ್ಯಾನೀನಿ–ಎಸ್‌ಟಿಪಿ) ಸಿವಿ/ಪಿಬಿ/132/ 2025–26 ದಿನಾಂಕ: 16.06.2025	ರೂ. 37,50,000/– ರೂ. 75,000/–	08.07.2025 ಸಂಜೆ 04:00 ಗಂಟೆಯವರೆಗೆ	09.07.2025 ಬೆಳಗ್ಗೆ 11:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎಸ್‌ಟಿಪಿ) ಸಿ.ವಿ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/1539/SSC/2025-26

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A++' Grade
Accredited by NAAC with A++
ಜ್ಞಾನಭಾರತಿ ಆವರಣ, ಬೆಂಗಳೂರು – 560 056.

ಸಂಖ್ಯೆ: ಸಂಖ್ಯೆ:ಸಿಬ್ಬಂದಿ–2:ಇ3:ಅ.ಉ:ಅಧಿಸೂಚನೆ:2025–26 ದಿನಾಂಕ: 30.06.2025

ಅಧಿಸೂಚನೆ

2025–26ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ, ವಿಶ್ವವಿದ್ಯಾಲಯ ಕಾನೂನು ಕಾಲೇಜು ಹಾಗೂ B.A/B.Sc/B.Com/BCA courseಗೆ ಬೋಧಿಸಲು ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. UGC/BCI ನಿಯಮಗಳ ಪ್ರಕಾರ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ NET/SLET/Ph.D ಪಡೆದಿರುವ ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ **https://bangaloreuniversity.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿತ ದಾಖಲೆಗಳ ಪ್ರತಿಯೊಂದಿಗೆ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಪ್ರಾಂಶುಪಾಲರು/ಮುಖ್ಯಸ್ಥರು/ಸಮನ್ವಯಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ ಬೆಂಗಳೂರು–560056 ಇವರಿಗೆ **ದಿನಾಂಕ: 08.07.2025** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸುವುದು. ಆಯ್ಕೆಯಾದ ಅತಿಥಿ ಉಪನ್ಯಾಸಕರು ಬೋಧಿಸಬೇಕಾದ ವಿಷಯಗಳ ಪಟ್ಟಿಯನ್ನು ಮೇಲ್ಕಂಡ ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಬಹುದು.

ಸಹಿ/–
ಕುಲಸಚಿವರು

DIPR/CP/RO1545/AAPL/2025-26

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ),

ಸಕಾಲ ಮಿಷನ್,
1ನೇ ಗೇಟ್, 1ನೇ ಮಹಡಿ, ಕೊಠಡಿ ಸಂಖ್ಯೆ: 124.
ಬಹುಮಹಡಿ ಕಟ್ಟಡ, ಬೆಂಗಳೂರು–560 001.
Website: www.sakala.kar.nic.in ದೂರವಾಣಿ: 080–2203 2857, 080–2203 2899 e-mail: aosakala@karnataka.gov.in

ಸಂಖ್ಯೆ: DPAREGOV/2025-26/SE0033 ದಿನಾಂಕ: 30.06.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

"ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014" ಅನ್ನು ಅನುಷ್ಠಾನಗೊಳಿಸಲು ಕರೆ ಕೇಂದ್ರದ ಸೇವೆಯನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಇ–ಆಡಳಿತ ಇಲಾಖೆಯ ವೆಬ್ ಸೈಟ್ http://www.kppp.karnataka.gov.in ಮುಖಾಂತರ ಅರ್ಹ ಟೆಂಡರ್‌ದಾರರಿಂದ (1)ತಾಂತ್ರಿಕ ಬಿಡ್ (2)ಆರ್ಥಿಕ ಬಿಡ್ ಎಂದು 2 ಭಾಗಗಳಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಕೆಳಕಂಡಂತೆ ನಿಗದಿಪಡಿಸಲಾಗಿದೆ: 1) ಬಿಡ್ ಸಿಂಧುತ್ವ ಅವಧಿ (ದಿನಗಳು): **180**. 2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **30.06.2025, 17.30 ಗಂಟೆಗೆ.** 3) ಪೂರ್ವ ಬಿಡ್ ಸಭೆ ದಿನಾಂಕ: **04.07.2025, 15.00 ಗಂಟೆಗೆ.** ಸ್ಥಳ–ಸಕಾಲ ಮಿಷನ್ ಕಛೇರಿ. ಹೆಚ್ಚಿನ ವಿವರಗಳಿಗಾಗಿ: ಇ–ಮೇಲ್: aosakala@gmail.com ದೂರವಾಣಿ: 080–2203 2857. 4) ಟೆಂಡರ್ ಕುರಿತು ಪ್ರಶ್ನೆಗಳು/ಸ್ಪಷ್ಟೀಕರಣ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: : **10.07.2025, 17.00 ಗಂಟೆವರೆಗೆ.** 5) ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ವೇಳೆ: **14.07.2025, 17.30 ಗಂಟೆಗೆ.** 6) ತಾಂತ್ರಿಕ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **16.07.2025, 11.30 ಗಂಟೆಗೆ.** 7) ಹಣಕಾಸಿನ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **21.07.2025, 11.30 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: www.kppp.karnataka.gov.in/ https://kppp.karnataka.gov.in

ಸಹಿ/–
ಆಡಳಿತಾಧಿಕಾರಿ(ಪ್ರ) ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಸಕಾಲ ಮಿಷನ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ), ಕರ್ನಾಟಕ ಸರ್ಕಾರ.

ವಾಸಾಸಂಇ/ವಾ.ಪ್ರ/1547/ಎಂಎಎ/25–26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501

(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ) ಇ–ಮೇಲ್ : ka.chitradurga.dudc@gmail.com

ನಂ. ಜಿ.ನ.ಕೋ/ನಗರೋತ್ಥಾನ ಹಂತ 04/ಸಿ.ಆರ್/110/2025–26 ದಿನಾಂಕ: 27.06.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ನಗರಸಭೆ, ಹೊಸದುರ್ಗ, ಹೊಳಲ್ಕೆರೆ ಪುರಸಭೆ ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ದಾಸ್ತವೇಜುನಂತೆ, ಅರ್ಹ ಗುತ್ತಿಗೆದಾರರು / ಸರಬರಾಜುದಾರರು, ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. (ರೂ.ಲಕ್ಷಗಳಲ್ಲಿ)

ಕಾಮಗಾರಿಗಳ ವಿವರ:– (1) ಚಳ್ಳಕೆರೆ ನಗರಸಭೆ ವ್ಯಾಪ್ತಿಯಲ್ಲಿರುವ 45 ಸಂಖ್ಯೆ ವಿಕಲಚೇತನರಿಗೆ ಮೋಟಾರ್ ಚಾಲಿತ ತ್ರಿಚಕ್ರವಾಹನ ನೀಡುವುದು. ಇಂಡೆಂಟ್ ಸಂ. DMA/2024-25/ IND4476/CALL-2 ಅಂದಾಜು ಮೊತ್ತ:–63.75 ಲಕ್ಷ. ಟೆಂಡರ್‌ಗಿಟ್ಟ ಮೊತ್ತ:–60.52 ಲಕ್ಷ. ಇ.ಎಂ.ಡಿ ಮೊತ್ತ:–1.21 ಲಕ್ಷ. ಕಾಮಗಾರಿಯ ಅವಧಿ:–60 ದಿನ (2) ಹಿರಿಯೂರು ನಗರ ವ್ಯಾಪ್ತಿಯಲ್ಲಿ ವಾಸವಾಗಿರುವ ವಿಕಲಚೇತನರಿಗೆ ತ್ರಿಚಕ್ರ ವಾಹನಗಳನ್ನು ಖರೀದಿಸಿ ನೀಡುವುದು. ಇಂಡೆಂಟ್ ಸಂ. DMA/2025-26/ IND4797/CALL-2 ಅಂದಾಜು ಮೊತ್ತ:–63.75 ಲಕ್ಷ. ಟೆಂಡರ್‌ಗಿಟ್ಟ ಮೊತ್ತ:–63.21 ಲಕ್ಷ. ಇ.ಎಂ.ಡಿ ಮೊತ್ತ:–1.26 ಲಕ್ಷ. ಕಾಮಗಾರಿಯ ಅವಧಿ:–60 ದಿನ (3) ಹೊಸದುರ್ಗ ಪುರಸಭೆಯ ವಿಕಲಚೇತನರಿಗೆ ನಾಲ್ಕು ಚಕ್ರದ ವಾಹನ ಖರೀದಿಸಿ ನೀಡುವುದು ಇಂಡೆಂಟ್ ಸಂ. DMA/2025-26/ IND4798/CALL-2 ಅಂದಾಜು ಮೊತ್ತ:–18.00 ಲಕ್ಷ. ಟೆಂಡರ್‌ಗಿಟ್ಟ ಮೊತ್ತ:–17.48 ಲಕ್ಷ. ಇ.ಎಂ.ಡಿ ಮೊತ್ತ:–0.44 ಲಕ್ಷ. ಕಾಮಗಾರಿಯ ಅವಧಿ:–60 ದಿನ. (4) ಹೊಳಲ್ಕೆರೆ ಪಟ್ಟಣ ವ್ಯಾಪ್ತಿಯ ವಿಕಲಚೇತನರಿಗೆ ತ್ರಿಚಕ್ರ ವಾಹನ ಖರೀದಿಸಿ ನೀಡುವುದು. ಇಂಡೆಂಟ್ ಸಂ. DMA/2025-26/ IND4799/CALL-2 ಅಂದಾಜು ಮೊತ್ತ:–5.00 ಲಕ್ಷ. ಟೆಂಡರ್‌ಗಿಟ್ಟ ಮೊತ್ತ:–4.03 ಲಕ್ಷ. ಇ.ಎಂ.ಡಿ ಮೊತ್ತ:–0.10 ಲಕ್ಷ ಕಾಮಗಾರಿಯ ಅವಧಿ:–60 ದಿನ. (5) ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯಲ್ಲಿ ಬರುವ ಅಂಗವಿಕಲರಿಗೆ ತ್ರಿಚಕ್ರ ವಾಹನ ಖರೀದಿಸಿ ನೀಡುವುದು. ಇಂಡೆಂಟ್ ಸಂ. DMA/2025-26/ IND4800/CALL-2 ಅಂದಾಜು ಮೊತ್ತ:–10.63 ಲಕ್ಷ. ಟೆಂಡರ್‌ಗಿಟ್ಟ ಮೊತ್ತ:–9.41. ಲಕ್ಷ. ಇ.ಎಂ.ಡಿ ಮೊತ್ತ:– 0.24 ಲಕ್ಷ ಕಾಮಗಾರಿಯ ಅವಧಿ:–60 ದಿನ ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು http://kppp.karnataka.gov.in ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀಗಳನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು.

ಟೆಂಡರ್‌ನ ವೇಳಾಪಟ್ಟಿ :– 1) ಟೆಂಡರ್‌ನ ಬಗ್ಗೆ ವಿಚಾರಿಸಲು ಕೊನೆ ದಿನಾಂಕ 09–07–2025 ಸಮಯ 11.00
2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 14–07–2025 ಸಮಯ 17.00
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 15–07–2025 ಸಮಯ 17.00
4) ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಟೆಂಡರ್ ಕುರಿತಾದ ಹೆಚ್ಚಿನ ಮಾಹಿತಿಗಳನ್ನು ಮೇಲೆ ತಿಳಿಸಲಾದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಮತ್ತು ದಿನಪತ್ರಿಕೆ ಜಾಹಿರಾತು ಪ್ರಕಟಣೆಯಲ್ಲಿ ನೀಡಲಾಗುವುದಿಲ್ಲ.

DIPR/CTA/KSMCA/176/2025-26 ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆರೋಗ್ಯಸೌಧ, ಮಾಗಡಿರಸ್ತೆ, ಬೆಂಗಳೂರು–560023.
ಇ–ಮೇಲ್: ddehospital-hfws@karnataka.gov.in ಮೊಬೈಲ್ : 080–23295623

No. Recruitment through State budget(E-1133294) Date: 30.06.2025

ಇ–ಹೆಲ್ತ್ ಕಾರ್ಯಕ್ರಮದ ಅಡಿಯಲ್ಲಿ ಲಿನಕ್ಸ್ ಸಿಸ್ಟಂ ಅಡ್ಮಿನಿಸ್ಟ್ರೇಟರ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯವು ಲಿನಕ್ಸ್ ಸಿಸ್ಟಂ ಅಡ್ಮಿನಿಸ್ಟ್ರೇಟರ್ ಹುದ್ದೆಗೆ ಸೂಕ್ತ ಆಸಕ್ತ ಅಭ್ಯರ್ಥಿಗಳನ್ನು ಆಹ್ವಾನಿಸುತ್ತದೆ. ವಿವರವಾದ ಮಾಹಿತಿಗಾಗಿ ದಯವಿಟ್ಟು https://hfwcom.karnataka.gov.in/ ಗೆ ಭೇಟಿ ನೀಡಿ.

ಈ ಹುದ್ದೆಯು ತಾತ್ಕಾಲಿಕವಾಗಿದ್ದು ಸಂಪೂರ್ಣವಾಗಿ ಒಪ್ಪಂದದ ಆಧಾರದ ಮೇಲೆ 31–03–2026 ರವರೆಗೆ ಇದೆ. ಅರ್ಜಿದಾರರು ಅರ್ಜಿಯ ಹಾರ್ಡ್ ಕಾಪಿಯನ್ನು (ಎರಡು ಸೆಟ್‌ಗಳಲ್ಲಿ) ಸಂಬಂಧಿತ ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ಉಪ ನಿರ್ದೇಶಕರ (ಇ–ಹೆಲ್ತ್) ಕಚೇರಿಗೆ, 6ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, 1ನೇ ಕ್ರಾಸ್, ಬೆಂಗಳೂರು – 560023 ಗೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 10/07/2025 ಸಂಜೆ 5.00 ಗಂಟೆಗೆ. ಅಭ್ಯರ್ಥಿಗಳು ಅರ್ಜಿಯೊಂದಿಗೆ ಮೂಲ ದಾಖಲೆಗಳನ್ನು ತರಲು ವಿನಂತಿಸಲಾಗಿದೆ. ಅದೇ ದಿನ ಮೂಲ ದಾಖಲೆಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸಲಾಗುವುದು. ಅಗತ್ಯ ಅರ್ಹತೆ ಮತ್ತು ಅನುಭವದ ಪ್ರಕಾರ ಅರ್ಹತೆ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು.

ಹುದ್ದೆಯ ವಿವರಗಳು:

ಕ್ರ ಸಂ	ಹುದ್ದೆ	ಖಾಲಿ ಹುದ್ದೆಗಳ ಸಂಖ್ಯೆ	ಅರ್ಹತೆ	ಅನುಭವ	ಸಂಬಳ
1	ಲಿನಕ್ಸ್ ಸಿಸ್ಟಂ ಅಡ್ಮಿನಿಸ್ಟ್ರೇಟರ್	01	BE (CS/IT) /B.Tech (CS/IT)/ MCA	1. ಲಿನಕ್ಸ್ (ರೆಡ್‌ಹ್ಯಾಟ್) 2. ವಿಂಡೋಸ್ ಪರಿಸರದಲ್ಲಿ ಅನುಭವ (ಆದ್ಯತೆ) 3. ಕನಿಷ್ಠ 3 ವರ್ಷಗಳ ಅನುಭವ Cloud environment ಅನುಭವಕ್ಕೆ ಆದ್ಯತೆ	ರೂ.75,000/–

ಸಹಿ/– ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

DIPR/CP/1534/Zen/2025-26

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560 001.

ಸಂಖ್ಯೆ : DPAR/10 RUPPs (Chuvebha) 2025 ದಿನಾಂಕ : 27.06.2025

ಶೋಕಾಸ್ ಪ್ರಕಟಣೆ

ಭಾರತದ ನಾಗರಿಕರ ಸಂಘ / ಸಂಸ್ಥೆಯನ್ನು ರಾಜಕೀಯ ಪಕ್ಷವಾಗಿ ನೋಂದಾಯಿಸುವುದು 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 29ಎ ರ ನಿಬಂಧನೆಗಳಿಂದ ನಿಯಂತ್ರಿಸಲ್ಪಡುತ್ತದೆ; ಮತ್ತು

ಏಕೆಂದರೆ, ಮೇಲೆ ತಿಳಿಸಿದ ಸೆಕ್ಷನ್ 29ಎ ಅಡಿಯಲ್ಲಿ ಚುನಾವಣಾ ಆಯೋಗದಲ್ಲಿ ರಾಜಕೀಯ ಪಕ್ಷವಾಗಿ ಸಂಘವನ್ನು ನೋಂದಾಯಿಸುವ ಉದ್ದೇಶವನ್ನು ಆ ಸೆಕ್ಷನ್‌ನಲ್ಲಿಯೇ ಹೇಳಲಾಗಿದೆ, ಅಂದರೆ 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಉದ್ದೇಶಗಳಿಗಾಗಿ ಆ ಭಾಗದ ನಿಬಂಧನೆಗಳನ್ನು ಪಡೆದುಕೊಳ್ಳುವುದು, ಅಂದರೆ ಆಯೋಗವು ಈ ಕಾಯ್ದೆಯ ಅಡಿಯಲ್ಲಿ ನಡೆಸುವ ಚುನಾವಣೆಗಳಲ್ಲಿ ಭಾಗವಹಿಸುವುದು; ಮತ್ತು

ಕೆಳಗೆ ತಿಳಿಸಲಾದ ನೋಂದಾಯಿತ **ಗುರುತಿಸಲಾಗದ ರಾಜಕೀಯ ಪಕ್ಷಗಳನ್ನು** ಸದರಿ ವಿಭಾಗದ ಅಡಿಯಲ್ಲಿ ಪಕ್ಷವು ಮಾಡಿದ ಅರ್ಜಿಯ ಮೇರೆಗೆ ಸದರಿ ವಿಭಾಗ 29ಎ ಅಡಿಯಲ್ಲಿ ರಾಜಕೀಯ ಪಕ್ಷವಾಗಿ ನೋಂದಾಯಿಸಲಾಗಿದೆ; ಮತ್ತು

ಸದರಿ ರಾಜಕೀಯ ಪಕ್ಷದ ಪ್ರಸ್ತುತ ವಿಳಾಸ ತಿಳಿದಿಲ್ಲವಾದ್ದರಿಂದ; ಮತ್ತು ಆಯೋಗದ ದಾಖಲೆಗಳ ಪ್ರಕಾರ, ಸದನಕ್ಕೆ ಅಥವಾ ಯಾವುದೇ ರಾಜ್ಯ ವಿಧಾನಸಭೆಗೆ ಅಥವಾ ಉಪಚುನಾವಣೆಗೆ 2019 ರಿಂದ ಕಳೆದ 06 ವರ್ಷಗಳಿಂದ ನಡೆದ ಯಾವುದೇ ಚುನಾವಣೆಗಳಲ್ಲಿ ಪಕ್ಷವು ಯಾವುದೇ ಅಭ್ಯರ್ಥಿಯನ್ನು ನಿಲ್ಲಿಸಿಲ್ಲವಾದ್ದರಿಂದ; ಮತ್ತು

ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಮೇಲೆ ತಿಳಿಸಿದ ಸೆಕ್ಷನ್ 29ಎ ರ ಉದ್ದೇಶಗಳಿಗಾಗಿ ಸದರಿ ಪಕ್ಷವು ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿದೆ ಎಂಬುದು ಸ್ವಯಂ–ಸ್ಪಷ್ಟವಾಗಿದೆ; ಮತ್ತು ಮೇಲಿನ ಸಂದರ್ಭಗಳಲ್ಲಿ, ಆಯೋಗವು, ಭಾರತದ ಸಂವಿಧಾನದ 324ನೇ ವಿಧಿ ಮತ್ತು 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 29ಎ ರ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸಿ, ಕೆಳಗೆ ತಿಳಿಸಲಾದ ನೋಂದಾಯಿತ **ಗುರುತಿಸಲಾಗದ ರಾಜಕೀಯ ಪಕ್ಷಗಳನ್ನು** ನೋಂದಾಯಿತ ಪಕ್ಷಗಳ ಪಟ್ಟಿಯಿಂದ ತೆಗೆದುಹಾಕಲು ಪ್ರಸ್ತಾಪಿಸುತ್ತದೆ ಮತ್ತು

ಮೇಲೆ ಪ್ರಸ್ತಾಪಿಸಿದಂತೆ ಕ್ರಮ ಕೈಗೊಳ್ಳುವ ಮೊದಲು, ಆಯೋಗವು ಸದರಿ ಪಕ್ಷಕ್ಕೆ ಪ್ರಸ್ತಾವಿತ ಕ್ರಮವನ್ನು ಏಕೆ ತೆಗೆದುಕೊಳ್ಳಬಾರದು ಎಂಬುದರ ಕುರಿತು ಪ್ರಾತಿನಿಧ್ಯ / ಕಾರಣವನ್ನು ತೋರಿಸಲು ಅವಕಾಶವನ್ನು ಒದಗಿಸಲು ನಿರ್ಧರಿಸಿದೆ;

ಆದ್ದರಿಂದ, ಕೆಳಗೆ ತಿಳಿಸಲಾದ ನೋಂದಾಯಿತ ಗುರುತಿಸಲಾಗದ ರಾಜಕೀಯ ಪಕ್ಷಗಳು ಬಯಸಿದಲ್ಲಿ ಈ ಪರವಾಗಿ ಕೆಳಗೆ ಸಹಿ ಮಾಡಿದವರಿಗೆ ಲಿಖಿತ ಪ್ರಾತಿನಿಧ್ಯವನ್ನು ನೀಡಬೇಕೆಂದು ಕೋರಲಾಗಿದೆ. ಪ್ರಾತಿನಿಧ್ಯವು ಯಾವುದಾದರೂ ಇದ್ದರೆ, ಪಕ್ಷದ ಅಧ್ಯಕ್ಷರು ಅಥವಾ ಪ್ರಧಾನ ಕಾರ್ಯದರ್ಶಿಯಿಂದ ಅಫಿಡವಿಟ್ ಮತ್ತು ಪಕ್ಷವು ಅವಲಂಬಿಸಲು ಪ್ರಸ್ತಾಪಿಸಿರುವ ಎಲ್ಲಾ ಪೋಷಕ ದಾಖಲೆಗಳನ್ನು ಸರಿಯಾಗಿ ಲಗತ್ತಿಸಿ **18.07.2025 ರೊಳಗೆ** ಕೆಳಸಹಿದಾರರಿಗೆ ತಲುಪಿಸಬೇಕು.

ಪಕ್ಷದ ವಿಚಾರಣೆಯ ದಿನಾಂಕವನ್ನು **18.07.2025ರಂದು** ನಿಗದಿಪಡಿಸಲಾಗಿದೆ ಮತ್ತು ಈ ವಿಚಾರಣೆಗೆ ಅಧ್ಯಕ್ಷರು / ಪ್ರಧಾನ ಕಾರ್ಯದರ್ಶಿ / ಪಕ್ಷದ ಮುಖ್ಯಸ್ಥರು ಕಡ್ಡಾಯವಾಗಿ ಹಾಜರಾಗಬೇಕು. ಮೇಲೆ ತಿಳಿಸಿದ ದಿನಾಂಕದೊಳಗೆ ಪಕ್ಷದಿಂದ ಯಾವುದೇ ಉತ್ತರ ಬರದಿದ್ದರೆ, ಈ ವಿಷಯದಲ್ಲಿ ಪಕ್ಷವು ಹೇಳಲು ಏನೂ ಇಲ್ಲ ಎಂದು ಭಾವಿಸಲಾಗುತ್ತದೆ ಮತ್ತು ಆಯೋಗವು ಪಕ್ಷವನ್ನು ಉಲ್ಲೇಖಿಸದೆ ಸೂಕ್ತ ಆದೇಶಗಳನ್ನು ನೀಡುತ್ತದೆ.

ಆದೇಶಕ್ಕನುಸಾರವಾಗಿ,
ಸಹಿ/–
ಅಧೀನ ಕಾರ್ಯದರ್ಶಿಗಳು,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

ಗೆ,
ಅಧ್ಯಕ್ಷರು/ ಪ್ರಧಾನ ಕಾರ್ಯದರ್ಶಿ,

1. ಅಂಬೇಡ್ಕರ್ ಜನತಾ ಪಾರ್ಟಿ, ನಂ. 57/1, ಸವಿಮಾನ ಎಂಟರ್‌ಪ್ರೈಸಸ್, ಭದ್ರಪ್ಪ ಲೇಔಟ್, ಕೊಡಿಗೇಹಳ್ಳಿ, ನಾಗಶೆಟ್ಟಿಹಳ್ಳಿ, ಮುಖ್ಯ ರಸ್ತೆ, ಬೆಂಗಳೂರು–560092, ಕರ್ನಾಟಕ
2. ಭಾರತೀಯ ಡಾ. ಬಿ.ಆರ್. ಅಂಬೇಡ್ಕರ್ ಜನತಾ ಪಾರ್ಟಿ, ನಂ.18, 12ನೇ ಕ್ರಾಸ್, ಎಂಟಿಎಸ್ ಲೇಔಟ್, ಕೆಂಗೇರಿ ಉಪನಗರ, ಬೆಂಗಳೂರು– 560060, ಕರ್ನಾಟಕ
3. ಭಾರತೀಯ ಪ್ರಜಾ ಪಕ್ಷ, ನಂ.374/ಎ, ಐ–ಮಹಡಿ, ಐ–ಬ್ಲಾಕ್, ಐ–ಕ್ರಾಸ್, ರವೀಂದ್ರನಾಥ ಟ್ಯಾಗೂರ್ ನಗರ (ಆರ್.ಟಿ.ನಗರ), ಬೆಂಗಳೂರು–560032, ಕರ್ನಾಟಕ
4. ಜನ ಸ್ವರಾಜ್ಯ ಪಕ್ಷ, ಕೇಂದ್ರ ಕಛೇರಿ, 83/ಎ, 3ನೇ ವಾರ್ಡ್, ಕಾಳಮ್ಮ ಬಜಾರ್, ಸಂಡೂರು–583119, ಕರ್ನಾಟಕ
5. ಕಲ್ಯಾಣ ಕ್ರಾಂತಿ ಪಾರ್ಟಿ, #57, 2ನೇ ಮಹಡಿ, 3ನೇ ಮುಖ್ಯ ಆದಿತ್ಯನಗರ, 8ನೇ ಹಂತ, ಜೆಪಿ ನಗರ, ಬೆಂಗಳೂರು–560062, ಕರ್ನಾಟಕ
6. ಕರ್ನಾಟಕ ಪ್ರಜಾ ವಿಕಾಸ ಪಾರ್ಟಿ, ನಂ. 15, ಸಂಪಂಗಿರಾಮಯ್ಯ ಲೇಔಟ್, ಸಿಡೇದಹಳ್ಳಿ, ಯಶವಂತಪುರ ಹೋಬಳಿ, ನಾಗಸಂದ್ರ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ–560073, ಕರ್ನಾಟಕ
7. ಕರ್ನಾಟಕ ಸ್ವರಾಜ್ಯ ಪಕ್ಷ, ನಂ. 2082, ಚಿದಂಬರ ಕೃಪಾ, ಸಾಯಿ ನಗರ, ರಾಯಬಾಗ, ಜಿಲ್ಲೆ–ಬೆಳಗಾವಿ–591317, ಕರ್ನಾಟಕ
8. ಮಹಿಳಾ ಪ್ರಧಾನ ಪಕ್ಷ, 1261, 16ನೇ ಮೇನ್, 20ನೇ ಕ್ರಾಸ್, ಎ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092, ಕರ್ನಾಟಕ.
9. ನಮ್ಮ ಕಾಂಗ್ರೆಸ್, ನಂ.98, ವರ್ತೂರು ಮುಖ್ಯ ರಸ್ತೆ, ಬೆಂಗಳೂರು ಪೂರ್ವ, ಬೆಂಗಳೂರು 560087, ಕರ್ನಾಟಕ
10. ಪ್ರಜಾ ರೈತ ರಾಜ್ಯ ಪಕ್ಷ, ಎಚ್. ನಂ. 937, ಮಂಜುನಾಥ ನಗರ, ಕೆಂಗೇರಿ ರಸ್ತೆ, ತಾವರಕೆರೆ, ಬೆಂಗಳೂರು ದಕ್ಷಿಣ–562130, ಕರ್ನಾಟಕ
11. ರಕ್ಷಕ ಸೇನ, ನಂ 604, ವಾಯುನಂದ ಲೇಔಟ್, ಹೆಬ್ಬಾಳ, ಕೆಂಪಾಪುರ, ಬೆಂಗಳೂರು– 560024, ಕರ್ನಾಟಕ
12. ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ), ಕೊಠಡಿ ಸಂಖ್ಯೆ.21, 2ನೇ ಮಹಡಿ, ಹಮೀದ್ ಶಾ ಕಾಂಪ್ಲೆಕ್ಸ್, ನಂ.2, ಕಬ್ಬನ್‌ಪೇಟೆ, ಮುಖ್ಯರಸ್ತೆ, ಹಲಸೂರು ಗೇಟ್ ಪೊಲೀಸ್ ಠಾಣೆಯ ಹಿಂದೆ, ಬೆಂಗಳೂರು–560002, ಕರ್ನಾಟಕ
13. ಸಾಮಾನ್ಯ ಜನತಾ ಪಾರ್ಟಿ (ಲೋಕತಾಂತ್ರಿಕ), ನಂ. 17, ಮನೆ ಸಂಖ್ಯೆ. 29, ಬಸವನ ದುರ್ಗ (ಕೋರಮ್ಮ ಕ್ಯಾಂಪ್), ಗಂಗಾವತಿ, ಕೊಪ್ಪಳ ಜಿಲ್ಲೆ 583227, ಕರ್ನಾಟಕ
14. ವಿಚಾರ ಜಾಗೃತಿ ಕಾಂಗ್ರೆಸ್ ಪಕ್ಷ, ಮನೆ ಸಂಖ್ಯೆ 275, ಹೆಬ್ಬಾಳು ಗ್ರಾಮ ಮತ್ತು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ

ವಾಸಾಸಂಇ/ವಾಪ್ರ/ಜಿಎ/1535/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.

–ಕುವೆಂಪು

ಸಂಪಾದಕೀಯ

‘ಧರ್ಮನಿರಪೇಕ್ಷ, ಸಮಾಜವಾದ’ಕ್ಕೆ ವಿರೋಧ: ಅನಗತ್ಯ ಆಗ್ರಹ

ದೇಶದ ಸಂವಿಧಾನದ ಪೀಠಿಕೆಯಲ್ಲಿ ಇರುವ ‘ಧರ್ಮನಿರಪೇಕ್ಷ’ ಮತ್ತು ‘ಸಮಾಜವಾದಿ’ ಎಂಬ ಪದಗಳನ್ನು ತೆಗೆಯಬೇಕು ಎಂಬ ಆಗ್ರಹವು ಸಂವಿಧಾನದ ಹೂರಣದಲ್ಲಿ ಏನಿದೆ ಎಂಬುದಕ್ಕಿಂತಲೂ ಹೆಚ್ಚಾಗಿ ಆ ಬಗೆಯ ಆಗ್ರಹ ಮಂಡಿಸುವವರ ಉದ್ದೇಶ ಏನು ಎಂಬುದನ್ನು ಹೇಳುತ್ತದೆ. ಈಚಿನ ದಿನಗಳಲ್ಲಿ ಈ ಆಗ್ರಹವನ್ನು ಮೊದಲು ಮಂಡಿಸಿದ್ದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು. ಈ ಪದಗಳು ‘ಭಾರತದ ಆತ್ಮದ ಮೇಲಿನ ಬರ್ಬರ ಹಲ್ಲೆ’ ಎಂದು ಅವರು ಹೇಳಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ‘ದೇಶದಲ್ಲಿ ಕಾರ್ಯನಿರತವಾದ ಸಂಸತ್ತು ಇಲ್ಲದಿದ್ದಾಗ, ಹಕ್ಕುಗಳು ಇಲ್ಲವಾಗಿದ್ದಾಗ, ನ್ಯಾಯಾಂಗ ಇಲ್ಲವಾಗಿದ್ದಾಗ’ ಈ ಪದಗಳನ್ನು ಸೇರಿಸಲಾಯಿತು, ಹೀಗಾಗಿ ಈ ಪದಗಳನ್ನು ಸೇರಿಸಿದ್ದರ ಬಗ್ಗೆ ಪುನರ್ ಪರಿಶೀಲನೆ ಆಗಬೇಕು ಎಂದು ಹೇಳಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನಕರ್, ಕೆಲವು ಸಚಿವರು ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಇದೇ ಬಗೆಯ ಆಗ್ರಹ ಮಂಡಿಸಿದ್ದಾರೆ. ಧರ್ಮನಿರಪೇಕ್ಷ ಪದವು ಸನಾತನ ಧರ್ಮಕ್ಕೆ ವಿರುದ್ಧ, ಅದು ಪಾಶ್ಚಿಮಾತ್ಯ ಪರಿಕಲ್ಪನೆ ಎಂದು ಹೇಳಿದ್ದಾರೆ. ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಿದ್ದಕ್ಕೆ 50 ವರ್ಷಗಳು ಸಂದ ಸಂದರ್ಭದಲ್ಲಿ ಈ ವಿಚಾರ ಮತ್ತೆ ಪ್ರಸ್ತಾಪ ಆಗಿದೆಯಾದರೂ ಈ ಆಗ್ರಹವು ಹಳೆಯದು. ಮೂಲ ಪೀಠಿಕೆಯನ್ನು ಕೇಂದ್ರ ಸರ್ಕಾರವು ಈ ಹಿಂದೆ ಗಣರಾಜ್ಯೋತ್ಸವ ದಿನ ನೀಡಿದ ಜಾಹೀರಾತುಗಳಲ್ಲಿ ಬಳಸಿಕೊಂಡಿದೆ ಎಂಬುದು ಇಲ್ಲಿ ಉಲ್ಲೇಖಾರ್ಹ.



ಈ ಎರಡು ಪದಗಳನ್ನು ಪೀಠಿಕೆಯಿಂದ ತೆಗೆಯಬೇಕು ಎಂಬ ಆಗ್ರಹ ಅನಗತ್ಯ. ಏಕೆಂದರೆ ಈ ಎರಡು ಪದಗಳು ಸಂವಿಧಾನದ ಒಟ್ಟು ಚೌಕಟ್ಟಿಗೆ ಹೊಸದಾಗಿ ಏನನ್ನೂ ಸೇರಿಸಿಲ್ಲ

ಸಂವಿಧಾನದ ಪೀಠಿಕೆಗೆ ಈ ಎರಡು ಪದಗಳನ್ನು 1976ರಲ್ಲಿ 42ನೇ ತಿದ್ದುಪಡಿ ಮೂಲಕ ಸೇರಿಸಲಾಯಿತು. ಈ ತಿದ್ದುಪಡಿಯು ಹಲವು ಮೂಲಭೂತ ಬದಲಾವಣೆಗಳನ್ನು ತಂದಿತು. ಆದರೆ ತುರ್ತು ಪರಿಸ್ಥಿತಿ ನಂತರ ಅಧಿಕಾರದ ಚುಕ್ಕಾಣಿ ಹಿಡಿದ ಜನತಾ ಪಕ್ಷ ನೇತೃತ್ವದ ಸರ್ಕಾರವು ಸಂವಿಧಾನದ ಮೂಲ ರೂಪವನ್ನು ಪುನರ್‌ಸ್ಥಾಪಿಸುವ ಕೆಲಸ ಮಾಡಿತಾದರೂ ಧರ್ಮನಿರಪೇಕ್ಷ ಮತ್ತು ಸಮಾಜವಾದಿ ಪದಗಳನ್ನು ಉಳಿಸಿಕೊಂಡಿತು. ಬಿಜೆಪಿಯ ಹಿರಿಯ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್‌.ಕೆ. ಅಡ್ವಾಣಿ ಅವರೂ ಈ ಸರ್ಕಾರದ ಭಾಗವಾಗಿದ್ದರು. ಅವರಿಗೆ ಈ ಎರಡು ಪದಗಳನ್ನು ತೆಗೆಯಬೇಕು ಎಂದು ಅನ್ನಿಸಲಿಲ್ಲ. ಧರ್ಮನಿರಪೇಕ್ಷತೆಯು ದೇಶದ ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು ಎಂದು 1994ರಲ್ಲಿ ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸಾರಿತು. ಪೀಠಿಕೆಯಲ್ಲಿ ಈ ಎರಡು ಪದಗಳನ್ನು ಸೇರಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ತಿರಸ್ಕರಿಸಿತ್ತು. ಈ ಎರಡು ಪದಗಳು ಸ್ವೀಕೃತಗೊಂಡಿವೆ, ಪದಗಳ ಅರ್ಥವು ಜನರಿಗೆ ಸ್ಪಷ್ಟವಾಗಿ ತಿಳಿದಿದೆ ಎಂದು ಕೋರ್ಟ್ ಹೇಳಿತ್ತು. ‘ಧರ್ಮನಿರಪೇಕ್ಷ ಎಂಬ ಪದವು ಎಲ್ಲ ಧರ್ಮಗಳನ್ನು ಸಮಾನವಾಗಿ ಗೌರವಿಸುವ ಗಣರಾಜ್ಯವನ್ನು ಸೂಚಿಸುತ್ತದೆ. ಸಮಾಜವಾದ ಪದವು ಎಲ್ಲ ಬಗೆಯ ಶೋಷಣೆಗಳನ್ನು– ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ– ಹೋಗಲಾಡಿಸಲು ಬದ್ಧವಾಗಿರುವ ಗಣರಾಜ್ಯವನ್ನು ಪ್ರತಿನಿಧಿಸುತ್ತದೆ’ ಎಂದು ಕೋರ್ಟ್ ವಿವರಿಸಿತ್ತು. ಈ ಎರಡು ಪದಗಳನ್ನು ತೆಗೆದುಹಾಕುವ ಉದ್ದೇಶವಿದ್ದ ಖಾಸಗಿ ಮಸೂದೆಯೊಂದಕ್ಕೆ ಸಂಸತ್ತಿನಲ್ಲಿ ಕೆಲವು ವರ್ಷಗಳ ಹಿಂದೆ ಸೋಲಾಗಿತ್ತು.

ನ್ಯಾಯಾಲಯವು ಹೇಳಿರುವಂತೆ ದೇಶವು ಈ ಎರಡು ಪದಗಳನ್ನು ತನ್ನದೇ ಬಗೆಯಲ್ಲಿ ಅರ್ಥವ್ಯಾಖ್ಯಾನಕ್ಕೆ ಒಳಪಡಿಸಿದೆ. ಧರ್ಮನಿರಪೇಕ್ಷತೆ ಅಂದರೆ ಎಲ್ಲ ಧರ್ಮಗಳಿಗೆ ಸಮಾನ ಗೌರವ ನೀಡುವುದು. ವ್ಯಕ್ತಿಯು ಯಾವುದೇ ಧಾರ್ಮಿಕ ನಂಬಿಕೆಯನ್ನು ಹೊಂದಿದ್ದರೂ ಆ ಧಾರ್ಮಿಕ ನಂಬಿಕೆಗಳನ್ನು ಪ್ರತಿಪಾದಿಸಿದರೂ ಆ ಕಾರಣಕ್ಕಾಗಿ ಆ ವ್ಯಕ್ತಿಯು ದಂಡನೆಗೆ ಗುರಿಯಾಗುವುದಿಲ್ಲ ಎಂಬ ಭರವಸೆಯನ್ನು ನೀಡುವುದು. ಸಮಾಜವಾದ ಎಂಬ ಪದವು ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸಂಬಂಧಿಸಿದೆ. ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಕಾರಣಕ್ಕಾಗಿ ಯಾವುದೇ ಪ್ರಜೆಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಖಾತರಿಯನ್ನು ಇದು ನೀಡುತ್ತದೆ. ಈ ಎರಡು ಪದಗಳನ್ನು ಪೀಠಿಕೆಯಿಂದ ತೆಗೆಯಬೇಕು ಎಂಬ ಆಗ್ರಹ ಅನಗತ್ಯ. ಏಕೆಂದರೆ, ಈ ಎರಡು ಪದಗಳು ಸಂವಿಧಾನದ ಒಟ್ಟು ಚೌಕಟ್ಟಿಗೆ ಹೊಸದಾಗಿ ಏನನ್ನೂ ಸೇರಿಸಿಲ್ಲ. ಸಂವಿಧಾನದಲ್ಲಿ ಅದಾಗಲೇ ಅಡಕವಾಗಿದ್ದ ಆಶಯಗಳಿಗೆ ಈ ಪದಗಳು ಅಭಿವ್ಯಕ್ತಿಯನ್ನು ನೀಡಿದವು. ಈ ಎರಡು ಪದಗಳನ್ನು ತೆಗೆಯಬೇಕು ಎಂಬ ಬೇಡಿಕೆಯು ಸಂವಿಧಾನದಲ್ಲಿನ ಆಶಯಗಳಿಗೆ ಇರುವ ವಿರೋಧವನ್ನು ತೋರಿಸುತ್ತದೆ. ದೇಶವು ಅರ್ಥ ಮಾಡಿಕೊಂಡಿರುವ ಬಗೆಯ ಧರ್ಮನಿರಪೇಕ್ಷತೆಯನ್ನು ಸಂವಿಧಾನವು ಪ್ರತಿಪಾದಿಸುವುದಿಲ್ಲ ಎಂಬ ಸಂದೇಶ ರವಾನಿಸುವ ಉದ್ದೇಶದಿಂದ ಈಗ ಈ ಬೇಡಿಕೆಯನ್ನು ಇರಿಸಲಾಗಿದೆ. ಹೀಗಾಗಿ ಬೇಡಿಕೆಯನ್ನು ತಿರಸ್ಕರಿಸಬೇಕಿದೆ.

ಈ ಕಾಲದ ನೈತಿಕತೆಗೆ ಪಾರ್ಶ್ವವಾಯು

ವಿಶ್ಲೇಷಣೆ

ಯೋಗೇಂದ್ರ ಯಾದವ್

ಇರಾನ್‌ನ ಮೇಲೆ ಅಮೆರಿಕ ನಡೆಸಿದ ದಾಳಿಗೆ ಜಗತ್ತಿನಾದ್ಯಂತ ವ್ಯಕ್ತವಾದ ಪ್ರತಿಕ್ರಿಯೆ ಗಮನಿಸಿದರೆ ನೈತಿಕತೆಗೆ ಲಕ್ವ ಹೊಡೆದ ಯುಗದಲ್ಲಿ ನಾವು ಬದುಕುತ್ತಿದ್ದೇವೆ ಎಂಬುದು ತಿಳಿಯುತ್ತದೆ. ಮಾತನಾಡದೇ ಇರಲು ನಿಜವಾದ ದ್ವಂದ್ವ, ಸಂಕೀರ್ಣತೆ ಅಥವಾ ಗೊಂದಲ ಕಾರಣವಲ್ಲ. ಶಕ್ತಿಯ ಅನಿಶ್ಚಿತ ನಡವಳಿಕೆಯೇ ಈ ಭೀತಿಗೆ ಕಾರಣ. ನೈತಿಕತೆಯು ತಲೆಕೆಳಗಾದ ಈ ಸ್ಥಿತಿಯು ಎಲ್ಲರನ್ನೂ ಸಮಾನವಾಗಿ ಬಾಧಿಸುವುದಿಲ್ಲ. ನೈತಿಕ ದ್ವಂದ್ವದ ಪ್ರತಿ ಪ್ರಕರಣದಲ್ಲಿಯೂ ಕೆಡುಕನ್ನು ಎಸಗುವವರು ಮತ್ತು ಅವರ ಜೊತೆಗಾರರಿಗೆ ಲಾಭವೇ ಆಗುತ್ತದೆ. ಪ್ರತಿ ಪ್ರಕರಣದಲ್ಲಿಯೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಷ್ಟ ಮಾಡಿಕೊಳ್ಳುವವರು ಮತ್ತು ಬದಿಗೆ ನಿಂತು ನೋಡುವವರು ಇರುತ್ತಾರೆ. ಜಾಗತಿಕವಾಗಿ ‘ನೈತಿಕ ಲಕ್ವ’ ಈ ಹಿಂದೆ ಕಾಣಿಸಿಕೊಂಡದ್ದು 1930ರ ದಶಕದಲ್ಲಿ. ಅಡಾಲ್ಫ್ ಹಿಟ್ಲರ್ ವಿರುದ್ಧ ಸಕಾಲದಲ್ಲಿ ಕ್ರಮ ಕೈಗೊಳ್ಳಲು ಯುರೋಪ್‌ನ ದೇಶಗಳು ವಿಫಲವಾದವು. ಇಂತಹ ನಿರಾಸಕ್ತಿಯು ಎಲ್ಲರನ್ನೂ ಕಾಡುತ್ತದೆ.

ಹತ್ತು ವರ್ಷದ ಮಗುವಿಗೆ ಈ ಪರಿಸ್ಥಿತಿಯನ್ನು ವಿವರಿಸಲು ಪ್ರಯತ್ನಿಸೋಣ. ಇಲ್ಲಿ ಒಂದು ದೇಶವು ದೂರದ ಇನ್ನೊಂದು ದೇಶದ ಮೇಲೆ ದಾಳಿ ನಡೆಸುತ್ತದೆ. ಆ ದೇಶವು ಆಯುಧಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಅದು ನೆರೆಯ ದೇಶಗಳಿಗೆ ಮತ್ತು ಇಡೀ ಜಗತ್ತಿಗೆ ಅಪಾಯಕಾರಿಯಾಗಿದೆ ಎಂಬುದು ದಾಳಿಗೆ ಕಾರಣ. ಇದು ಬಹಳ ಸರಳ. ಮಗುವಿಗೆ ವಿಷಯ ಅರ್ಥವಾಗುತ್ತದೆ. ಆದರೆ, ಮಗು ಕೆಲವು ಪ್ರಶ್ನೆಗಳನ್ನು ಕೇಳಬಹುದು: ಆ ದೇಶವು ಆಯುಧಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂಬುದು ಖಚಿತವೇ? ಇಂತಹ ಆಯುಧಗಳನ್ನು ಹೊಂದಿರುವ ಬೇರೆ ದೇಶಗಳು ಇಲ್ಲವೇ? ಇದೆ ಎಂದಾದರೆ, ಇನ್ನೊಂದು ದೇಶವು ಜಗತ್ತಿಗೆ ಅಪಾಯಕಾರಿಯಾಗಿ ಪರಿಣಮಿಸುವುದು ಹೇಗೆ? ಮತ್ತು ಈ ದೇಶವು ಇತರ ದೇಶಗಳ ಪರವಾಗಿ ದಾಳಿ ನಡೆಸುವುದು ಏಕೆ? ಈಗ, ಆ ಮಗುವಿನ ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿ. ಆಡಂಬರದ ಪದಗಳು ಇಲ್ಲದೆ ಆ ಸರಳ ಉತ್ತರ ಹೀಗಿರಬಹುದು: ಇರಾನ್ ಅಣುಬಾಂಬ್‌ಗಳನ್ನು ತಯಾರಿಸುತ್ತಿದೆ ಎಂಬುದಕ್ಕೆ ಸ್ಪಷ್ಟವಾದ ಪುರಾವೆಗಳೇನೂ ಇಲ್ಲ. ಅಣ್ವಸ್ತ್ರದ ಮೇಲೆ ನಿಗಾ ಇರಿಸುವ ಜಾಗತಿಕ ಸಂಸ್ಥೆ ‘ಐಎಇಎ’ ಪ್ರಕಾರ, ಅಣುಬಾಂಬ್ ತಯಾರಿಸುವುದರ ಹತ್ತಿರದಲ್ಲಿಯೂ ಇರಾನ್ ಇಲ್ಲ. ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ನಿರ್ದೇಶಕರೂ ಈ ಉತ್ತರವನ್ನು ಮಾರ್ಚ್‌ನಲ್ಲಿ ಅನುಮೋದಿಸಿದ್ದರು. ಹೌದು, ಜಗತ್ತಿನ ಹಲವು ದೇಶಗಳು ನೂರಾರು ಅಣುಬಾಂಬ್‌ಗಳನ್ನು ಹೊಂದಿವೆ. ವಾಸ್ತವದಲ್ಲಿ, ಈ ಪ್ರದೇಶದಲ್ಲಿಯೇ ಇರುವ ಇಸ್ರೇಲ್ ಅಣ್ವಸ್ತ್ರಗಳನ್ನು ಹೊಂದಿದೆ ಎಂದು ನಂಬಲಾಗಿದೆ. ಅಣುಬಾಂಬ್ ಹೊಂದಿರುವ ಇತರ ದೇಶಗಳ ಜನ ಮತ್ತು ನಾಯಕರಿಗಿಂತ ಇರಾನ್ ಹೆಚ್ಚು ಅಪಾಯಕಾರಿ ಎಂದು ಭಾವಿಸುವುದಕ್ಕೆ ಯಾವುದೇ ಕಾರಣ ಇಲ್ಲ.

ಹಾಗೆಯೇ, ಇತರರ ಪರವಾಗಿ ಕ್ರಮ ಕೈಗೊಳ್ಳಲು ಯಾವ ದೇಶವೂ ಅಮೆರಿಕಕ್ಕೆ ಅಧಿಕಾರ ಕೊಟ್ಟಿಲ್ಲ (ಬಹುಶಃ, ಇಸ್ರೇಲ್ ಅನ್ನು ಹೊರತುಪಡಿಸಿ). ಅಮೆರಿಕ ಮಾಡಿದ್ದನ್ನು ಬೇರೆ ಯಾವ ದೇಶವೂ ಮಾಡದಂತೆ ನೋಡಿಕೊಳ್ಳಲು ಒಡಂಬಡಿಕೆಗಳು, ನಿಯಮಗಳು ಮತ್ತು ಕಾನೂನುಗಳು ಇವೆ.

ಮಗುವಿನ ಜೊತೆಗೆ ಮಾತನಾಡುವ ಚಿಂತನಾ ಪ್ರಯೋಗವು ಪರಿಣತರ ಮಾತಿನಲ್ಲಿ ಅಡಗಿರುವ ಸರಳ ಸತ್ಯವನ್ನು ಮುನ್ನೆಲೆಗೆ ತರಲು ನೆರವಾಗುತ್ತದೆ. ಯುದ್ಧದ ಉದ್ರೇಕ ಅಥವಾ ತೈಲ ಬೆಲೆ ಮತ್ತು ವಿಕಿರಣ ಮಟ್ಟದಂತಹ ಇತರ ಅಡ್ಡಕತೆಗಳಿಂದ ವಿಚಲಿತರಾಗದೆ ನಿಜವಾದ ವಿಚಾರ ಏನು ಎಂಬುದರತ್ತ ಗಮನ ಕೇಂದ್ರೀಕರಿಸುವುದಕ್ಕೂ ಇದು ನೆರವಾಗುತ್ತದೆ. ಚಿಂತಿಸಲು, ಪ್ರಶ್ನಿಸಲು ಮತ್ತು ತೀರ್ಮಾನಕ್ಕೆ ಬರಲು ಇದು ಉತ್ತೇಜನ ಕೊಡುತ್ತದೆ.

ಇರಾನ್‌ನ ಪರಮಾಣು ಘಟಕಗಳ ಮೇಲೆ ಅಮೆರಿಕ ದಾಳಿ ನಡೆಸಿದ ಬಳಿಕ, ‘ಐಎಇಎ’ಯ ನಿಯಮಗಳಿಂದ ಸ್ವಲ್ಪವೇ ಸ್ವಲ್ಪ ಅತ್ತಿತ್ತ ಸರಿದ ಇರಾನ್‌ನ ನಡೆಯನ್ನು ವಿಶ್ಲೇಷಣೆಗೆ ಒಳಪಡಿಸುವವರ ದ್ವಂದ್ವವನ್ನು ಗಮನಿಸಿ; ಆದರೆ, ವಿಶ್ವಸಂಸ್ಥೆಯ ನಿರ್ಣಯಗಳು ಮತ್ತು ಅಣು ನಿಶ್ಶಸ್ತ್ರೀಕರಣ ಒಪ್ಪಂದವನ್ನು ಕೂಡ ಅಮೆರಿಕದ ದಾಳಿಯು ಉಲ್ಲಂಘಿಸುತ್ತದೆ ಎಂಬುದನ್ನು ಅವರು ಗಮನಿಸುವುದಿಲ್ಲ. ಅಮೆರಿಕದ ಅಧ್ಯಕ್ಷರು ಅಮೆರಿಕದ ಕಾನೂನುಗಳನ್ನು ಉಲ್ಲಂಘಿಸಿದ್ದಾರೆಯೇ ಎಂಬುದರ ಕುರಿತು ಸಣ್ಣ ಪ್ರಮಾಣದ ಚರ್ಚೆ ನಡೆಯುತ್ತಿದೆ. ಆದರೆ, ಅಮೆರಿಕದ ಕ್ರಮವು ಎಲ್ಲ ಅಂತರ ರಾಷ್ಟ್ರೀಯ ಕಾನೂನುಗಳು ಮತ್ತು ಒಡಂಬಡಿಕೆಗಳನ್ನು ಉಲ್ಲಂಘಿಸಿದೆ ಎಂಬುದರ ಕುರಿತು ಚರ್ಚೆಯೇ ನಡೆಯುತ್ತಿಲ್ಲ. ಒಂದು ಸಂಗತಿಯನ್ನು ನೆನಪಿಡಿ, ಯುದ್ಧದ ಸನ್ನಿವೇಶ ಇಲ್ಲದಿದ್ದಾಗಲೂ ಇರಾನ್‌ನ ಸರ್ವೋಚ್ಚ ನಾಯಕನನ್ನು ಹತ್ಯೆ ಮಾಡುವ ಕುರಿತು ಅಮೆರಿಕದ ಅಧ್ಯಕ್ಷ ಮಾತನಾಡಿದ್ದಾರೆ. ಇನ್ನೊಂದು ವಿಚಾರವನ್ನು ನೆನಪಿಡಿ, ಎರಡು ವಾರಗಳ ಗಡುವಿನ ಬಳಿಕ ಏನಾದರೂ ನಿರ್ಧಾರ ಕೈಗೊಳ್ಳಲಾಗುವುದು ಎಂದು ಘೋಷಿಸಿ ಎರಡೇ ದಿನಗಳಲ್ಲಿ ಅವರು ದಾಳಿ ನಡೆಸಿದರು. ಧೂರ್ತ ದೇಶ ಅನ್ನಬಹುದೇ? ಇಲ್ಲ, ಏಕೆಂದರೆ ಇರಾನ್ ಧೂರ್ತ ದೇಶ ಎಂದು ಅಮೆರಿಕದ ಅಧ್ಯಕ್ಷ ಹೇಳುತ್ತಾರೆ. ಇರಾನ್ ಅನ್ನು ಸಂಧಾನಕ್ಕೆ ಆಹ್ವಾನಿಸುವ ಮೂಲಕ ಅಮೆರಿಕದ ಅಧ್ಯಕ್ಷ ಮೋಸದ ಆಟ ಆಡಿಲ್ಲವೇ? ಇಲ್ಲ. ಇರಾನ್ ‘ನಕಲಿ ಸಂಧಾನ’ ನಡೆಸುತ್ತಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆರೋಪಿಸಿದ್ದರು. ‘ನ್ಯಾಯಯುತವಾದುದು ಅಕ್ರಮ ಮತ್ತು ಅಕ್ರಮವೇ ನ್ಯಾಯಯುತ’ ಎಂದು ನಂಬಿಸಲಾದ ಜಗತ್ತಿನಲ್ಲಿ ನಾವು ಇದ್ದೇವೆ.

ಅಮೆರಿಕ ಎಂಬ ಪೀಡಕ ದೇಶವು ತನ್ನ ಆಕ್ರಮಣಶೀಲ ನೀತಿ ಮರೆಮಾಚಲು ಯತ್ನಿಸುತ್ತಿದೆ. ಅದೇ ಕಾಲಕ್ಕೆ, ಇಡೀ ಜಗತ್ತಿನ ನೈತಿಕತೆ ಪಾರ್ಶ್ವವಾಯು ಪೀಡಿತವಾಗಿದೆ. ಈ ವಿರೋಧಾಭಾಸದ ಪ್ರತಿ ಹಂತದಲ್ಲಿಯೂ ಕೆಡುಕು ಮಾಡುವವರು ಮತ್ತವರ ಸಂಗಾತಿಗಳಿಗೆ ಲಾಭವೇ ಆಗುತ್ತಿದೆ

ಅಮೆರಿಕ ಎಂಬ ಪೀಡಕ ದೇಶವು ತನ್ನ ಆಕ್ರಮಣಶೀಲತೆಯನ್ನು ಅಡಗಿಸಲು ಯತ್ನಿಸುತ್ತಿದ್ದರೆ, ಇಡೀ ಜಗತ್ತು ನೈತಿಕವಾಗಿ ಲಕ್ವ ಹೊಡೆಸಿಕೊಂಡಿದೆ ಎಂಬುದು ಅಧ್ಯಯನ ಯೋಗ್ಯ ವಿಚಾರ. ಆಗಷ್ಟೇ ದಾಳಿಗೆ ಒಳಗಾದ ಇರಾನ್ ಜೊತೆಗೆ ಮಾತನಾಡಿದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್, ‘ಈಗಿನ ಅಪಾಯಕಾರಿ ಸನ್ನಿವೇಶದಲ್ಲಿ ರಾಜತಾಂತ್ರಿಕ ಹಾದಿಗೆ ಮರಳುವುದಕ್ಕಾಗಿ ಗರಿಷ್ಠ ಸಂಯಮ ಪಾಲಿಸಿ’ ಎಂದು ಹೇಳುತ್ತಾರೆ. ಅವರು ಕನ್ಸರ್‌ವೇಟಿವ್ ಎಂದು ನೀವು ಭಾವಿಸಿದ್ದರೆ, ಬ್ರಿಟನ್ ಪ್ರಧಾನಿ ಮತ್ತು ಪ್ರಗತಿಪರವಾದ ಲೇಬರ್ ಪಕ್ಷದ ನಾಯಕ ಕಿಯರ್ ಸ್ಟಾರ್ಮರ್ ವಿಶಿಷ್ಟವಾದ ಸಾಮ್ರಾಜ್ಯಶಾಹಿ ಧ್ವನಿಯಲ್ಲಿ ಹೀಗೆನ್ನುತ್ತಾರೆ: ‘ಅಣ್ವಸ್ತ್ರ ಅಭಿವೃದ್ಧಿಪಡಿಸಲು ಇರಾನ್‌ಗೆ ಎಂದೂ ಅವಕಾಶವನ್ನೇ ಕೊಡಬಾರದು. ಅಮೆರಿಕದ ನಡೆಯು ಈ ಭೀತಿಯನ್ನು ಇಲ್ಲವಾಗಿಸಿದೆ... ಇರಾನ್ ಸಂಧಾನಕ್ಕೆ ಬರಬೇಕು ಮತ್ತು ಈಗಿನ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳಬೇಕು’. ‘ನಿಶ್ಶಸ್ತ್ರೀಕರಣ’ ಎಂಬ ಚಿಂತನೆಯ ಹಿಂದಿರುವ ಬೂಟಾಟಿಕೆಯ ಜೊತೆಗೆ, ಸಂಧಾನದ ಹೊಣೆಯನ್ನು ಸಂತ್ರಸ್ತರ ಮೇಲೆಯೇ ಹೊರಿಸುವ ಎನ್‌ಪಿಟಿಯ ದ್ವಂದ್ವ ನಿಲುವು ಕೂಡ ಎನ್‌ಪಿಟಿಯಲ್ಲಿ (ಅಣು ನಿಶ್ಶಸ್ತ್ರೀಕರಣ ಒಪ್ಪಂದ) ಅಡಗಿದೆ. ಒಂದು ದಿನ ಮುಂಚಿನವರೆಗೆ ಐರೋಪ್ಯ ಒಕ್ಕೂಟದ ಜೊತೆಗೆ ಮಾತುಕತೆ ನಡೆಸುತ್ತಿದ್ದ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರ್ಗಾಚಿ ಅವರು ಹೀಗೆ ಕೇಳುತ್ತಾರೆ: ‘ಬಿಟ್ಟೇ ಹೋಗದಲ್ಲಿಗೆ ಇರಾನ್ ಹಿಂದಿರುಗುವುದು ಹೇಗೆ?’ ಗಾಜಾ ಮತ್ತು ಇರಾನ್‌ನ ಬಳಿಕ, ಯುರೋಪ್‌ನಿಂದ ಬರುತ್ತಿರುವ ಉದಾರವಾದದ ಮತ್ತು ಬಹುತ್ವವಾದದ ಎಲ್ಲ ಸವಿಮಾತುಗಳು ಬಿಳಿಯರ ಶ್ರೇಷ್ಠತೆಯ ವ್ಯಸನವನ್ನು ಮುಚ್ಚಿಡುವ ಯತ್ನವಲ್ಲವೇ ಎಂದು ಪ್ರಶ್ನಿಸಿಕೊಳ್ಳಲೇಬೇಕಿದೆ.

ಇರಾನ್‌ನ ನೆರೆಯ ಹಲವು ದೇಶಗಳ ಹೇಳಿಕೆಗಳಲ್ಲಿ ಬಹಳವಾಗಿ ಬೇಕಿದ್ದ ಎಚ್ಚರಿಕೆಯ ಧಾಟಿ ಇದ್ದರೆ, ಅದಕ್ಕೆ ಕಾರಣ ಯಾವುದೇ ನೈಜ ಕಳಕಳಿಯಾಗಲೀ ಅಥವಾ ನಿಲುವು ತೆಗೆದುಕೊಳ್ಳುವ ಸಾಮರ್ಥ್ಯವಾಗಲೀ ಅಲ್ಲ. ಹಿತಾಸಕ್ತಿ ಸಂಘರ್ಷವನ್ನು ಸಮತೋಲನಗೊಳಿಸುವ ಹತಾಶ ಪ್ರಯತ್ನ ಅದರಲ್ಲಿ ಕಾಣಿಸುತ್ತದೆ. ಅಮೆರಿಕವನ್ನು ಮೆಚ್ಚಿಸುವ ಮತ್ತು ಅದರ ಸೇನಾನೆಲೆಗಳನ್ನು ಮುಂದುವರಿಸಿಕೊಂಡು ಹೋಗುವ ಅಗತ್ಯ ಒಂದೆಡೆಯಾದರೆ, ಮುಸ್ಲಿಂ ದೇಶವೊಂದನ್ನು ಕೈಬಿಟ್ಟರು ಎಂಬ ಕಾರಣಕ್ಕೆ ಇರಾನ್‌ನ ಪ್ರತೀಕಾರ ಮತ್ತು ಅಲ್ಲಿನ ಜನರ ಆಕ್ರೋಶದಿಂದ ತಪ್ಪಿಸಿಕೊಳ್ಳುವ ಇಚ್ಛೆಯೂ ಇದೆ ಎಂಬುದು ಕಾಣಿಸುತ್ತದೆ. ರಷ್ಯಾ ಮತ್ತು ಚೀನಾ ತಾವೇ ಸ್ವತಃ ಆಕ್ರಮಣಕಾರಿಯಾಗಿ ವಿಸ್ತರಣೆಯಲ್ಲಿ ತೊಡಗಿದ್ದರೂ ಅಮೆರಿಕದ ನಡೆಯನ್ನು ಬಹಳ ಸ್ಪಷ್ಟವಾಗಿ ಖಂಡಿಸಿರುವುದೇ ನಮ್ಮ ಕಾಲದ ಸ್ವರೂಪ ಏನು ಎಂಬುದನ್ನು ವಿವರಿಸುತ್ತದೆ.

ಇಡೀ ಜಗತ್ತಿನ ನೈತಿಕತೆಗೆ ಲಕ್ವ ಹೊಡೆದಿರುವಾಗ ಭಾರತವು ತನ್ನನ್ನು ತಾನು ಕುಬ್ಜಗೊಳಿಸಿಕೊಂಡಿತು ಎಂಬುದರಲ್ಲಿ ಆಶ್ಚರ್ಯಪಡುವುದಕ್ಕೆ ಏನಿದೆ? ಭಾರತವು ಈಗ ಜಾಗತಿಕ ಶಕ್ತಿಯಾಗಿ ಬೆಳೆದಿದೆ ಮತ್ತು ಯಾವುದೇ ಗುಂಪು ಅಥವಾ ಸಿದ್ಧಾಂತಕ್ಕೆ ಬದ್ಧವಾಗದೆ ಸ್ವತಂತ್ರ ಧ್ವನಿಯನ್ನು ಹೊಂದಿದೆ ಎಂದು ಕಳೆದ ಒಂದು ದಶಕದಲ್ಲಿ ನಮಗೆ ಹೇಳುತ್ತಾ ಬರಲಾಗಿದೆ. ಜಾಗತಿಕ ಮಟ್ಟದಲ್ಲಿ ಮರುವ್ಯಾಖ್ಯಾನ ನಡೆಯುತ್ತಿರುವ ಈ ಹೊತ್ತಲ್ಲಿ, ಈವರೆಗೆ ಭಾರತವು ಪ್ರೇಕ್ಷಕನಾಗಿ ಮಾತ್ರ ಇದೆ. ಜಗತ್ತಿನ ದಕ್ಷಿಣ ಭಾಗದ ಧ್ವನಿಯಾಗಬಹುದು ಎಂದು ಒಂದು ಕಾಲದಲ್ಲಿ ಭಾವಿಸಲಾಗಿದ್ದ ದೇಶವು ಈ ಸಂದರ್ಭದಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂದು ಯಾರಿಗೂ ಅನಿಸುತ್ತಿಲ್ಲ. ಅದೂ ಅಲ್ಲದೆ, ನಾವು ನಮ್ಮ ಹಳೆಯ ಮಿತ್ರ ಮತ್ತು ಕಷ್ಟಕಾಲದಲ್ಲಿ ನಮ್ಮ ಜೊತೆಗಿದ್ದ ಇರಾನ್ ಅನ್ನು ಕೈಬಿಟ್ಟೆವು. ಅಲ್ಲಿ ಸಿಲುಕಿದ್ದ ನಮ್ಮ ಪ್ರಜೆಗಳನ್ನು ಕರೆಸಿಕೊಂಡೆವು. ಇರಾನ್ ಅಧ್ಯಕ್ಷ ಭಾರತದ ಪ್ರಧಾನಿಗೆ ಕರೆ ಮಾಡಿದ್ದರು; ಪ್ರಧಾನಿಯವರು ‘ಇತ್ತೀಚಿನ ಸಂಘರ್ಷಗಳ ಕುರಿತು ಗಾಢ ಕಳವಳ’ ವ್ಯಕ್ತಪಡಿಸಿದರು ಹಾಗೂ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ಸಂಘರ್ಷ ತಗ್ಗಿಸಿ ಎಂದು ಕರೆಕೊಟ್ಟರು ಎಂಬುದಷ್ಟೇ ನಮಗೆ ಗೊತ್ತಿದೆ. ಗಾಜಾದಲ್ಲಿ ಕದನವಿರಾಮ ಸ್ಥಾಪನೆಯಾಗಬೇಕು ಎಂಬ ವಿಶ್ವಸಂಸ್ಥೆಯ ನಿರ್ಣಯದ ಭಾಗವಾಗಲು ಕೂಡ ಸಿದ್ಧವಿಲ್ಲದ ಸರ್ಕಾರದಿಂದ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲವೇನೋ

ನಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸುವ, ನೈತಿಕತೆಯ ಲೇಪವೂ ಇಲ್ಲದ ಹೊಸ ‘ವಾಸ್ತವವಾದ’ ಇದು ಎಂದು ನಮಗೆ ಹೇಳಲಾಗಿದೆ. ಇತಿಹಾಸವು ನಮಗೆ ಬೇರೆ ಏನನ್ನೋ ಹೇಳುತ್ತಿದೆ. ಅತಿಜಾಣ್ಮೆ ಪ್ರದರ್ಶನ ಮತ್ತು ಸಂದರ್ಭಕ್ಕೆ ತಕ್ಕಂತೆ ಸ್ವಂತ ಹಿತಾಸಕ್ತಿಯನ್ನು ಮಾತ್ರ ನೋಡುವುದು ಎರಡೂ ಕಡೆಗಳಿಂದಲೂ ಕೆಟ್ಟದ್ದನ್ನೇ ಉಂಟು ಮಾಡುತ್ತದೆ: ನಿಮಗೆ ಗೌರವವೂ ಸಿಗುವುದಿಲ್ಲ, ನಿಮ್ಮ ಹಿತಾಸಕ್ತಿಯ ರಕ್ಷಣೆಯೂ ಆಗುವುದಿಲ್ಲ. ಕಾಲ್ಪನಿಕ ಭವಿಷ್ಯದಲ್ಲಿ, ಅಮೆರಿಕ ಮತ್ತು ಇರಾನ್ ಜಾಗದಲ್ಲಿ ಚೀನಾ ಮತ್ತು ಭಾರತವನ್ನು ಇರಿಸಿ. ಇತಿಹಾಸದ ಪಾಠವೊಂದು ನಿಮಗೆ ಅರ್ಥವಾಗುತ್ತದೆ. ನಿಜವಾದ ಜಗತ್ತಿನಲ್ಲಿ, ಉಳಿವಿಗೆ ಗೆಳೆಯರು ಮತ್ತು ಕೆಲವು ತತ್ವಗಳು ಬೇಕು. ಶ್ರೀಮಂತರು ಮತ್ತು ಶಕ್ತಿಶಾಲಿಗಳು ಒಂದಷ್ಟು ಸಮಯಕ್ಕಾದರೂ ನೈತಿಕ ಲಕ್ವವನ್ನು ತಡೆದುಕೊಳ್ಳಬಹುದು. ನಮಗೆ ಅದು ಸಾಧ್ಯವಿಲ್ಲ.

ವಾಚಕರ ವಾಣಿ

ಜಾತ್ಯತೀತ: ತಪ್ಪು ವ್ಯಾಖ್ಯಾನ ಸಲ್ಲದು

‘ನಾನು ಒಕ್ಕಲಿಗ ಎಂದು ಗುರುತಿಸಿಕೊಳ್ಳುತ್ತೇನೆ. ಎಲ್ಲರೂ ಅವರವರ ಜಾತಿಯಿಂದ ಗುರುತಿಸಿಕೊಳ್ಳುತ್ತಾರೆ. ಹಾಗಾಗಿ, ಜಾತ್ಯತೀತ ಎಂಬುದಕ್ಕೆ ಅರ್ಥವಿಲ್ಲ’ ಎಂದು ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ ಹೇಳಿದ್ದಾರೆ (ಪ್ರ.ವಾ., ಜೂನ್ 30). ಈ ಮೂಲಕ ಅವರು, ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿರುವ ‘ಜಾತ್ಯತೀತ’ ಪದವನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ.

ಭಾರತದಂತಹ ಬಹುತ್ವದ ದೇಶದಲ್ಲಿ ಜಾತ್ಯತೀತತೆಯ ತತ್ವವನ್ನು ಆಚರಿಸದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಜಾತ್ಯತೀತ ಎಂಬ ಪದವು ಧರ್ಮವಿರೋಧಿ, ಜಾತಿವಿರೋಧಿ ಎಂಬ ಅರ್ಥವನ್ನು ನೀಡುವುದಿಲ್ಲ. ಯಾವ ರಾಜ್ಯವು (ಸ್ಟೇಟ್) ಧರ್ಮದಿಂದ ಸಂಪೂರ್ಣವಾಗಿ ಪ್ರತ್ಯೇಕವಾಗಿರುವುದೋ ಹಾಗೂ ತನ್ನದೇ ಆದ ಧರ್ಮವನ್ನು ಹೊಂದಿರುವುದಿಲ್ಲವೋ ಅಂತಹ ರಾಜ್ಯವನ್ನು ಜಾತ್ಯತೀತ ರಾಷ್ಟ್ರ ಎನ್ನಬಹುದಾಗಿದೆ. ಜಾತಿ, ಮತ, ಧರ್ಮ, ಭಾಷೆ ಇವುಗಳ ಆಧಾರದ ಮೇಲೆ ತಾರತಮ್ಯ ಮಾಡದೆ ಹಾಗೂ ಎಲ್ಲಾ ಪ್ರಜೆಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುವುದು ಜಾತ್ಯತೀತ ರಾಷ್ಟ್ರದ ಪರಿಕಲ್ಪನೆಯಾಗಿದೆ. ಭಾರತದ ಪ್ರತಿಯೊಬ್ಬ ಪ್ರಜೆ ಜಾತಿ, ಧರ್ಮದಿಂದ ಗುರುತಿಸಿಕೊಳ್ಳುವುದು ಸಹ ‘ಜಾತ್ಯತೀತತೆ’ಯ ಭಾಗವಾಗಿಯೇ. ಧರ್ಮ ಮತ್ತು ರಾಜಕಾರಣವನ್ನು ಬೇರ್ಪಡಿಸಬೇಕೆಂಬ ವಿಶಾಲಾರ್ಥದಲ್ಲಿ ಈ ಪದವನ್ನು ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ ಎಂಬುದನ್ನು ಇಂದಿನ ರಾಜಕಾರಣಿಗಳು ಅರಿಯಬೇಕಿದೆ.

ನಾಗರಾಜ ಮಗ್ಗದ, ಕೊಟ್ಟೂರು

‘ಎದೆಯ ಹಣತೆ’ ಎತ್ತ ವಾಲುತ್ತದೆ?

ಬಾನು ಮುಷ್ತಾಕ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯು 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಬಾನು ಮುಷ್ತಾಕ್ ಅವರು ಒಪ್ಪಿಕೊಂಡಿದ್ದು, ‘ಕನ್ನಡದ ಕೆಲಸ ನನ್ನ ಮೊದಲ ಕರ್ತವ್ಯ’ ಎಂದು ಹೇಳಿರುವುದಾಗಿ ಪರಿಷತ್ತಿನ ಅಧ್ಯಕ್ಷರಾದ ಮಹೇಶ ಜೋಶಿ ಹೇಳಿದ್ದಾರೆ. ಆದರೆ, ‘ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನವನ್ನು ಒಪ್ಪಬೇಕೋ ಬೇಡವೋ ಎಂದು ನಿರ್ಧರಿಸಲು ನನಗೆ ಸ್ವಲ್ಪ ಸಮಯ ಬೇಕು... ಪರಿಷತ್ತಿನ ಕಾರ್ಯವೈಖರಿ ಬಗ್ಗೆ ಕೆಲವು ಭಿನ್ನ ಧ್ವನಿಗಳೂ ಇದ್ದು, ಅವುಗಳನ್ನು ಕೇಳಿಸಿಕೊಳ್ಳಬೇಕಾಗಿದೆ’ ಎಂದು ಬಾನು ಮುಷ್ತಾಕ್ ಹೇಳಿದ್ದಾರೆ (ಪ್ರ.ವಾ., ಜೂನ್ 30). ಪರಿಷತ್ತಿನ ಅಧ್ಯಕ್ಷರು ಹಾಗೂ ಬಾನು ಮುಷ್ತಾಕ್ ಅವರ ಹೇಳಿಕೆಗಳಲ್ಲಿ ವ್ಯತ್ಯಾಸವಿದೆ.

ಬಾನು ಅವರು ಸಾಹಿತ್ಯ ರಚನೆಯ ಜೊತೆ ಜೊತೆಯಲ್ಲಿಯೇ ದಲಿತ ಚಳವಳಿ, ರೈತ ಚಳವಳಿ, ಬಂಡಾಯ ಸಂಘಟನೆ ಸೇರಿದಂತೆ ಹಲವು ಜನಮುಖಿ ಚಳವಳಿಗಳ ಭಾಗವಾಗಿ ಕ್ರಿಯಾಶೀಲವಾಗಿದ್ದವರು. ಪ್ರಸ್ತುತ ದುರಿತ ಪರಿಸ್ಥಿತಿಯಲ್ಲಿ ಅವರ ‘ಎದೆಯ ಹಣತೆ’ ಎತ್ತ ವಾಲುತ್ತದೆ ಎನ್ನುವುದು ಸಹೃದಯರ ಕುತೂಹಲದ ಪ್ರಶ್ನೆಯಾಗಿದೆ.

ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ, ಬೆಂಗಳೂರು

ಮೂಲತತ್ವಗಳ ಬದಲಾವಣೆ ಅಸಾಧ್ಯ

‘ಅಂಬೇಡ್ಕರ್ ಸಂವಿಧಾನದಲ್ಲಿ ಜಾತ್ಯತೀತ ಪದವೇ ಇಲ್ಲ’ ಎನ್ನುವ ಆರ್. ಅಶೋಕ ಅವರ ಹೇಳಿಕೆ ಓದಿ ಆಶ್ಚರ್ಯವಾಯಿತು. ನಮ್ಮ ಸಂವಿಧಾನವು ವಿಧಿ 368ರಲ್ಲಿ ಸಂವಿಧಾನದಲ್ಲಿ ಅಂತರ್ಗತವಾಗಿರುವ 8 ಅಂಶಗಳನ್ನು ಯಾವುದೇ ರೀತಿಯಲ್ಲಿ ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರ ನೀಡುವುದಿಲ್ಲ. ಅದರಲ್ಲಿ ಈ ದೇಶದ ‘ಧರ್ಮನಿರಪೇಕ್ಷ ಸ್ವರೂಪ’ವೂ ಸೇರಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಸುಪ್ರೀಂ ಕೋರ್ಟ್ ಸಂವಿಧಾನದ ಮೂಲ ತತ್ವಗಳನ್ನು ಪಟ್ಟಿಮಾಡಿದೆ. ಈ ಮೂಲ ತತ್ವಗಳಲ್ಲಿ ‘ಧರ್ಮನಿರಪೇಕ್ಷತೆ ಮತ್ತು ಜಾತ್ಯಾತೀತತೆ’ಯೂ ಸೇರಿವೆ. ‘ಮೂಲತತ್ವಗಳನ್ನು ಬದಲಿಸಲೂ ಆಗದು ಮತ್ತು ತಿದ್ದುಪಡಿ ಮಾಡಲೂ ಆಗದು’ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು

ಶಿಕ್ಷಣ ಕ್ಷೇತ್ರದ ರಾಷ್ಟ್ರೀಕರಣ ಅಗತ್ಯ

‘ಸೋರುವ ಕೊಠಡಿಯಲ್ಲೇ ಕಲಿಕೆ!’ ವರದಿ (ಪ್ರ.ವಾ., ಜೂನ್ 29) ಎಚ್ಚರಿಕೆಯ ಗಂಟೆಯಾಗಿದೆ; ಸರ್ಕಾರಕ್ಕಲ್ಲ, ಜನಸಾಮಾನ್ಯರಿಗೆ. ಬಹುತೇಕ ಶಾಸಕ, ಸಂಸದರು ತಮ್ಮದೇ ಆದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದಾರೆ. ದುಃಸ್ಥಿತಿಯಲ್ಲಿರುವ ಸರ್ಕಾರಿ ಶಾಲೆಗಳನ್ನು ಸರಿಪಡಿಸಿ, ತಮ್ಮ ಶಾಲೆಗಳ ದಾಖಲಾತಿ ಕಡಿಮೆ ಮಾಡಿಕೊಳ್ಳಲು ಅವರಿಗೇನು ನಾಯಿ ಕಚ್ಚಿಲ್ಲ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂಬ ಪ್ರತಿಯೊಬ್ಬ ತಂದೆ ತಾಯಿಯ ಕನಸಿನೊಂದಿಗೆ ಆಟವಾಡುತ್ತಿರುವ ರಾಜಕಾರಣಿಗಳ ಕುಟಿಲ ನೀತಿಯ ವಿರುದ್ಧ ಜನರೇ ಧ್ವನಿ ಎತ್ತಬೇಕಾಗಿದೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ರಾಷ್ಟ್ರೀಕರಣದ ಅಗತ್ಯವಿದೆ.

ಹಣಮಂತ ಕಾಂಬಳೆ, ಬಾಗಲಕೋಟೆ

ಮುನ್ನೆಚ್ಚರಿಕೆ ಕೊರತೆಯಿಂದ ದುರ್ಘಟನೆ

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳು ವಿಷಪ್ರಾಶನದಿಂದ ಮೃತಪಟ್ಟಿರುವುದು ದುರದೃಷ್ಟಕರ. ಇದಕ್ಕೆ ಕಾರಣರಾದವರ ಕೃತ್ಯ ಅಕ್ಷಮ್ಯ ಅಪರಾಧ. ವನ್ಯಜೀವಿಗಳ ವಾಸಸ್ಥಾನದ ವಲಯಗಳಲ್ಲಿ ಗಸ್ತು ಬಲಪಡಿಸುವಿಕೆ, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ, ತನಿಖೆಗಾಗಿ ಉನ್ನತ ಮಟ್ಟದ ಸಮಿತಿ ರಚನೆ, ಹೀಗೆಲ್ಲ ಏನೇ ಆದರೂ, ನಡೆದ ದುರಂತವನ್ನು ಸರಿಪಡಿಸಲು ಸಾಧ್ಯವಿಲ್ಲ. ದುರ್ಘಟನೆ ಸಂಭವಿಸಿದ ನಂತರವಷ್ಟೇ ನಾವು ಜಾಗೃತರಾಗುತ್ತೇವೆ.

ಕಾಲ್ತುಳಿತದಂತಹ ಘಟನೆ, ವಿಮಾನ ಅಪಘಾತ ಅಥವಾ ಹುಲಿಗಳ ಸಾವು ಸೇರಿದಂತೆ ಯಾವುದೇ ದುರ್ಘಟನೆಗಳು ಸಂಭವಿಸದಿರಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ. ಅನಾಹುತ ಆದ ನಂತರ ಪರಿತಪಿಸಿದರೆ ಪ್ರಯೋಜನವಿಲ್ಲ.

ಆಶಾ ಅಪ್ರಮೇಯ, ದಾವಣಗೆರೆ

ಜಾಲತಾಣ

ಬಹಿಷ್ಕಾರ... ಪುರಸ್ಕಾರ

ಹಾವೇರಿ ಸಾಹಿತ್ಯ ಸಮ್ಮೇಳನದ ಯಾವ ಗೋಷ್ಠಿಯಲ್ಲಿಯೂ ಮುಸ್ಲಿಂ ಸಮುದಾಯದ ಸಾಹಿತಿಗಳಿಗೆ ಅವಕಾಶವನ್ನೇ ನೀಡದೆ ಮಹೇಶ ಜೋಶಿ ತಮ್ಮ ಧಾರ್ಮಿಕ ಪೂರ್ವಗ್ರಹವನ್ನು ಮೆರೆದಿದ್ದರು. ಈ ಪೂರ್ವಗ್ರಹವನ್ನೇ ಪ್ರಶ್ನಿಸಿ ಸಮಾನ ಮನಸ್ಕರೆಲ್ಲರೂ ಸೇರಿ ಬೆಂಗಳೂರಿನಲ್ಲಿ ‘ಜನಸಾಹಿತ್ಯ ಸಮ್ಮೇಳನ’ ಸಂಘಟಿಸಿದ್ದರು. ಅದರ ಅಧ್ಯಕ್ಷತೆಯನ್ನು ಬಾನು ಮುಷ್ತಾಕ್ ಅವರೇ ವಹಿಸಿದ್ದರು. ಯಾವ ಸಂದರ್ಭಗಳಲ್ಲಿ ‘ಬಹಿಷ್ಕಾರ’ ಮತ್ತು ‘ಪುರಸ್ಕಾರ’ಗಳನ್ನು ಬಳಸಬೇಕೆನ್ನುವುದನ್ನು ಮಹೇಶ ಜೋಶಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಈಗ ಬಾನು ಮುಷ್ತಾಕ್ ಮತ್ತು ನಾವು ಜೋಶಿ ಅವರನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ದಿನೇಶ್ ಅಮಿನ್ ಮಟ್ಟು, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಮುಖ್ಯಮಂತ್ರಿ ಬದಲಾಗಲಿದ್ದಾರೆ ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಈ ರೀತಿಯ ಹೇಳಿಕೆ ನೀಡಿದ್ದಾರೆ. ಅವರಿಗೆ ಅವರ ಕುರ್ಚಿ ಉಳಿಸಿಕೊಳ್ಳಲು ಈ ರೀತಿಯ ಹೇಳಿಕೆ ನೀಡುವುದು ಅನಿವಾರ್ಯ.

ಆರ್.ವಿ. ದೇಶಪಾಂಡೆ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 1-7-2000

• ಕೆಪಿಸಿಸಿ ಅಧ್ಯಕ್ಷರಾಗಿ ವಿ.ಎಸ್. ಕೌಜಲಗಿ

ನವದೆಹಲಿ, ಜೂನ್ 30– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಶಾಸಕ ವಿ.ಎಸ್. ಕೌಜಲಗಿ ಅವರನ್ನು ನೇಮಕ ಮಾಡಲಾಗಿದೆ.

ಬೆಳಗಾವಿ ಜಿಲ್ಲೆಯ ಅರಭಾವಿ ಕ್ಷೇತ್ರದ ಶಾಸಕರಾಗಿರುವ ಕೌಜಲಗಿ ಅವರು ವಿಧಾನಸಭೆಯ ಸ್ಪೀಕರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಅವರು ಈಗಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಮುಖ್ಯಮಂತ್ರಿ ಕೃಷ್ಣ ಅವರಿಂದ ಅಧಿಕಾರ ಸ್ವೀಕರಿಸಲಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 1-7-1950

• ಉತ್ತರ ಕೊರಿಯಾ ಕೇಂದ್ರಗಳ ಮೇಲಿನ ದಾಳಿಗೆ ಟ್ರೂಮನ್ ಒಪ್ಪಿಗೆ

ವಾಷಿಂಗ್ಟನ್, ಜೂನ್ 30– ಅಮೆರಿಕ ರಾಷ್ಟ್ರಾಧ್ಯಕ್ಷ ಟ್ರೂಮನ್ ಅವರಿಂದು ಸಲಹೆಗಾರರೊಡನೆ ಸಮಾಲೋಚನೆ ನಡೆಸಿ ಕೊರಿಯಾ ಯುದ್ಧರಂಗದಲ್ಲಿ ಅಮೆರಿಕದ ಭೂಸೇನೆಯನ್ನು ಉಪಯೋಗಿಸುವುದಕ್ಕೆ ಅಂಗೀಕಾರ ವಿತ್ತರು. ಅಂತೆಯೇ ಉತ್ತರ ಕೊರಿಯಾದ ಕಮ್ಯುನಿಸ್ಟ್ ಸೇನಾ ಕೇಂದ್ರಗಳ ಮೇಲೆ ವಿಮಾನ ದಾಳಿ ನಡೆಸಿದ ಕಾರ್ಯಾಚರಣೆಗೂ ಒಪ್ಪಿಗೆಯಿತ್ತು ಕೊರಿಯಾ ಸಮುದ್ರ ತೀರದ ಸುತ್ತ ಯುದ್ಧನೌಕಾ ದಿಗ್ಭಂಧನಕ್ಕಾಗಿ ನಿರೂಪವನ್ನಿತ್ತರು.

ಜಪಾನಿನ ರಹಸ್ಯ ಸೇನಾ ಕೇಂದ್ರಗಳಿಂದ ಕೊರಿಯಾ ಯುದ್ಧರಂಗಕ್ಕೆ ಸೇನಾ ಪಡೆಗಳು ತೆರಳಿವೆ. ಈ ಸೇನೆಗಳ ಸಂಖ್ಯೆ ಮತ್ತು ಚಟುವಟಿಕೆಗಳನ್ನು ಭದ್ರತಾ ದೃಷ್ಟಿಯಿಂದ ರಹಸ್ಯವಾಗಿಡಲಾಗಿದೆ.

ಚುರುಮುರಿ

ಸೀಟು ಬ್ಲಾಕಿಂಗ್

• ಡಿ.ಎಸ್. ಲಿಂಗರಾಜು

ನಮ್ಮ ರಾಜಕಾರಣಿಗಳಿಗೆ ವತ್ತಾರೆಯಿಂದ ಸಂಜೇಗಂಟ ಜಗಳ ಮಾಡದುಬುಟ್ಟು ಬ್ಯಾರೆ ಕ್ಯಾಮೆ ಇರನಿಲ್ಲ. ಕೈ ಪಕ್ಷದಲ್ಲಿ ಸಿಎಂ ಕುರ್ಚಿಗೆ ಕಿತ್ತಾಟ, ಕಮಲದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಾರಾಮಾರಿ ನಡೀತಿತ್ತು. ಮಣ್ಣಿನಮಕ್ಕಳ ಪಕ್ಷದಲ್ಲಿ ಯಾರು, ಯಾವುದಕ್ಕೆ, ಯಾಕೆ ಜಗಳಾಡಬೇಕು ಅಂತ ಗೊತ್ತಾಗದೇ ಕನ್‌ಫ್ಯೂಸಾಗಿದ್ದರು. ರೋಸಿಹೋದ ಜನ ‘ಯಾಕಿಂಗೆ ನಮ್ಮನ್ನ ಸತಾಯಿಸ್ತೀರೊ. ಏನಾದ್ರೂ ಡಿಸೈಡ್ ಮಾಡಿಕ್ಯಂದು ಸಾಯ್ರಿ’ ಅಂತ ಮಕ್ಕುಗೀತಿದ್ರು.

ಆಯ್ತು ಅಂತ ಎಲ್ಲಾ ಪಕ್ಷದೋರೂ ಸಭೆ ಸೇರಿದ್ರು. ಅಧ್ಯಕ್ಷರು, ಸಿಎಂ ಚೇರು ಬೆನ್ನಿಗೇ ಕಟ್ಕಂದು ಬಂದುದ್ದ ಕಂಡು ‘ಏನು ಚೇರು ಬುಡಂಗೇ ಇಲ್ವೋ?’ ಅಂತ ಮಣ್ಣಿನ ಮಕ್ಕಳು ಕಿಚಾಯಿಸಿದ್ರು.

‘ಹೂ ಕಲ್ರಿ. ಸೆಪ್ಟೆಂಬರಲ್ಲಿ ಕ್ರಾಂತಿ ಆಗತೈತೆ ಅಂತ ಅಣ್ಣಾರು ಶಕುನ ನುಡಿದವ್ರೆ. ಯಾವೋನಾದರೂ ಬಂದು ಚೇರಿಗೆ ಅಮರಿಕ್ಯಂದರೇನು ಮಾಡದು. ನಮ್ಮ ಜೀವ ಚೇರಲ್ಲೇ ಅದೆ’ ಅಂದ್ರು ಇಬ್ಬರೂ ಒಟ್ಟಿಗೆ.

‘ನೀವು ನೀವೇ ಮನಸ್ತಾಪ ಮಾಡಿಕ್ಯಂದು ಒಬ್ಬರ ಮ್ಯಾಲೊಬ್ಬರು ಬಲವಂತದ ಕ್ರಮ ತಕ್ಕಂದು ವ್ಯಾಜ್ಯಭಾರ ಮಾಡಿಕ್ಯಬ್ಯಾಡಿ ಕನ್ರೋ. ಎಲ್ಲಾರು ಒಂದಾಗಿ ಜನವ ಹುರಕಂದು ತಿನ್ನಾದೆಂಗೆ ಅಂತ ನೋಡಿ’ ಅಂತಂದ ಸೀನಿಯರ್ ರಾಜಕಾರಣಿ ಸಲಹೆ ಒಪ್ಪಿತವಾಯ್ತು. ಅಧಿಕಾರ ಹಂಚಿಕೆ ಸೂತ್ರ ತಯಾರಿಸೋ ಜವಾಬ್ದಾರಿ ಅವರಿಗೇ ಕೊಟ್ರು.

‘ನೋಡ್ರಲಾ ದಿನಕ್ಕೊಂದು ಸಿಎಂ, ಅಧ್ಯಕ್ಸರ ದರ್ಬಾರು. ಸೋಮಾರ, ಮಂಗ್ಳಾರ ಕೈ ಆಡಳಿತ ನಡೀಲಿ. ಬುಧವಾರ, ಗುರುವಾರ ಕಮಲದ ಕರಾಮತ್ತು. ಶುಕ್ರವಾರ ಮಣ್ಣಿನ ಮಕ್ಕಳು ಉಳುಮೆ ಮಾಡಿಕ್ಯಲಿ. ಶನಿವಾರ, ಭಾನುವಾರ ಅಧಿಕಾರಿಗಳು ಇ-ಕ್ಯಾತೆ ಮಾಡಿಕ್ಯತ್ತರೆ’ ಅಂತ ನಾಯಕರು ಪ್ರೋಗ್ರಾಂ ಕೊಟ್ಟರು. ಖುಷಿಯಾದ ಮುದಿನಾಯಕರೆಲ್ಲಾ ತಾವೇ ಮೊದಲು ಸತ್ರ ಜೆಗಳ ತಲೆ ಒಡೀಬೇಕು ಅಂತ ನುಗ್ಗಿ ಅಂಗಿ-ಪಂಚೆ ಹರಕತಿದ್ದುದ್ದ ಕಂಡು ಜನ ‘ಇವು ಈ ಜಲ್ಮದೇಲಿ ಉದ್ಧಾರಾಗಕುಲ್ಲ ಕನ’ ಅಂತ ತಲೆತಲೆ ಕೆಚ್ಚಿಕ್ಯಂದರು.

ಸಂಗತ

‘ಜ್ಞಾನಭಾರತಿ’ ಹಸುರಿಗೆ ಬೇಕು ಅಭಯ

ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿನ ಸೂಕ್ಷ್ಮ ಪರಿಸರಕ್ಕೆ ಸ್ಥಾವರಗಳ ನಿರ್ಮಾಣದಿಂದ ಹಾನಿಯಾಗುತ್ತದೆ.

• ಬಿ.ಸಿ. ಪ್ರಭಾಕರ್

ಬೆಂಗಳೂರು ವಿಶ್ವವಿದ್ಯಾಲಯದ ‘ಜ್ಞಾನಭಾರತಿ’ ಕ್ಯಾಂಪಸ್‌ನಲ್ಲಿ ಇರುವ ಹಸುರಿನ ಮಹತ್ವ ಕಡೆಗಣಿಸಿ, ವಿಶ್ವವಿದ್ಯಾಲಯ ಮತ್ತು ಸರ್ಕಾರ ಹೊಸ ಹೊಸ ಯೋಜನೆಗಳ ಹೆಸರಿನಲ್ಲಿ ಹಸುರುಸಿರಿಗೆ ಮುಳುವಾಗುತ್ತಿರುವುದು ದುರದೃಷ್ಟಕರ. ಜ್ಞಾನಭಾರತಿ ಆವರಣದ 25 ಎಕರೆ ಜಾಗದಲ್ಲಿ ‘ಅಂಬೇಡ್ಕರ್ ಥೀಮ್ ಪಾರ್ಕ್’ ಮಾಡಲು ಸರ್ಕಾರ ಮುಂದಾಗಿರುವುದು (ಪ್ರಜಾವಾಣಿ, ಜೂನ್ 20) ಬೌದ್ಧಿಕ ದಾರಿದ್ರ್ಯದ ಸಂಕೇತ.

ಪ್ರಸ್ತುತ, ₹ 200 ಕೋಟಿ ಅಂದಾಜು ವೆಚ್ಚದ ಯೋಜನೆಯಲ್ಲಿರುವ ಬಹುತೇಕ ಅಂಶಗಳು ಈಗಾಗಲೇ ಜ್ಞಾನಭಾರತಿ ಆವರಣದಲ್ಲಿ ಸಾಕಾರಗೊಂಡಿವೆ. ‘ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ’ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಅಂಬೇಡ್ಕರ್ ಅವರ ಜೀವನಗಾಥೆಗೆ ಸಂಬಂಧಿಸಿದ ಅನೇಕ ಶಿಲ್ಪಗಳು, ಕೋರೆಗಾಂವ್ ಸಂಘರ್ಷದ ಸ್ಮಾರಕ ಮುಂತಾದವನ್ನು ನಿರ್ಮಿಸಲಾಗಿದೆ. ವಿ.ವಿಯ ಆಡಳಿತ ಕಚೇರಿಯ ಮುಂದೆ ಅಂಬೇಡ್ಕರ್ ಪ್ರತಿಮೆಯನ್ನು ನಿರ್ಮಿಸಲಾಗಿದೆ. ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ‘ಡಾ. ಬಿ.ಆರ್. ಅಂಬೇಡ್ಕರ್ ಗ್ರಂಥಾಲಯ’ ಎಂದು ನಾಮಕರಣ ಮಾಡಲಾಗಿದೆ.

ಈಗ ಆಗಬೇಕಾಗಿರುವುದು, ಅಂಬೇಡ್ಕರ್ ಚಿಂತನೆಗಳನ್ನು ಹರಡಲು ಉತ್ಕೃಷ್ಟ ಉಪನ್ಯಾಸಗಳನ್ನು ಏರ್ಪಡಿಸುವುದು, ಉತ್ತಮ ಕೃತಿಗಳ ರಚನೆ, ಅಕಡೆಮಿಕ್ ವಲಯಗಳಲ್ಲಿ ವಿಚಾರಗೋಷ್ಠಿ ಸೇರಿದಂತೆ ವಿದ್ಯಾರ್ಥಿ ಹಾಗೂ ಸಂಶೋಧಕರನ್ನು ಚಿಂತನೆಗೆ ಹಚ್ಚುವ ಮತ್ತು ಬೌದ್ಧಿಕ ವಿಕಾಸದ ಕೆಲಸಗಳು. ಇದರ ಬದಲಾಗಿ, ‘ಪ್ರತಿಮಾ ಸಂಸ್ಕೃತಿ’ಯನ್ನು ವಿಜೃಂಭಿಸುವುದು ಹಾಗೂ ಹಸುರು ನಾಶ ಮಾಡುವುದು ಸರಿಯಲ್ಲ.

ಉದ್ದೇಶಿತ ಥೀಮ್ ಪಾರ್ಕ್ ಯೋಜನೆ ಪ್ರಕಟವಾಗುವಷ್ಟರಲ್ಲಿ ಬೆಂಗಳೂರು ವಿ.ವಿಯ ಆಡಳಿತವರ್ಗ ಹಸುರಿಗೆ ಪೆಟ್ಟು ಕೊಡುವ ಮತ್ತೊಂದು ಕಾರ್ಯ ಕೈಗೆತ್ತಿಕೊಳ್ಳಲು ಮುಂದಾಗಿದೆ. ₹ 100 ಕೋಟಿ ಅಂದಾಜು ವೆಚ್ಚದಲ್ಲಿ ಜ್ಞಾನಭಾರತಿಯ ಆವರಣದಲ್ಲಿ ಅಧ್ಯಯನ ಮತ್ತು ಸಂಶೋಧನಾ ಬ್ಲಾಕ್ ನಿರ್ಮಿಸಲು ಬಿಬಿಎಂಪಿ ಮೂಲಕ 419 ಮರಗಳನ್ನು ತೆರವುಗೊಳಿಸಲು ಟೆಂಡರ್ ಕರೆದಿದೆ.

ಮೂಲಸೌಕರ್ಯಗಳನ್ನು ನಿರ್ಮಿಸಿಕೊಳ್ಳುವ ದಿಸೆಯಲ್ಲಿ ವಿಶ್ವವಿದ್ಯಾಲಯ ವಿವೇಚನೆಯಿಂದ ವರ್ತಿಸಬೇಕಾಗಿದೆ. ಕ್ಯಾಂಪಸ್‌ನಲ್ಲಿರುವ ಅನೇಕ ಕಟ್ಟಡಗಳು ನೆಲ ಅಂತಸ್ತು ಅಥವಾ ಮೊದಲನೇ ಮಹಡಿಗೆ ಸೀಮಿತವಾಗಿವೆ. ಅವುಗಳ ಮೇಲೆ ಅಗತ್ಯಕ್ಕೆ ತಕ್ಕಂತೆ ಎರಡು, ಮೂರನೆಯ ಅಂತಸ್ತು ಕಟ್ಟಿ ಉಪಯೋಗಿಸಿಕೊಳ್ಳಬಹುದು. ನೆಲ ಅಂತಸ್ತಿನ ಭೂವಿಜ್ಞಾನ ವಿಭಾಗದ ಮೇಲೆ ಭೂಗೋಳ ವಿಭಾಗವನ್ನು ಇತ್ತೀಚೆಗೆ ಕಟ್ಟಿರುವುದನ್ನು ಉಳಿದ ವಿಭಾಗಗಳಿಗೆ ಸಂಬಂಧಿಸಿದಂತೆಯೂ ಅನುಸರಿಸಬಹುದು. ಹಸುರಿನ ಜಾಗವನ್ನು ಉಳಿಸಿಕೊಳ್ಳುವುದು ಮುಖ್ಯವಾಗಬೇಕೇ ಹೊರತು, ಹಸುರು ಸವರಿ ಕಟ್ಟಡ ಕಟ್ಟುವುದಲ್ಲ.

ಎರಡು– ಮೂರು ವರ್ಷಗಳ ಹಿಂದೆ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಯೋಗ ಕೇಂದ್ರ ಸ್ಥಾಪನೆ, ವಿಮಾನ ತಂತ್ರಜ್ಞಾನ ಕುರಿತ ಕೇಂದ್ರ ಹೀಗೆ ಹಲವು ಯೋಜನೆಗಳ ಅನುಷ್ಠಾನ ಪ್ರಯತ್ನಗಳು ನಡೆದವು. 150 ಎಕರೆಗೂ ಹೆಚ್ಚು ಜಾಗದಲ್ಲಿನ ಜೀವವೈವಿಧ್ಯ ನಾಶವಾಗುತ್ತದೆ ಎಂದು ಪರಿಸರಪ್ರಿಯರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದಾಗಿ ಆ ಯೋಜನೆಗಳು ಸದ್ಯಕ್ಕೆ ನಿಂತಿವೆ. ಆದರೆ, ಹೊಸ ಯೋಜನೆಗಳನ್ನು ರೂಪಿಸಿ, ಇಲ್ಲಿನ ಪರಿಸರ ಗಾಸಿಗೊಳಿಸುವ ಪ್ರಯತ್ನಗಳು ನಡೆದೇ ಇವೆ. ಕ್ಯಾಂಪಸ್ಸಿನ ಸುತ್ತಲೂ ಒತ್ತುವರಿಯಾಗಿರುವ 75 ಎಕರೆಗೂ ಹೆಚ್ಚು ಜಾಗವನ್ನು ಒತ್ತುವರಿದಾರರಿಂದ ಮುಕ್ತಗೊಳಿಸಿ ಕ್ಯಾಂಪಸ್ಸಿನ ಸರಹದ್ದಿಗೆ ಸೇರಿಸಿಕೊಳ್ಳುವ ಗಂಭೀರ ಪ್ರಯತ್ನ ಈವರೆಗೆ ನಡೆದಿಲ್ಲ.

ಜ್ಞಾನಭಾರತಿ ಆವರಣದಲ್ಲಿರುವ ಸಸ್ಯರಾಶಿಯ ಅವಿಭಾಜ್ಯ ಅಂಗವಾಗಿ ಮೈದಳೆದಿರುವ ಜೀವವೈವಿಧ್ಯ ಅನನ್ಯವಾದುದು. ಸುಮಾರು 300 ಪ್ರಭೇದಗಳ ಮರ–ಗಿಡಗಳು, 250 ಪ್ರಭೇದಗಳ ಪಕ್ಷಿ– ಪ್ರಾಣಿಗಳು ಇಲ್ಲಿವೆ. ವಿಶ್ವವಿದ್ಯಾಲಯದ ಪರಿಸರವು ವಾಯುವಿಹಾರ ಮಾಡುವವರಿಗೆ ‘ಉಚಿತ ಆಕ್ಸಿಜನ್ ಟ್ಯಾಂಕ್’ನಂತಿದೆ. ಕ್ಯಾಂಪಸ್‌ನ ಮಣ್ಣು–ಕಲ್ಲು, ಗಿಡ–ಮರ, ಪಕ್ಷಿಗಳು, ಇವೆಲ್ಲವೂ ವಿದ್ಯಾರ್ಥಿಗಳು ಹಾಗೂ ಸಂಶೋಧಕರಿಗೆ ಕುತೂಹಲಕರ ವಿಷಯಗಳಾಗಿವೆ. ಕ್ಯಾಂಪಸ್‌ನ ಪರಿಸರಕ್ಕೆ ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯವೂ ಹೆಚ್ಚಿರುವುದನ್ನು ಅಧ್ಯಯನವೊಂದು ತಿಳಿಸಿದೆ.

ಸುಮಾರು 1,150 ಎಕರೆಯಷ್ಟು ವ್ಯಾಪ್ತಿಯ ಜ್ಞಾನಭಾರತಿಯ ಅಪೂರ್ವ ಪರಿಸರದಲ್ಲಿ ಈಗಾಗಲೇ ಸುಮಾರು 270 ಎಕರೆಯಷ್ಟು ಜಾಗವನ್ನು ಸ್ವಾಯತ್ತ ಸಂಸ್ಥೆಗಳಿಗೆ ಕೊಡಲಾಗಿದೆ. ಉಳಿದಿರುವ ಜಾಗದ ಮೇಲೂ ನಿರಂತರ ದಾಳಿ ನಡೆಯುತ್ತಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸಾರ್ವಜನಿಕರ ಮನವಿಗೆ ಸ್ಪಂದಿಸಿ, ಜ್ಞಾನಭಾರತಿ ಆವರಣವನ್ನು ‘ಬಯಲಾಜಿಕಲ್ ಡೈವರ್ಸಿಟಿ ಆ್ಯಕ್ಟ್– 2002’ರ ಅನ್ವಯ ಜೀವವೈವಿಧ್ಯ ಪಾರಂಪರಿಕ ತಾಣವನ್ನಾಗಿಸಲು ಕ್ರಮ ಕೈಗೊಳ್ಳುವ ದಿಸೆಯಲ್ಲಿ ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಿದ್ದಾರೆ ಎಂದು ವರದಿಯಾಗಿರುವುದು ಸಮಾಧಾನಕರ ವಿಷಯ.

‘ಅಂಬೇಡ್ಕರ್ ಥೀಮ್ ಪಾರ್ಕ್’ ಬೇರೆಡೆ ಸ್ಥಾಪಿಸುವ ಮೂಲಕ ಜ್ಞಾನಭಾರತಿಯ ಆರೋಗ್ಯವನ್ನು ರಕ್ಷಿಸಬೇಕಾಗಿದೆ. ಹಾಗೆಯೇ, ‘ಅಧ್ಯಯನ ಮತ್ತು ಸಂಶೋಧನಾ ಕಟ್ಟಡಗಳ’ ಯೋಜನೆಗಳನ್ನು ವಿವೇಚನೆಯಿಂದ ಕಾರ್ಯಗತ ಮಾಡುವುದು ಅವಶ್ಯಕ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಿ ಎಸ್ ಟಿ 8 ವರ್ಷಗಳ ಏರಿಳಿತದ ಹಾದಿ



ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದು ಎಂಟು ವರ್ಷಗಳಾಗಿವೆ. ಹೊಸ ತೆರಿಗೆ ಪದ್ಧತಿಯಿಂದಾಗಿ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ. ತೆರಿಗೆದಾರರ ಸಂಖ್ಯೆಯೂ ಹೆಚ್ಚಾಗಿದೆ. ಐದು ವರ್ಷಗಳಲ್ಲಿ ಜಿಎಸ್‌ಟಿ ಸಂಗ್ರಹ ದುಪ್ಪಟ್ಟಾಗಿದೆ. ಜಿಎಸ್‌ಟಿ ಅನುಷ್ಠಾನ ಯಶಸ್ವಿಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿದ್ದರೆ, ಅನುಷ್ಠಾನ ಸಮರ್ಪಕವಾಗಿಲ್ಲ ಎಂದು ವಿರೋಧ ಪಕ್ಷಗಳು ದೂರುತ್ತಿವೆ. ಜಿಎಸ್‌ಟಿ ವ್ಯವಸ್ಥೆಯನ್ನು ಮತ್ತಷ್ಟು ಸರಳೀಕರಣಗೊಳಿಸಬೇಕು, ಪೆಟ್ರೋಲಿಯಂ ಉತ್ಪನ್ನಗಳನ್ನೂ ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎನ್ನುವ ಒತ್ತಾಯ ವಿವಿಧ ವಲಯಗಳಿಂದ ಕೇಳಿಬರುತ್ತಿದೆ. ಇದರ ನಡುವೆಯೇ ಜಿಎಸ್‌ಟಿ ವ್ಯವಸ್ಥೆಯಲ್ಲಿ ಮತ್ತೊಂದು ಸುತ್ತಿನ ಬದಲಾವಣೆ ತರಲು (ಜಿಎಸ್‌ಟಿ 2.0) ಕೇಂದ್ರ ಸರ್ಕಾರ ಸಿದ್ಧತೆ ನಡೆಸುತ್ತಿದೆ

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರವು ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೆ ತಂದಿದ್ದು 2017ರ ಜುಲೈ 1ರಂದು. ಜಿಎಸ್‌ಟಿ ಹಲವು ಸ್ತರಗಳ, ವಸ್ತು/ಸೇವೆ ಗ್ರಾಹಕರ ಕೈಸೇರುವ ಹಂತದಲ್ಲಿ ಪಾವತಿಸಬೇಕಾದ ಪರೋಕ್ಷ ತೆರಿಗೆ ಪದ್ಧತಿ. 'ಒಂದು ದೇಶ, ಒಂದು ತೆರಿಗೆ' ಎಂಬ ಪರಿಕಲ್ಪನೆಯ ಅಡಿಯಲ್ಲಿ ದೇಶೀಯವಾಗಿ ಮಾರಾಟವಾಗುವ ಸರಕು ಮತ್ತು ಸೇವೆಗಳ ಮೇಲೆ ಮೌಲ್ಯವರ್ಧಿತ ತೆರಿಗೆಯಾಗಿ ಜಿಎಸ್‌ಟಿಯನ್ನು ಜಾರಿಗೆ ತರಲಾಯಿತು. 2017ರ ಜುಲೈಗೂ ಮೊದಲು ಅಬಕಾರಿ ಸುಂಕ, ಸೇವಾ ಸುಂಕ ಮತ್ತು ವ್ಯಾಟ್ ಸೇರಿದಂತೆ ಹಲವು ರೀತಿಯ ಪರೋಕ್ಷ ತೆರಿಗೆಗಳು ಚಾಲ್ತಿಯಲ್ಲಿದ್ದವು. 17 ಬಗೆಯ ಸ್ಥಳೀಯ ತೆರಿಗೆಗಳು ಮತ್ತು 13 ಬಗೆಯ ಸೆಸ್‌ಗಳನ್ನು ಸೇರಿಸಿ, ಐದು ಸ್ಲ್ಯಾಬ್‌ಗಳ ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು.

ಜಿಎಸ್‌ಟಿಗೆ ಸಂಬಂಧಿಸಿದ ತೀರ್ಮಾನಗಳನ್ನು ಕೈಗೊಳ್ಳಲು ಜಿಎಸ್‌ಟಿ ಮಂಡಳಿ ರಚನೆ ಮಾಡಲಾಗಿದ್ದು, ಕೇಂದ್ರ ಹಣಕಾಸು ಸಚಿವರು ಮತ್ತು ರಾಜ್ಯಗಳ ಹಣಕಾಸು ಸಚಿವರು ಅದರ ಭಾಗವಾಗಿರುತ್ತಾರೆ. ಜಿಎಸ್‌ಟಿ ಹಂತಗಳ ಬದಲಾವಣೆ, ಶಾಸನ ತಿದ್ದುಪಡಿ ಸೇರಿದಂತೆ ದೇಶದ ಹಣಕಾಸಿನ ಅಗತ್ಯಗಳಿಗೆ ತಕ್ಕಂತೆ ಜಿಎಸ್‌ಟಿ ವ್ಯವಸ್ಥೆಯಲ್ಲಾಗಬೇಕಾದ ಬದಲಾವಣೆಗಳ ಬಗ್ಗೆ ಜಿಎಸ್‌ಟಿ ಮಂಡಳಿ ಕಾಲದಿಂದ ಕಾಲಕ್ಕೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ.

ಆರಂಭದಲ್ಲಿ ಜಿಎಸ್‌ಟಿ ಐದು ಸ್ಲ್ಯಾಬ್‌ಗಳ ತೆರಿಗೆ ವ್ಯವಸ್ಥೆಯಾಗಿತ್ತು. ನಂತರ ಅದನ್ನು ನಾಲ್ಕು ಸ್ಲ್ಯಾಬ್‌ಗಳ (ಶೇ 5, ಶೇ 12, ಶೇ 18 ಮತ್ತು ಶೇ 28) ವ್ಯವಸ್ಥೆಯನ್ನಾಗಿ ಪರಿವರ್ತಿಸಲಾಯಿತು. ಪ್ಯಾಕ್ ಮಾಡಲಾದ ಆಹಾರ ಪದಾರ್ಥಗಳು ಮತ್ತಿತರ ಅಗತ್ಯ ವಸ್ತುಗಳು ಶೇ 5ರಷ್ಟು ಜಿಎಸ್‌ಟಿ ವ್ಯಾಪ್ತಿಯಲ್ಲಿದ್ದರೆ, ಐಷಾರಾಮಿ ವಸ್ತುಗಳು ಅತಿ ಹೆಚ್ಚಿನ ಅಂದರೆ, ಶೇ 28ರ ಜಿಎಸ್‌ಟಿ ವ್ಯಾಪ್ತಿಯಲ್ಲಿ ಬರುತ್ತವೆ. ಸಂಗ್ರಹವಾದ ಜಿಎಸ್‌ಟಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ.

ಜಿಎಸ್‌ಟಿ ಜಾರಿಗೆ ಬಂದ ನಂತರ ಕೇಂದ್ರಗಳ ಮತ್ತು ರಾಜ್ಯಗಳ ತೆರಿಗೆ ವರಮಾನ ಹೆಚ್ಚಾಗಿದೆ. 2017–18ರಲ್ಲಿ ₹90 ಸಾವಿರ ಕೋಟಿ ಇದ್ದ ತಿಂಗಳ ಸರಾಸರಿ ಜಿಎಸ್‌ಟಿ ಸಂಗ್ರಹವು 2024–25ರಲ್ಲಿ (ಏಪ್ರಿಲ್–ಮಾರ್ಚ್) ₹1.84 ಲಕ್ಷ ಕೋಟಿಗೆ ಏರಿಕೆಯಾಗಿದೆ. 2025ರ ಏಪ್ರಿಲ್‌ನಲ್ಲಿ ದಾಖಲೆಯ ಜಿಎಸ್‌ಟಿ ಸಂಗ್ರಹವಾಗಿದ್ದು, ₹2.37 ಲಕ್ಷ ಕೋಟಿ ದೊರೆತಿದೆ. ಜಿಎಸ್‌ಟಿ ಸಂಗ್ರಹವು 2024–25ರಲ್ಲಿ ದಾಖಲೆಯ ಮಟ್ಟ (₹22.08 ಲಕ್ಷ ಕೋಟಿ) ಮುಟ್ಟಿದ್ದು, ಹಿಂದಿನ ಹಣಕಾಸಿನ ವರ್ಷಕ್ಕಿಂತಲೂ ಶೇ 9.4ರಷ್ಟು ಪ್ರಗತಿ ದಾಖಲಿಸಿದೆ. ಐದು ವರ್ಷಗಳಲ್ಲಿ ಜಿಎಸ್‌ಟಿ ಸಂಗ್ರಹ ದುಪ್ಪಟ್ಟಾಗಿದೆ. ಜಿಎಸ್‌ಟಿ ವ್ಯವಸ್ಥೆಯು ಜಾರಿಯಾದ ನಂತರ ತೆರಿಗೆದಾರರ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿದೆ. 2017ರಲ್ಲಿ 65 ಲಕ್ಷ ಇದ್ದ ನೋಂದಾಯಿತ ಜಿಎಸ್‌ಟಿ ಪಾವತಿದಾರರ ಸಂಖ್ಯೆಯು 1.51 ಕೋಟಿಗೆ ಹೆಚ್ಚಾಗಿದೆ.

ಪಿಡಬ್ಲ್ಯುಸಿ ಇಂಡಿಯಾ ಸಂಸ್ಥೆಯು ಜಿಎಸ್‌ಟಿ ವ್ಯವಸ್ಥೆಯನ್ನು ಮತ್ತಷ್ಟು ಸರಳೀಕರಣಗೊಳಿಸಬೇಕೆಂದು ಶಿಫಾರಸು ಮಾಡಿದ್ದು, ಕೆಲವು ಬದಲಾವಣೆಗಳನ್ನು ತರಬೇಕು ಎಂದು ಸಲಹೆ ನೀಡಿದೆ.

ರಾಜ್ಯಗಳಿಗೂ ಇದೆ ಸಮಾನ ಹಕ್ಕು

2022ರ ಮೇನಲ್ಲಿ ಜಿಎಸ್‌ಟಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪೊಂದನ್ನು ನೀಡಿತ್ತು. 'ತೆರಿಗೆ ವಿಧಿಸುವ ವಿಚಾರದಲ್ಲಿ ಶಾಸನ ರೂಪಿಸುವ ಸಮಾನ ಅಧಿಕಾರ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಕ್ಕೆ ಇವೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಮಾಡುವ ಶಿಫಾರಸುಗಳನ್ನು ರಾಜ್ಯಗಳು ಕಡ್ಡಾಯವಾಗಿ ಪಾಲಿಸಬೇಕಾಗಿಲ್ಲ. ಅವು 'ಮನವೊಲಿಕೆ'ಯ ಸ್ವರೂಪದ್ದು' ಎಂದು ಪ್ರತಿಪಾದಿಸಿತ್ತು. ಆ ಮೂಲಕ, ಜಿಎಸ್‌ಟಿ ವ್ಯವಸ್ಥೆಯಲ್ಲಿ ಕೇಂದ್ರದಷ್ಟೇ ರಾಜ್ಯಗಳಿಗೂ ಸಮಾನ ಹಕ್ಕು ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಕರ್ನಾಟಕಕ್ಕೆ ಎರಡನೇ ಸ್ಥಾನ

ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಗುಜರಾತ್, ತಮಿಳುನಾಡು, ಹರಿಯಾಣ, ಉತ್ತರ ಪ್ರದೇಶ, ದೆಹಲಿ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ಒಡಿಶಾ ಇವೆ.

ಜಿಎಸ್‌ಟಿ ಸಂಗ್ರಹ: ಯಾವ ವರ್ಷ, ಎಷ್ಟು?

(ಲಕ್ಷ ಕೋಟಿಗಳಲ್ಲಿ)



ಹೆಚ್ಚು ಜಿಎಸ್‌ಟಿ ಸಂಗ್ರಹಿಸಿದ ರಾಜ್ಯಗಳು

(2024–25) (ಲಕ್ಷ ಕೋಟಿಗಳಲ್ಲಿ)

ರಾಜ್ಯ	ಸಂಗ್ರಹ
ಮಹಾರಾಷ್ಟ್ರ	₹3.60
ಕರ್ನಾಟಕ	₹1.60
ಗುಜರಾತ್	₹1.37
ತಮಿಳುನಾಡು	₹1.31
ಹರಿಯಾಣ	₹1.19
ಉತ್ತರ ಪ್ರದೇಶ	₹1.12
ದೆಹಲಿ	₹0.77
ಪಶ್ಚಿಮ ಬಂಗಾಳ	₹0.67
ತೆಲಂಗಾಣ	₹0.63
ಒಡಿಶಾ	₹0.61

ಆಧಾರ: ಪಿಟಿಐ, ಜಿಎಸ್‌ಟಿ ವೆಬ್‌ಸೈಟ್, ಪಿಡಬ್ಲ್ಯುಸಿ ಇಂಡಿಯಾ, ಪಿಐಬಿ, ಡೆಲಾಯ್ಟ್ ಜಿಎಸ್‌ಟಿ 8 ಸರ್ವೆ

ಜಿಎಸ್‌ಟಿ ಅನುಷ್ಠಾನ: ಟೀಕೆ

ಕೇಂದ್ರ ಸರ್ಕಾರವು ಜಿಎಸ್‌ಟಿ ವ್ಯವಸ್ಥೆ ಸಮರ್ಪಕವಾಗಿ ಜಾರಿಗೊಳಿಸಿಲ್ಲ ಎಂಬ ಟೀಕೆಯನ್ನು ಆರಂಭದಲ್ಲೇ ವಿರೋಧ ಪಕ್ಷಗಳು ಮಾಡಿದ್ದವು. 2016ರ ನವೆಂಬರ್‌ನಲ್ಲಿ ದೇಶದಲ್ಲಿ ನೋಟು ರದ್ದತಿ ಮಾಡಲಾಗಿತ್ತು. ಅದರಿಂದ ಜನರಲ್ಲಿ ಹಣದ ಕೊರತೆ ಉಂಟಾಗಿ, ಜನಜೀವನಕ್ಕೆ, ವ್ಯಾಪಾರ–ವಹಿವಾಟಿಗೆ ತೊಂದರೆ ಉಂಟಾಗಿತ್ತು. ಅದಾದ ಕೆಲವೇ ತಿಂಗಳಲ್ಲಿ, 2017ರ ಜುಲೈನಲ್ಲಿ ಜಿಎಸ್‌ಟಿ ಜಾರಿಗೆ ತರಲಾಗಿತ್ತು. ಆರಂಭದ ಗೊಂದಲಗಳು, ಹೊಸ ವ್ಯವಸ್ಥೆಗೆ ಸ್ಥಿತ್ಯಂತರಗೊಳ್ಳುವಾಗಿನ ಸಮಸ್ಯೆಗಳಿಂದ ಮತ್ತೊಮ್ಮೆ ವ್ಯಾಪಾರ–ವಹಿವಾಟು, ಉದ್ಯಮಗಳಿಗೆ ಪೆಟ್ಟು ಬಿದ್ದಿತ್ತು. ಇವೆರಡರಿಂದ ದೇಶದ ಆರ್ಥಿಕತೆ ಕುಸಿದಿದೆ ಎನ್ನುವ ವರದಿಗಳೂ ಬಂದವು. ಜಿಎಸ್‌ಟಿ ಅನ್ನು ಜಾರಿಗೊಳಿಸಲು ಅದು ಸಕಾಲವಾಗಿರಲಿಲ್ಲ ಎನ್ನುವ ಟೀಕೆಗಳು ವ್ಯಕ್ತವಾಗಿದ್ದವು. ಇದು ಸಾಲದು ಎಂಬಂತೆ 2019–20ರಲ್ಲಿ ಕೋವಿಡ್ ಸ್ಫೋಟಗೊಂಡು ಜನಸಾಮಾನ್ಯರು ತತ್ತರಿಸಿಹೋಗಿದ್ದರು. ಜನ ದೈನಂದಿನ ಜೀವನ ನಡೆಸಲೂ ಪರದಾಡುವಂತಾಗಿತ್ತು. ಅನೇಕ ಕಿರಿ–ಹಿರಿ ಉದ್ಯಮಗಳು ನಷ್ಟ ಭರಿಸಲಾರದೆ ಬಾಗಿಲು ಮುಚ್ಚಿದ್ದವು.

ಕೇಂದ್ರ ಸರ್ಕಾರವು ಅಕ್ಕಿ, ಹಾಲು ಮುಂತಾದ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ವಿಧಿಸುವ ಪ್ರಕಟಣೆ ಮಾಡಿದಾಗಲೂ ಅದಕ್ಕೆ ತೀವ್ರ ವಿರೋಧ, ಟೀಕೆ ವ್ಯಕ್ತವಾಗಿತ್ತು. ದಿನಬಳಕೆಯ ವಸ್ತುಗಳನ್ನು ಜಿಎಸ್‌ಟಿ ಪಟ್ಟಿಯಿಂದ ಕೈಬಿಡಬೇಕು ಎಂಬ ಆಗ್ರಹ ವ್ಯಕ್ತವಾಗಿತ್ತು. ವಿಮೆಗಳ ಕಂತಿನ ಮೇಲೆ ಜಿಎಸ್‌ಟಿ ವಿಧಿಸುವುದರ (ಶೇ 18) ಬಗ್ಗೆಯೂ ವಿರೋಧ ಕೇಳಿಬಂದಿತ್ತು.

ಜಿಎಸ್‌ಟಿಯಿಂದ ಹೊರಗೆ...

'ಒಂದು ದೇಶ, ಒಂದು ತೆರಿಗೆ' ಎಂದು ಪ್ರತಿಪಾದಿಸಿ ಜಿಎಸ್‌ಟಿ ಜಾರಿಗೊಳಿಸಲಾಯಿತಾದರೂ ಇಂದಿಗೂ ಹಲವು ವಸ್ತು/ಸೇವೆಗಳು ಅದರಿಂದ ಹೊರಗಿವೆ. ಪೆಟ್ರೋಲ್, ಡೀಸೆಲ್, ವಿಮಾನಗಳಲ್ಲಿ ಬಳಸಲಾಗುವ ಟರ್ಬೈನ್ ಆಯಿಲ್, ನೈಸರ್ಗಿಕ ಅನಿಲ, ಮದ್ಯ ಮತ್ತು ಕಚ್ಚಾ ಇಂಧನ ತಯಾರಿಕೆಯಲ್ಲಿ ಬಳಸಲಾಗುವ ಆಲ್ಕೊಹಾಲ್ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿವೆ. ಅವುಗಳ ಮೇಲೆ, ಮಾರಾಟಕ್ಕೆ ಸಂಬಂಧಿಸಿದಂತೆ ವಿಧಿಸಲಾಗುವ ಮೌಲ್ಯವರ್ಧಿತ ತೆರಿಗೆ, ತಯಾರಿಕೆ ವೇಳೆ ವಿಧಿಸಲಾಗುವ ಅಬಕಾರಿ ತೆರಿಗೆಯನ್ನು ಕೇಂದ್ರ ಮತ್ತು ರಾಜ್ಯಗಳು ವಿಧಿಸುತ್ತಿವೆ.

ಡೆಲಾಯ್ಟ್ ಸಮೀಕ್ಷೆ ಹೇಳುವುದೇನು?

ಜಿಎಸ್‌ಟಿಗೆ ಎಂಟು ವರ್ಷ ತುಂಬಿರುವ ಹೊತ್ತಿನಲ್ಲಿ ಡೆಲಾಯ್ಟ್ ಸಂಸ್ಥೆಯು ಜಿಎಸ್‌ಟಿ@8 ಎಂಬ ಸಮೀಕ್ಷೆ ನಡೆಸಿದ್ದು, ಜಿಎಸ್‌ಟಿ ವ್ಯವಸ್ಥೆ, ಅದರಲ್ಲಿರುವ ಲೋಪಗಳು, ಆಗಬೇಕಾದ ಸುಧಾರಣೆಗಳ ಬಗ್ಗೆ ದೇಶದ ಎಂಟು ಬಗೆಯ ಉದ್ದಿಮೆಗಳ ಉನ್ನತ ಮಟ್ಟದ 963 ಪ್ರತಿನಿಧಿಗಳಿಂದ ಅಭಿಪ್ರಾಯ ಸಂಗ್ರಹಿಸಿದೆ. ಶೇ 85 ಮಂದಿ ಜಿಎಸ್‌ಟಿ ವ್ಯವಸ್ಥೆಯ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ವರ್ಷದ ಸಮೀಕ್ಷೆಯಲ್ಲಿ ಶೇ 10 ಮಂದಿ ತಟಸ್ಥ ಧೋರಣೆ ತಾಳಿದ್ದರೆ, ಶೇ 5ರಷ್ಟು ಜನರು ನಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಕಾರಾತ್ಮಕ ಅಭಿಪ್ರಾಯಕ್ಕೆ ಕಾರಣಗಳು

- ತೆರಿಗೆ ಪ್ರಕ್ರಿಯೆ ಸರಳಗೊಳಿಸಿ ಹೆಚ್ಚು ಪಾರದರ್ಶಕತೆ ಅಳವಡಿಸಿಕೊಂಡಿದ್ದು
- ಒಟ್ಟಾರೆ ತೆರಿಗೆ ಹೊರೆಯನ್ನು ತಗ್ಗಿಸಲು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸೌಲಭ್ಯ ಕಲ್ಪಿಸಿರುವುದು
- ಹಳೆಯ ತೆರಿಗೆಗಳನ್ನು ಹೊಸ ವ್ಯವಸ್ಥೆಗೆ ತಂದಿರುವುದು, ತೆರಿಗೆ ನಿಯಮ ಪಾಲನೆಗೆ ತಂತ್ರಜ್ಞಾನ ಬಳಕೆ
- ದೇಶದ ಎಲ್ಲ ರಾಜ್ಯಗಳಲ್ಲೂ ಒಂದೇ ರೀತಿಯ ತೆರಿಗೆ ಪ್ರಕ್ರಿಯೆ ಜಾರಿ, ಮರುಪಾವತಿಯ ವ್ಯವಸ್ಥೆಯ ಸುಧಾರಣೆ, ಸರ್ಕಾರಿ ಪೋರ್ಟಲ್ ಸಂಪರ್ಕ ವ್ಯವಸ್ಥೆ

ಉದ್ದಿಮೆಗಳ ಸಲಹೆಗಳೇನು?

- ರಫ್ತು ಉದಾರೀಕರಣಕ್ಕೆ ಕ್ರಮ ಕೈಗೊಳ್ಳಬೇಕು
- ಜಿಎಸ್‌ಟಿ ದರ ಸರಳೀಕರಣ ಮಾಡಬೇಕು
- ಆಡಳಿತಗಳಲ್ಲಿ ಲೆಕ್ಕಪರಿಶೋಧನೆಯನ್ನು ಇನ್ನಷ್ಟು ಸುಗಮಗೊಳಿಸುವುದು
- ಉದ್ದಿಮೆಗಳಿಗೆ ದುಡಿಯುವ ಬಂಡವಾಳ ಹರಿದುಬರುವಂತೆ ಮಾಡಲು ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕು

'ಪಿಡಬ್ಲ್ಯುಸಿ ಇಂಡಿಯಾ' ಶಿಫಾರಸುಗಳು

- ನಾಲ್ಕು ಹಂತದ ಜಿಎಸ್‌ಟಿ ವ್ಯವಸ್ಥೆಯನ್ನು ಮೂರು ಹಂತದ ವ್ಯವಸ್ಥೆಯನ್ನಾಗಿ ಬದಲಾಯಿಸಬೇಕು
- ಹೂಡಿಕೆಸ್ನೇಹಿಯಾದ, ಜಾಗತಿಕವಾಗಿ ಸ್ಪರ್ಧಾತ್ಮಕವಾದ ವ್ಯವಸ್ಥೆಯಾಗಿ ರೂಪಿಸಬೇಕು
- ಇ-ವಾಹನಗಳು, ವಿಮಾನಯಾನ, ಇ-ಕಾಮರ್ಸ್ ವಲಯಗಳ ಜಿಎಸ್‌ಟಿ ಸರಳೀಕರಣ
- ವಿಮಾನ ಇಂಧನ, ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು. ಅದರಿಂದ ಹಣದ ಹರಿವಿನ ಸಮಸ್ಯೆಗೆ ಪರಿಹಾರ ಸಿಗುತ್ತದೆ

ರಾಷ್ಟ್ರೀಯ

ಅರಣ್ಯ ಹಕ್ಕು ಕಾಯ್ದೆ: ಸ್ಪಷ್ಟನೆ ಕೋರಿ ಪ್ರಧಾನಿಗೆ ಪತ್ರ

ನವದೆಹಲಿ (ಪಿಟಿಐ): ಕೇಂದ್ರ ಪರಿಸರ ಸಚಿವಾಲಯ 'ಅರಣ್ಯ ಹಕ್ಕು ಕಾಯ್ದೆ (ಎಫ್‌ಆರ್‌ಎ)'ಯನ್ನು ಬುಡಮೇಲು ಮಾಡಲು ಹೊರಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ 90ಕ್ಕೂ ಹೆಚ್ಚು ಅರಣ್ಯ ಹಕ್ಕು ಸಂಘಟನೆಗಳು, ಅರಣ್ಯ ಒತ್ತುವರಿ ಕುರಿತು ಸಚಿವ ಭೂಪೇಂದ್ರ ಯಾದವ್ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಗೆ ಸ್ಪಷ್ಟನೆ ಬಯಸಿವೆ.

'ಅರಣ್ಯ ಹಕ್ಕು ಕಾಯ್ದೆ ಅಡಿ ನೀಡಿರುವ ಹಕ್ಕುಪತ್ರಗಳು ಅರಣ್ಯ ಒತ್ತುವರಿಗೆ ಕಾರಣ' ಎಂದು ಜೂನ್ 5ರಂದು ಯಾದವ್ ಹೇಳಿಕೆ ನೀಡಿದ್ದರು. ಈ ಸಂಬಂಧ ಸ್ಪಷ್ಟನೆ ಬಯಸಿ 28ರಂದು ಪತ್ರ ಬರೆದಿರುವುದಾಗಿ ಛತ್ತೀಸಗಢ ಬಚಾವೋ ಆಂದೋಲನ ಮತ್ತು ಹಿಮಾಚಲ ಪ್ರದೇಶದ ಹಿಮಧಾರಾ ಸಂಸ್ಥೆ ಸೇರಿ ಹಲವು ಸಂಘ–ಸಂಸ್ಥೆಗಳು ತಿಳಿಸಿವೆ.

ಅರಣ್ಯ ಸಚಿವರ ಹೇಳಿಕೆ 'ದಾರಿ ತಪ್ಪಿಸುವ, ಕಾನೂನು ಅಡಿ ಸಮರ್ಥನೀಯವಲ್ಲದ, ಅರಣ್ಯ ಹಕ್ಕು ಕಾಯ್ದೆಯ ಔಚಿತ್ಯ ಪ್ರಶ್ನಿಸುವಂತಿದೆ' ಎಂದು ಸಂಸ್ಥೆಗಳು ಆತಂಕ ವ್ಯಕ್ತಪಡಿಸಿವೆ.

ಅರಣ್ಯ ಅಧಿಕಾರಿಗಳ ಜತೆ ಸೇರಿ ಪರಿಸರ ಇಲಾಖೆ 16 ವರ್ಷಗಳಿಂದ ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಅಡ್ಡಿ ಮಾಡುತ್ತಿದೆ. ಅರಣ್ಯ ಹಕ್ಕು ಕಾಯ್ದೆಯ ಅಡಿ ಸುಮಾರು 4 ಕೋಟಿ ಹೆಕ್ಟೇರ್ ಸಮುದಾಯ ಅರಣ್ಯವು ಗ್ರಾಮ ಮಟ್ಟದ ಸಂಸ್ಥೆಗಳ ಸಂಪನ್ಮೂಲ ಎಂದು 2009ರಲ್ಲಿ ಆಹಾರ ಸಚಿವಾಲಯವೇ ಹೇಳಿತ್ತು.

'2023ರಲ್ಲಿ ಲೋಕಸಭೆಗೆ ಮಾಹಿತಿ ನೀಡುವಾಗ ಪರಿಸರ ಸಚಿವರು, ಬುಡಕಟ್ಟು ಜನರು ಮತ್ತು ಅರಣ್ಯ ಹಕ್ಕು ಹೊಂದಿರುವವರು ಅರಣ್ಯ ಒತ್ತುವರಿಗೆ ಕಾರಣ ಎಂದು ಹೇಳಿದ್ದಾರೆ. ಇಲಾಖೆಯೇ 2008ರಿಂದೀಚೆಗೆ ಅರಣ್ಯ ಹಕ್ಕು ಕಾಯ್ದೆ ಉಲ್ಲಂಘಿಸಿ 3 ಲಕ್ಷ ಹೆಕ್ಟೇರ್ ಅರಣ್ಯ ಜಮೀನಿನ ಅಕ್ರಮ ಬಳಕೆಗೆ ಅವಕಾಶ ಮಾಡಿಕೊಟ್ಟಿದೆ. ಪ್ರಧಾನಿಯವರು ಮಧ್ಯಪ್ರವೇಶ ಮಾಡಿ ಅರಣ್ಯ ಹಕ್ಕು ಕಾಯ್ದೆಯನ್ನು ಬುಡಮೇಲು ಮಾಡುವ ಪ್ರಯತ್ನ ತಡೆಯಬೇಕು' ಎಂದು ಮನವಿ ಮಾಡಿವೆ.

ಜೆಎನ್‌ಯು ವಿದ್ಯಾರ್ಥಿ ನಾಪತ್ತೆ ಪ್ರಕರಣ ಮುಕ್ತಾಯಕ್ಕೆ ಸಮ್ಮತಿ

ನವದೆಹಲಿ (ಪಿಟಿಐ): ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ನಜೀಬ್ ಅಹಮದ್ ನಾಪತ್ತೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಬಿಐಗೆ ದೆಹಲಿ ನ್ಯಾಯಾಲಯವೊಂದು ಸೋಮವಾರ ಅನುಮತಿ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಆಯಾಮದಲ್ಲೂ ತನಿಖೆ ನಡೆಸಿದರೂ ಯಾವುದೇ ಪ್ರಯೋಜನವಾಗದ ಕಾರಣ ಈ ನಿರ್ಧಾರ ಪ್ರಕಟಿಸುತ್ತಿರುವುದಾಗಿ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಜ್ಯೋತಿ ಮಹೇಶ್ವರಿ ಅವರು ಹೇಳಿದ್ದಾರೆ. ಭವಿಷ್ಯದಲ್ಲಿ ಯಾವುದೇ ಸುಳಿವು ಸಿಕ್ಕರೂ ಪ್ರಕರಣವನ್ನು ಮತ್ತೆ ತೆರೆಯಲು ಸಿಬಿಐಗೆ ಅವಕಾಶ ನೀಡಿದ್ದಾರೆ.

2016ರ ಅಕ್ಟೋಬರ್ 15ರಂದು ನಜೀಬ್ ನಾಪತ್ತೆಯಾಗಿದ್ದು, ದೆಹಲಿ ಪೊಲೀಸರು ಪ್ರಕರಣದ ತನಿಖೆ ನಡೆಸಿದ್ದರು. ನಂತರ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲಾಗಿತ್ತು. 2018ರಲ್ಲಿ ಸಿಬಿಐ, ಪ್ರಕರಣವನ್ನು ಮುಕ್ತಾಯಗೊಳಿಸಿತ್ತು. ಸಿಬಿಐ ಸರಿಯಾಗಿ ತನಿಖೆ ನಡೆಸಿಲ್ಲ ಎಂದು ನಜೀಬ್ ತಾಯಿ ಆರೋಪಿಸಿದ್ದರು.

ಸಮಗ್ರ ತನಿಖೆಯ ಬಳಿಕವೂ ಯಾವುದೇ ಸಾಕ್ಷ್ಯ ಸಿಗದ ಕಾರಣದಿಂದ ಈಗ ಮತ್ತೆ ಪ್ರಕರಣವನ್ನು ಮುಕ್ತಾಯಗೊಳಿಸಲು ನ್ಯಾಯಾಲಯ ಅನುಮತಿಸಿದೆ. 'ಮಗನ ಪತ್ತೆಗಾಗಿ 2016ರಿಂದಲೂ ಹೋರಾಡುತ್ತಿರುವ ನಜೀಬ್‌ನ ತಾಯಿಯ ಸಂಕಷ್ಟ ಅರ್ಥವಾಗುತ್ತದೆ. ಆದರೆ, ಸಿಬಿಐ ನಡೆಸಿರುವ ತನಿಖೆಯನ್ನು ದೂಷಿಸಲೂ ಸಾಧ್ಯವಿಲ್ಲ' ಎಂದು ನ್ಯಾಯಾಲಯ ಹೇಳಿದೆ.

ಅಮರಾವತಿಯಲ್ಲಿ 2026 ಜ.1ರಿಂದ ಕ್ವಾಂಟಮ್ ಕಂಪ್ಯೂಟಿಂಗ್ ಕೇಂದ್ರ

ವಿಜಯವಾಡ, ಆಂಧ್ರಪ್ರದೇಶ (ಪಿಟಿಐ): '2026ರ ಜನವರಿ 1ರಂದು ಅಮರಾವತಿಯಲ್ಲಿ 'ಕ್ವಾಂಟಮ್ ಕಂಪ್ಯೂಟಿಂಗ್ ಕೇಂದ್ರ'ವು ಕಾರ್ಯಾಚರಣೆ ಆರಂಭಿಸಲಿದೆ' ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ತಿಳಿಸಿದರು.

ವಿಜಯವಾಡದಲ್ಲಿ ನಡೆದ ಅಮರಾವತಿ ಕ್ವಾಂಟಮ್ ವ್ಯಾಲಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ದೃಢವಾದ ಪರಿಸರ ವ್ಯವಸ್ಥೆಗೆ ಕ್ವಾಂಟಮ್ ಕಂಪ್ಯೂಟಿಂಗ್ ಹಿಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಅಮರಾವತಿಯಲ್ಲಿನ ಕ್ವಾಂಟಮ್ ವ್ಯಾಲಿ ಟೆಕ್ ಪಾರ್ಕ್‌ನಲ್ಲಿ ದೇಶದ ಮೊದಲ ಕ್ವಾಂಟಮ್ ಕಂಪ್ಯೂಟರ್ ಕೇಂದ್ರ ಸ್ಥಾಪಿಸಲು ಐಬಿಎಂ ಮತ್ತು ಟಿಸಿಎಸ್ ಸರ್ಕಾರದ ಜೊತೆ ಕೈಜೋಡಿಸಿವೆ. 2026ರ ಜ.1ರಿಂದಲೇ ಕಾರ್ಯಾರಂಭ ಮಾಡಲಿದೆ' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯಲ್ಲಿ 20 ಪ್ರಯಾಣಿಕರಿದ್ದ ಬಸ್ ಅಲಕನಂದ ನದಿಗೆ ಬಿದ್ದು ಹಲವರು ಮೃತಪಟ್ಟರೆ, ಕೆಲವರು ಕಾಣೆಯಾಗಿದ್ದರು. ಈ ಘಟನೆಯ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಬಸ್‌ವೊಂದು ನದಿಗೆ ಬಿದ್ದಿರುವ ವಿಡಿಯೊ ಹಂಚಿಕೆಯಾಗುತ್ತಿದೆ. ಇದು ರುದ್ರಪ್ರಯಾಗದ ಅಪಘಾತದ ವಿಡಿಯೊ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ಪೋಸ್ಟ್‌ನಲ್ಲಿರುವ ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಕೆಲವರು ಇದೇ ಚಿತ್ರವನ್ನು ಇಂತಹುದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ನ್ಯೂಸ್ 18 ಪಂಜಾಬಿ, ಅಗ್ನಿಬನ್ ಮುಂತಾದ ಕೆಲವು ಮಾಧ್ಯಮಗಳಲ್ಲಿಯೂ ಇದೇ ಚಿತ್ರವನ್ನು ಪ್ರಸಾರ ಮಾಡಲಾಗಿದೆ. ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅದರಲ್ಲಿ ಹಲವು ವ್ಯತ್ಯಾಸಗಳಿರುವುದು ಕಂಡುಬಂತು. ಚಿತ್ರದಲ್ಲಿರುವ ಬಸ್, ನೀರಿನ ಹಿನ್ನೆಲೆ ಇವೆಲ್ಲ ವಾಸ್ತವ ಅಲ್ಲ ಎನ್ನುವಂತೆ ಭಾಸವಾಯಿತು. ಇದೇ ಸುಳಿವಿನ ಆಧಾರದಲ್ಲಿ ಚಿತ್ರವನ್ನು ಹೈವ್ ಮಾಡರೇಷನ್ ಮೂಲಕ ಪರಿಶೀಲನೆ ನಡೆಸಿದಾಗ, ಇದನ್ನು ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಲಾಗಿದೆ ಎನ್ನುವುದು ತಿಳಿದುಬಂತು. ಸೈಟ್ ಇಂಜಿನ್ ಎನ್ನುವ ಎಐ ಪತ್ತೆ ಸಾಧನದ ಮೂಲಕ ಪರೀಕ್ಷಿಸಿದಾಗ ಇದು ಎಐ ನಿರ್ಮಿತ ಚಿತ್ರ ಎನ್ನುವುದು ಖಚಿತವಾಯಿತು. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಪದಬಂಧ 6090

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚೊಕ್ಕ ಚಿನ್ನವಿದು (4)
3.ಮಿತಿಗೆ ಒಳಪಟ್ಟಿದ್ದು (4)
5.ಗರ ಬಡಿದಿರುವ ಶಹರು (3)
6.ಕೊನೆಗಿರುವ ಮಗ ತಿರುಗಿದಾಗ ವೇದ ಕಾಣುತ್ತದೆ (3)
8.ಜನರೊಳಗಿನ ಹುಟ್ಟು (3)
9.ವಿವಾದವಿಲ್ಲದೇ ಆದ ಲಗ್ನ (3)
10.ಯುದ್ಧ ಇಲ್ಲಿ ನಡೆಯುತ್ತಿದೆ (3)
12.ರಾತ್ರಿಗೊಂದು ಪರ್ಯಾಯ ಪದ (3)
14.ತೆಳುವಾದ ಎಳೆ ಇಲ್ಲಿದೆ (4)
15.ಮರ್ಯಾದೆಯನ್ನು ಹೊಂದಿರುವ ಸಂದೇಹ! (4)

ಮೇಲಿಂದ ಕೆಳಕ್ಕೆ

1.ಅವನಿರುವ ಭೂಮಿ (3)
2.ಜಿಪುಣನ ಹತ್ತಿರ ಅರ್ಹಂತ ಬಂದಿದ್ದಾನಲ್ಲಾ! (2)
3.ಪರಮದಲ್ಲಿರುವ ಮೋಕ್ಷ ಕಾಣುತ್ತಿದೆಯೇ? (2)
4.ಒಂದೇ ವಿಷಯದಲ್ಲಿ ಆಸಕ್ತನಾಗಿರುವವನು (3)
7.ಮನಸ್ಸನ್ನು ಹತೋಟಿಯಲ್ಲಿಡುವುದು (5)
8.ಮಂದಿಗೆಲ್ಲ ಈತ ಒಡೆಯ (5)
9.ರೀತಿ ಈ ವಿಧವಾಗಿ ಬಂದಿದೆ (3)
11.ನೃತ್ಯವನ್ನು ಹೀಗೂ ಹೇಳುತ್ತಾರೆ (3)
12.ಭೂಮಿಗಿರುವ ಇನ್ನೊಂದು ಹೆಸರು (2)
13.ನಗು ಪದದ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (2)



6089ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಕಾರ 3.ಅಶ್ವಾರೋಹಿ
5.ನವೀನ 7.ಪ್ರವರ್ತಕ
9.ವ್ಯವಹಾರ 12.ಅಂಗಡಿ
14.ಆಡುಂಬೊಲ 15.ಕಣಕ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ರಸನ
3.ಅನುಭಾವ 4.ಹಿಜರಿ
6.ವೀರಕಾವ್ಯ 7.ಪ್ರಹರ
8.ಕವಾಡಿಗ 10.ಹಾಲಾಹಲ
11.ಕೆಟಲಿ 12.ಅಂಟುಕ
13.ಡಿನ್ನಕ

ಸುಡೊಕು 6474

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

6473 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಸಮಸ್ಯೆಯ ನಡುವೆ ಬದುಕುವ ಕಲೆ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಒಂದು ಊರಿನಲ್ಲಿ ಜ್ಞಾನಿಯಾದ ವ್ಯಕ್ತಿಯೊಬ್ಬನಿದ್ದ. ಜನರು ಆತನ ಬಳಿ ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದರು. ಬದುಕಿನಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ. ಆದರೆ ನಾವು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ಕೆಲವಾದರೂ ಪರಿಹಾರವಾಗುತ್ತವೆ ಎಂದು ಅವನು ಅದೆಷ್ಟೇ ಹೇಳಿದರೂ ಜನರಿಗೆ ಅದು ಅರ್ಥವಾಗುತ್ತಿರಲಿಲ್ಲ. ಹಾಗಾಗಿ, ಅಂತಹವರಿಗೆ ಅರ್ಥವಾಗುವಂತೆ ಮನದಟ್ಟು ಮಾಡಬೇಕೆಂದು ಆತ ಕಾಯುತ್ತಿದ್ದ.

ಒಮ್ಮೆ ಒಂದು ದಿನ ಆತ ನದಿಯ ದಡದಲ್ಲಿ ದಿನವಿಡೀ ಕುಳಿತಿದ್ದ. ಬೆಳಿಗ್ಗೆಯಿಂದ ಸಂಜೆಯವರೆಗೂ ಆತ ಕುಳಿತ ಜಾಗ ಬಿಟ್ಟು ಕದಲದೇ ಇದ್ದುದನ್ನು ನೋಡಿ ಊರಿನ ಜನರು ಬಂದು ಯಾಕೆ ಹೀಗೆ ಕುಳಿತಿದ್ದೀರಿ ಎಂದು ಕೇಳುತ್ತಾರೆ. 'ಈ ನದಿ ಪೂರ್ತಿಯಾಗಿ ಒಣಗುತ್ತದೆಂದು ಕಾಯುತ್ತ ಕುಳಿತಿದ್ದೇನೆ. ಇದು ಒಣಗಿದ ಮೇಲೆ ನಾನು ಆಚೆ ದಡಕ್ಕೆ ನಡೆದುಕೊಂಡು ಹೋಗಬೇಕು' ಎಂದ ಆತ. ಅದಕ್ಕೆ ಊರ ಜನರು ನಕ್ಕು, 'ಹಾಗಾದರೆ ನೀವು ಎಂದಿಗೂ ಆಚೆ ದಡ ತಲುಪಲು ಸಾಧ್ಯವೇ ಇಲ್ಲ' ಎನ್ನುತ್ತಾರೆ. ಆಗ ಆ ವ್ಯಕ್ತಿ ಮುಗುಳ್ನಕ್ಕು ಹೇಳಿದ, 'ಇದನ್ನೇ ನಾನು ನಿಮಗೆ ಅದೆಷ್ಟೋ ವರ್ಷಗಳಿಂದ ಹೇಳಲು ಪ್ರಯತ್ನಿಸುತ್ತಿದ್ದೇನೆ. ಈ ನದಿ ನಮ್ಮ ಬದುಕಿನ ಸಮಸ್ಯೆಗಳ ಹಾಗೆ. ಅದು ಬತ್ತುವುದೇ ಇಲ್ಲ. ನದಿಯ ಆಚೆ ದಡಕ್ಕೆ ಹೋಗಲು ಈಜಿಕೊಂಡು ಹೋಗಬೇಕು ಅಥವಾ ದೋಣಿಯಲ್ಲಿ ಹೋಗಬೇಕು. ನದಿ ದಾಟಲು ದೋಣಿಯನ್ನು ಬಳಸುತ್ತೇವೆ. ದೋಣಿಯೇ ಇಲ್ಲವೆಂದರೆ ಈಜುವುದನ್ನು ಕಲಿಯುತ್ತೇವೆ. ಸೇತುವೆ ಕಟ್ಟಲು ಪ್ರಯತ್ನಿಸುತ್ತೇವೆ. ನದಿ ಬತ್ತುವುದಿಲ್ಲವೆಂದೋ, ದೋಣಿ ಇಲ್ಲವೆಂದೋ ಅಳುತ್ತ ಕುಳಿತುಕೊಂಡರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅದೇ ರೀತಿ ಬದುಕಿನಲ್ಲಿ ಸಮಸ್ಯೆಗಳಿಗೆ ಕೊನೆಯೇ ಇಲ್ಲ. ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತ ಅವುಗಳ ನಡುವೆಯೇ ಬದುಕುವುದನ್ನು ಕಲಿಯಬೇಕು. ಪಶ್ಚಾತ್ತಾಪ ಹೇಗೆ ಆಗಿಹೋದ ಸಂಗತಿಗಳನ್ನು ಬದಲಾಯಿಸದೋ ಹಾಗೆ ಚಿಂತೆ ಭವಿಷ್ಯವನ್ನು ಸುಧಾರಿಸದು. ಈಸಬೇಕು ಈಸಿ ಜೈಸಬೇಕು ಎಂದು ಹಿರಿಯರು ಸುಮ್ಮನೇ ಹೇಳಿದ್ದಾರೆಯೇ' ಎಂದ.

ಇಂದು ಸಾಮಾಜಿಕ ಜಾಲತಾಣದಲ್ಲಿ ಸೆಲೆಬ್ರಿಟಿಗಳ ಆಡಂಬರದ ವಿವಾಹ, ವೈಭವದ ಜೀವನಶೈಲಿ ಇವುಗಳನ್ನು ನೋಡಿ ಯುವಜನರು ಹಣವಿದ್ದುಬಿಟ್ಟರೆ ಸಮಸ್ಯೆಗಳೇ ಬದುಕಲ್ಲಿ ಬರುವುದಿಲ್ಲ ಎಂದುಕೊಳ್ಳುತ್ತಾರೆ. ತಕ್ಷಣ ಹಣಮಾಡುವ ಹುಚ್ಚಿಗೆ ಬಿದ್ದು ಅಪರಾಧಗಳನ್ನು ಎಸಗುತ್ತಾರೆ. ಮತ್ತೆ ಕೆಲವರು ಸಮಸ್ಯೆಗಳಿರುವುದು ತಮ್ಮ ಬದುಕಿನಲ್ಲಿ ಮಾತ್ರ ಎಂದು ಯೋಚಿಸಿ ಖಿನ್ನತೆಗೆ ಜಾರುತ್ತಾರೆ. ಮತ್ತೆ ಕೆಲವರು ಜೀವನೋತ್ಸಾಹವಿಲ್ಲದೇ ನಿರುತ್ಸಾಹದಿಂದ ಬದುಕುತ್ತಿರುತ್ತಾರೆ. ಆದರೆ, ಇಂದು ನಾವು ಬದುಕಲು ಬೇಕಾದ ಅತ್ಯಂತ ಕನಿಷ್ಠ ಮಟ್ಟದ ಜ್ಞಾನ ಯಾವುದೆಂದರೆ ಸಮಸ್ಯೆಗಳಿಲ್ಲದೇ ಯಾರ ಜೀವನವೂ ಇಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು. ಕೆಲವರ ಸಮಸ್ಯೆ ಹೊರಜಗತ್ತಿಗೆ ಕಾಣದಿರಬಹುದು. ಆದರೆ ಸವಾಲುಗಳಿಲ್ಲದ ಬದುಕು ಯಾರದ್ದೂ ಇಲ್ಲ. ಕಡ್ಡಿಯನ್ನು ಗುಡ್ಡವಾಗಿಸಿಕೊಳ್ಳುವುದೋ, ಗುಡ್ಡವಿದ್ದರೂ ಕಡ್ಡಿ ಎಂದುಕೊಂಡು ಮುನ್ನಡೆವುದೋ ಅದು ನಮ್ಮ ನಮ್ಮ ದೃಷ್ಟಿಕೋನದ ಮೇಲೆ ನಿರ್ಧಾರಿತ. ಅಷ್ಟೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಜುಲೈ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಷಷ್ಠಿ ಗಂ. 10-21 **ನಕ್ಷತ್ರ:** ಪೂರ್ವಫಾಲ್ಗುಣಿ ಗಂ. 08-54 **ಯೋಗ:** ವ್ಯತೀಪಾತ ಗಂ. 17-19 ಕರಣ: ತೈತಿಲ ಗಂ. 10-21, ಮಿಥುನ ಮಾಸದ 17 ನೇ ದಿನ. **ಮಳೆ ನಕ್ಷತ್ರ** : ಆರ್ದ್ರಾ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 – 04-30 **ಸೂರ್ಯೋದಯ** : 06-11 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 05 ಮೊಹರಮ್. **ಅದೃಷ್ಟ ಸಂಖ್ಯೆ :** 5, 8

ಮೇಷ: ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಕೆಲಸದತ್ತ ಗಮನ ಹರಿಸುವಿರಿ. 6ನೇ ಇಂದ್ರಿಯದ ಮಾತಿಗೆ ಬೆಲೆ ಕೊಡುವುದು ಯಶಸ್ಸಿಗೆ ಮುಖ್ಯ.

ವೃಷಭ: ಶ್ರೇಯಸ್ಸು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಇದು ಸಕಾಲ. ತಮಾಷೆಯ ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿ ಬಾರದು.

ಮಿಥುನ: ಅಪರಿಚಿತ ವ್ಯಕ್ತಿಯೊಬ್ಬರು ಉತ್ತಮ ಉಪಾಯಗಳನ್ನು ಮತ್ತು ಅನುಭವಗಳನ್ನು ನೀಡುವುದಾಗಿ ಹೇಳಿ ಗುರಿಯನ್ನು ತಪ್ಪಿಸುವ ಸಾಧ್ಯತೆ ಇದೆ. ಜಾಗ್ರತರಾಗಿರಿ. ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರುವಿರಿ.

ಕರ್ಕಾಟಕ: ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದ ಮಾಡಿಕೊಳ್ಳುವುದು ಬಹಳ ಸಮಂಜಸ.

ಸಿಂಹ: ಗುರಿಯನ್ನು ಮುಟ್ಟುವತ್ತ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವುದು. ಸತ್ಯದ ಹಾದಿಗೆ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ.

ಕನ್ಯಾ: ನಡವಳಿಕೆ ಎಲ್ಲರ ಕೇಂದ್ರ ಬಿಂದುವಾಗಲಿದೆ. ಕಂಪನಿಯಲ್ಲಿ ಸಿಗುವ ಗೌರವ ಉಳಿಸಿಕೊಳ್ಳುವತ್ತ ಗಮನ ಹರಿಸುವುದು ಉತ್ತಮ. ಬಡಗಿ ಕೆಲಸ ಮಾಡುವವರಿಗೆ ಸುಯೋಗ.

ತುಲಾ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಭಾವನೆಗಳಿಗೆ ಆದ್ಯತೆಯನ್ನು ನೀಡುವುದು ಅನಿವಾರ್ಯವಾಗುತ್ತದೆ.

ವೃಶ್ಚಿಕ: ಸುಪ್ತ ಮನಸ್ಸು ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸುತ್ತಿದೆ. ಯಾವುದೇ ಪರಿಸ್ಥಿತಿಯಲ್ಲಿಯೂ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡಿ. ದಾಂಪತ್ಯದಲ್ಲಿ ಬಿರುಕು ಬರದಂತೆ ನೋಡಿಕೊಳ್ಳಿ.

ಧನು: ಯೋಜನೆಗಳು ಅರ್ಧದಲ್ಲಿಯೇ ನಿಂತಿರುವುದರಿಂದ ಆಗಿದ್ದ ನಿರಾಸೆಯು ಆತ್ಮವಿಶ್ವಾಸದಿಂದ ಸಕಾರಾತ್ಮಕ ತಿರುವು ಪಡೆದುಕೊಳ್ಳಲಿದೆ. ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ.

ಮಕರ: ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡಿ. ಕಠಿಣ ಪರಿಶ್ರಮದಿಂದ ಮೇಲಧಿಕಾರಿಗಳ ಮನ ಗೆಲ್ಲಲು ಪ್ರಯತ್ನಿಸಿ. ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದರಿಂದ ಅಧಿಕಾರಿಗಳ ಮನ ಗೆಲ್ಲಬಹುದು.

ಕುಂಭ: ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ. ಕ್ಷಣಿಕ ಸುಖಗಳಿಗೆ ಗಮನ ನೀಡದೆ, ಮುಖ್ಯ ವಿಷಯಗಳ ಬಗ್ಗೆ ಗಂಭೀರವಾಗಿ ಆಲೋಚಿಸಿ.

ಮೀನ: ಸರಿಯಾದ ಹಾದಿಯಲ್ಲಿಯೇ ನಡೆಯುವಿರಿ. ವಸ್ತ್ರಾಭರಣ ಖರೀದಿ ಯೋಗವಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಪ್ರಗತಿ ಸಿಕ್ಕಿ ದೂರ ಪ್ರಯಾಣ ಮಾಡಬೇಕಾಗುವುದು. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಲಿದೆ.

ಗುಂಡಣ್ಣ

ಗಡಿ ಪುನರ್ವಿಂಗಡಣೆ ಚರ್ಚೆಗೆ ಸಿದ್ಧ: ಚೀನಾ

ಬೀಜಿಂಗ್ (ಪಿಟಿಐ): 'ಭಾರತ- ಚೀನಾ ನಡುವಿನ ಗಡಿ ವಿವಾದವು ಇನ್ನೂ ಸಂಕೀರ್ಣ ಸ್ಥಿತಿಯಲ್ಲಿದ್ದು, ಅದು ಬಗೆಹರಿಯಲು ಸಮಯ ಬೇಕಿದೆ. ಆದರೆ, ಗಡಿ ಪ್ರದೇಶಗಳ ಪುನರ್ವಿಂಗಡಣೆ ಕುರಿತು ಭಾರತದೊಂದಿಗೆ ಮಾತುಕತೆ ನಡೆಸಲು ಸಿದ್ಧರಿದ್ದೇವೆ' ಎಂದು ಚೀನಾದ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ನಡೆದಿದ್ದ ಶಾಂಘೈ ಸಮ್ಮೇಳನದಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಚೀನಾ ರಕ್ಷಣಾ ಸಚಿವ ಡಾಂಗ್ ಜನ್ ಭಾಗಿಯಾಗಿದ್ದರು. ಈ ವೇಳೆ ಭಾರತ-ಚೀನಾ ನಡುವಿನ ವಿವಾದಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂಬ ಪ್ರಸ್ತಾಪವೂ ಬಂದಿತ್ತು.

ಈ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಚೀನಾದ ವಿದೇಶಾಂಗ ವಕ್ತಾರೆ ಮಾವೋ ನಿಂಗ್ ಮಾಹಿತಿ ನೀಡಿದ್ದು, 'ಗಡಿ ಪ್ರದೇಶಗಳಲ್ಲಿ ಶಾಂತಿ ಸ್ಥಾಪಿಸಲು ಮತ್ತು ಸಹಕಾರ ವೃದ್ಧಿಸುವ ನಿಟ್ಟಿನಲ್ಲಿ ಪುನರ್ವಿಂಗಡಣೆ, ಗಡಿ ನಿರ್ವಹಣೆ ಕುರಿತ ವಿಚಾರಗಳ ಬಗ್ಗೆ ಭಾರತದೊಂದಿಗೆ ಮಾತುಕತೆ ನಡೆಸಲು ನಾವು ಸಿದ್ಧರಿದ್ದೇವೆ' ಎಂದಿದ್ದಾರೆ.

ಬ್ಯಾಂಕ್ ಎನ್‌ಪಿಎ ಇಳಿಕೆ

ಮುಂಬೈ (ಪಿಟಿಐ): ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಒಟ್ಟು ಅನುತ್ಪಾದಕ ಸಾಲಗಳ (ಎನ್‌ಪಿಎ) ಪ್ರಮಾಣವು ಮಾರ್ಚ್ ವೇಳೆಗೆ ಶೇಕಡ 2.3ರಷ್ಟಕ್ಕೆ ತಗ್ಗಿದೆ ಎಂದು ಹಣಕಾಸು ಸ್ಥಿರತೆ ವರದಿಯಲ್ಲಿ ಆರ್‌ಬಿಐ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,637
ಇಂದಿನ ಅಂತ್ಯ:	25,517
ದಿನದ ಕನಿಷ್ಠ:	25,473
	120

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹620
	12 ಕ್ಕೆ	₹80
ಮೈಸೂರು:	100 ಕ್ಕೆ	₹625

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹335-555
ದ್ವಿತಳಿ (ಬಿ.ವಿ)	₹402-672

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹197.50
ಆರ್‌ಎಸ್‌ಎಸ್-5	₹191.50
ಗುಡ್ ಲಾಟ್	₹180.50

ಕೈಗಾರಿಕಾ ಉತ್ಪಾದನೆ ಕುಂಠಿತ

ಮುಂಗಾರು ಮಳೆ ಮೊದಲೇ ಶುರುವಾಗಿದ್ದರಿಂದಾಗಿ ತಗ್ಗಿದ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಮೇ ತಿಂಗಳಲ್ಲಿ ಶೇಕಡ 1.2ಕ್ಕೆ ಇಳಿಕೆ ಆಗಿದೆ. ಇದು ಒಂಬತ್ತು ತಿಂಗಳ ಕನಿಷ್ಠ ಮಟ್ಟ.

ಮುಂಗಾರು ಮಳೆಯು ವಾಡಿಕೆಗಿಂತ ಮೊದಲೇ ಆರಂಭವಾಗಿ ತಯಾರಿಕೆ, ಗಣಿಗಾರಿಕೆ ಮತ್ತು ಇಂಧನ ಕ್ಷೇತ್ರಗಳಲ್ಲಿನ ಬೆಳವಣಿಗೆಯು ಚೆನ್ನಾಗಿ ಆಗಿಲ್ಲದ ಕಾರಣದಿಂದಾಗಿ ಒಟ್ಟಾರೆ ಬೆಳವಣಿಗೆಯು ತಗ್ಗಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧರಿಸಿ ಹೇಳುವ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು 2024ರ ಮೇ ತಿಂಗಳಲ್ಲಿ ಶೇ 6.3ರಷ್ಟು ಆಗಿತ್ತು. ಏಪ್ರಿಲ್ ತಿಂಗಳ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಪರಿಷ್ಕರಿಸಿದೆ. ಮೊದಲು ಅದು ಶೇ 2.7ರಷ್ಟು ಇದ್ದಿದ್ದು ಪರಿಷ್ಕರಣೆಯ ನಂತರ ಶೇ 2.6ರಷ್ಟು ಆಗಿದೆ.

ತಯಾರಿಕಾ ವಲಯದ ಬೆಳವಣಿಗೆ ದರವು ಹಿಂದಿನ ವರ್ಷದ ಮೇ ತಿಂಗಳಲ್ಲಿ ಶೇ 5.1ರಷ್ಟು ಇದ್ದಿದ್ದು ಈ ವರ್ಷದ ಮೇ ತಿಂಗಳಲ್ಲಿ ಶೇ 2.6ಕ್ಕೆ ಇಳಿಕೆ ಆಗಿದೆ. ಗಣಿಗಾರಿಕಾ ವಲಯದ ಬೆಳವಣಿಗೆಯು ಕಳೆದ ವರ್ಷದ ಮೇ ತಿಂಗಳಲ್ಲಿ ಶೇ 6.6ರಷ್ಟು ಇದ್ದಿದ್ದು ಈ ಬಾರಿ ಶೇ 6.5ರಷ್ಟಾಗಿದೆ. ವಿದ್ಯುತ್ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಕಳೆದ ವರ್ಷ ಶೇ 13.7ರಷ್ಟು ಇದ್ದಿದ್ದು ಈ ಬಾರಿ ಶೇ 5.8ರಷ್ಟು ಕಡಿಮೆ ಆಗಿದೆ.

'ಮುಂಗಾರು ಮಳೆಯು ವಾಡಿಕೆಗಿಂತ ಮೊದಲೇ ಶುರುವಾದ ಕಾರಣದಿಂದಾಗಿ ಗಣಿಗಾರಿಕೆ ವಲಯದಲ್ಲಿ ಚಟುವಟಿಕೆ ಕಡಿಮೆ ಆಯಿತು. ಮುಂಗಾರು ಮಳೆಯಿಂದಾಗಿ ವಿದ್ಯುತ್ ಬೇಡಿಕೆ ಕೂಡ ಕಡಿಮೆ ಆಯಿತು. ತಯಾರಿಕಾ ವಲಯದಲ್ಲಿನ ಬೆಳವಣಿಗೆ ಚೆನ್ನಾಗಿ ಇಲ್ಲ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

ಸಾಲ ನೀಡಿಕೆ ಇಳಿಕೆ

ಮುಂಬೈ (ಪಿಟಿಐ): ಮೇ 30ಕ್ಕೆ ಕೊನೆಗೊಂಡ ಹದಿನೈದು ದಿನಗಳ ಅವಧಿಯಲ್ಲಿ ಕೈಗಾರಿಕಾ ವಲಯಕ್ಕೆ ನೀಡುವ ಬ್ಯಾಂಕ್ ಸಾಲದ ಪ್ರಮಾಣವು ಶೇಕಡ 4.9ರಷ್ಟು ಬೆಳವಣಿಗೆ ಕಂಡಿದೆ.

ಆದರೆ, ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ಬಗೆಯ ಸಾಲಗಳ ಬೆಳವಣಿಗೆ ಪ್ರಮಾಣ ಶೇ 8.9ರಷ್ಟು ಆಗಿತ್ತು. ಅದಕ್ಕೆ ಹೋಲಿಕೆ ಮಾಡಿದರೆ, ಈ ವರ್ಷದಲ್ಲಿ ಸಾಲ ನೀಡಿಕೆ ಪ್ರಮಾಣ ಇಳಿಕೆ ಆಗಿದೆ.

ಈ ಅಂಕಿ-ಅಂಶವನ್ನು ಆರ್‌ಬಿಐ ಬಿಡುಗಡೆ ಮಾಡಿದೆ. ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ವಲಯಗಳಿಗೆ ನೀಡುವ ಸಾಲದ ಪ್ರಮಾಣವು ಶೇ 7.5ರಷ್ಟು ಬೆಳವಣಿಗೆ ಸಾಧಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವಲಯಕ್ಕೆ ನೀಡಿದ ಸಾಲದ ಪ್ರಮಾಣದಲ್ಲಿ ಶೇ 21.6ರಷ್ಟು ಬೆಳವಣಿಗೆ ಆಗಿತ್ತು.

ಸುದ್ದಿ 2 ನಿಮಿಷ

₹31 ಸಾವಿರ ದಾಟಿದ ಕೊಬ್ಬರಿ ಧಾರಣೆ

ತುಮಕೂರು: ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ಉಂಡೆ ಕೊಬ್ಬರಿ ಕ್ವಿಂಟಲ್‌ಗೆ ₹31,606ಕ್ಕೆ ಮಾರಾಟವಾಗುವ ಮೂಲಕ ದಾಖಲೆ ಬರೆದಿದೆ.

ಕಳೆದ ನಾಲ್ಕು ದಿನಗಳಲ್ಲಿ ಉಂಡೆ ಕೊಬ್ಬರಿ ಧಾರಣೆ ಕ್ವಿಂಟಲ್‌ಗೆ ₹2,488 ಹೆಚ್ಚಳವಾಗಿದೆ. 'ಮಾದರಿ' ದರ ₹31,606 ಹಾಗೂ ಕನಿಷ್ಠ ₹27 ಸಾವಿರಕ್ಕೆ ಹರಾಜಾಗಿದೆ. ತಿಪಟೂರು ಎಪಿಎಂಸಿ ಮಾರುಕಟ್ಟೆಗೆ ಸೋಮವಾರ 4,182 ಕ್ವಿಂಟಲ್ (9,727 ಚೀಲ) ಉಂಡೆ ಕೊಬ್ಬರಿ ಆವಕವಾಗಿತ್ತು.

ಕೊಬ್ಬರಿ ಆವಕದಲ್ಲೂ ಹೆಚ್ಚಳವಾಗಿದ್ದು, ಬೆಲೆಯೂ ಏರಿಕೆಯಾಗಿದೆ. ಪ್ರತಿ ಹರಾಜಿನ ಸಮಯದಲ್ಲಿ 2,500 ಕ್ವಿಂಟಲ್‌ನಿಂದ 3 ಸಾವಿರ ಕ್ವಿಂಟಲ್ ವರೆಗೆ ಆವಕವಾಗುತಿತ್ತು. ಮಾರ್ಚ್‌ನಿಂದ ಜೂನ್ 26ರ ನಡುವೆ ಎಂದೂ 3 ಸಾವಿರ ಕ್ವಿಂಟಲ್ ದಾಟಿರಲಿಲ್ಲ. ಈ ವಾರ ಆವಕದಲ್ಲೂ ಹೆಚ್ಚಳವಾಗಿದೆ.

'ಕರ್ಣಾಟಕ ಬ್ಯಾಂಕ್ ಆರ್ಥಿಕವಾಗಿ ಸುಭದ್ರವಾಗಿದೆ, ಆತಂಕ ಬೇಡ'

ಮಂಗಳೂರು: 'ಸತತ ಲಾಭದಲ್ಲಿ ವ್ಯವಹಾರ ಮಾಡುತ್ತಿರುವ ಕರ್ಣಾಟಕ ಬ್ಯಾಂಕ್ ಭದ್ರವಾಗಿದೆ. ಬ್ಯಾಂಕಿನ ಆರ್ಥಿಕ ಸ್ಥಿತಿ ಸದೃಢವಾಗಿದ್ದು, ವದಂತಿಗೆ ಬ್ಯಾಂಕ್ ಗ್ರಾಹಕರು ಕಿವಿಗೊಡಬಾರದು' ಎಂದು ಬ್ಯಾಂಕಿನ ಪ್ರಕಟಣೆ ತಿಳಿಸಿದೆ.

'ಠೇವಣಿದಾರರ ಹಣದ ಸುರಕ್ಷತೆ ಮತ್ತು ಭದ್ರತೆಯೇ ನಮ್ಮ ಬ್ಯಾಂಕ್‌ನ ಆದ್ಯತೆಯಾಗಿದ್ದು, 101 ವರ್ಷಗಳಿಂದ ಇದನ್ನು ಪಾಲಿಸಿಕೊಂಡು ಬರುತ್ತಿದ್ದೇವೆ. ಕೆಲವು ಸಾಮಾಜಿಕ ಮಾಧ್ಯಮಗಳಲ್ಲಿ ಬ್ಯಾಂಕ್ ಬಗ್ಗೆ ಪ್ರಕಟವಾಗಿರುವ ಸುದ್ದಿ ದುರುದ್ದೇಶದಿಂದ ಕೂಡಿದ್ದು, ಗ್ರಾಹಕರ ಮನಸ್ಸಿನಲ್ಲಿ ಆತಂಕ ಸೃಷ್ಟಿಸುವ ಯತ್ನ ಮಾಡಲಾಗಿದೆ. ಗ್ರಾಹಕರು ಇದಕ್ಕೆ ಕಿವಿಗೊಡಬಾರದು' ಎಂದು ಮುಖ್ಯ ವ್ಯವಸ್ಥಾಪಕಿ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಪಲ್ಲವಿ ಟಿ.ಎಸ್ ತಿಳಿಸಿದ್ದಾರೆ.

'ಕರ್ಣಾಟಕ ಬ್ಯಾಂಕ್ ಆರ್ಥಿಕವಾಗಿ ಸದೃಢವಾಗಿದ್ದು, ಯಾವುದೇ ಹಣಕಾಸಿನ ಹಗರಣಗಳು ನಡೆದಿಲ್ಲ. ಗ್ರಾಹಕರು ಮತ್ತು ಠೇವಣಿದಾರರು ಆತಂಕಪಡುವ ಅಗತ್ಯವಿಲ್ಲ' ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಸನ್ಮಾನ್ಯ ಶ್ರೀ ಕೆ.ಬಿ. ಮುನಿವೆಂಕಟರೆಡ್ಡಿ ರವರು
ಸಂಸ್ಥಾಪಕ ಅಧ್ಯಕ್ಷರು ಹೆಚ್.ಎ.ಎಸ್.ಬಿ. ಶಿಕ್ಷಣ ಸಮಿತಿ (ರಿ)
ಸರ್.ಎಂ. ವಿಶ್ವೇಶ್ವರಯ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು
60 ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ, ಕೋನೇನ ಅಗ್ರಹಾರ, ಬೆಂಗಳೂರು-560 017
ಮಾಜಿ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ,
ಮಾಜಿ ಅಧ್ಯಕ್ಷರು, ಕರ್ನಾಟಕ ರೆಡ್ಡಿ ಜನ ಸಂಘ, ಬೆಂಗಳೂರು.
ದಿನಾಂಕ 30-06-2025 ರಂದು ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ಅಂತ್ಯ ಕ್ರಿಯೆಯನ್ನು ದಿನಾಂಕ: 01-07-2025ರ ಮಂಗಳವಾರ ಮಧ್ಯಾಹ್ನ 3:00 ಗಂಟೆಗೆ ಕಲ್ಲಪಳ್ಳಿ ವಿದ್ಯುತ್ ಚಿತಾಗಾರದಲ್ಲಿ (ಕಾಕ್ಸ್ ಟೌನ್ ಹತ್ತಿರ) ನೆರವೇರಲಿದೆ.
ಇಂತಿ ದುಃಖತಪ್ತ: ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರು, ಬೋಧಕೇತರವರ್ಗ ಹಾಗೂ ವಿದ್ಯಾರ್ಥಿಗಳು.

ಕರ್ನಾಟಕ ರೆಡ್ಡಿಜನ ಸಂಘ
ಸ್ಥಾಪನೆ : 1925
ಭಾವಪೂರ್ಣ ಶ್ರದ್ಧಾಂಜಲಿ

SRI. K.B. MUNIVENKATA REDDY (EX-MLC)
(ಮಾಜಿ ಅಧ್ಯಕ್ಷರು - ಕೆ.ಆರ್.ಜೆ.ಎಸ್. 28-12-2000 ದಿಂದ 12-11-2008)
DOB : 19-12-1936 | DOD : 30-06-2025)
ಕರ್ನಾಟಕ ರೆಡ್ಡಿಜನ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಕೆ. ಬಿ. ಮುನಿವೆಂಕಟರೆಡ್ಡಿಯವರ ಆತ್ಮಕ್ಕೆ ಶಾಂತಿಸಿಗಲೆಂದು ಹಾಗೂ ಅವರ ಅಗಲಿಕೆಯಿಂದಾದ ದು:ಖವನ್ನು ಭರಿಸುವ ಶಕ್ತಿಯನ್ನು ಶ್ರೀಯುತರ ಕುಟುಂಬಕ್ಕೆ ಭಗವಂತನು ದಯಪಾಲಿಸಲೆಂದು ಕರ್ನಾಟಕ ರೆಡ್ಡಿಜನ ಸಂಘದ ಪರವಾಗಿ ಪ್ರಾರ್ಥಿಸುತ್ತೇವೆ.
ಜುಲೈ 1, 2025 ರಂದು ಅಂತ್ಯಕ್ರಿಯೆಯ ಮೆರವಣಿಗೆ ಮಧ್ಯಾಹ್ನ 2.00 ಗಂಟೆಗೆ ನಂ.1, ಕೋನೇನ ಅಗ್ರಹಾರ, ಎಚ್‌ಎಎಲ್, ಬೆಂಗಳೂರು-560019 ರಲ್ಲಿರುವ ಅವರ ನಿವಾಸದಿಂದ ಪ್ರಾರಂಭವಾಗಲಿದೆ.
ಮಧ್ಯಾಹ್ನ 3.00 ಗಂಟೆಗೆ ಕಲ್ಪಳ್ಳಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.
ಎಸ್. ಜಯರಾಮ ರೆಡ್ಡಿ, ಅಧ್ಯಕ್ಷರು | ಎಸ್. ಶೇಖರ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ
ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು.

ಅಡಿಕೆ ಧಾರಣೆ

ಕುಮಟಾ		ಕೆಂಪುಗೋಟು	19299-27100	ತಟ್ಟಿಬೆಟ್ಟೆ	29099-29419
ಚಾಲಿ	38629-42398	ರಾಶಿ	27099-56270	**ಶಿರಸಿ**	
ಚಿಪ್ಪು	25029-29999	ಸಿಪ್ಪೆಗೋಟು	7399-18411	ಬೆಟ್ಟೆ	23899-35350
ಕೋಕ	7189-19019	**ಶಿವಮೊಗ್ಗ**		ಬಿಳೆಗೋಟು	23280-33599
ಫ್ಯಾಕ್ಟರಿ	6099-24700	ಬೆಟ್ಟೆ	52509-62000	ಚಾಲಿ	35899-43001
ಹೊಸಚಾಲಿ	35689-43533	ಗೊರಬಲು	16555-31009	ಕೆಂಪುಗೋಟು	14199-22899
ಪುತ್ತೂರು		ರಾಶಿ	47338-57009	ರಾಶಿ	45409-47699
ಕೋಕ	20000-29000	ಸರಕು	55009-97400	**ಯಲ್ಲಾಪುರ**	
ಹೊಸತು	26000-48500	**ಸಿದ್ದಾಪುರ**		ಬಿಳೆಗೋಟು	15089-30899
ಹಳತು	37500-52500	ಬಿಳೆಗೋಟು	24000-31699	ಚಾಲಿ	32169-42669
ಸಾಗರ		ಚಾಲಿ	34000-41599	ಕೋಕ	7000-23089
ಬಿಳೆಗೋಟು	12169-24585	ಕೋಕ	16699-26669	ಕೆಂಪುಗೋಟು	18509-25189
ಚಾಲಿ	15214-36519	ಕೆಂಪುಗೋಟು	20399-29200	ರಾಶಿ	40009-54509
ಕೋಕ	7100-22090	ರಾಶಿ	39899-45339	ತಟ್ಟಿಬೆಟ್ಟೆ	31509-39109

ಸಣ್ಣ ಉಳಿತಾಯ: ಬಡ್ಡಿ ದರ ಯಥಾಸ್ಥಿತಿ

ನವದೆಹಲಿ (ಪಿಟಿಐ): ಪಿಪಿಎಫ್, ಎನ್‌ಎಸ್‌ಸಿ ಸೇರಿದಂತೆ ಹಲವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಜುಲೈ 1ರಿಂದ ಆರಂಭವಾಗುವ ತ್ರೈಮಾಸಿಕದಲ್ಲಿ ಬದಲಾವಣೆ ಮಾಡದೆ ಇರಲು ಕೇಂದ್ರ ಸರ್ಕಾರ ಸೋಮವಾರ ನಿರ್ಧರಿಸಿದೆ.

ಜುಲೈ-ಸೆಪ್ಟೆಂಬರ್ ತ್ರೈಮಾಸಿಕವನ್ನೂ ಪರಿಗಣನೆಗೆ ತೆಗೆದುಕೊಂಡರೆ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವು ಸತತ ಆರು ತ್ರೈಮಾಸಿಕಗಳವರೆಗೆ ಸ್ಥಿರವಾಗಿ ಇದ್ದಂತೆ ಆಗಲಿದೆ.

ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಅನ್ವಯವಾದ ಬಡ್ಡಿ ದರಗಳೇ ಮುಂದುವರಿಯಲಿವೆ. ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರದಲ್ಲಿ ಪರಿಷ್ಕರಣೆ ಆಗಬೇಕೇ ಎಂಬ ಬಗ್ಗೆ ಕೇಂದ್ರ ಸರ್ಕಾರವು ಪ್ರತಿ ತ್ರೈಮಾಸಿಕಕ್ಕೆ ಒಮ್ಮೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಪ್ರಮುಖ ಯೋಜನೆಗಳ ಬಡ್ಡಿ ದರ ಈ ರೀತಿ ಇರಲಿದೆ

ಯೋಜನೆ	ಬಡ್ಡಿ ದರ (%)
ಸುಕನ್ಯಾ ಸಮೃದ್ಧಿ ಯೋಜನೆ	8.2
3 ವರ್ಷಗಳ ಅವಧಿ ಠೇವಣಿ	7.1
ಪಿಪಿಎಫ್	7.1
ಕಿಸಾನ್ ವಿಕಾಸ ಪತ್ರ	7.5
ಎನ್‌ಎಸ್‌ಸಿ	7.7
ಮಾಸಿಕ ಆದಾಯ ಯೋಜನೆ	7.4

ಕೃಷಿ ವಿಚಾರದಲ್ಲಿ ನಿಲುವು ದೃಢ

ನವದೆಹಲಿ (ಪಿಟಿಐ): ವ್ಯಾಪಾರ ಒಪ್ಪಂದದ ವಿಚಾರವಾಗಿ ಭಾರತವು ಅಮೆರಿಕದ ಜೊತೆ ನಡೆಸುತ್ತಿರುವ ಮಾತುಕತೆಗಳು ಮಹತ್ವದ ಹಂತವನ್ನು ತಲುಪಿದ್ದು, ಕೃಷಿಗೆ ಸಂಬಂಧಿಸಿದಂತೆ ಭಾರತವು ಕಠಿಣ ನಿಲುವು ತಳೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕದ ಅಧಿಕಾರಿಗಳ ಜೊತೆ ಭಾರತದ ಅಧಿಕಾರಿಗಳ ತಂಡವು ವಾಷಿಂಗ್ಟನ್‌ನಲ್ಲಿ ಮಾತುಕತೆ ನಡೆಸುತ್ತಿದೆ. ವಾಣಿಜ್ಯ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಅವರು ಭಾರತ ತಂಡದ ನೇತೃತ್ವ ವಹಿಸಿದ್ದಾರೆ. ಈ ತಂಡವು ಅಮೆರಿಕದಲ್ಲಿ ಇನ್ನೂ ಕೆಲವು ದಿನ ಇರುವ ಸಾಧ್ಯತೆ ಇದೆ.

ಅಮೆರಿಕದ ಜೊತೆ ಮಧ್ಯಂತರ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ತಂಡವು ಅಲ್ಲಿಗೆ ತೆರಳಿದೆ. ಜುಲೈ 9ಕ್ಕೆ ಮೊದಲು ಒಪ್ಪಂದವನ್ನು ಸಾಧ್ಯವಾಗಿಸಲು ಎರಡೂ ದೇಶಗಳ ತಂಡಗಳು ಯತ್ನ ನಡೆಸಿವೆ. ಜುಲೈ 9ಕ್ಕೆ ಮೊದಲು ಒಪ್ಪಂದ ಸಾಧ್ಯವಾಗದೆ ಇದ್ದರೆ ಭಾರತದ ಸರಕುಗಳ ಮೇಲೆ ಶೇ 26ರಷ್ಟು ಪ್ರತಿಸುಂಕ ಜಾರಿಗೆ ಬರಲಿದೆ.

ಭಾರತದ ಸರಕುಗಳ ಮೇಲೆ ಶೇ 26ರಷ್ಟು ಪ್ರತಿಸುಂಕ ವಿಧಿಸುವ ಕ್ರಮವನ್ನು ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು ಅಮಾನತಿನಲ್ಲಿ ಇರಿಸಿದೆ. ಪ್ರತಿಸುಂಕದಿಂದ ಪೂರ್ಣ ವಿನಾಯಿತಿ ಬೇಕು ಎಂದು ಭಾರತ ಬೇಡಿಕೆ ಇರಿಸಿದೆ.

ಕೃಷಿ ಮತ್ತು ಹಾಲಿನ ಉತ್ಪನ್ನಗಳ ಮೇಲೆ ಸುಂಕ ವಿನಾಯಿತಿ ಬೇಕು ಎಂಬುದು ಅಮೆರಿಕದ ಆಗ್ರಹ. ಆದರೆ ಭಾರತದ ರೈತರು ಸಣ್ಣ ಹಿಡುವಳಿದಾರರಾಗಿರುವ ಕಾರಣ, ಅಮೆರಿಕದ ಆಗ್ರಹಕ್ಕೆ ಒಪ್ಪಿಗೆ ನೀಡುವುದು ಕಷ್ಟ ಎಂಬುದು ಭಾರತದ ಪ್ರತಿಪಾದನೆ.

ಭಾರತವು ಬೇರೆ ಬೇರೆ ದೇಶಗಳ ಜೊತೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಹಾಲಿನ ಉತ್ಪನ್ನಗಳ ವಲಯವನ್ನು ಮುಕ್ತವಾಗಿಸಿಲ್ಲ.

ಎ.ಸಿ 2 ಪೈಸೆ, ನಾನ್ ಎ.ಸಿ 1 ಪೈಸೆ ಏರಿಕೆ

ನವದೆಹಲಿ (ಪಿಟಿಐ): ಜುಲೈ 1ರಿಂದಲೇ ಅನ್ವಯವಾಗುವಂತೆ ಮೇಲ್ ಹಾಗೂ ಎಕ್ಸ್‌ಪ್ರೆಸ್ ರೈಲುಗಳ ಹವಾನಿಯಂತ್ರಿತ (ಎಸಿ) ದರ್ಜೆಯ ಪ್ರಯಾಣದರವನ್ನು ಪ್ರತಿ ಕಿ.ಮೀಗೆ 2 ಪೈಸೆ, ಹವಾನಿಯಂತ್ರಣ ರಹಿತ (ನಾನ್ ಎ.ಸಿ) ದರ್ಜೆಯ ದರವನ್ನು 1 ಪೈಸೆ ಏರಿಕೆ ಮಾಡಿ ರೈಲ್ವೆ ಇಲಾಖೆಯು ಸೋಮವಾರ ಆದೇಶ ಹೊರಡಿಸಿದೆ.

ಜೂನ್ 24ರಂದೇ ಪ್ರಯಾಣದರ ಏರಿಕೆ ಮಾಡುವ ಸುಳಿವನ್ನು ಇಲಾಖೆಯ ಅಧಿಕಾರಿಗಳು ನೀಡಿದ್ದರು. ಆದಾಗ್ಯೂ, ರೈಲು ಹಾಗೂ ದರ್ಜೆಗೆ ಅನುಗುಣವಾಗಿ ದರ ಏರಿಕೆಯ ಅಧಿಕೃತ ಅಧಿಸೂಚನೆಯನ್ನು ಸೋಮವಾರ ಪ್ರಕಟಿಸಿದೆ.

ನಿತ್ಯ ಪ್ರಯಾಣಿಸುವ ಪ್ರಯಾಣಿಕರನ್ನು ಗಮನದಲ್ಲಿರಿಸಿಕೊಂಡು, ಉಪನಗರ ರೈಲು (ಸಬರ್ಬನ್ ರೈಲು) ಮಾಸಿಕ ಸೀಸನ್ ಟಿಕೆಟ್‌ಗಳ ದರದಲ್ಲಿ ಬದಲಾವಣೆ ಮಾಡಿಲ್ಲ.

500 ಕಿ.ಮೀವರೆಗಿನ ಸಾಮಾನ್ಯ ದ್ವಿತೀಯ ದರ್ಜೆಯ ಪ್ರಯಾಣ ದರದಲ್ಲಿಯೂ ಹಿಂದಿನ ದರವನ್ನು ಉಳಿಸಿಕೊಳ್ಳಲಾಗಿದೆ. ನಂತರದ ಪ್ರತಿ ಕಿ.ಮೀಗೆ ಅರ್ಧ ಪೈಸೆ ಏರಿಕೆ ಮಾಡಲಾಗಿದೆ. ಸಾಮಾನ್ಯ ಸ್ಲೀಪರ್ ವರ್ಗ, ಪ್ರಥಮ ದರ್ಜೆಯ ಪ್ರಯಾಣದರವನ್ನು ಪ್ರತಿ ಕಿ.ಮೀಗೆ ಅರ್ಧ ಪೈಸೆ ಏರಿಕೆ ಮಾಡಲಾಗಿದೆ.

'ಪರಿಷ್ಕೃತ ದರವು ಪ್ರೀಮಿಯರ್ ಹಾಗೂ ವಿಶೇಷ ರೈಲುಗಳಿಗೆ ಅನ್ವಯವಾಗಲಿದೆ. ಅದರಂತೆ, ರಾಜಧಾನಿ, ಶತಾಬ್ದಿ, ತುರಂತೊ, ವಂದೇ ಭಾರತ್, ತೇಜಸ್, ಹಮ್‌ಸಫರ್, ಅಮೃತ್ ಭಾರತ್, ಮಹಮಾನಾ, ಗತಿಮಾನ್, ಅಂತ್ಯೋದಯ, ಜನಶತಾಬ್ದಿ, ಯುವ ಎಕ್ಸ್‌ಪ್ರೆಸ್, ಎ.ಸಿ. ವಿಸ್ಟಾಡೋಮ್ ಕೋಚ್, ಅನುಭೂತಿ ಕೋಚ್, ಸಬರ್ಬನ್ ಹೊರತುಪಡಿಸಿದ ಸಾಮಾನ್ಯ ರೈಲುಗಳಿಗೂ ಪರಿಷ್ಕೃತ ದರವು ಅನ್ವಯವಾಗಲಿದೆ' ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಜುಲೈ1ರಿಂದ ಬುಕ್ಕಿಂಗ್ ಮಾಡಿದ ಎಲ್ಲ ಟಿಕೆಟ್‌ಗಳಿಗೂ ಪರಿಷ್ಕೃತ ದರ ಅನ್ವಯವಾಗಲಿದೆ. ಈ ಹಿಂದೆ ಬುಕ್ಕಿಂಗ್ ಮಾಡಿದ ಟಿಕೆಟ್‌ಗಳು ಹಿಂದಿನ ದರವೇ ಮಾನ್ಯವಾಗಿರಲಿದೆ. ಪಿಆರ್‌ಎಸ್, ಯುಟಿಎಸ್ ಹಾಗೂ ಕೌಂಟರ್‌ಗಳ ವ್ಯವಸ್ಥೆಯನ್ನು ಪರಿಷ್ಕರಿಸಲಾಗಿದೆ' ಎಂದು ತಿಳಿಸಿದೆ.

ಉಳಿದಂತೆ, ರಿಸರ್ವೇಷನ್ ಶುಲ್ಕ, ಸೂಪರ್‌ಫಾಸ್ಟ್ ಶುಲ್ಕ ಹಾಗೂ ಇತರೆ ಶುಲ್ಕಗಳಲ್ಲಿಯೂ ಯಾವುದೇ ಬದಲಾವಣೆ ಇರುವುದಿಲ್ಲ.

ಸೀಟು ಕಾಯ್ದಿರಿಸಿದ ಪಟ್ಟಿ ಬೇಗನೇ ಸಿದ್ಧ

ಒಂದನೇ ಪುಟದಿಂದ...

ಮಧ್ಯಾಹ್ನ 2 ಗಂಟೆಗೂ ಮುನ್ನ ಹೊರಡುವ ರೈಲುಗಳ ಸೀಟು ಕಾಯ್ದಿರಿಸಿದ ವಿವರಗಳ ಪಟ್ಟಿಯನ್ನು ಹಿಂದಿನ ರಾತ್ರಿ 9 ಗಂಟೆಗೆ ಸಿದ್ಧಪಡಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಹಂತ ಹಂತವಾಗಿ ಈ ಬದಲಾವಣೆಯನ್ನು ಜಾರಿಗೆ ತರಲು ರೈಲ್ವೆ ಸಚಿವರು ಸೂಚಿಸಿದ್ದಾರೆ ಎಂದಿದೆ.

ತತ್ಕಾಲ್ ಟಿಕೆಟ್‌ಗೆ ಆಧಾರ್: ಆಧಾರ್ ದೃಢೀಕರಿಸಿದ ಬಳಕೆದಾರರು ಮಾತ್ರ ತತ್ಕಾಲ್ ಯೋಜನೆಯಡಿ ಟಿಕೆಟ್ ಕಾಯ್ದಿರಿಸಬಹುದಾದ ವ್ಯವಸ್ಥೆಯೂ ಮಂಗಳವಾರದಿಂದ ಜಾರಿಗೆ ಬರಲಿದೆ.

ಸಿ.ಎಂ ಬದಲು: ಹಲವು ಕವಲು

ಬಂಡೆ ರೀತಿ ಸರ್ಕಾರ ಸುಭದ್ರ: ಸಿ.ಎಂ

ಒಂದನೇ ಪುಟದಿಂದ...

'ಸುಳ್ಳು ಹೇಳುವ ಚಾಳಿಯಲ್ಲಿರುವ ಬಿಜೆಪಿಗೆ ರಾಜ್ಯದ ಜನ ಪೂರ್ಣ ಅಧಿಕಾರವನ್ನೇ ಕೊಟ್ಟಿಲ್ಲ. ಆಪರೇಷನ್ ಕಮಲ ಮಾಡಿ ಎರಡು ಬಾರಿ ಅಧಿಕಾರಕ್ಕೆ ಬಂದರು. ಜೆಡಿಎಸ್ ಇನ್ನೊಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಅಧಿಕಾರಕ್ಕೆ ಬರಬೇಕು. ಸ್ವಂತ ಶಕ್ತಿಯಿಂದ ಸಾಧ್ಯವೇ ಇಲ್ಲ ಎಂದರು.

'ನಾನು ಸುಳ್ಳು ಹೇಳಿದ್ರೆ ಜನರಿಗೆ ಗೊತ್ತಾಗಲ್ವಾ? ಬಿಜೆಪಿ, ಜೆಡಿಎಸ್‌ನವರು ಜನರನ್ನು ದಡ್ಡರೆಂದು ಭಾವಿಸಬಾರದು. ಜನರಿಗೆ ಸುಳ್ಳು ಹೇಳಿ ಹೋಗಬಾರದು ಎಂದು ಹೇಳಿದರು.

'ರಣದೀಪ್ ಸಿಂಗ್ ಸುರ್ಜೇವಾಲಾ ಈ ರಾಜ್ಯದ ಕಾಂಗ್ರೆಸ್ ಉಸ್ತುವಾರಿ. ಅವರು ನಮ್ಮ ಪಕ್ಷದ ಶಾಸಕರ ಕಷ್ಟ-ಸುಖ ಕೇಳುತ್ತಾರೆ. ಅದರಲ್ಲಿ ವಿಶೇಷವೇನಿಲ್ಲ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಲಕ್ಷ್ಮಣ ರೇಖೆ ದಾಟಬಾರದು'

'ಮುಖ್ಯಮಂತ್ರಿ ಬದಲಾವಣೆ ಕುರಿತು ಪಕ್ಷದ ಕೆಲವು ನಾಯಕರ ಹೇಳಿಕೆಗಳು ಅವರ ವೈಯಕ್ತಿಕ ಅಭಿಪ್ರಾಯ. ಪಕ್ಷದ 'ಲಕ್ಷ್ಮಣ ರೇಖೆ'ಯನ್ನು ಯಾರೂ ದಾಟಬಾರದು' ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. 'ಶಾಸಕರು ವೈಯಕ್ತಿಕವಾಗಿ ಅಭಿಪ್ರಾಯ ವ್ಯಕ್ತಪಡಿಸುವುದನ್ನು ತಪ್ಪು ಎಂದು ಭಾವಿಸುವುದಿಲ್ಲ. ಆ ಬಗ್ಗೆ ಪಕ್ಷದ ಉಸ್ತುವಾರಿ ಪರಿಶೀಲಿಸುತ್ತಾರೆ' ಎಂದರು.

'ರಾಜ್ಯದಲ್ಲಿ ಸೆಪ್ಟೆಂಬರ್ ನಂತರ 'ಕ್ರಾಂತಿ' ಆಗಲಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ' ಎಂದರು. 'ಕೆಲವು ಸಂದರ್ಭಗಳಲ್ಲಿ ಹೈಕಮಾಂಡ್ ಮಧ್ಯಪ್ರವೇಶ ಮಾಡುತ್ತದೆ. ಸಣ್ಣಪುಟ್ಟ ವ್ಯತ್ಯಾಸಗಳು ಆದಾಗ ಹೈಕಮಾಂಡ್‌ನವರು ಮಾತನಾಡುವುದು ಸಹಜ. ನಾನು ಕೂಡಾ ಸುರ್ಜೇವಾಲಾ ಅವರನ್ನು ಮಂಗಳವಾರ ಮಧ್ಯಾಹ್ನ ಭೇಟಿಯಾಗಲಿದ್ದೇನೆ' ಎಂದರು.

'ಆಕ್ಸಿಡೆಂಟಲ್ ಪ್ರೆಸಿಡೆಂಟ್'

ಒಂದನೇ ಪುಟದಿಂದ...

'ಮಲ್ಲಿಕಾರ್ಜುನ ಖರ್ಗೆ ಅವರೇ ಪಕ್ಷದ ಅಧ್ಯಕ್ಷರಾಗಿರುವ ನೀವು ಹೈಕಮಾಂಡ್ ಅಲ್ಲದಿದ್ದರೆ ಇನ್ಯಾರು ಹೈಕಮಾಂಡ್? ರಾಹುಲ್ ಗಾಂಧಿ? ಸೋನಿಯಾಗಾಂಧಿ? ಪ್ರಿಯಾಂಕ ಗಾಂಧಿ? ಅಥವಾ ಇನ್ಯಾವುದಾದರೂ ಅದೃಶ್ಯ ಸಮಿತಿ ಇದೆಯೇ' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

ನಾಯಕತ್ವ ಬದಲಾವಣೆ ಊಹಾಪೋಹ

ಒಂದನೇ ಪುಟದಿಂದ...

'ಶಾಸಕರಿಂದ ಅಭಿಪ್ರಾಯ ಸಂಗ್ರಹಿಸುವುದರಿಂದ ವಸ್ತುಸ್ಥಿತಿ ಅರ್ಥ ಮಾಡಿಕೊಳ್ಳಲು ಅನುಕೂಲ ಆಗಲಿದೆ. ಸರ್ಕಾರದ ಮಟ್ ದಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಯೂ ಶಾಸಕರಿಂದ ಮಾಹಿತಿ ಪಡೆಯುತ್ತೇನೆ' ಎಂದರು.

ಕಾರ್ಯಾಚರಣೆ

ಪಿಟಿಐ ಚಿತ್ರ

ಗುಜರಾತ್‌ನ ಕಾಂಡ್ಲಾ ಬಂದರಿನ ಮುಖಾಂತರ ಒಮಾನ್‌ನ ಶಿನಾಸ್‌ನತ್ತ ತೆರಳುತ್ತಿದ್ದ ಪಲ್ಲಾವು ದೇಶದ ಧ್ವಜ ಹೊಂದಿದ 'ಎಂಟಿ ಯಿ ಛೆಂಗ್-6' ಹಡಗಿನ ಎಂಜಿನ್‌ನಲ್ಲಿ ಸೋಮವಾರ ದೊಡ್ಡ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದ್ದು, ಭಾರತೀಯ ನೌಕಾಪಡೆಯ ಸಿಬ್ಬಂದಿ ನೆರವು ಕಾರ್ಯಾಚರಣೆ ನಡೆಸಿದರು.

'ಭಾರತಕ್ಕೆ ಎದುರೇಟು ನೀಡಿದ್ದೇವೆ'

ಇಶಾಕ್ ಡರ್

ಇಸ್ಲಾಮಾಬಾದ್ (ಪಿಟಿಐ): ಭಾರತದ ದಾಳಿಗೆ ತಕ್ಕ ಪ್ರತಿದಾಳಿ ನಡೆಸುವ ಮೂಲಕ ಪಾಕಿಸ್ತಾನ ತನ್ನ ಸಾಮರ್ಥ್ಯವನ್ನು ತೋರಿಸಿದೆ ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಇಶಾಕ್ ಡರ್ ಸೋಮವಾರ ಹೇಳಿದ್ದಾರೆ.

ಪರಮಾಣು ಸಾಮರ್ಥ್ಯವನ್ನೇ ಮುಂದಿಟ್ಟುಕೊಂಡು ಭಾರತವು ಯುದ್ಧಕ್ಕೆ ಪ್ರಚೋದನೆ ನೀಡಿದರೆ, ಪಾಕಿಸ್ತಾನವು ತಕ್ಕ ಉತ್ತರ ನೀಡಲು ಸಮರ್ಥವಾಗಿದೆ. ಭಾರತವು ಪಾಕಿಸ್ತಾನವನ್ನು ಬೆದರಿಸಲು ಮತ್ತು ಒತ್ತಡ ಹೇರಲು ಸಾಧ್ಯವಿಲ್ಲ ಎಂಬುದು ನಾಲ್ಕು ದಿನಗಳ ಸಂಘರ್ಷದ ಫಲಿತಾಂಶದಿಂದ ಬಯಲಾಗಿದೆ ಎಂದು ಹೇಳಿದ್ದಾರೆ.

ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿ ಪಾಕಿಸ್ತಾನ ತನ್ನ ಹಕ್ಕುಗಳನ್ನು ಭದ್ರಪಡಿಸಿಕೊಳ್ಳುತ್ತಿದೆ. ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದಗಳನ್ನು ಭಾರತ ಉಲ್ಲಂಘನೆ ಮಾಡುತ್ತಿರುವುದನ್ನು ಜಗತ್ತಿಗೆ ತೋರಿಸಲು ವೇದಿಕೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದೂ ಹೇಳಿದರು.

'ಭಯೋತ್ಪಾದನೆಯಲ್ಲ; ಕಾನೂನುಬದ್ಧ ಹೋರಾಟ'

ಇಸ್ಲಾಮಾಬಾದ್ (ಪಿಟಿಐ): ಜಮ್ಮು-ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳನ್ನು 'ಕಾನೂನುಬದ್ಧ ಹೋರಾಟ' ಎಂದು ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಬಣ್ಣಿಸಿದ್ದಾರೆ. ಅಲ್ಲದೇ, ಪಾಕಿಸ್ತಾನ ಎಂದಿಗೂ ಕಣಿವೆಯ ಜನರ ಪರವಾಗಿರಲಿದೆ ಎಂದೂ ಪ್ರತಿಪಾದಿಸಿದ್ದಾರೆ.

ಕರಾಚಿಯಲ್ಲಿರುವ ಪಾಕಿಸ್ತಾನದ ನೌಕಾಪಡೆ ಅಕಾಡೆಮಿಯ ಕಾರ್ಯಕ್ರಮವೊಂದರಲ್ಲಿ ಮುನೀರ್ ಭಾಗಿಯಾಗಿದ್ದರು. ಈ ವೇಳೆ ಮಾತನಾಡಿ, 'ಭಾರತ ಯಾವುದನ್ನು ಭಯೋತ್ಪಾದನೆ ಎಂದು ಹೇಳುತ್ತಿದೆಯೋ ವಾಸ್ತವದಲ್ಲಿ ಅದು ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ಕಾನೂನುಬದ್ಧ ಹೋರಾಟವಾಗಿದೆ. ಕಾಶ್ಮೀರದ ಜನರ ಧ್ವನಿ ಹತ್ತಿಕ್ಕಲು ಪ್ರಯತ್ನಿಸುತ್ತಿರುವವರೇ ಈ ಹೋರಾಟ ಮತ್ತಷ್ಟು ಉಲ್ಬಣಗೊಳ್ಳಲು ಕಾರಣರಾಗಿದ್ದಾರೆ' ಎಂದು ಹೇಳಿದ್ದಾರೆ.

ಅಲ್ಲದೇ, ಕಾಶ್ಮೀರವನ್ನು ಪಾಕಿಸ್ತಾನದ ಜೀವನಾಡಿ ಎಂದು ಬಣ್ಣಿಸಿರುವ ಮುನೀರ್, 'ಭಾರತ ಭವಿಷ್ಯದಲ್ಲಿ ಪಾಕಿಸ್ತಾನದ ವಿರುದ್ಧ ಯಾವುದೇ ದಾಳಿ ನಡೆಸಿದರೂ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಲಾಗುವುದು' ಎಂದೂ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ: ಸರ್ಕಾರಿ ಅಧೀನದಲ್ಲಿನ ಆರೋಗ್ಯ ಇಲಾಖೆಗೆ ಗುತ್ತಿಗೆದಾರ ಏಜೆನ್ಸಿಯ ಮುಖಾಂತರ ಸಂಪೂರ್ಣ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಈ ಕೆಳಕಂಡ ಹುದ್ದೆಗಳಿಗೆ M.Com/ MFA/ MBA,B.Com/ BBM(Finance) & AnyDigree ಹೊಂದಿರುವ ಹಾಗೂ 2ರಿಂದ 10 ವರ್ಷಗಳ ಅನುಭವವುಳ್ಳ, ಎಸ್‌ಸಿ/ಎಸ್‌ಟಿ ಹಾಗೂ ಸಾಮಾನ್ಯ(GM) ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. (Finance Manager, Claims Manager, Analytical Assistant, EmploymentAssistant, Junior Assistant, IT Executive, Data Entry Operator, CallCenter Executives, Assistants-MRC, Weavers, BoilerAttendant Grade-1, System Analyst), ಸಂಪರ್ಕಿಸಿ: ವ್ಯವಸ್ಥಾಪಕರು, ಮೊಬೈಲ್: 7090798566, 9980061341 ಫೋನ್ ನಂ.: 08023183399, 23185599 ಇ-ಮೇಲ್: cv.ksf9@gmail.com

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಇತರೆ

Medical

ಉಚಿತ ಶಿಬಿರ 7 ದಿನಗಳು ಮಾತ್ರ. ದಿನಾಂಕ 28-06-2025 ರಿಂದ 04-07-2025 ವರೆಗೆ. ಸಮಯ ಮಧ್ಯಾಹ್ನ 2:00 ರಿಂದ ಸಂಜೆ 4 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ACU ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಸನ್ಮಾನ್ ಹೋಟೆಲ್ ಹತ್ತಿರ ಶೇಷಾದ್ರಿಪುರಂ, ಬೆಂಗಳೂರು. ಮೊಬೈಲ್: 7349494852

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಮಂಗಳವಾರ • ಜುಲೈ 1, 2025

ಮತ್ತೆ ತೆರೆಯಲ್ಲಿ ರಂಗಿತರಂಗ

ರಾಧಿಕಾ, ಸಾಯಿಕುಮಾರ್, ನಿರೂಪ್ ಭಂಡಾರಿ

ಅನೂಪ್ ಭಂಡಾರಿ ನಿರ್ದೇಶನದ ‘ರಂಗಿತರಂಗ’ ಸಿನಿಮಾ 2015ರಲ್ಲಿ ತೆರೆಕಂಡಿತ್ತು. ಭಿನ್ನವಾದ ಕಥಾವಸ್ತುವಿನೊಂದಿಗೆ ಕನ್ನಡ ಚಿತ್ರರಂಗದಲ್ಲಿ ಬ್ಲಾಕ್‌ಬಸ್ಟರ್ ಆಗಿದ್ದ ಈ ಸಿನಿಮಾ ಇದೀಗ ಮತ್ತೆ ತೆರೆಗೆ ಬರುತ್ತಿದೆ. ‘ರಂಗಿತರಂಗ’ ಜುಲೈ 4ರಂದು ರೀರಿಲೀಸ್ ಆಗುತ್ತಿದೆ. ಇತ್ತೀಚೆಗೆ ಚಿತ್ರತಂಡ ಸುದ್ದಿಗೋಷ್ಠಿ ನಡೆಸಿ ಈ ಕುರಿತು ಮಾಹಿತಿ ಹಂಚಿಕೊಂಡಿತು.

ನಿರ್ದೇಶಕ ಅನೂಪ್ ಭಂಡಾರಿ ಮಾತನಾಡಿ, ‘ರಂಗಿತರಂಗ’ದ ಪ್ರೀ-ಪ್ರೊಡಕ್ಷನ್ ಕಾರ್ಯದಲ್ಲಿರುವಾಗ, ಈ ಚಿತ್ರ ನಾನೇ ಮಾಡಬೇಕೆಂದು ಎಚ್.ಕೆ. ಪ್ರಕಾಶ್ ಅವರು ಆಸೆಪಟ್ಟರು. ಅವರ ಉತ್ಸಾಹಕ್ಕೆ ಕೈಜೋಡಿಸಿದೆ. ಸಾಯಿಕುಮಾರ್ ಅವರನ್ನು ಹೊರತುಪಡಿಸಿ, ಬಹುತೇಕ ಎಲ್ಲ ಕಲಾವಿದರೂ ಹೊಸಬರಾಗಿದ್ದರು. ನಿರೂಪ್ ಭಂಡಾರಿ, ರಾಧಿಕಾ ಚೇತನ್, ಅವಂತಿಕಾ ಶೆಟ್ಟಿ, ಅರವಿಂದ್ ಎಲ್ಲರ ಸಂಘಟಿತ ಶ್ರಮದಿಂದ ಚಿತ್ರ ಉತ್ತಮವಾಗಿ ಮೂಡಿಬಂತು. 2015ರ ಜುಲೈ 3ರಂದು ನಮ್ಮ ಚಿತ್ರ ಬಿಡುಗಡೆಯಾದಾಗ ‘ಕಪಾಲಿ’ ಚಿತ್ರಮಂದಿರದಲ್ಲಿ ಚಿತ್ರ ನೋಡಿ ಬಂದ ಕೆಲವರು ನಮ್ಮ ನಿರ್ಮಾಪಕರಿಗೆ ‘ನಿಮಗೆ ಪೋಸ್ಟರ್ ಖರ್ಚು ಕೂಡ ಬರುವುದಿಲ್ಲ’ ಎಂದು ಹೆದರಿಸಿದ್ದರು. ಆದರೆ ‘ಬಾಹುಬಲಿ’, ‘ಬಜರಂಗಿ ಭಾಯ್‌ಜಾನ್’, ‘ಶ್ರೀಮಂತುಡು’ನಂತಹ ದೊಡ್ಡ ಚಿತ್ರಗಳ ಜೊತೆ ಬಿಡುಗಡೆಯಾದರೂ ನಮ್ಮ ಕನ್ನಡ ಚಿತ್ರ ಸೂಪರ್ ಹಿಟ್ ಆಯಿತು. ‘ರಂಗಿತರಂಗ’ದ ಮೂಲಕ ಅಮೆರಿಕದಲ್ಲಿ ಕನ್ನಡ ಚಿತ್ರಕ್ಕೆ ಒಂದು ಹೊಸ ಮಾರುಕಟ್ಟೆ ಸೃಷ್ಟಿಯಾಯಿತು’ ಎಂದರು.

‘ಪೊಲೀಸ್ ಸ್ಟೋರಿ’ ಮತ್ತು ‘ರಂಗಿತರಂಗ’ ಈ ಎರಡು ಚಿತ್ರಗಳು ನನ್ನ ಎರಡು ಕಣ್ಣುಗಳು. ಇಂತಹ ಕನ್ನಡ ಚಿತ್ರಗಳಲ್ಲಿ ನಟಿಸಿದ್ದು ಬಹಳ ಖುಷಿಯಾಗಿದೆ. ಈಗಲೂ ನಾನು ಹೋದ ಕಡೆ ‘ರಂಗಿತರಂಗ’ದ ಪಾತ್ರದಿಂದ ಜನ ಗುರುತಿಸಿ ಮೆಚ್ಚುಗೆ ಸೂಚಿಸುತ್ತಾರೆ’ ಎಂದು ನಟ ಸಾಯಿಕುಮಾರ್ ಹೇಳಿದರು.

‘ನಾನು ಐಟಿ ಉದ್ಯೋಗಿಯಾಗಿದ್ದರೂ ಸಿನಿಮಾ ಮೇಲೆ ಹೆಚ್ಚು ಆಸಕ್ತಿ ಹೊಂದಿದ್ದೆ. ಅಣ್ಣನ ನಿರ್ದೇಶನದ ಕಿರುಚಿತ್ರಗಳಿಗೆ ನಾನೇ ಹೀರೋ. ಬೆಳ್ಳಿತೆರೆಯ ಮೇಲೆ ಅನೂಪ್ ನಿರ್ದೇಶನದ ಮೊದಲ ಚಿತ್ರಕ್ಕೂ ನಾನೇ ನಾಯಕ ಎಂದು ತಿಳಿದಾಗ ಆದ ಖುಷಿ ಅಷ್ಟಿಷ್ಟಲ್ಲ. ಮೊದಲ ದೃಶ್ಯದಲ್ಲೇ ನಾನು ಸಾಯಿಕುಮಾರ್ ಅವರೊಂದಿಗೆ ಫೈಟ್ ಮಾಡಬೇಕಿತ್ತು. ಆಗ ನನಗಾದ ಭಯ ಈಗಲೂ ಕಣ್ಣ ಮುಂದಿದೆ. ಅಮೆರಿಕಾಗೆ ಹೋದಾಗ ಅಲ್ಲಿ ನಮ್ಮ ಚಿತ್ರವನ್ನು ನೋಡಲು ಬಂದಿದ್ದ ಜನಸಾಗರ ಕಂಡು ಬಹಳ ಖುಷಿಪಟ್ಟಿದ್ದೆ’ ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು ನಟ ನಿರೂಪ್ ಭಂಡಾರಿ. ❖

ಹೀಗಿದ್ದಾನೆ ನೋಡಿ ‘ಲಕ್ಷ್ಮೀಪುತ್ರ’

ಚಿಕ್ಕಣ್ಣ

ನಿರ್ದೇಶಕ ಎ.ಪಿ.ಅರ್ಜುನ್ ತಮ್ಮದೇ ಎಪಿ ಅರ್ಜುನ್ ಫಿಲ್ಮ್ಸ್ ನಡಿ ನಿರ್ಮಾಣ ಮಾಡುತ್ತಿರುವ, ಚಿಕ್ಕಣ್ಣ ಮುಖ್ಯಭೂಮಿಕೆಯಲ್ಲಿರುವ ‘ಲಕ್ಷ್ಮೀಪುತ್ರ’ ತೆರೆಗೆ ಬರಲು ಸಜ್ಜಾಗುತ್ತಿದೆ. ಇತ್ತೀಚೆಗೆ ಚಿತ್ರದ ಎರಡನೇ ಹಂತದ ಚಿತ್ರೀಕರಣ ಪೂರ್ಣಗೊಂಡಿತು.

ಚಿಕ್ಕಣ್ಣ ಜನ್ಮದಿನದಂದು ‘ಲಕ್ಷ್ಮೀಪುತ್ರ’ನ ಅನಾವರಣವನ್ನು ಚಿತ್ರತಂಡ ಮಾಡಿದೆ. ತಾಯಿ ಮಗನ ಬಾಂಧವ್ಯಕ್ಕೆ ಸಂಬಂಧಿಸಿದ ಈ ಚಿತ್ರಕ್ಕೆ ಅರ್ಜುನ್ ಕಥೆ ಹಾಗೂ ಸಾಹಿತ್ಯ ಬರೆದಿದ್ದಾರೆ. ಅವರ ಜೊತೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ವಿಜಯ್ ಎಸ್.ಸ್ವಾಮಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ‘ಲಕ್ಷ್ಮೀಪುತ್ರ’ ಚಿಕ್ಕಣ್ಣ ನಾಯಕನಾಗಿ ನಟಿಸುತ್ತಿರುವ ಎರಡನೇ ಸಿನಿಮಾ. ಚಿಕ್ಕಣ್ಣ ಮಗನಾಗಿ ಹಾಗೂ ನಟಿ ತಾರಾ ತಾಯಿಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಚಿತ್ರದ ಶೂಟಿಂಗ್ ಭರದಿಂದ ಸಾಗಿದ್ದು, ಗಿರೀಶ್ ಆರ್. ಗೌಡ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ. ಕೆ.ರವಿ ವರ್ಮಾ ಸಾಹಸ ನಿರ್ದೇಶನ, ಎಪಿ ಅರ್ಜುನ್, ಪ್ರಶಾಂತ್ ರಾಜಪ್ಪ ಹಾಗೂ ವಿಜಯ್ ಈಶ್ವರ್ ಸಂಭಾಷಣೆ ಬರೆದಿದ್ದಾರೆ. ಧರ್ಮಣ್ಣ ಕಡೂರ್ ಹಾಗೂ ಕುರಿ ಪ್ರತಾಪ್ ಚಿತ್ರದ ತಾರಾಬಳಗದಲ್ಲಿದ್ದಾರೆ.

‘ಸು ಫ್ರಮ್ ಸೋ’ನ ಡ್ಯಾಂಕ್ಸ್ ಆ್ಯಂಥಮ್

ನಟ ರಾಜ್ ಬಿ.ಶೆಟ್ಟಿ ಅವರ ಲೈಟರ್ ಬುದ್ಧ ಫಿಲಂಸ್ ನಿರ್ಮಾಣ ಸಂಸ್ಥೆಯಡಿ ನಿರ್ಮಾಣಗೊಂಡ ‘ಸು ಫ್ರಮ್ ಸೋ’ ಸಿನಿಮಾ ಜುಲೈ 25ಕ್ಕೆ ರಿಲೀಸ್ ಆಗಲಿದೆ. ಚಿತ್ರದ ‘ಡ್ಯಾಂಕ್ಸ್ ಆ್ಯಂಥಮ್’ ಬಿಡುಗಡೆಯಾಗಿದ್ದು ಜನರ ಮೆಚ್ಚುಗೆ ಪಡೆಯುತ್ತಿದೆ.

ಈ ಹಾಡಿಗೆ ರಾಜ್ ಬಿ.ಶೆಟ್ಟಿ ಅವರೇ ಸಾಹಿತ್ಯ ಬರೆದಿದ್ದು, ಅನುರಾಗ್ ಕುಲಕರ್ಣಿ ಹಾಡಿದ್ದಾರೆ. ಸುಮೇಧ್ ಕೆ. ಸಂಗೀತ ನಿರ್ದೇಶನ ಹಾಡಿಗಿದೆ. ವಿನಾಯಕ ಆಚಾರ್ಯ ನೃತ್ಯ ಸಂಯೋಜನೆ ಮಾಡಿದ್ದಾರೆ. ಹಾಡಿನಲ್ಲಿ ಜೆ.ಪಿ.ತುಮಿನಾಡು, ಶನೀಲ್ ಗೌತಮ್, ಪ್ರಕಾಶ್ ಕೆ.ತುಮಿನಾಡು, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಅರ್ಜುನ್ ಕಜೆ ಹಾಗೂ ಇತರರು ಹೆಜ್ಜೆ ಹಾಕಿದ್ದಾರೆ. ‘ಸು ಫ್ರಮ್ ಸೋ’ ಸಿನಿಮಾವನ್ನು ಜೆ.ಪಿ.ತುಮಿನಾಡು ನಿರ್ದೇಶಿಸಿದ್ದಾರೆ. ಇದು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಎಸ್.ಚಂದ್ರಶೇಖರನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸಿನಿಮಾವನ್ನು ಶಶಿಧರ್ ಶೆಟ್ಟಿ ಬರೋಡ, ರವಿ ರೈ ಕಳಸ, ರಾಜ್ ಬಿ ಶೆಟ್ಟಿ ಮೂವರು ಸೇರಿ ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಸಂದೀಪ್ ತುಳಸೀದಾಸ್ ಹಿನ್ನೆಲೆ ಸಂಗೀತ ಇರುವ ಈ ಚಿತ್ರಕ್ಕೆ ಅರ್ಜುನ್ ರಾಜ್ ಸಾಹಸ ಸಂಯೋಜನೆ ಮಾಡಿದ್ದಾರೆ. ಮಂಗಳೂರು ಸುತ್ತಮುತ್ತಲಿನ ವೇಣೂರು, ಕಕ್ಕಪದವು ಹಾಗೂ ಇತರ ಕಡೆ ಸುಮಾರು 50 ದಿನಗಳ ಕಾಲ ಸಿನಿಮಾದ ಚಿತ್ರೀಕರಣ ನಡೆದಿದೆ. ❖

ಬಿಗ್‌ಬಾಸ್ 12ಕ್ಕೂ ಸುದೀಪ್ ಸಾರಥ್ಯ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ‘ಬಿಗ್‌ಬಾಸ್’ ಕಾರ್ಯಕ್ರಮದ 12ನೇ ಆವೃತ್ತಿಯನ್ನು ನಟ ಕಿಚ್ಚ ಸುದೀಪ್ ಅವರೇ ನಡೆಸಿಕೊಡಲಿದ್ದಾರೆ.

ಕಳೆದ ಜನವರಿ 20ರಂದು ಎಕ್ಸ್‌ನಲ್ಲಿ ‘ಬಿಗ್‌ಬಾಸ್ 11ನೇ ಆವೃತ್ತಿಯೇ ನನ್ನ ಕೊನೆ ಆವೃತ್ತಿ’ ಎಂದು ಸುದೀಪ್ ಘೋಷಿಸಿದ್ದರು. ಬಿಗ್‌ಬಾಸ್ 12ನೇ ಆವೃತ್ತಿ ಯಾವಾಗ ಆರಂಭವಾಗಲಿದೆ ಎನ್ನುವುದನ್ನು ವಾಹಿನಿ ಇನ್ನಷ್ಟೇ ಘೋಷಿಸಬೇಕಿದೆ.

> ‘ಬಿಗ್‌ಬಾಸ್’ 12ರ ಜೊತೆಗೆ ನಾಲ್ಕು ಆವೃತ್ತಿಗಳಿಗೆ ಸುದೀಪ್ ಸಹಿ

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುದೀಪ್, ‘ನಾನು ಅಂದು ತಡರಾತ್ರಿ ಮೂರು ಗಂಟೆ ಸುಮಾರಿಗೆ ಟ್ವೀಟ್ ಮಾಡಿ ನನ್ನ ನಿರ್ಧಾರ ತಿಳಿಸಿದ್ದೆ. ಅಂದು ನಾನು ಕಾರ್ಯಕ್ರಮ ನಡೆಸಿಕೊಡಲು ಸಾಧ್ಯವಿಲ್ಲ ಎಂದು ಪ್ರಾಮಾಣಿಕವಾಗಿ ಹೇಳಿದ್ದೆ. ಇದೀಗ ಅಷ್ಟೇ ಪ್ರಾಮಾಣಿಕವಾಗಿ ಮರಳಿ ಬಂದಿದ್ದೇನೆ’ ಎಂದರು.

‘ಬಿಗ್‌ಬಾಸ್ ಅನ್ನು ಜನ ಐಪಿಎಲ್ ರೀತಿಯಲ್ಲಿ ನೋಡುತ್ತಾರೆ. ವೀಕ್ಷಕರು ಬಹಳ ಕುತೂಹಲದಿಂದ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಾರೆ. ಮನೆ ಒಳಗೆ ಕಳುಹಿಸುವ ಸ್ಪರ್ಧಿಗಳ ವಿಚಾರದಲ್ಲಿ ವಾಹಿನಿಗೆ ಸ್ಪಷ್ಟತೆ ಇದ್ದರೆ ನನಗೆ ಯಾವ ಸಮಸ್ಯೆಯೂ ಇಲ್ಲ. ನಾನು ಯಾವತ್ತೂ ಷರತ್ತುಗಳನ್ನು ಹಾಕಿಲ್ಲ. ಹೊಸ ಆವೃತ್ತಿಯನ್ನು ಇನ್ನಷ್ಟು ಉತ್ತಮಗೊಳಿಸಲು ಕೆಲವು ಸಲಹೆಗಳನ್ನು ನೀಡಿದ್ದೇನೆ. ನಮ್ಮ ಮೂಲ ಕನ್ನಡ. ಕನ್ನಡಕ್ಕೆ ಸ್ವಲ್ಪ ಪ್ರೀತಿ ತೋರಿಸಿ ಎಂದಿದ್ದೇನೆ. ವಾಹಿನಿಯಿಂದ ಕೊರತೆ ಬಂದಿಲ್ಲ, ಬರುವುದಿಲ್ಲ. ಆದರೆ ಮೇಲಿನಿಂದ ಆ ಪ್ರೀತಿ ಕಾಣಿಸುತ್ತಿರಲಿಲ್ಲ. ಕಾರ್ಯಕ್ರಮ ಎಂದರೆ ಕೇವಲ ಟಿವಿಆರ್ ಅಲ್ಲ. ನಮ್ಮ ಸ್ಪರ್ಧಿಗಳಿಗೆ ಒಳ್ಳೆಯ ಮನೆ ನೀಡಿ. ಆ ಮನೆ ಸುಂದರವಾಗಿರಬೇಕು. ನಾಲ್ಕು ಗೋಡೆಯಾಗಬಾರದು. ನನ್ನ ವೇದಿಕೆ ನನ್ನ ಗತ್ತು. ರೇಟಿಂಗ್ ಬರುತ್ತಿರುವುದು ನಮ್ಮ ಭಾಷೆ, ನಮ್ಮ ಜನರಿಂದ. ಇದು ಬಹಳ ಮುಖ್ಯ. ಇದಕ್ಕೆ ಪ್ರತಿಯೊಬ್ಬರೂ ಸ್ಪಂದಿಸಿದರು’ ಎಂದು ಸ್ಪಷ್ಟನೆ ನೀಡಿದರು ಸುದೀಪ್.

> ‘ಬಿಲ್ಲ ರಂಗ ಭಾಷಾ’ ಶೂಟಿಂಗ್ ನಡೆಯುತ್ತಿದೆ. ಇನ್ನೊಂದು ಸಿನಿಮಾ ಶೀಘ್ರದಲ್ಲೇ ಆರಂಭವಾಗಲಿದೆ
> –ಸುದೀಪ್, ನಟ

‘ಅಮ್ಮನನ್ನು ಕಳೆದುಕೊಂಡಿದ್ದೂ ನಾನು ಈ ಕಾರ್ಯಕ್ರಮ ನಡೆಸಿಕೊಡುವುದಿಲ್ಲ ಎನ್ನುವುದಕ್ಕೆ ಮತ್ತೊಂದು ಕಾರಣವಾಗಿತ್ತು. ವೇದಿಕೆ ಹತ್ತಿದಾಗ ಈ ವಿಷಯ ಕಾಡುತ್ತಿತ್ತು. ಅಮ್ಮನನ್ನು ಕಳೆದುಕೊಂಡ ಎರಡೇ ವಾರದಲ್ಲಿ ಮತ್ತೆ ವೇದಿಕೆ ಹತ್ತಿದ್ದೆ. ಇದು ಮಾನಸಿಕವಾಗಿ ತುಂಬಾ ಕಾಡುತ್ತಿತ್ತು. ಬಿಗ್‌ಬಾಸ್ ವಾರಾಂತ್ಯದ ಕಾರ್ಯಕ್ರಮದ ಬಗ್ಗೆ ಅಮ್ಮ ಬಹಳಷ್ಟು ಮಾತನಾಡುತ್ತಿದ್ದರು. ‘ಅಮ್ಮ ಪ್ರೀತಿಸುತ್ತಿದ್ದ ಕಾರ್ಯಕ್ರಮವಿದು, ಇದನ್ನು ನಡೆಸಿಕೊಡು’ ಎಂದು ಮನೆಯವರೂ ಹೇಳಿದರು’ ಎಂದು ಸುದೀಪ್ ಹೇಳಿದರು. ❖

‘ಜಸ್ಟ್ ಮ್ಯಾರೀಡ್’ನಲ್ಲಿ ಅಚ್ಯುತ್


ಅಚ್ಯುತ್ ಕುಮಾರ್

‘ಬಿಗ್‌ಬಾಸ್’ ಖ್ಯಾತಿಯ ನಟ ಶೈನ್ ಶೆಟ್ಟಿ ಹಾಗೂ ಅಂಕಿತಾ ಅಮರ್ ನಟಿಸಿರುವ ‘ಜಸ್ಟ್ ಮ್ಯಾರೀಡ್’ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಚಿತ್ರತಂಡ ಸಿನಿಮಾದೊಳಗಿರುವ ಪಾತ್ರಗಳ ಪರಿಚಯ ಆರಂಭಿಸಿದೆ.

ಚಿತ್ರದಲ್ಲಿ ‘ಕರುಣಾಕರ’ ಎಂಬ ಪಾತ್ರದಲ್ಲಿ ಅಚ್ಯುತ್ ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ‘ಒಮ್ಮೆ ಅಧಿಕಾರದ ಆಸೆಗೆ ಕಟ್ಟುಬಿದ್ದ ಮನುಷ್ಯ ತನ್ನ ಆಯುಷ್ಯ ಮುಗಿದರೂ ಅಧಿಕಾರದ ದಾಹವನ್ನು ಬಿಡಲಾರ’ ಎಂಬ ಅಡಿಬರಹವನ್ನು ಈ ಪಾತ್ರಕ್ಕೆ ನೀಡಲಾಗಿದೆ. ಈ ಮೂಲಕ ಮತ್ತೊಂದು ಭಿನ್ನ ಪಾತ್ರದ ಮೂಲಕ ಅಚ್ಯುತ್ ಅವರು ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ.

ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್ ಬಾಬಿ ಅವರು ನಿರ್ಮಿಸಿರುವ, ಸಿ.ಆರ್.ಬಾಬಿ ನಿರ್ದೇಶನದ ಈ ಚಿತ್ರವನ್ನು ಕೆ.ಆರ್.ಜಿ. ಸ್ಟುಡಿಯೊಸ್ ವಿತರಣೆ ಮಾಡುತ್ತಿದೆ. ❖

ಚಿಟಿಕೆ ಸುದ್ದಿ

ರಾಮ ಮಂದಿರಕ್ಕೆ ಟೈಟಾನಿಯಂ ಬಳಕೆ

ಅಯೋಧ್ಯೆಯ ರಾಮ ಮಂದಿರ

ಲಖನೌ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಮಮಂದಿರದ ಸದೃಢತೆ ಹೆಚ್ಚಿಸಲು ಟೈಟಾನಿಯಂ ಲೋಹವನ್ನು ಬಳಕೆ ಮಾಡಲಾಗುತ್ತಿದೆ. ಇದು ಅತ್ಯಂತ ಬಲಿಷ್ಠ, ಹಗುರ, ತುಕ್ಕು ಹಿಡಿಯದ ಲೋಹವಾಗಿದೆ.

ರಾಮಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರು, ‘ಜಗತ್ತಿನಲ್ಲಿಯೇ ಮೊದಲ ಬಾರಿಗೆ ದೇಗುಲ ನಿರ್ಮಾಣ ಕಾಮಗಾರಿಗೆ ಟೈಟಾನಿಯಂ ಲೋಹವನ್ನು ಬಳಕೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ದೇಗುಲದ 32 ಕಂಬಿಗಳನ್ನು (ಗ್ರಿಲ್) ಟೈಟಾನಿಯಂನಿಂದ ನಿರ್ಮಿಸಲಾಗಿದೆ. ಈ ಪೈಕಿ ಒಂದನ್ನು ಶನಿವಾರ ಪ್ರಾಯೋಗಿಕವಾಗಿ ಅಳವಡಿಸಲಾಗಿದೆ. ಈ ಕಂಬಿಗಳ ಅಳವಡಿಕೆ ಕಾರ್ಯವು ಆಗಸ್ಟ್ 15ಕ್ಕೆ ಪೂರ್ಣಗೊಳ್ಳಲಿದೆ ಎಂದರು.

ಈ ಲೋಹದ ಬಳಕೆಗೆ ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಒಪ್ಪಿಗೆ ನೀಡಿದೆ. ಟೈಟಾನಿಯಂ ಲೋಹವು ಸುಮಾರು ಒಂದು ಸಾವಿರ ವರ್ಷಗಳ ಕಾಲ ಬಾಳಿಕೆ ಬರುತ್ತದೆ ಎಂದು ಹೇಳಿದರು.

ಗುಜ್ಜರ್ ಬೇಡಿಕೆ ಪರಿಶೀಲನೆಗೆ ಸಮಿತಿ

ಜೈಪುರ (ಪಿಟಿಐ): ಗುಜ್ಜರ್ ಸೇರಿದಂತೆ ಅತ್ಯಂತ ಹಿಂದುಳಿದ ವರ್ಗಗಳ (ಎಂಬಿಸಿ) ಬೇಡಿಕೆಗಳ ಬಗ್ಗೆ ಪರಿಶೀಲಿಸಿ, ಪರಿಹಾರ ಕ್ರಮಗಳನ್ನು ಶಿಫಾರಸು ಮಾಡಲು ರಾಜಸ್ಥಾನ ಸರ್ಕಾರವು ಮೂವರು ಸದಸ್ಯರ ಸಂಪುಟ ಸಮಿತಿಯನ್ನು ರಚಿಸಿದೆ.

ರಾಜ್ಯದ ಕಾನೂನು ಸಚಿವ ಜೋಗರಾಮ್ ಪಟೇಲ್, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಅವಿನಾಶ್ ಗೆಹಲೋತ್, ಗೃಹ ಸಚಿವ ಜವಾಹರ್ ಸಿಂಗ್ ಬೆಧಾಮ್ ಅವರು ಸಮಿತಿ ಸದಸ್ಯರಾಗಿದ್ದಾರೆ.

ಜವಾಹರ್ ಸಿಂಗ್ ಅವರು ಗುಜ್ಜರ್ ಸಮುದಾಯಕ್ಕೆ ಸೇರಿದವರಾಗಿದ್ದು, ಇದಕ್ಕೂ ಮುನ್ನ ನಡೆದ ಚಳವಳಿಗಳಲ್ಲಿ ಭಾಗಿಯಾಗಿದ್ದರು.

ಹೆರಾಯಿನ್ ವಶ

ಚಂಡೀಗಡ (ಪಿಟಿಐ): ಅಂತರ ರಾಷ್ಟ್ರೀಯ ಮಾದಕವಸ್ತು ಕಳ್ಳಸಾಗಣೆ ಜಾಲವೊಂದನ್ನು ಭೇದಿಸಿರುವ ಬಿಎಸ್‌ಎಫ್ ಮತ್ತು ರಾಜಸ್ತಾನ ಪೊಲೀಸರು ಸೋಮವಾರ ಜಂಟಿ ಕಾರ್ಯಾಚರಣೆ ನಡೆಸಿ, ಬಾರ್ಮರ್ ಜಿಲ್ಲೆಯ ಅಂತರರಾಷ್ಟ್ರೀಯ ಗಡಿ ಸಮೀಪ 60 ಕೆ.ಜಿಯಷ್ಟು ಹೆರಾಯಿನ್ ವಶಕ್ಕೆ ಪಡೆದಿದ್ದಾರೆ.

‘ಅತ್ಯಾಚಾರ: ಪೂರ್ವಯೋಜಿತ ಕೃತ್ಯ’

ಹಲವರ ಮೇಲೆ ದೌರ್ಜನ್ಯ ಎಸಗಿದ್ದ ಆರೋಪಿಗಳು: ಪೊಲೀಸರ ಹೇಳಿಕೆ

ಕೋಲ್ಕತ್ತ (ಪಿಟಿಐ): ಇಲ್ಲಿನ ಕಾನೂನು ಕಾಲೇಜಿನ ವಿದ್ಯಾರ್ಥಿನಿಯ ಮೇಲೆ ನಡೆದಿದೆ ಎನ್ನಲಾದ ಸಾಮೂಹಿಕ ಅತ್ಯಾಚಾರ ಪ್ರಕರಣ ‘ಪೂರ್ವಯೋಜಿತ ಕೃತ್ಯ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ಹೇಳಿದ್ದಾರೆ.

ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ನಾಲ್ವರು ಆರೋಪಿಗಳಲ್ಲಿ ಮೂವರು, ಮೊದಲೇ ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ ಎಂದಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕಾಲೇಜಿನ ಭದ್ರತಾ ಸಿಬ್ಬಂದಿ ಸೇರಿ ನಾಲ್ವರನ್ನು ಬಂಧಿಸಲಾಗಿದೆ.

ಮೂವರು ಆರೋಪಿಗಳಾದ ಮನೋಜಿತ್ ಮಿಶ್ರಾ, ಪ್ರತಿಮ್ ಮುಖರ್ಜಿ ಮತ್ತು ಝೈದ್ ಅಹ್ಮದ್ ಈ ಹಿಂದೆ ಕೂಡಾ ಕಾಲೇಜು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವುದು ಒಂಬತ್ತು ಸದಸ್ಯರ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆ ವೇಳೆ ಬಯಲಾಗಿದೆ.

ಕಾಲೇಜು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುವ ದೃಶ್ಯವನ್ನು ಈ ಮೂವರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ರೆಕಾರ್ಡ್ ಮಾಡಿಟ್ಟುಕೊಂಡು ಸಂತ್ರಸ್ತೆಯರನ್ನು ಬ್ಲ್ಯಾಕ್‌ಮೇಲ್ ಮಾಡಲು ಬಳಸಿಕೊಳ್ಳುತ್ತಿದ್ದರು ಎಂದು ಅಧಿಕಾರಿ ಹೇಳಿದ್ದಾರೆ.

‘ಇಡೀ ಘಟನೆಯು ಪೂರ್ವಯೋಜಿತವಾಗಿತ್ತು. ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗಲು ಈ ಮೂವರು ಹಲವು ದಿನಗಳಿಂದ ಸಂಚು ರೂಪಿಸಿದ್ದರು. ಸಂತ್ರಸ್ತೆ ಕಾಲೇಜಿಗೆ ಪ್ರವೇಶ ಪಡೆದ ಮೊದಲ ದಿನದಿಂದಲೇ ಆರೋಪಿಗಳು ಆಕೆಯನ್ನು ಗುರಿಯಾಗಿಸಿರುವುದು ಗಮನಕ್ಕೆ ಬಂದಿದೆ’ ಎಂದಿದ್ದಾರೆ.

ಈ ಮೂವರೂ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ ಎನ್ನಲಾದ ವಿಡಿಯೊಗಳ ಪತ್ತೆಗೆ ಕೋಲ್ಕತ್ತ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ. ‘ಆರೋಪಿಗಳಾದ ಮುಖರ್ಜಿ ಮತ್ತು ಅಹ್ಮದ್‌ನ ನಿವಾಸಗಳಲ್ಲಿ ಭಾನುವಾರ ಶೋಧ ನಡೆಸಲಾಗಿದೆ. ಈಗಿನ ಘಟನೆಗೆ ಸಂಬಂಧಿಸಿದ ಮತ್ತು ಈ ಹಿಂದೆ ಮಾಡಿದ್ದಾರೆ ಎನ್ನಲಾದ ಕೃತ್ಯಗಳಿಗೆ ಸಂಬಂಧಿಸಿದ ವಿಡಿಯೊಗಳಿಗೆ ಹುಡುಕಾಟ ನಡೆಸುತ್ತಿದ್ದೇವೆ’ ಎಂದು ಅಧಿಕಾರಿ ತಿಳಿಸಿದರು.

ತರಗತಿ ರದ್ದು: ದಕ್ಷಿಣ ಕೋಲ್ಕತ್ತ ಕಾನೂನು ಕಾಲೇಜಿನ ಎಲ್ಲ ತರಗತಿಗಳನ್ನು ಅನಿರ್ದಿಷ್ಟಾವಧಿಯ ವರೆಗೆ ರದ್ದುಗೊಳಿಸಲು ನಿರ್ಧರಿಸಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಸೋಮವಾರ ಹೇಳಿದೆ.

ಅತ್ಯಾಚಾರ ಘಟನೆ ಖಂಡಿಸಿ ಕೋಲ್ಕತ್ತದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕಾನೂನು ಕಾಲೇಜು ವಿದ್ಯಾರ್ಥಿನಿಯರು ಪಾಲ್ಗೊಂಡರು —ಪಿಟಿಐ ಚಿತ್ರ

ಪಿಐಎಲ್ ಸಲ್ಲಿಸಲು ವಕೀಲರಿಗೆ ಅನುಮತಿ

ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಸಲ್ಲಿಸಲು ಕಲ್ಕತ್ತಾ ಹೈಕೋರ್ಟ್ ಮೂವರು ವಕೀಲರಿಗೆ ಸೋಮವಾರ ಅನುಮತಿ ನೀಡಿದೆ.

ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಬೇಕು ಮತ್ತು ಪಶ್ಚಿಮ ಬಂಗಾಳದಾದ್ಯಂತ ಕಾಲೇಜುಗಳಲ್ಲಿ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಕೀಲರು ಕೋರಿದ್ದಾರೆ. ಈ ಮೂವರಿಗೆ ಪ್ರತ್ಯೇಕ ಪಿಐಎಲ್ ಸಲ್ಲಿಸಲು ನ್ಯಾಯಮೂರ್ತಿ ಸೌಮೇನ್ ಸೇನ್ ನೇತೃತ್ವದ ವಿಭಾಗೀಯ ಪೀಠ ಅನುಮತಿ ನೀಡಿತು.

ಬಿಜೆಪಿ– ಎಡಪಕ್ಷಗಳ ಕಾರ್ಯಕರ್ತರ ಜಟಾಪಟಿ

ಬಿಜೆಪಿ ರಚಿಸಿರುವ ನಾಲ್ವರು ಸದಸ್ಯರ ‘ಸತ್ಯಶೋಧನಾ ತಂಡ’ ಸೋಮವಾರ ದಕ್ಷಿಣ ಕೋಲ್ಕತ್ತದಲ್ಲಿರುವ ಕಾನೂನು ಕಾಲೇಜಿಗೆ ಭೇಟಿ ನೀಡಿತು. ಈ ವೇಳೆ ಬಿಜೆಪಿಯ ಯುವ ಘಟಕ ಬಿಜೆವೈಎಂ ಮತ್ತು ಎಡಪಕ್ಷಗಳ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆಯಿತು. ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಕೇಂದ್ರದ ಮಾಜಿ ಸಚಿವರಾದ ಸತ್ಪಾಲ್ ಸಿಂಗ್, ಮೀನಾಕ್ಷಿ ಲೇಖಿ ಮತ್ತು ಸಂಸದರಾದ ವಿಪ್ಲವ್ ಕುಮಾರ್ ದೇವ್ ಹಾಗೂ ಮನನ್ ಕುಮಾರ್ ಮಿಶ್ರಾ ಅವರು ಸತ್ಯಶೋಧನಾ ತಂಡದಲ್ಲಿದ್ದಾರೆ.

ಕುಕಿ ಬಂಡಾಯ ನಾಯಕ ಸಾವು

ಮಣಿಪುರ: ದುಷ್ಕರ್ಮಿಗಳ ಗುಂಡಿನ ದಾಳಿಯಲ್ಲಿ 4 ಬಲಿ

ಪಿಟಿಐ/ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಚುರಾಚಾಂದಪುರ ಜಿಲ್ಲೆಯಲ್ಲಿ ಸೋಮವಾರ ಅಪರಿಚಿತ ಬಂದೂಕುಧಾರಿಗಳು ಗುಂಡು ಹಾರಿಸಿದ್ದರಿಂದ ಕುಕಿ ಬಂಡುಕೋರ ಸಂಘಟನೆ ನಾಯಕ ಸೇರಿದಂತೆ ನಾಲ್ವರು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಭದ್ರತಾ ಪಡೆಗಳ ಪ್ರಕಾರ, ಕುಕಿ ನ್ಯಾಷನಲ್ ಆರ್ಮಿಯ (ಕೆಎನ್‌ಎ) ಉಪ ಮುಖ್ಯಸ್ಥ ಟಿ.ಹೋಕಿಪ್, ಅವರ ಇಬ್ಬರು ಸಹಚರರು ಮತ್ತು ರಸ್ತೆಯಲ್ಲಿ ನಿಂತಿದ್ದ 60 ವರ್ಷದ ಮಹಿಳೆಯೊಬ್ಬರು ಗುಂಡು ತಗುಲಿ ಮೃತಪಟ್ಟಿದ್ದಾರೆ. ಕುಕಿ ಪ್ರಾಬಲ್ಯ ಇರುವ ಚುರಾಚಾಂದಪುರ ಜಿಲ್ಲೆಯ ಮಾಂಗ್‌ಜಾಂಗ್ ಗ್ರಾಮದಲ್ಲಿ ಕಾರಿನಲ್ಲಿ ಮೂವರು ತೆರಳುತ್ತಿದ್ದಾಗ ದಾಳಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

17 ಕುಕಿ ಬಂಡುಕೋರ ಸಂಘಟನೆಗಳಲ್ಲಿ ಕೆಎನ್‌ಎ ಕೂಡಾ ಒಂದು. ತನ್ನ ಕಾರ್ಯಾಚರಣೆ ಕೈಬಿಡುವುದಾಗಿ ಸರ್ಕಾರದ ಜತೆ ಈ ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ. ಈವರೆಗೆ ದಾಳಿಯ ಹೊಣೆಯನ್ನು ಯಾರೂ ಹೊತ್ತುಕೊಂಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಯುನೈಟೆಡ್ ಕುಕಿ ನ್ಯಾಷನಲ್ ಆರ್ಮಿ ಹೊಣೆ ಹೊತ್ತುಕೊಂಡಿದೆ ಎಂದು ಮೂಲಗಳು ಹೇಳಿವೆ.

ಕುಕಿ ಬಂಡಾಯ ಗುಂಪು ಇತ್ತೀಚೆಗೆ ದೆಹಲಿಯಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳಲು ಕೇಂದ್ರ ಗೃಹ ಇಲಾಖೆ ಅಧಿಕಾರಿಗಳ ಜತೆ ನಡೆದಿದ್ದ ಮಾತುಕತೆಯಲ್ಲಿ ಭಾಗಿಯಾಗಿತ್ತು. ಇದು ಕುಕಿ ಸಂಘಟನೆಗಳ ಒಳಗಿನ ಆಂತರಿಕ ಸಂಘರ್ಷ. ಕೆಎನ್‌ಒ ಮತ್ತು ಯುಪಿಎಫ್ ಸಂಘಟನೆಗಳ ನಿರ್ಧಾರದ ಬಗ್ಗೆ ಯುಕೆಎನ್‌ಎ ಅತೃಪ್ತಿ ವ್ಯಕ್ತಪಡಿಸಿತ್ತು ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ಮೈತೇಯಿ ಸಭೆ: ಈ ಮಧ್ಯೆ ಮೈತೇಯಿ ಸಮುದಾಯದ ಮೂರು ಪ್ರಭಾವಿ ಸಂಘಟನೆಗಳು ಸೋಮವಾರ ಕೇಂದ್ರ ಗೃಹ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿವೆ. ರಾಜ್ಯದಲ್ಲಿ ಉಂಟಾಗಿರುವ ಸಂಘರ್ಷ ಶಮನ ಪರಿಹಾರಗಳ ಕುರಿತು ಇಲ್ಲಿ ಚರ್ಚೆ ನಡೆದಿದೆ.

ಸಂಕ್ಷಿಪ್ತ ಸುದ್ದಿ

ಪ್ರಾಣಿಗಳೇ ಸಂಪತ್ತು; ‘ಪಶು’ ಪದ ತಕ್ಕುದಲ್ಲ: ಮುರ್ಮು

ಬರೇಲಿ (ಪಿಟಿಐ): ‘ಪ್ರಾಣಿಗಳು ಜೀವನದ ಸಂಪತ್ತು. ಅವುಗಳನ್ನು ‘ಪಶು’ ಎಂದು ಕರೆಯುವುದು ಸೂಕ್ತ ಅಲ್ಲ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದರು.

ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ (ಐವಿಆರ್‌ಐ) 11ನೇ ಘಟಿಕೋತ್ಸವ ಸಮಾರಂಭದಲ್ಲಿ ಸೋಮವಾರ ಮಾತನಾಡಿದ ಅವರು, ‘ಜೀವನವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ’ ಎಂದರು. ಪ್ರಾಣಿಗಳು ಮತ್ತು ಮಾನವ ಪರಸ್ಪರ ಸಂಬಂಧ ಹೊಂದಿವೆ. ಇಂದು ತಂತ್ರಜ್ಞಾನ ಅಭಿವೃದ್ಧಿ ಆಗಿದೆ. ಆದರೆ ಅದಕ್ಕೂ ಮೊದಲು ನಮ್ಮ ಸಾರಿಗೆಗೆ ಪ್ರಾಣಿಗಳೇ ‘ಸಾಧನ’ವಾಗಿದ್ದವು ಮತ್ತು ಅವೇ ರೈತರ ‘ಬಲ’ವಾಗಿದ್ದವು ಎಂದು ಅಭಿಪ್ರಾಯಪಟ್ಟರು.

ಪಾಕ್ ಪ್ರಜೆ ಉಗ್ರರ ಮಾರ್ಗದರ್ಶಿ

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ತಾರ್ಕುಂಡಿ ವಲಯದ ಗಡಿ ನಿಯಂತ್ರಣ ರೇಖೆಯನ್ನು (ಎಲ್‌ಒಸಿ) ದಾಟಲು ಪ್ರಯತ್ನಿಸುತ್ತಿದ್ದಾಗ ಬಂಧಿಸಲಾದ ಪಾಕಿಸ್ತಾನದ ಪ್ರಜೆಯು ಭಯೋತ್ಪಾದಕರ ಮಾರ್ಗದರ್ಶಿ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಪಾಕ್ ಆಕ್ರಮಿತ ಕಾಶ್ಮೀರದ ಕೊಟ್ಲಿ ಜಿಲ್ಲೆಯ ನಿಕಿಯಾಲ್ ತೆಹ್ಸಿಲ್‌ನ ಡೆಟೋಟ್ ನಿವಾಸಿ ಮೊಹಮ್ಮದ್ ಆರಿಫ್ ಜೈಷ್-ಎ-ಮೊಹಮ್ಮದ್ (ಜೆಇಎಂ) ಭಯೋತ್ಪಾದಕ ಸಂಘಟನೆಯ ನಾಲ್ವರ ಗುಂಪನ್ನು ಮುನ್ನಡೆಸುತ್ತಿದ್ದ. ಜಮ್ಮು ಮತ್ತು ಕಾಶ್ಮೀರದ ಗಡಿ ಜಿಲ್ಲೆಗಳಾದ ಪೂಂಛ್ ಹಾಗೂ ರಜೌರಿ ಬಳಿ ಭಾನುವಾರ ಮಧ್ಯಾಹ್ನ ಭಾರತದೊಳಗೆ ನುಸುಳಲು ಪ್ರಯತ್ನಿಸುತ್ತಿದ್ದಾಗ ಆರಿಫ್‌ನನ್ನು ಭಾರತೀಯ ಸೇನೆ ಬಂಧಿಸಿತ್ತು. ಆತನೊಂದಿಗಿದ್ದ ಭಯೋತ್ಪಾದಕರು ಕಡಿದಾದ ಬಂಡೆಗಳನ್ನು ಜಿಗಿದು ಗಾಯಗಳೊಂದಿಗೆ ಪಾಕಿಸ್ತಾನದ ಕಡೆ ಓಡಿಹೋಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಖಾನೆಯಲ್ಲಿ ಸ್ಫೋಟ: 15 ಸಾವು

ಒಂದನೇ ಪುಟದಿಂದ...

ಪಾಶಮೈಲಾರಂ ಕೈಗಾರಿಕಾ ಪ್ರದೇಶದಲ್ಲಿರುವ ಸಿಗಾಚಿ ಫಾರ್ಮಾ ಕಂಪನಿಯ ರಿಯಾಕ್ಟರ್‌ನಲ್ಲಿ ರಾಸಾಯನಿಕ ವಸ್ತುವಿಗೆ ಬೆಂಕಿ ಹೊತ್ತಿಕೊಂಡು ಸ್ಫೋಟ ಸಂಭವಿಸಿದೆ ಎಂದು ಮೂಲಗಳು ಹೇಳಿವೆ. ಆದರೆ ಸ್ಫೋಟಕ್ಕೆ ನಿಖರ ಕಾರಣ ಸಮಗ್ರ ಪರಿಶೀಲನೆಯ ಬಳಿಕವೇ ತಿಳಿಯಲಿದೆ ಎಂದು ತಾಂತ್ರಿಕ ತಜ್ಞರು ತಿಳಿಸಿದ್ದಾರೆ.

‘ಸೋಮವಾರ ಬೆಳಿಗ್ಗೆ 9.28ರಿಂದ 9.35ರ ನಡುವೆ ಸ್ಫೋಟ ಸಂಭವಿಸಿದೆ. ಈ ವೇಳೆ ಕಾರ್ಖಾನೆಯಲ್ಲಿ 150 ಮಂದಿ ಕೆಲಸ ಮಾಡುತ್ತಿದ್ದರು. ಅದರಲ್ಲಿ ಸುಮಾರು 90 ಮಂದಿ ಸ್ಫೋಟ ನಡೆದ ಸ್ಥಳದ ಸಮೀಪದಲ್ಲೇ ಇದ್ದರು’ ಎಂದು ಕಾರ್ಖಾನೆಯ ಮೂಲಗಳನ್ನು ಉಲ್ಲೇಖಿಸಿ ಐಜಿಪಿ ವಿ.ಸತ್ಯನಾರಾಯಣ ಹೇಳಿದ್ದಾರೆ.

ಸತ್ತವರಲ್ಲಿ ಕೆಲವರ ಮೃತದೇಹ ಸಂಪೂರ್ಣ ಸುಟ್ಟುಹೋಗಿದ್ದು, ಗುರುತು ಪತ್ತೆಹಚ್ಚಲು ಡಿಎನ್‌ಎ ಪರೀಕ್ಷೆ ನಡೆಸಲಾಗುವುದು ಎಂದಿದ್ದಾರೆ.

ಸ್ಫೋಟದಿಂದ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿದೆ. ಅಗ್ನಿಶಾಮಕ ದಳದ 10 ವಾಹನಗಳನ್ನು ಬಳಸಿ ಬೆಂಕಿಯನ್ನು ಹತೋಟಿಗೆ ತರಲಾಯಿತು. ಸ್ಫೋಟದ ಸದ್ದು 5 ಕಿ.ಮೀ. ದೂರದವರೆಗೂ ಕೇಳಿಸಿದ್ದು, ಕಟ್ಟಡದ ಒಂದು ಭಾಗ ಕುಸಿದುಬಿದ್ದಿದೆ. ಸ್ಥಳೀಯ ಪೊಲೀಸರು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು.

‘ಕಾರ್ಖಾನೆಯ ಡ್ರೈಯಿಂಗ್ ಘಟಕದಲ್ಲಿ ಒತ್ತಡ ಹೆಚ್ಚಾಗಿ ಸ್ಫೋಟ ಸಂಭವಿಸಿರುವ ಸಾಧ್ಯತೆಯಿದೆ ಇದೆ’ ಎಂದು ತೆಲಂಗಾಣ ರಾಜ್ಯ ವಿಕೋಪ ನಿರ್ವಹಣೆ ಮತ್ತು ಅಗ್ನಿಶಾಮಕ ಸೇವೆಗಳ ನಿರ್ದೇಶಕ ವೈ.ನಾಗಿ ರೆಡ್ಡಿ ತಿಳಿಸಿದ್ದಾರೆ.

₹2 ಲಕ್ಷ ಪರಿಹಾರ: ಪ್ರಧಾನಿ ನರೇಂದ್ರ ಮೋದಿ ಅವರು ದುರಂತಕ್ಕೆ ಶೋಕ ವ್ಯಕ್ತಪಡಿಸಿದ್ದು, ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ₹ 50 ಸಾವಿರ ನಗದು ಪರಿಹಾರ ಘೋಷಿಸಿದ್ದಾರೆ.

ಮುಖ್ಯಾಂಶಗಳು
- ಘಟನೆಯಲ್ಲಿ 34 ಕಾರ್ಮಿಕರಿಗೆ ಗಾಯ
- 12 ಮಂದಿಯ ಸ್ಥಿತಿ ಗಂಭೀರ
- 5 ಕಿ.ಮೀ ದೂರದವರೆಗೂ ಕೇಳಿಸಿದ ಸ್ಫೋಟದ ಸದ್ದು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಶೀಘ್ರ

ನವದೆಹಲಿ (ಪಿಟಿಐ): ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಸಜ್ಜಾಗಿರುವ ಬಿಜೆಪಿಯು ಅದರ ಭಾಗವಾಗಿ ಸೋಮವಾರ ಕೆಲವು ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ನೇಮಿಸಿದೆ. ಮಂಗಳವಾರ ಇನ್ನೂ ಕೆಲವು ರಾಜ್ಯ ಘಟಕಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲಿದೆ.

ಬಿಜೆಪಿಯ ಸಂವಿಧಾನದಂತೆ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ 37 ಸಂಘಟನಾ ರಾಜ್ಯ ಘಟಕಗಳ ಪೈಕಿ ಕನಿಷ್ಠ 19 ಘಟಕಗಳಿಗೆ ಅಧ್ಯಕ್ಷರು ನೇಮಕ ಆಗಿರಬೇಕು. ಆ ಬಳಿಕವೇ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದೆ. ವಿ.ಪಿ ರಾಮಲಿಂಗಂ ಮತ್ತು ಕೆ. ಬೈಚುವಾ ಅವರು ಕ್ರಮವಾಗಿ ಪುದುಚೇರಿ ಹಾಗೂ ಮಿಜೋರಾಂನ ಅಧ್ಯಕ್ಷರಾಗಿ ಸೋಮವಾರ ಆಯ್ಕೆಯಾದರು. ಇದರೊಂದಿಗೆ ಒಟ್ಟು 16 ರಾಜ್ಯ ಘಟಕಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿದಂತಾಗಿದೆ. ಮಹಾರಾಷ್ಟ್ರ, ಉತ್ತರಾಖಂಡ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯ ಘಟಕಗಳಿಗೆ ಅಧ್ಯಕ್ಷರ ನೇಮಕ ಮಂಗಳವಾರ ನಡೆಯಲಿದೆ.

ಅಡುಗೆ ಇಂಧನ ಮಾಲಿನ್ಯ ಕಾರಣ: ಐಐಎಸ್‌ಸಿ ಬೆಂಗಳೂರು ಅಧ್ಯಯನ ವರದಿ

ಮಹಿಳೆಯರ ಮಿದುಳಿನ ಸಾಮರ್ಥ್ಯ ಕ್ಷೀಣ

ನವದೆಹಲಿ (ಪಿಟಿಐ): ಅಡುಗೆ ಇಂಧನ ಬಳಕೆಯಿಂದ ಉಂಟಾಗುವ ಮಾಲಿನ್ಯದಿಂದಾಗಿ ಮಹಿಳೆಯರು ಮಿದುಳಿನ ಸಾಮರ್ಥ್ಯ ದುರ್ಬಲಗೊಳ್ಳುವ ತೊಂದರೆಗೆ ಒಳಗಾಗುತ್ತಾರೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಅಧ್ಯಯನ ವರದಿ ತಿಳಿಸಿದೆ.

ರೀಜನಲ್ ಹೆಲ್ತ್ ಸೌತ್‌ಈಸ್ಟ್ ಏಷಿಯಾ ಜರ್ನಲ್ ‘ಲ್ಯಾಂಕೆಟ್’ನಲ್ಲಿ ಐಐಎಸ್‌ಸಿ ವರದಿ ಪ್ರಕಟಿಸಿದೆ. ಮನೆಯ ಮಾಲಿನ್ಯವು ಮಿದುಳಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಪರೀಕ್ಷಿಸಲು ಕೈಗೊಂಡ ಏಕೈಕ ಅಧ್ಯಯನ ಇದಾಗಿದೆ ಎಂದು ಹೇಳಿದೆ. ಷಿಕಾಗೊ ವಿಶ್ವವಿದ್ಯಾಲಯದ ಸಂಶೋಧಕರು ಈ ಅಧ್ಯಯನ ತಂಡದಲ್ಲಿದ್ದಾರೆ.

ಕರ್ನಾಟಕದ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಪಟ್ಟಣದ ವಯಸ್ಕರ ಮಿದುಳಿನ ಎಮ್‌ಆರ್‌ಐ ಸ್ಕ್ಯಾನ್ ವರದಿಯಲ್ಲಿ, ಮಿದುಳಿನ ಕಾರ್ಯ ಚಟುವಟಿಕೆಯ ಸಾಮರ್ಥ್ಯ ದುರ್ಬಲಗೊಳ್ಳುವ ಅಪಾಯವು ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚು ಕಂಡುಬಂದಿದೆ ಎಂದು ಐಐಎಸ್‌ಸಿ ತನ್ನ ವಿಶ್ಲೇಷಣೆಯಲ್ಲಿ ತಿಳಿಸಿದೆ.

45 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನ 4,100 ಜನರು ಸಂಶೋಧನೆಯ ಭಾಗವಾಗಿದ್ದರು. ಈ ಪೈಕಿ 1,000 ಜನರ ಮಿದುಳಿನ ಎಮ್‌ಆರ್‌ಐ ಸ್ಕ್ಯಾನ್ ಮಾಡಲಾಗಿದೆ.

ಮಹಿಳೆಯರ ಎಮ್‌ಆರ್‌ಐ ಸ್ಕ್ಯಾನಿಂಗ್‌ನಲ್ಲಿ ಮಿದುಳಿನಲ್ಲಿರುವ ನೆನಪಿಗೆ ಸಂಬಂಧಿಸಿದ ಭಾಗ (ಹಿಪ್ಪೊಕ್ಯಾಂಪಸ್) ಹಾನಿಗೊಳಗಾಗಿರುವುದು ಕಂಡುಬಂದಿದೆ. ಇದು ಮರೆಗುಳಿತನ ಮತ್ತು ಅಲ್ಜೀಮರ್ಸ್ ಕಾಯಿಲೆಗೆ ಪ್ರಮುಖ ಕಾರಣವಾಗಿದೆ.

ಮಿದುಳಿನ ಸಾಮರ್ಥ್ಯ ಕ್ಷೀಣಿಸುವುದು ಹೇಗೆ?

ಅಡುಗೆಗಾಗಿ ಘನ ಇಂಧನವನ್ನು ಸುಡುವುದರಿಂದ ಇಂಗಾಲ, ಸಾರಜನಕ, ಸಲ್ಫರ್ ಹಾಗೂ ಭಾರ ಲೋಹಗಳ ಆಕ್ಸೈಡ್‌ಗಳಂತಹ ಮಾಲಿನ್ಯಕಾರಕಗಳು ಪರಿಸರಕ್ಕೆ ಬಿಡುಗಡೆಯಾಗುತ್ತವೆ.

ಇವು ಮಿದುಳಿನ ಕಾರ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ.



ಪ್ರಾಥಮಿಕವಾಗಿ ಉರಿಯೂತ ಹಾಗೂ ಮಿದುಳಿನ ಜೀವಕೋಶಗಳಿಗೆ ಹಾನಿಯಾಗುತ್ತದೆ ಎಂಬುದು ಅಧ್ಯಯನದಲ್ಲಿ ಕಂಡುಬಂದಿದೆ.

ಮನುಷ್ಯನ ನೆನಪಿನ ಶಕ್ತಿ, ತಾರ್ಕಿಕ ಚಿಂತನೆ ಹಾಗೂ ಮಾತಿನ ಸಾಮರ್ಥ್ಯದ ಮೇಲೆ ಪರಿಣಾಮ ಉಂಟಾಗುತ್ತದೆ. ಇದು ಬುದ್ಧಿಮಾಂದ್ಯತೆ ಹಾಗೂ ಅಲ್ಜೀಮರ್ಸ್ ಕಾಯಿಲೆಗೆ ಕಾರಣವಾಗಬಹುದು. ಇದರಿಂದ ತನ್ನ ದೈನಂದಿನ ಚಟುವಟಿಕೆಗಳ ನಿರ್ವಹಣೆಗೆ ತೊಂದರೆ ಉಂಟಾಗುತ್ತದೆ. ಗ್ರಾಮೀಣ ಮಹಿಳೆಯರು ಹೆಚ್ಚಾಗಿ ಈ ಸಮಸ್ಯೆಗೆ ಒಳಗಾಗುತ್ತಾರೆ ಎಂದು ವರದಿ ಹೇಳಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು. ಅಡುಗೆಗೆ ಶುದ್ಧ ಅಥವಾ ಹಾನಿಕಾರಕವಲ್ಲದ ಇಂಧನವನ್ನು ಬಳಸಲು ಉತ್ತೇಜಿಸುವುದರಿಂದ ಗಂಭೀರ ಅಪಾಯಗಳನ್ನು ತಡೆಗಟ್ಟಬಹುದು ಎಂದು ಅಧ್ಯಯನ ವರದಿ ಹೇಳಿದೆ.

ಆಯುಷ್ ಶೆಟ್ಟಿ ಚಾಂಪಿಯನ್

ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್: ತನ್ವಿ ಶರ್ಮಾ ರನ್ನರ್ ಅಪ್

ಅಯೋವಾ (ಅಮೆರಿಕ) (ಪಿಟಿಐ): ಭಾರತದ ಭರವಸೆಯ ಬ್ಯಾಡ್ಮಿಂಟನ್ ಆಟಗಾರ ಆಯುಷ್ ಶೆಟ್ಟಿ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು. ಮಹಿಳೆಯರ ಸಿಂಗಲ್ಸ್‌ನಲ್ಲಿ ತನ್ವಿ ಶರ್ಮಾ ರನ್ನರ್ಸ್-ಅಪ್ ಆದರು.

ನಾಲ್ಕನೇ ಶ್ರೇಯಾಂಕದ, ಕನ್ನಡಿಗ ಆಯುಷ್ ಅವರು ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ 21-18, 21-13ರ ನೇರ ಗೇಮ್‌ಗಳಿಂದ ಮೂರನೇ ಶ್ರೇಯಾಂಕದ ಬ್ರಯನ್ ಯಂಗ್ ಅವರನ್ನು ಮಣಿಸಿದರು. ಈ ಮೂಲಕ, ತಮ್ಮ ಚೊಚ್ಚಲ ಬಿಡಬ್ಲ್ಯುಎಫ್ ವಿಶ್ವ ಟೂರ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ರೋಚಕವಾಗಿ ಸಾಗಿದ ಮೊದಲ ಗೇಮ್‌ನಲ್ಲಿ ಒಂದು ಹಂತದಲ್ಲಿ 16-16ರಿಂದ ಉಭಯ ಆಟಗಾರರು ಸಮಬಲದ ಹೋರಾಟ ಸಾಧಿಸಿದ್ದರು. ಕೊನೆಯಲ್ಲಿ ಹಿಡಿತ ಸಾಧಿಸಿದ ಭಾರತದ ಆಟಗಾರ, ಮೇಲುಗೈ ಸಾಧಿಸಿದರು. ಎರಡನೇ ಗೇಮ್‌ನಲ್ಲಿಯೂ ಎದುರಾಳಿಯ ಸವಾಲನ್ನು ಸಮರ್ಥವಾಗಿ ಎದುರಿಸಿದ ಆಯುಷ್, ತಮ್ಮ ಕ್ರಾಸ್-ಕೋರ್ಟ್ ಪಂಚ್‌ಗಳೊಂದಿಗೆ ಗೆಲುವು ಸಾಧಿಸಿದರು. ಪಂದ್ಯವು 47 ನಿಮಿಷಗಳಲ್ಲಿಯೇ ಮುಕ್ತಾಯಗೊಂಡಿತು.

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಕಂಚು ವಿಜೇತ, ಉಡುಪಿಯ ಆಯುಷ್ ಅವರಿಗೆ ಕೆನಡಾದ ಯಂಗ್ ವಿರುದ್ಧ ಮೂರನೇ ಗೆಲುವು ಇದಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದ ಆಯುಷ್ ಶೆಟ್ಟಿ ಸಂಭ್ರಮ

ಮುಖ್ಯಾಂಶಗಳು

- ಆಯುಷ್‌ಗೆ ₹15.5 ಲಕ್ಷ, ತನ್ವಿಗೆ ₹7.8 ಲಕ್ಷ ನಗದು ಬಹುಮಾನ
- ಪ್ರಕಾಶ್ ಪಡುಕೋಣೆ ಅಕಾಡೆಮಿಯಲ್ಲಿ ಆಯುಷ್ ತರಬೇತಿ
- ಚೊಚ್ಚಲ ಬಿಡಬ್ಲ್ಯುಎಫ್ ವಿಶ್ವ ಟೂರ್ ಪ್ರಶಸ್ತಿ ಗೆದ್ದ ಉಡುಪಿಯ ಆಟಗಾರ

ಇದಕ್ಕೂ ಮುನ್ನ ಮಲೇಷ್ಯಾ ಓಪನ್ ಹಾಗೂ ತೈಪೆ ಓಪನ್ ಟೂರ್ನಿಯಲ್ಲಿಯೂ ಯಂಗ್ ವಿರುದ್ಧ ಗೆಲುವು ಸಾಧಿಸಿದ್ದರು.

'ಸೀನಿಯರ್ ವಿಭಾಗದಲ್ಲಿ ಇದು ನನ್ನ ಮೊದಲ ಪ್ರಶಸ್ತಿ. ಟೂರ್ನಿಯಲ್ಲಿ ನಾನು ಉತ್ತಮ ಪ್ರದರ್ಶನ ನೀಡಿದ್ದೇನೆ. ಮುಂದಿನ ವಾರ ಆರಂಭಗೊಳ್ಳಲಿರುವ ಕೆನಡಾ ಓಪನ್ ಟೂರ್ನಿಯನ್ನು ಎದುರು ನೋಡುತ್ತಿದ್ದೇನೆ' ಎಂದು 20 ವರ್ಷ ವಯಸ್ಸಿನ ಆಯುಷ್ ಪ್ರತಿಕ್ರಿಯಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 34ನೇ ಸ್ಥಾನದಲ್ಲಿರುವ ಆಯುಷ್ ಸೆಮಿಫೈನಲ್‌ನಲ್ಲಿ ವಿಶ್ವದ ಆರನೇ ಕ್ರಮಾಂಕದ ಚೌ ಟಿಯೆನ್ ಚೆನ್ (ಚೀನಾ ತೈಪೆ) ಅವರಿಗೆ ಆಘಾತ ನೀಡಿದ್ದರು.

ತನ್ವಿ ರನ್ನರ್ ಅಪ್: 16 ವರ್ಷ ವಯಸ್ಸಿನ ಶ್ರೇಯಾಂಕರಹಿತ ಆಟಗಾರ್ತಿ ತನ್ವಿ 11-21, 21-16, 10-21ರಿಂದ ಆತಿಥೇಯ ರಾಷ್ಟ್ರದ ಬೀವೆನ್ ಜಾಂಗ್ ಎದುರು ಪರಾಭವಗೊಂಡರು.



ತನ್ವಿ ಶರ್ಮಾ 'ಎಕ್ಸ್' ಚಿತ್ರಗಳು

'ಟೂರ್ನಿಯಲ್ಲಿನ ನನ್ನ ಪ್ರದರ್ಶನದ ಬಗ್ಗೆ ಹೆಮ್ಮೆ ಇದೆ. ಇದು ನನ್ನ ಮೊದಲ ಸೂಪರ್ 300 ಫೈನಲ್ ಆಗಿದ್ದು, ಸಂತೋಷವಾಗಿದೆ' ಎಂದು ತನ್ವಿ ಪ್ರತಿಕ್ರಿಯಿಸಿದರು.

ತನ್ವಿ ಅವರು, ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ ತಲುಪಿದ ಭಾರತದ ಕಿರಿಯ ವಯಸ್ಸಿನ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರು.

ವಿಶ್ವದ 66ನೇ ರ‍್ಯಾಂಕ್‌ನ ಆಟಗಾರ್ತಿಯಾಗಿರುವ ತನ್ವಿ, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತ ತಂಡದಲ್ಲಿದ್ದರು.

ಮೆಡ್ವೆಡೇವ್, ರೂನ್‌ಗೆ ಆಘಾತ

ಲಂಡನ್ (ಎಎಫ್‌ಪಿ): ಅಮೆರಿಕ ಓಪನ್ ಮಾಜಿ ಚಾಂಪಿಯನ್ ಡೇನಿಯಲ್ ಮೆಡ್ವೆಡೇವ್ ಅವರು ಸೋಮವಾರ ಆರಂಭಗೊಂಡ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಶುಭಾರಂಭ ಮಾಡಿದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಹಿಂದಿನ ಎರಡೂ ಆವೃತ್ತಿಗಳಲ್ಲಿ ಸೆಮಿಫೈನಲ್ ತಲುಪಿದ್ದ ರಷ್ಯಾದ ಮೆಡ್ವೆಡೇವ್ ಅವರಿಗೆ ಫ್ರಾನ್ಸ್‌ನ ಬೆಂಜಮಿನ್ ಬೊಂಜಿ ಆಘಾತ ನೀಡಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 64ನೇ ಸ್ಥಾನದಲ್ಲಿರುವ ಬೊಂಜಿ 7-6 (7/2), 3-6, 7-6 (7/3), 6-2ರಿಂದ ಒಂಬತ್ತನೇ ಶ್ರೇಯಾಂಕದ ಮೆಡ್ವೆಡೇವ್ ವಿರುದ್ಧ ಜಯಗಳಿಸಿದರು.

ವಿಂಬಲ್ಡನ್‌ನಲ್ಲಿ ಏಳನೇ ಬಾರಿ ಕಣಕ್ಕೆ ಇಳಿದ ರಷ್ಯಾದ ಆಟಗಾರ, ಆರಂಭಿಕ ಸುತ್ತನ್ನು ದಾಟಲು ವಿಫಲವಾದದ್ದು ಇದೇ ಮೊದಲು. 2021ರಲ್ಲಿ ಅಮೆರಿಕ ಓಪನ್ ಪ್ರಶಸ್ತಿ ಮತ್ತು ಆರು ಗ್ರ್ಯಾನ್‌ಸ್ಲ್ಯಾಮ್ ಟೂರ್ನಿಗಳಲ್ಲಿ ಫೈನಲ್ ತಲುಪಿರುವ 29 ವರ್ಷ ವಯಸ್ಸಿನ ಮೆಡ್ವೆಡೇವ್, ಹಾಲಿ ಋತುವಿನ ಪ್ರಮುಖ ಟೂರ್ನಿಗಳಲ್ಲಿ ಪದೇ ಪದೇ ಮುಗ್ಗರಿಸಿದ್ದಾರೆ. ಇದಕ್ಕೂ ಮುನ್ನ ಆಸ್ಟ್ರೇಲಿಯಾ ಓಪನ್‌ನಲ್ಲಿ ಎರಡನೇ ಸುತ್ತಿನಲ್ಲಿ ಮತ್ತು ಫ್ರೆಂಚ್ ಓಪನ್‌ನಲ್ಲಿ ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದ್ದರು.

ರೂನ್‌ಗೆ ನಿರಾಸೆ: ಎಂಟನೇ ಶ್ರೇಯಾಂಕದ ಹೋಲ್ಗರ್ ರೂನ್ ಆರಂಭಿಕ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡ ನಿಕೋಲಸ್ ಜಾರ‍್ರಿ 4-6, 4-6, 7-5, 6-3, 6-4ರಿಂದ ಡೆನ್ಮಾರ್ಕ್‌ನ ರೂನ್ ಅವರಿಗೆ ಆಘಾತ ನೀಡಿದರು.

ಮೂರು ಗಂಟೆ 34 ನಿಮಿಷ ನಡೆದ ರೋಚಕ ಹಣಾಹಣಿಯಲ್ಲಿ 143ನೇ ಕ್ರಮಾಂಕದ ನಿಕೋಲಸ್ (ಚಿಲಿ) ಮೇಲುಗೈ ಸಾಧಿಸಿದರು. 22 ವರ್ಷ ವಯಸ್ಸಿನ ರೂನ್ ಅವರಿಗೆ ನಾಲ್ಕು ಗ್ರ್ಯಾನ್‌ಸ್ಲಾಮ್‌ಗಳ ಪೈಕಿ ಯಾವುದರಲ್ಲೂ ಕ್ವಾರ್ಟರ್ ಫೈನಲ್ ದಾಟಲು ಸಾಧ್ಯವಾಗಿಲ್ಲ. 2023ರಲ್ಲಿ ವಿಂಬಲ್ಡನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು.

ಸಬಲೆಂಕಾ ಶುಭಾರಂಭ: ಅಗ್ರ ಶ್ರೇಯಾಂಕದ ಸಬಲೆಂಕಾ 6-1, 7-5ರಿಂದ ಕೆನಡಾದ ಕ್ವಾಲಿಫೈಯರ್ ಆಟಗಾರ್ತಿ ಕಾರ್ಸನ್ ಬ್ರಾನ್‌ಸ್ಟೈನ್ ಅವರನ್ನು ಮಣಿಸಿದರು.

ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರಿಗೆ ಆಘಾತ ನೀಡಿದ ಫ್ರಾನ್ಸ್‌ನ ಬೆಂಜಮಿನ್ ಬೊಂಜಿ ಎಎಫ್‌ಪಿ ಚಿತ್ರ

ಮೂರು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡತಿಯಾಗಿರುವ ಬೆಲರೂಸ್‌ನ 27 ವರ್ಷ ವಯಸ್ಸಿನ ಸಬಲೆಂಕಾ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಈತನಕ ಸೆಮಿಫೈನಲ್ ಹಂತ ದಾಟಿಲ್ಲ. ಪ್ರಸಕ್ತ ವರ್ಷ ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್‌ನ ಫೈನಲ್‌ಗಳಲ್ಲಿ ಸೋತ ನೋವಿನಲ್ಲಿರುವ ಅವರು, ಇಲ್ಲಿ ಚೊಚ್ಚಲ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ.

ಹಿಂದೆ ಸರಿದ ಜಬೇರ್: ಎರಡು ಬಾರಿಯ ವಿಂಬಲ್ಡನ್ ರನ್ನರ್ ಅಪ್ ಆನ್ಸ್ ಜಬೇರ್ ಅವರು ಉಸಿರಾಟ ಸಮಸ್ಯೆಯಿಂದಾಗಿ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದ ವೇಳೆ ಸ್ಪರ್ಧೆಯಿಂದ ಹಿಂದೆ ಸರಿದರು.

ಬಲ್ಗೇರಿಯಾದ ವಿಕ್ಟೋರಿಯಾ ಟೊಮೊವಾ ವಿರುದ್ಧ 7-6 (5), 2-0 ಅಂತರದಲ್ಲಿ ಜಬೇರ್ (ಟ್ಯುನೀಷಿಯಾ) ಹಿಂದುಳಿದಿದ್ದಾಗ ಆಟದಿಂದ ನಿವೃತ್ತರಾದರು.

ಅಲ್ಕರಾಜ್‌ಗೆ ಪ್ರಯಾಸದ ಗೆಲುವು



ಹ್ಯಾಟ್ರಿಕ್ ಪ್ರಶಸ್ತಿಯ ಪ್ರಯತ್ನದಲ್ಲಿರುವ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಪ್ರಯಾಸದ ಗೆಲುವಿನೊಂದಿಗೆ ಪುರುಷರ ಸಿಂಗಲ್ಸ್ ಎರಡನೇ ಸುತ್ತು ಪ್ರವೇಶಿಸಿದರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಅವರಿಗೆ 7-5, 6-7 (5/7), 7-5, 2-6, 6-1ರಿಂದ ಐದು ಸೆಟ್‌ಗಳ ಹೋರಾಟದಲ್ಲಿ ಇಟಲಿಯ ಅನುಭವಿ ಆಟಗಾರ ಫ್ಯಾಬಿಯೊ ಫೋಗ್ನಿನಿ ಪ್ರಬಲ ಪೈಪೋಟಿ ನೀಡಿದರು. ಉಭಯ ಆಟಗಾರರು ಸೆಂಟರ್ ಕೋರ್ಟ್‌ನಲ್ಲಿ ನಾಲ್ಕು ಗಂಟೆಗಳಿಗೂ ಹೆಚ್ಚು ಹೊತ್ತು ಸೆಣಸಾಟ ನಡೆಸಿದರು.

2010ರಲ್ಲಿ ರೋಜರ್ ಫೆಡರರ್ ಅವರು ಅಲೆಜಾಂಡ್ರೊ ಫಲ್ಲಾ ಅವರನ್ನು ಸೋಲಿಸಿದ ನಂತರ ಇದೇ ಮೊದಲು ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಐದು ಸೆಟ್ ಆಡಬೇಕಾಯಿತು. 22 ವರ್ಷ ವಯಸ್ಸಿನ ಅಲ್ಕರಾಜ್ ಪಾಲ್ಗೊಂಡ 18 ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಮ್ಮೆಯೂ ಮೊದಲ ಸುತ್ತಿನಲ್ಲಿ ಸೋತಿಲ್ಲ. ಈ ತಿಂಗಳ ಆರಂಭದಲ್ಲಿ ಅವರು, ಫ್ರೆಂಚ್ ಓಪನ್ ಫೈನಲ್‌ನಲ್ಲಿ ಇಟಲಿಯ ಯಾನಿಕ್ ಸಿನ್ನರ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದಿದ್ದರು.

ಚಿಟಿಕೆ ಸುದ್ದಿ

ಜೇನಾ ಬದಲು ಯಶ್ವೀರ್ ಕಣಕ್ಕೆ

ಯಶ್ವೀರ್

ಬೆಂಗಳೂರು: ಪಾದದ ಗಾಯದಿಂದ ಬಳಲುತ್ತಿರುವ ಕಿಶೋರ್ ಜೇನಾ ಅವರು ಶನಿವಾರ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ನೀರಜ್ ಚೋಪ್ರಾ ಕ್ಲಾಸಿಕ್ ಅಂತರರಾಷ್ಟ್ರೀಯ ಜಾವೆಲಿನ್ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಅವರ ಬದಲು ಯಶ್ವೀರ್ ಸಿಂಗ್ ಅವಕಾಶ ಪಡೆದಿದ್ದಾರೆ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ.

23 ವರ್ಷ ವಯಸ್ಸಿನ ಯಶ್ವೀರ್, ಏಪ್ರಿಲ್‌ನಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ ಎರಡನೇ ಸ್ಥಾನ ಮತ್ತು ಮೇ ತಿಂಗಳಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆದ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 82.57 ಮೀಟರ್ ವೈಯಕ್ತಿಕ ಅತ್ಯುತ್ತಮ ಸಾಧನೆಯೊಂದಿಗೆ ಐದನೇ ಸ್ಥಾನ ಪಡೆದಿದ್ದರು.

ಅರ್ಪಿತ್ ಮಿಂಚು: ಕೈಗಾ ತಂಡಕ್ಕೆ ಜಯ

ಬೆಂಗಳೂರು: ಅರ್ಪಿತ್ ಹಾಗೂ ಅಭಿಜಿತ್ ಅವರ ಆಟದ ನೆರವಿನಿಂದ ಕೈಗಾ ಬಿ.ಸಿ ಕಾರವಾರ ತಂಡವು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸಿ ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 63-44ರಿಂದ ದಾವಣಗೆರೆ ಜಿಲ್ಲಾ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಲೀಗ್ ಹಂತದ ಪಂದ್ಯದಲ್ಲಿ ವಿರಾಮದ ವೇಳೆ ಕೇವಲ ಒಂದು ಅಂಕ (30-29) ಮುನ್ನಡೆ ಪಡೆದಿದ್ದ ಕೈಗಾ ಬಿ.ಸಿ ತಂಡವು, ಉತ್ತರಾರ್ಧದಲ್ಲಿ ಪಾರಮ್ಯ ಸಾಧಿಸಿತು. ಕೈಗಾ ಬಿ.ಸಿ ಪರ ಅರ್ಪಿತ್ 24, ಅಭಿಜಿತ್ 10 ಅಂಕಗಳನ್ನು ಗಳಿಸಿದರು. ದಾವಣಗೆರೆ ತಂಡದ ಸಾತ್ವಿಕ್ 14 ಅಂಕ ಕಲೆಹಾಕಿದರು.

ಫಲಿತಾಂಶಗಳು: ಚಿಕ್ಕಮಗಳೂರು ಜಿಲ್ಲಾ ತಂಡವು 84-55ರಿಂದ ಕಲಬುರಗಿ ಜಿಲ್ಲೆ ವಿರುದ್ಧ; ಧಾರವಾಡ ಜಿಲ್ಲೆ ಬಿ ತಂಡವು 65-38ರಿಂದ ಬಳ್ಳಾರಿ ಜಿಲ್ಲೆ ವಿರುದ್ಧ ಹಾಗೂ ಕೈಗಾ ಬಿ.ಸಿ ಕಾರವಾರ ತಂಡವು 63-44ರಿಂದ ದಾವಣಗೆರೆ ಜಿಲ್ಲೆ ವಿರುದ್ಧ ಗೆಲುವು ಸಾಧಿಸಿದವು.

ಸತತ ಸೋಲು– ಹಿರಿಯ ಆಟಗಾರರಿಂದ ಟೀಕೆ ಟಿಪ್ಪಣಿ

ಗೌತಮ್ ಗಂಭೀರ್ ಮೇಲೆ ಒತ್ತಡ

ನವದೆಹಲಿ (ಎಎಫ್‌ಪಿ): ಹೆಡಿಂಗ್ಲೆಯಲ್ಲಿ ಇಂಗ್ಲೆಂಡ್ ಎದುರಿನ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಸೋತ ನಂತರ ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಅವರ ಮೇಲೆ ಒತ್ತಡ ಹೆಚ್ಚುತ್ತಿದೆ. ಗಂಭೀರ್ ಅವರು ಈ ಹುದ್ದೆ ವಹಿಸಿಕೊಂಡ ನಂತರ ಭಾರತ 11 ಟೆಸ್ಟ್ ಪಂದ್ಯಗಳ ಪೈಕಿ ಏಳರಲ್ಲಿ ಸೋಲನುಭವಿಸಿದೆ.



ಗಂಭೀರ್

ಆಯ್ಕೆ ವಿಷಯ, ಬೇಕಾದ ಸಹಾಯಕ ಸಿಬ್ಬಂದಿ ನೇಮಕ, ಪತ್ರಿಕಾಗೋಷ್ಠಿಯಲ್ಲಿ ನಡೆದುಕೊಳ್ಳುವ ರೀತಿಯಿಂದ 43 ವರ್ಷ ವಯಸ್ಸಿನ ಗಂಭೀರ್ ಕೆಲವು ವಲಯಗಳಿಂದ ಟೀಕೆಗೆ ಒಳಗಾಗುತ್ತಿದ್ದಾರೆ.

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ನಿವೃತ್ತರಾಗಿದ್ದು, ಭಾರತ ಕ್ರಿಕೆಟ್‌ನಲ್ಲಿ ಈಗ ಪರಿವರ್ತನೆಯ ಗಾಳಿ ಬೀಸುತ್ತಿದೆ. ಆದರೆ ಈ ಘಟಾನುಘಟಿ ಆಟಗಾರರು ನಿವೃತ್ತಿ ನಿರ್ಧಾರಕ್ಕೆ ಬರುವಲ್ಲಿ ಗಂಭೀರ್ ಕೈವಾಡವೂ ಇದೆ ಎಂಬ ಮಾತುಗಳು ಕೇಳಿಬಂದಿವೆ.

ಗಿಲ್ ನೇತೃತ್ವದ ತಂಡ ಐದು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯವನ್ನು ಐದು ವಿಕೆಟ್‌ಗಳಿಂದ ಸೋತಿತ್ತು. ಒಂದಾದ ಮೇಲೊಂದರಂತೆ ಸೋಲುಗಳು ಅವರ ಮೇಲಿನ ಒತ್ತಡ ಹೆಚ್ಚಿಸಿವೆ. ಎಜ್‌ಬಾಸ್ಟನ್‌ನಲ್ಲಿ ಎರಡನೇ ಟೆಸ್ಟ್ ಆರಂಭಕ್ಕೆ ಮೊದಲೇ ಅವರು ಒತ್ತಡ ಅನುಭವಿಸುತ್ತಿದ್ದಾರೆ.

'ಗೌತಮ್ ಗಂಭೀರ್ ಅವರ ಮೇಲೆ ಗಮನಾರ್ಹ ಒತ್ತಡವಿದೆ. ಈಗಿನ ಪರಿಸ್ಥಿತಿ ಅವರ ಮೇಲಿನ ಒತ್ತಡ ಹೆಚ್ಚಿಸುತ್ತಿದೆ' ಎಂದು ಭಾರತ ತಂಡದ ಮಾಜಿ ಬ್ಯಾಟ್ಸ್‌ಮನ್ ಆಕಾಶ್ ಚೋಪ್ರಾ ಅವರು ತಮ್ಮ ಯುಟ್ಯೂಬ್ ಚಾನೆಲ್‌ನಲ್ಲಿ ವಿಶ್ಲೇಷಿಸಿದ್ದಾರೆ.

'ಬಾಂಗ್ಲಾದೇಶ ವಿರುದ್ಧ ಎರಡು ಮತ್ತು ಆಸ್ಟ್ರೇಲಿಯಾ ವಿರುದ್ಧ ಒಂದು ಟೆಸ್ಟ್ ಪಂದ್ಯವನ್ನು ಗೆಲ್ಲುವಲ್ಲಿ ಮಾತ್ರ ಅವರು ಸಫಲರಾರು. ಆದರೆ ನ್ಯೂಜಿಲೆಂಡ್ ಎದುರು ಮೂರು, ಆಸ್ಟ್ರೇಲಿಯಾ ಎದುರು ಮೂರು ಮತ್ತು ಇಂಗ್ಲೆಂಡ್ ಎದುರು ಒಂದು ಪಂದ್ಯ ಸೋತಿದ್ದಾರೆ. ಅವರು ಸೋಲುತ್ತಿದ್ದಾರೆ ಮತ್ತು ಸೋಲುತ್ತಲೇ ಇದ್ದಾರೆ' ಎಂದಿದ್ದಾರೆ ಚೋಪ್ರಾ.

2024ರ ಜುಲೈನಲ್ಲಿ ರಾಹುಲ್ ದ್ರಾವಿಡ್ ಅವರ ಸ್ಥಾನದಲ್ಲಿ ಭಾರತದ ಕೋಚ್ ಆಗಿದ್ದರು. ಆದರೆ ನಂತರ ಭಾರತ ಹಿನ್ನಡೆ ಕಂಡಿದೆ. ಅದರಲ್ಲೂ ನ್ಯೂಜಿಲೆಂಡ್ ಎದುರು 0-3 ಅಂತರದಲ್ಲಿ ತವರಿನಲ್ಲೇ ಮುಖಭಂಗ ಅನುಭವಿಸಿತ್ತು. ಇದು 12 ವರ್ಷಗಳಲ್ಲಿ ಭಾರತ ತವರಿನಲ್ಲಿ ಅನುಭವಿಸಿದ ಮೊದಲ ಸರಣಿ ಸೋಲು.

ಇಂಗ್ಲೆಂಡ್ ಪ್ರವಾಸಕ್ಕೆ ಮಧ್ಯಮ ಸರದಿಯ ಆಟಗಾರ ಸರ್ಫರಾಜ್ ಖಾನ್ ಅವರನ್ನು ಕೈಬಿಟ್ಟದ್ದಕ್ಕೆ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಜೊತೆ ಗಂಭೀರ್ ಅವರೂ ಟೀಕೆಗೆ ಒಳಗಾಗಿದ್ದರು.

'ತಂತ್ರಗಾರಿಕೆ ವಿಷಯದಲ್ಲಿ ಗೌತಿ (ಗಂಭೀರ್) ಅತ್ಯುತ್ತಮ ಕೋಚ್. ಆದರೆ ಅವರು ಆಟಗಾರರಿಂದ ಅತಿಯಾದುದನ್ನು ನಿರೀಕ್ಷಿಸುತ್ತಾರೆ. ನಾಯಕರಾಗಿ ಅವರು ಆಕ್ರಮಣಕಾರಿ ಮನೋಭಾವ ಹೊಂದಿದ್ದರು. ಆದರೆ ಕೋಚ್ ಆಗಿ ಹಾಗೆ ಇರುವಂತಿಲ್ಲ' ಎಂದು ವಿಕೆಟ್ ಕೀಪರ್– ಬ್ಯಾಟರ್ ದಿನೇಶ್ ಕಾರ್ತಿಕ್ ಅಭಿಪ್ರಾಯಪಟ್ಟಿದ್ದಾರೆ.

ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಪಂತ್ ಶತಕ ಬಾರಿಸಿದರೂ ಗಂಭೀರ್ ಮಾಧ್ಯಮಗೋಷ್ಠಿಯಲ್ಲಿ ಆ ಕುರಿತ ಪ್ರಶ್ನೆಗೆ ಒತ್ತು ನೀಡಿ ಮಾತನಾಡಲಿಲ್ಲ.

ಗಂಭೀರ್ ಅವರನ್ನು ಮಾಧ್ಯಮಗೋಷ್ಠಿಯಿಂದ ದೂರವಿಡಬೇಕು ಎಂದು ಎರಡು ತಿಂಗಳ ಹಿಂದೆ ಮಾಜಿ ಬ್ಯಾಟರ್ ಸಂಜಯ್ ಮಾಂಜ್ರೇಕರ್ ಹೇಳಿದ್ದರು.

ಇಂಗ್ಲೆಂಡ್ ವಿರುದ್ಧ ಮೊದಲ ಟೆಸ್ಟ್ ಪಂದ್ಯದ ಕೊನೆಯ ದಿನ ನಾಯಕನಿಗಿಂತ ಹೆಚ್ಚಾಗಿ ಹಿರಿಯ ಬ್ಯಾಟರ್ ಕೆ.ಎಲ್. ರಾಹುಲ್ ಮತ್ತು ಉಪ ನಾಯಕ ಪಂತ್ ಅವರೇ ಫೀಲ್ಡ್ ಪ್ಲೇಸಿಂಗ್ ಮಾಡುತ್ತಿದ್ದುದು ಕಂಡುಬಂತು.

ಪಂದ್ಯದ ಅಂತಿಮ ಓವರುಗಳು ಸಮೀಪಿಸುತ್ತಿರುವಂತೆ ಬೂಮ್ರಾ ಅವರನ್ನು ದಾಳಿಗಿಳಿಸುವ ಗಿಲ್ ಲೆಕ್ಕಾಚಾರವನ್ನು ಸ್ವತಃ ಅಗ್ರ ವೇಗಿಯೇ ತಿರಸ್ಕರಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದಿದ್ದ ಬೂಮ್ರಾ ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ಪಡೆದಿರಲಿಲ್ಲ.

ದೈಹಿಕ ದೌರ್ಜನ್ಯ: ಮಹಿಳಾ ಕೋಚ್ ವಿರುದ್ಧ ದೂರು

ನವದೆಹಲಿ (ಪಿಟಿಐ): ಭಾರತ ಕ್ರೀಡಾ ಪ್ರಾಧಿಕಾರದ ಬಾಕ್ಸಿಂಗ್ ವಿಭಾಗದ ಮಹಿಳಾ ತರಬೇತುದಾರರೊಬ್ಬರು ತಮ್ಮ ಮೇಲೆ ದೈಹಿಕ, ಮಾನಸಿಕ ದೌರ್ಜನ್ಯ ಎಸಗಿರುವುದಾಗಿ 17 ವರ್ಷದ ಬಾಲಕಿಯರ ತಂಡದ ಬಾಕ್ಸರ್ ಆರೋಪಿಸಿದ್ದಾರೆ. ಈ ಕುರಿತು ಬಾಲಕಿಯ ಪಾಲಕರು ಪೊಲೀಸರಿಗೆ ದೂರು ನೀಡಿದ್ದಾರೆ.

'ಕೋಚ್ ನೀಡುತ್ತಿದ್ದ ಸತತ ಕಿರುಕುಳದಿಂದಾಗಿ ಹದಿಹರೆಯದ ಬಾಕ್ಸರ್ ಖಿನ್ನತೆಗೊಳಗಾಗಿದ್ದಾರೆ' ಎಂದು ಪಾಲಕರು ರೋಹ್ಟಕ್ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ಉಲ್ಲೇಖವಾಗಿದೆ.

ಈ ಕುರಿತು ಪ್ರತಿಕ್ರಿಯೆಗಾಗಿ ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಮತ್ತು ಎಸ್‌ಎಐ ಅಧಿಕಾರಿಗಳನ್ನು ಸಂಪರ್ಕಿಸಿದಾಗ, 17 ವರ್ಷದ ಬಾಲಕಿ ದೂರು ನೀಡಿರುವುದು ಖಚಿತವಾಗಿದೆ. ಕಪಾಳಕ್ಕೆ ಹೊಡೆದಿದ್ದು, ಹಲ್ಲೆ ಮಾಡಿದ್ದನ್ನು ಬಾಕ್ಸರ್ ತಿಳಿಸಿದ್ದಾರೆ. ಆದರೆ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವಂತೆ ಲೈಂಗಿಕ ದೌರ್ಜನ್ಯದ ಆರೋಪವನ್ನು ಅಲ್ಲಗಳೆದಿದ್ದಾರೆ.

ಬಿಎಫ್‌ಐ ಮತ್ತು ಎಸ್‌ಎಐ ನಡೆಸಿದ ಆಂತರಿಕ ತನಿಖೆಯಲ್ಲಿಯೂ ಕೋಚ್ ಮೇಲಿರುವ ಆರೋಪಗಳನ್ನು ಪುಷ್ಟೀಕರಿಸುವಂತಹ ಅಂಶಗಳು ದೊರೆತಿಲ್ಲ. ಪ್ರಸ್ತುತ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಮತ್ತು ಯೂತ್ ಬಾಕ್ಸಿಂಗ್ ಶಿಬಿರದಲ್ಲಿ ಅವರು ತರಬೇತಿ ನೀಡುತ್ತಿದ್ದಾರೆ.

ಭಾರತೀಯ ನ್ಯಾಯಸಂಹಿತೆಯ ಸೆಕ್ಷನ್ 115 (ಗಾಯಗೊಳಿಸಿರುವುದು) ಹಾಗೂ 351(3)(ಬೆದರಿಕೆ) ಮತ್ತು ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸುವ ಕಾಯಿದೆ 10 (ತೀವ್ರತರವಾದ ಲೈಂಗಿಕ ದೌರ್ಜನ್ಯ) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಈವರೆಗೆ ಎಫ್‌ಐಆರ್ ಲಭ್ಯವಾಗಿಲ್ಲ. ಎನ್‌ಬಿಎ ರೋಹ್ಟಕ್‌ನ ಮಹಿಳಾ ಬಾಕ್ಸರ್ ಇಮೇಲ್ ಮೂಲಕ 2025ರ ಏಪ್ರಿಲ್ 24ರಂದು ದೂರು ನೀಡಿದ್ದಾರೆ. ಅದರಲ್ಲಿ ಅವರು ಐರ್ಲೆಂಡ್‌ನಲ್ಲಿ ಹೋದ ಮಾರ್ಚ್‌ನಲ್ಲಿ ನಡೆದ ಆಹ್ವಾನಿತ ಬಾಕ್ಸಿಂಗ್ ಸ್ಪರ್ಧೆಯ ಸಂದರ್ಭದಲ್ಲಿ ತಮ್ಮ ಮೇಲೆ ಮಹಿಳಾ ಕೋಚ್ ಮಾನಸಿಕ ಮತ್ತು ದೈಹಿಕ ದೌರ್ಜನ್ಯ ಎಸಗಿದ್ದಾರೆಂದು ಉಲ್ಲೇಖಿಸಿದ್ದಾರೆ. ಆದರೆ ಅದರಲ್ಲಿ ಲೈಂಗಿಕ ದೌರ್ಜನ್ಯ ಕುರಿತು ಹೇಳಿಲ್ಲ' ಎಂದು ಸೋನಿಪತ್‌ನ ಎಸ್‌ಎಐ ಪ್ರಾದೇಶಿಕ ಕೇಂದ್ರವು ತಿಳಿಸಿದೆ.

'ಕ್ರೀಡೆಯಲ್ಲಿ ಸ್ವಚ್ಛ ಆಡಳಿತ ಮತ್ತು ಪಾರದರ್ಶಕ ನಿರ್ವಹಣೆಗೆ ನಾವು ಬದ್ಧ. ತನಿಖೆಗೆ ಬೇಕಾದ ಎಲ್ಲ ರೀತಿಯ ಸಹಕಾರ ನೀಡಲು ತಾವು ಸಿದ್ಧ' ಎಂದು ಎಸ್‌ಎಐ ತಿಳಿಸಿದೆ. ಆದರೆ ಬಿಎಫ್‌ಐ ಈ ಪ್ರಕರಣ ನಿರ್ವಹಿಸಿದ ರೀತಿ ಸರಿಯಿಲ್ಲ ಎಂದು ಸಂತ್ರಸ್ತೆ ಪಾಲಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಆರೋಪಿ ಕೋಚ್ ತಮ್ಮ ಮಗಳೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ. ಐರ್ಲೆಂಡ್ ಪ್ರವಾಸದ ಸಂದರ್ಭದಲ್ಲಿ ತಮ್ಮ ಮಾತು ಕೇಳದ ಮಗಳಿಗೆ ಅತ್ಯಂತ ಕಠಿಣ ದೈಹಿಕ ವ್ಯಾಯಾಮಗಳನ್ನು ಮಾಡುವ ಶಿಕ್ಷೆಯನ್ನೂ ಕೋಚ್ ವಿಧಿಸಿದ್ದರು. ಅಲ್ಲದೇ ಸೆಕೆಂಡಿಂಗ್ (ಬೌಟ್ ಸಂದರ್ಭದಲ್ಲಿ ತರಬೇತಿ ನೆರವು) ನೀಡುವಂತೆ ಮಾಡುವ ಮನವಿಯನ್ನೂ ಕೋಚ್ ತಿರಸ್ಕರಿಸಿದ್ದರು. ಅಷ್ಟೇ ಅಲ್ಲ. ಬೇರೆ ಕೋಚ್ ಅಥವಾ ಬಾಕ್ಸರ್ ನಮ್ಮ ಮಗಳೊಂದಿಗೆ ಹೋಗದಂತೆ ತಡೆದಿದ್ದರು' ಎಂದು ಪಾಲಕರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿವಾನ್, ಆರುಷಿಗೆ ಪ್ರಶಸ್ತಿ

ಶಿವಮೊಗ್ಗ: ಬೆಂಗಳೂರಿನ ವಿವಾನ್ ಸಚದೇವ್ ಮತ್ತು ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವ ಅವರು ರಾಜ್ಯ 19 ವರ್ಷದೊಳಗಿನವರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಓಪನ್ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ವಿವಾನ್ 9 ಸುತ್ತುಗಳಲ್ಲಿ ಒಂದೂ ಪಂದ್ಯ ಸೋಲದೇ 8.5 ಪಾಯಿಂಟ್ಸ್ ಕಲೆಹಾಕಿದರು. ಟ್ರೋಫಿ ಜೊತೆ ₹7000 ನಗದು ಬಹುಮಾನ ಪಡೆದರು.

ಚಾಣಕ್ಯ ಚೆಸ್ ಸ್ಕೂಲ್ ಮತ್ತು ಜೆಸಿಐ ಶಿವಮೊಗ್ಗ ಚಿರಂತನ ಜಂಟಿ ಆಶ್ರಯದಲ್ಲಿ ಈ ಮೂರು ದಿನಗಳ ಚಾಂಪಿಯನ್‌ಷಿಪ್ ಭಾನುವಾರ ಮುಕ್ತಾಯಗೊಂಡಿತು.

ಬೆಂಗಳೂರು ನಗರದ ಕೃಷ್ಣ (7.5), ದಕ್ಷಿಣ ಕನ್ನಡದ ರವೀಶ್ ಕೋಟೆ, ಬೆಂಗಳೂರಿನ ಅರುಳ್ ಆನಂದ್ (7.5) ಮತ್ತು ಮೈಸೂರಿನ ಈಶ್ವರ್ ವಿ. ಅಯ್ಯಪ್ಪನ್ (7) ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

ಬಾಲಕಿಯರ ವಿಭಾಗದಲ್ಲಿ ಆರುಷಿ ಎಲ್ಲ ಸುತ್ತುಗಳನ್ನು ಗೆದ್ದು ಸಂಭವನೀಯ 9 ಪಾಯಿಂಟ್ಸ್ ಪಡೆದರು. ಅವರು ಟ್ರೋಫಿ ಜೊತೆ ₹7,000 ಬಹುಮಾನ ಪಡೆದರು. ಮೈಸೂರಿನ ಪ್ರಸಿದ್ಧಿ ಭಟ್ (7 ಪಾಯಿಂಟ್ಸ್), ಬೆಂಗಳೂರು ನಗರದ ದೃಷ್ಟಿ ಘೋಷ್ (6.5), ದಕ್ಷಿಣ ಕನ್ನಡದ ಆದ್ಯಾ ಶೆಟ್ಟಿ (6.5), ಬೆಂಗಳೂರು ನಗರದ ಕೃಪಾ ಎಸ್.ಉಕ್ಕಲಿ (6.5) ಅವರು ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

'ಶಾಲೆಗಳಿಗೆ 10 ಲಕ್ಷ ಫುಟ್‌ಬಾಲ್ ವಿತರಣೆ'

ನವದೆಹಲಿ (ಪಿಟಿಐ): ಫುಟ್‌ಬಾಲ್‌ನಲ್ಲಿ ಹೆಚ್ಚು ಮಕ್ಕಳು ತೊಡಗುವಂತೆ ಪ್ರೇರೇಪಿಸಲು ಮತ್ತು ಕ್ರೀಡಾಸಂಸ್ಕೃತಿ ಬೆಳೆಸುವ ಉದ್ದೇಶದಿಂದ, ದೇಶದಾದ್ಯಂತ ಶಾಲೆಗಳಿಗೆ 10 ಲಕ್ಷ ಫುಟ್‌ಬಾಲ್‌ಗಳನ್ನು ವಿತರಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಕೋಲ್ಕತ್ತದ ಫೋರ್ಟ್ ವಿಲಿಯಮ್‌ನ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಧಾನ್ ಅವರು ಭಾನುವಾರ ಈ ಯೋಜನೆಗೆ ಚಾಲನೆ ನೀಡಿ ಅವರು ಈ ಘೋಷಣೆ ಮಾಡಿದರು. ಈ ಉಪಕ್ರಮಕ್ಕೆ 'ಫುಟ್‌ಬಾಲ್ ಫಾರ್ ಸ್ಪೋರ್ಟ್ಸ್' (ಎಫ್4ಎಸ್) ಎನ್ನುವ ಹೆಸರನ್ನು ಇಡಲಾಗಿದೆ.

ಈ ಯೋಜನೆಗೆ ಫಿಫಾ ಮುತುವರ್ಜಿ ವಹಿಸಿದ್ದು, ತಳಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಫುಟ್‌ಬಾಲ್ ಆಟ ಪರಿಚಯಿಸುವ ಉದ್ದೇಶ ಇದರ ಹಿಂದೆ ಇದೆ.

'ಕ್ಯಾಪ್ಟನ್ ಕೂಲ್' ಟ್ರೇಡ್‌ಮಾರ್ಕ್ ಕೋರಿ ಧೋನಿ ಅರ್ಜಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರು 'ಕ್ಯಾಪ್ಟನ್ ಕೂಲ್' ಎಂದೇ ಪ್ರಸಿದ್ಧರಾದವರು. ಇದೀಗ ಸ್ವತಃ ಧೋನಿ ಅವರೇ 'ಕ್ಯಾಪ್ಟನ್ ಕೂಲ್' ಎಂಬ ವಿಶೇಷಣದ ಟ್ರೇಡ್‌ಮಾರ್ಕ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಮೈದಾನದಲ್ಲಿ ಎಂಥದ್ದೇ ಒತ್ತಡದ ಸನ್ನಿವೇಶದಲ್ಲೂ ಶಾಂತಚಿತ್ತರಾಗಿರುತ್ತಿದ್ದ ಧೋನಿ ಅವರು 'ಕ್ಯಾಪ್ಟನ್ ಕೂಲ್' ಎಂದೇ ಜನಪ್ರಿಯ. ಆ ವಿಶೇಷಣದ ಹಕ್ಕುಸ್ವಾಮ್ಯ ಪಡೆಯಲು ಜೂನ್ 5ರಂದು ಟ್ರೇಡ್ ಮಾರ್ಕ್ಸ್ ರಿಜಿಸ್ಟ್ರಿ ಪೋರ್ಟಲ್‌ನಲ್ಲಿ ಅಧಿಕೃತವಾಗಿ ಅರ್ಜಿ ಹಾಕಿದ್ದಾರೆ. ಜೂನ್ 16ರಂದು 'ಕ್ಯಾಪ್ಟನ್ ಕೂಲ್' ವಿಶೇಷಣವನ್ನು ಅಧಿಕೃತವಾಗಿ ಟ್ರೇಡ್ ಮಾರ್ಕ್ ಜರ್ನಲ್‌ನಲ್ಲಿ ಪ್ರಕಟಿಸಲಾಗಿದೆ.

ಇದಕ್ಕೆ ಯಾವುದೇ ಆಕ್ಷೇಪಗಳು ಸಲ್ಲಿಕೆಯಾಗದಿದ್ದಲ್ಲಿ, ಅದು ಧೋನಿ ಅವರ ಕ್ರೀಡೆ, ತರಬೇತಿ ಮತ್ತು ಮನರಂಜನಾ ವ್ಯಾಪಾರ ಚಟುವಟಿಕೆಯ ಭಾಗವಾಗಿ ನೋಂದಣಿಯಾಗಲಿದೆ.

ಆದರೆ, ಧೋನಿ ಅವರು ಈ ಕುರಿತು ಇದುವರೆಗೆ ಪ್ರತಿಕ್ರಿಯೆ ನೀಡಿಲ್ಲ.

ಮಹಿಳಾ ಟಿ20 ಕ್ರಿಕೆಟ್: ಭಾರತ-ಇಂಗ್ಲೆಂಡ್ ಮುಖಾಮುಖಿ ಇಂದು

ಆತಿಥೇಯರಿಗೆ ಮಂದಾನ ಭಯ!

ಬ್ರಿಸ್ಟಲ್ (ಪಿಟಿಐ): ಇಂಗ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಭಾರತ ಮಹಿಳಾ ತಂಡವು ಮಂಗಳವಾರ ಎರಡನೇ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಅವರು ಮೊದಲ ಪಂದ್ಯದಲ್ಲಿ ಶತಕ ಗಳಿಸಿದ್ದರು. ಅದರಿಂದಾಗಿ ತಂಡವು 97 ರನ್‌ಗಳ ಜಯ ಸಾಧಿಸಲು ಕಾರಣವಾಗಿತ್ತು. ಪ್ರಮುಖ ಬೌಲರ್‌ಗಳ ಗೈರು ಹಾಜರಿಯಲ್ಲಿ ಯುವ ಪ್ರತಿಭೆಗಳು ಉತ್ತಮವಾಗಿ ಆಡಿದ್ದರು. ಆದರೆ ಆ ಪಂದ್ಯದಲ್ಲಿ ಗಾಯದಿಂದಾಗಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಕಣಕ್ಕಿಳಿದಿರಲಿಲ್ಲ. ಈ ಪಂದ್ಯದಲ್ಲಿ ಅವರು ಆಡುವ ಕುರಿತು ಇನ್ನೂ ಖಚಿತವಾಗಿಲ್ಲ. ಅಭ್ಯಾಸ ಪಂದ್ಯದ ಸಂದರ್ಭದಲ್ಲಿ ಅವರ ತಲೆಗೆ ಪೆಟ್ಟುಬಿದ್ದಿತ್ತು.

ಸ್ಮೃತಿ ಮಂದಾನ

ಮಂದಾನ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಶೆಫಾಲಿ ವರ್ಮಾ ಅವರು ಲಯಕ್ಕೆ ಮರಳುವ ಅಗತ್ಯವಿದೆ. ಹರ್ಲೀನ್ ಡಿಯೊಲ್, ರಿಚಾ ಘೋಷ್, ಜೆಮಿಮಾ ರಾಡ್ರಿಗಸ್, ಅಮನ್ಜೋತ್ ಕೌರ್ ಅವರೂ ಒಂದಿಷ್ಟು ರನ್‌ಗಳನ್ನು ಹರಿಸಿದರೆ ಇನ್ನಷ್ಟು ದೊಡ್ಡ ಮೊತ್ತ ಗಳಿಸಲು ತಂಡಕ್ಕೆ ಸಾಧ್ಯವಾಗಲಿದೆ. ಇದರಿಂದಾಗಿ ಬೌಲಿಂಗ್ ಪಡೆಗೆ ಒತ್ತಡ ತುಸು ಕಡಿಮೆಯಾಗಲಿದೆ.

ಎಡಗೈ ಸ್ಪಿನ್ನರ್ ಶ್ರೀಚರಣಿ ಅವರು ತಮ್ಮ ಪದಾರ್ಪಣೆ ಪಂದ್ಯದಲ್ಲಿಯೇ ನಾಲ್ಕು ವಿಕೆಟ್ ಗಳಿಸಿ ಮಿಂಚಿದರು. ಅದರಿಂದಾಗಿ ಇಂಗ್ಲೆಂಡ್ ತಂಡವನ್ನು ಕಡಿಮೆ ಮೊತ್ತಕ್ಕೆ ಉರುಳಿಸಲು ಸಾಧ್ಯವಾಯಿತು. ಅನುಭವಿ ಬೌಲರ್‌ಗಳಾದ ರೇಣುಕಾ ಸಿಂಗ್ ಮತ್ತು ಪೂಜಾ ವಸ್ತ್ರಾಕರ್ ಅವರು ಗಾಯಗೊಂಡಿರುವುದರಿಂದ ಈ ಸರಣಿಯಲ್ಲಿ ಆಡುತ್ತಿಲ್ಲ. ಆದ್ದರಿಂದ ಸ್ನೇಹ ರಾಣಾ, ದೀಪ್ತಿ ಶರ್ಮಾ ಮತ್ತು ರಾಧಾ ಯಾದವ್ ಅವರ ಮೇಲೆ ಹೆಚ್ಚಿನ ಹೊಣೆ ಇದೆ.

ಆಲ್‌ರೌಂಡರ್ ನಥಾಲಿ ಶಿವರ್ ಬ್ರಂಟ್ ಅವರ ನಾಯಕತ್ವದ ಇಂಗ್ಲೆಂಡ್ ತಂಡವು ಭಾರತಕ್ಕೆ ತಿರುಗೇಟು ನೀಡಲು ತುದಿಗಾಲಿನಲ್ಲಿ ನಿಂತಿದೆ. ಸೋಫಿ ಡಂಕ್ಲಿ, ಎಮಿ ಜೋನ್ಸ್, ಸೋಫಿ ಎಕ್ಲೆಸ್ಟೋನ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡುವ ಅಗತ್ಯವಿದೆ. ಅದರಲ್ಲೂ ಇಂಗ್ಲೆಂಡ್ ಬ್ಯಾಟರ್‌ಗಳು ಭಾರತದ ಸ್ಪಿನ್ನರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸುವುದು ಮುಖ್ಯವಾಗಲಿದೆ. ಮೊದಲ ಪಂದ್ಯದಲ್ಲಿ ಲಾರೆನ್ ಬೆಲ್ ಅವರು ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ತಮ್ಮ ಲಯ ಮುಂದುವರಿಸಿದರೆ ಭಾರತದ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಸಾಧ್ಯವಾಗಲಿದೆ.

ಪಂದ್ಯ ಆರಂಭ: ರಾತ್ರಿ 11ರಿಂದ
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್